ಬುಧವಾರ, ಏಪ್ರಿಲ್ 28, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 118 | ಪುಟ 14

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ಫೇಸ್‌ಬುಕ್‌ನಲ್ಲಿ ನೋಡಿದ ವಿಚಾರಗಳಷ್ಟೇ ಅಲ್ಲದೆ, ಬೇರೆ ಜಾಲತಾಣಗಳಲ್ಲಿ ನೋಡಿದ ವಿಷಯಗಳೂ ಅದಕ್ಕೆ ತಿಳಿಯುತ್ತದೆ. ಅದುವೇ 'ಆಫ್-ಫೇಸ್‌ಬುಕ್' ಮಾಹಿತಿ.

ಆಳ-ಅಗಲ ಎರಡನೇ ಅಲೆ: ಎಡವಿದ ಹಲವು ನಡೆ

ಕರ್ಫ್ಯೂ ಉಲ್ಲಂಘಿಸಿದರೆ ಕ್ರಮ: ಬೊಮ್ಮಾಯಿ 6

ಅಂತ್ಯಸಂಸ್ಕಾರಕ್ಕಾಗಿ 20 ತಾಸು ಸರದಿ! 11

ಸೆನ್ಸೆಕ್ಸ್	ನಿಫ್ಟಿ	₹/$
48,944 ▲	14,653 ▲	74.66 ▲

ಕೋವಿಡ್: ಹೊಣೆ ಅರಿತು ಹೆಜ್ಜೆ ಇಡದ ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆಯ ಮಹಾಸ್ಫೋಟ ತಡೆಯಲು ಹೆಣಗಾಡುತ್ತಿರುವ ಸರ್ಕಾರ, 14 ದಿನಗಳ ಲಾಕ್‌ಡೌನ್ ಜಾರಿಗೆ ತಂದಿದೆ. ಕೊರೊನಾ ಸೋಂಕು ಹರಡುವಿಕೆ ತಡೆಯಲು ಜನರು ಏನು ಮಾಡಬೇಕು? ಏನು ಮಾಡಬಾರದು? ಎಂದು ಈಗ ಹೇಳುತ್ತಿರುವ ಸರ್ಕಾರ, ಸಕಾಲದಲ್ಲಿ ಮಾಡಬೇಕಿದ್ದ, ಈಗಲೂ ತುರ್ತು ಮಾಡಬೇಕಾದ್ದನ್ನು ಹೊಣೆ ಅರಿತು ಮಾಡಲಿಲ್ಲವೇ ಎಂಬ ಪ್ರಶ್ನೆ ಚರ್ಚೆಗೆ ಗುರಿಯಾಗಿದೆ.

ಕೋವಿಡ್ ತಡೆ ನಿಟ್ಟಿನಲ್ಲಿ ತೆಗೆದುಕೊಂಡ ತೀರ್ಮಾನ, ಮಾರ್ಗಸೂಚಿ ವಿಚಾರದಲ್ಲಿ ರಾಜ್ಯ ಸರ್ಕಾರ ಏಕಪಕ್ಷೀಯವಾಗಿ ನಡೆದುಕೊಳ್ಳುತ್ತಿದೆ ಎಂಬ ಆಕ್ಷೇಪವೂ ಇದೆ. ಸರ್ಕಾರ ಹೇಗೆ ನಡೆದುಕೊಳ್ಳಬೇಕಿತ್ತು ಮತ್ತು ಮುಂದೆ ಏನು ಮಾಡಬೇಕು ಎಂಬ ಬಗ್ಗೆ ಜನಪ್ರತಿನಿಧಿಗಳು, ಸಾಮಾಜಿಕ ಹೋರಾಟಗಾರರು, ತಜ್ಞರ ಅಭಿಪ್ರಾಯ ಇಲ್ಲಿದೆ.

ಸರ್ಕಾರ ಎದ್ದು ನಿಲ್ಲುವುದು ಯಾವಾಗ?



ರಾಜ್ಯಕ್ಕೆ ಕೊರೊನಾ ಕಾಲಿಟ್ಟು ಒಂದು ವರ್ಷಕ್ಕೂ ಹೆಚ್ಚು ಸಮಯ ಕಳೆದಿದೆ. ಈಗಲೂ ಖಾಸಗಿ ಆಸ್ಪತ್ರೆಗಳ ಮುಂದೆ ಹಾಸಿಗೆಗಾಗಿ ಭಿಕ್ಷೆ ಬೇಡುವ ಸ್ಥಿತಿ ಇದೆ ಎನ್ನುವುದಾದರೆ ಸರ್ಕಾರ ಎದ್ದು ನಿಲ್ಲುವುದು ಯಾವಾಗ? ಕರ್ನಾಟಕ ಖಾಸಗಿ ಆಸ್ಪತ್ರೆಗಳ ಕಾಯ್ದೆಯಡಿ ಇನ್ನೂ ಸರಿಯಾಗಿ ಕ್ರಮ ಜರುಗಿಸದೇ ಇರುವುದನ್ನು ನೋಡಿದರೆ ಸರ್ಕಾರಕ್ಕೆ ಅಷ್ಟೂ ಶಕ್ತಿ ಇಲ್ಲವೇ ಎಂಬ ಅನುಮಾನ ಮೂಡುತ್ತದೆ. ಜನರ ಪ್ರಾಣಕ್ಕಿಂತಲೂ ಖಾಸಗಿ ಆಸ್ಪತ್ರೆಗಳೇ ಮುಖ್ಯವೆ?

ಕೋವಿಡ್ ನಿಯಂತ್ರಣ ಮತ್ತು ಚಿಕಿತ್ಸೆ ವಿಚಾರದಲ್ಲಿ ನೆರೆಯ ಆಂಧ್ರಪ್ರದೇಶದ ಸರ್ಕಾರ ತೆಗೆದುಕೊಳ್ಳುವ ಕ್ರಮಗಳನ್ನು ಇಲ್ಲಿ ಏಕೆ ಮಾಡಲು ಆಗುವುದಿಲ್ಲ? ದೊಡ್ಡ ಹೋಟೆಲ್‌ಗಳು, ಸಭಾಂಗಣಗಳನ್ನೇ ತಾತ್ಕಾಲಿಕ ಆಸ್ಪತ್ರೆಗಳನ್ನಾಗಿ ಪರಿವರ್ತಿಸಬೇಕಿತ್ತು. ವೈದ್ಯಕೀಯ, ನರ್ಸಿಂಗ್ ವಿದ್ಯಾರ್ಥಿಗಳನ್ನೂ ಸೇವೆಗೆ ನಿಯೋಜಿಸಬೇಕಿತ್ತು. ಮೊನ್ನೆಯವರೆಗೂ ಚುನಾವಣೆಗಳ ವಿರುದ್ಧ ಯಾವ ರಾಜಕೀಯ ಪಕ್ಷವೂ ಮಾತನಾಡಲಿಲ್ಲ. ಬಡವರು, ಮಧ್ಯಮ ವರ್ಗದ ಜನರು ಆಸ್ಪತ್ರೆಯ ಹಾಸಿಗೆ, ಔಷಧಿ, ಆಮ್ಲಜನಕಕ್ಕಾಗಿ ಪರದಾಡುತ್ತಿದ್ದಾರೆ. ಈಗಲೂ ಕೋವಿಡ್ ಚಿಕಿತ್ಸೆಗೆ ನೀತಿಯೇ ಇಲ್ಲ. ಹಿಟ್ಲರ್ ಶೈಲಿಯಲ್ಲೇ ಎಲ್ಲವೂ ನಡೆಯುತ್ತಿದೆ. ಇದು ಕ್ಷಮಾರ್ಹ ನಡವಳಿಕೆ ಅಲ್ಲ. ಇನ್ನಾದರೂ ಎಚ್ಚೆತ್ತು ಸರಿಯಾದ ದಾರಿಯಲ್ಲಿ ಹೆಜ್ಜೆ ಇಡಬೇಕು

ಕೆ.ಆರ್. ರಮೇಶ್ ಕುಮಾರ್, ಮಾಜಿ ಆರೋಗ್ಯ ಸಚಿವ ಹಾಗೂ ಶಾಸಕ

ಬಿಲ್ ವ್ಯವಹಾರದಲ್ಲಿ ನಿರತರಾಗಿದ್ದರು!



ಮೊದಲ ಅಲೆಯನ್ನು ರಾಜ್ಯ ಸರ್ಕಾರ ಸಮರ್ಥವಾಗಿ ಎದುರಿಸಿತು. ಮತ್ತೊಂದು ಅಲೆ ಜೋರಾಗಿ ಬೀಸಲಿದೆ ಎಂದು ಪರಿಣತರು ಎಚ್ಚರಿಕೆ ನೀಡಿದ್ದರೂ ಸರ್ಕಾರ ಗಂಭೀರವಾಗಿ ಪರಿಗಣಿಸದೇ ನಿದ್ರೆ ಮಾಡಿತು. ಆಮ್ಲಜನಕದ ವ್ಯವಸ್ಥೆ ಮಾಡಿಕೊಳ್ಳುವಂತೆ ಪ್ರಧಾನಿ ಪತ್ರ ಬರೆದಿದ್ದರೂ ಅಲಕ್ಷಿಸಿತು. ಪರಿಣತರು ನೀಡಿದ ಸಲಹೆಗಳನ್ನು ಮಂತ್ರಿಗಳು, ಐಎಎಸ್ ಅಧಿಕಾರಿಗಳು ಕಡೆಗಣಿಸಿದರು. ಬರೀ ಬಿಲ್ ವ್ಯವಹಾರದಲ್ಲಿ ನಿರತರಾಗಿದ್ದರು.

ವಿವಿಧ ಇಲಾಖೆಗಳು, ಸಂಘ ಸಂಸ್ಥೆಗಳನ್ನು ಒಳಗೊಂಡು ಕೆಲಸ ಮಾಡುವ ಅವಶ್ಯವಿದೆ. ಸೋಂಕಿತರ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ವ್ಯವಸ್ಥೆ ಏನಿದೆ ಎಂಬುದನ್ನು ಪ್ರತಿ ತಾಲ್ಲೂಕಿನ ತಹಶೀಲ್ದಾರ್ ನಿತ್ಯ ಸಂಜೆ 5 ಗಂಟೆಗೆ ಬುಲೆಟಿನ್ ಹೊರಡಿಸಬೇಕು. ಇದರಿಂದ ಸಾರ್ವಜನಿಕರಿಗೆ ಮಾಹಿತಿ ಸಿಗುತ್ತದೆ. ವಾರ್ತಾ ಇಲಾಖೆ ಏನು ಕೆಲಸ ಮಾಡುತ್ತಿದೆಯೋ ಗೊತ್ತಿಲ್ಲ. ನರ್ಸಿಂಗ್, ಪ್ಯಾರಾ ಮೆಡಿಕಲ್ ಓದಿ ಮನೆಯಲ್ಲಿರುವ ವಿದ್ಯಾರ್ಥಿಗಳನ್ನು ಕೋವಿಡ್ ನಿರ್ವಹಣೆ ಕೆಲಸಕ್ಕೆ ಬಳಸಿಕೊಳ್ಳಬೇಕು. ವೈದ್ಯಕೀಯ ಕಾಲೇಜು ಹೊಂದಿರುವ ಮಠಗಳ ಸ್ವಾಮೀಜಿಗಳು ಸಾರ್ವಜನಿಕರ ನೆರವಿಗೆ ಧಾವಿಸಬೇಕು.

ಎಚ್.ವಿಶ್ವನಾಥ್, ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ

ನೀವೂ ಪ್ರತಿಕ್ರಿಯಿಸಿ

ಅಪಾಯಕಾರಿ ಮಟ್ಟಕ್ಕೆ ಕೋವಿಡ್ ಹರಡುವಿಕೆ ತಡೆಯುವಲ್ಲಿ ಸರ್ಕಾರ ಎಡವಿದ್ದೆಲ್ಲಿ? ಈಗ ತುರ್ತಾಗಿ ಮಾಡಬೇಕಾದುದೇನು? ಆರೋಗ್ಯ ವ್ಯವಸ್ಥೆಯಲ್ಲಿ ಆಗಬೇಕಾದ ಸುಧಾರಣೆ ಕುರಿತು ನೀವೂ ಬರೆಯಿರಿ.

ನಿಮ್ಮ ವಿಳಾಸ, ಫೋಟೋ, ಫೋನ್ ನಂಬರ್ ಜತೆಗಿರಲಿ. ಆಯ್ದ ಅಭಿಪ್ರಾಯವನ್ನು ಪ್ರಕಟಿಸಲಾಗುವುದು. ಗರಿಷ್ಠ 50 ಪದಗಳ ಮಿತಿ ಇರಲಿ.

96060 38256

4B ಪುಟ ನೋಡಿ

'ಜೀವರಕ್ಷಕ' ಚುಚ್ಚುಮದ್ದು ಕೊರತೆ • ಸರ್ಕಾರಿ ಕೋಟಾದ ಕೋವಿಡ್ ರೋಗಿಗಳಿಗೂ ಔಷಧ ನೀಡಲಾಗದ ಸ್ಥಿತಿ

ಸಿಗದ ರೆಮ್‌ಡಿಸಿವಿರ್: ರೋಗಿಗಳ ಏದುಸಿರು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಜೀವ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿರುವ ಕೋವಿಡ್ ರೋಗಿಗಳು ಅತ್ತ ಆಸ್ಪತ್ರೆಗಳಲ್ಲಿ ಹಾಸಿಗೆ, ಆಮ್ಲಜನಕ ಸಿಗದೇ ನರಳಾಟ ನಡೆಸುತ್ತಿದ್ದರೆ, ಇತ್ತ ಆಸ್ಪತ್ರೆಯಲ್ಲಿ ಹಾಸಿಗೆ ದಕ್ಕಿದರೂ 'ಜೀವರಕ್ಷಕ' ಎಂದು ಭಾವಿಸಲಾಗುತ್ತಿರುವ ರೆಮ್‌ಡಿಸಿವಿರ್ ಚುಚ್ಚುಮದ್ದು ಕೊರತೆ ರೋಗಿಗಳನ್ನು ಆತಂಕದ ಮಡುವಿಗೆ ದೂಡುತ್ತಲೇ ಇದೆ.

ರೆಮ್‌ಡಿಸಿವಿರ್ ಕೊರತೆ ಇಲ್ಲ ಎಂದು ಮುಖ್ಯಮಂತ್ರಿ ಯಡಿಯೂರಪ್ಪ, ಕೇಂದ್ರ ರಾಸಾಯನಿಕ ಸಚಿವ ಡಿ.ವಿ. ಸದಾನಂದಗೌಡ, ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಪದೇ ಪದೇ ಪ್ರತಿಪಾದಿಸುತ್ತಲೇ ಇದ್ದಾರೆ. ಅವರು ಭರವಸೆ ನೀಡುತ್ತಿರುವಷ್ಟೇ ಪ್ರಮಾಣದಲ್ಲಿ ರೆಮ್‌ಡಿಸಿವಿರ್ ಕೊರತೆ ಹೆಚ್ಚುತ್ತಲೇ ಇದೆ! ಮಂಗಳವಾರ ರಾಜ್ಯಕ್ಕೆ ಪೂರೈಕೆಯಾಗಬೇಕಿದ್ದ ಚುಚ್ಚುಮದ್ದು ತಲುಪದೇ ಇರುವುದು, ರೋಗಿಗಳು ಹಾಗೂ ಚಿಕಿತ್ಸೆ ನೀಡುವ ವೈದ್ಯರು ಸೇರಿದಂತೆ ಎಲ್ಲರನ್ನೂ ಕಷ್ಟಕ್ಕೆ ತಳ್ಳಿದೆ.

ಕೆಲವು ದಿನಗಳಿಂದ ರಾಜ್ಯಕ್ಕೆ ನಿತ್ಯವೂ 20,000 ವಯಲ್‌ಗಳಷ್ಟು ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಕೆ ಆಗುತ್ತಿತ್ತು. 10,000 ವಯಲ್‌ಗಳನ್ನು ಸರ್ಕಾರಿ ಕೋಟಾದಡಿ ದಾಖಲಾದ ರೋಗಿಗಳಿಗಾಗಿ ಕಾಯ್ದಿರಿಸಲಾಗುತ್ತಿತ್ತು. ಉಳಿದ 10,000 ವಯಲ್‌ಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಪೂರೈಸಲು ಔಷಧ ನಿಯಂತ್ರಕರ ಮೂಲಕ ಹಂಚಿಕೆ ಮಾಡಲಾಗುತ್ತಿತ್ತು.

ಕರ್ನಾಟಕ ವೈದ್ಯಕೀಯ ಸರಬರಾಜು ನಿಗಮಕ್ಕೆ ಮಂಗಳವಾರ 10,000 ವಯಲ್‌ಗಳಷ್ಟು ರೆಮ್‌ಡಿಸಿವಿರ್ ಪೂರೈಕೆ ಆಗಬೇಕಿತ್ತು. ಆದರೆ, ಔಷಧಿ ಬಂದು ತಲುಪಿಲ್ಲ. ಸರ್ಕಾರಿ ಕೋಟಾದ ರೋಗಿಗಳಿಗೆ ಕಾಯ್ದಿರಿಸಿದ್ದ ಔಷಧಿಯ ದಾಸ್ತಾನು ಮುಗಿಯುವ ಹಂತ ತಲುಪಿದೆ. ಬುಧವಾರದಿಂದ ಸರ್ಕಾರಿ ಕೋಟಾದ ರೋಗಿಗಳಿಗೂ ರೆಮ್‌ಡಿಸಿವಿರ್ ಔಷಧಿ ಒದಗಿಸುವುದು ಕಷ್ಟವಾಗಲಿದೆ ಎಂಬ ಮಾಹಿತಿ ಆರೋಗ್ಯ ಇಲಾಖೆಯ ಮೂಲಗಳಿಂದ ಲಭಿಸಿದೆ.

ಸರ್ಕಾರಿ ಕೋಟಾದಡಿ ಚಿಕಿತ್ಸೆಗೆ ದಾಖಲಾದವರಿಗೆ ಸುಲಭವಾಗಿ ರೆಮ್‌ಡಿಸಿವಿರ್ ಚುಚ್ಚುಮದ್ದು ಲಭಿಸುತ್ತಿತ್ತು. ಖಾಸಗಿಯಾಗಿ ಆಸ್ಪತ್ರೆಗೆ ದಾಖಲಾದವರು ಈ ಚುಚ್ಚುಮದ್ದಿಗಾಗಿ ಪರದಾಡಬೇಕಾದ ಸ್ಥಿತಿ ಇತ್ತು. ಆದರೆ, ಇದೇ ಪರಿಸ್ಥಿತಿ ಮುಂದುವರಿದರೆ ಸರ್ಕಾರಿ ಕೋಟಾದಲ್ಲಿ ಚಿಕಿತ್ಸೆಗೆ ದಾಖಲಾದವರೂ ಔಷಧಿಗಾಗಿ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು ಎಂಬ ಆತಂಕ ಆರೋಗ್ಯ ಇಲಾಖೆಯ ಅಧಿಕಾರಿಗಳಲ್ಲೇ ಇದೆ.

ಔಷಧಿಯೇ ಸಿಗುತ್ತಿಲ್ಲ: ಮೈಲಾನ್, ಸನ್ ಫಾರ್ಮಾ ಕಂಪನಿಗಳಿಗೆ ಒಟ್ಟು 1.20 ಲಕ್ಷ ವಯಲ್ ರೆಮ್‌ಡಿಸಿವಿರ್ ಪೂರೈಸುವಂತೆ ವೈದ್ಯಕೀಯ ಸರಬರಾಜು ನಿಗಮ ಏಪ್ರಿಲ್ ಆರಂಭದಲ್ಲಿ ಬೇಡಿಕೆ ಸಲ್ಲಿಸಿತ್ತು. ಏಪ್ರಿಲ್ 24ರಂದು ಕ್ಯಾಡಿಲಾ ಕಂಪನಿಗೆ 60,000 ವಯಲ್ ಮತ್ತು ಜುಬಿಲಿಯಂಟ್ ಫಾರ್ಮಾಸ್ಯೂಟಿಕಲ್ಸ್ ಕಂಪನಿಗೆ 30,000 ವಯಲ್ ಪೂರೈಕೆಗೆ ಆದೇಶ ನೀಡಲಾಗಿದೆ. ಸೋಮವಾರ ಮತ್ತೆ ಮೈಲಾನ್ ಕಂಪನಿಗೆ 1 ಲಕ್ಷ ವಯಲ್ ಪೂರೈಸುವಂತೆ ಆದೇಶ ನೀಡಲಾಗಿದೆ.

6ನೇ ಪುಟ ನೋಡಿ

ಲಾಕ್‌ಡೌನ್ ಕಾರಣ ತಮ್ಮ ಊರುಗಳಿಗೆ ತೆರಳಲು ಜನರು ಮಂಗಳವಾರ ರಾತ್ರಿ ಬೆಂಗಳೂರಿನ ರೈಲು ನಿಲ್ದಾಣದಲ್ಲಿ ಸೇರಿದ್ದರು ಪ್ರಜಾವಾಣಿ ಚಿತ್ರ/ ಪುಷ್ಕರ್ ವಿ.

ರಾಜ್ಯಕ್ಕೆ ತಕ್ಷಣ 30,000 ವಯಲ್ ರೆಮ್‌ಡೆಸಿವಿರ್ ಪೂರೈಕೆ ಆಗಬೇಕಿದೆ. ಇಷ್ಟು ಪ್ರಮಾಣದ ಚುಚ್ಚುಮದ್ದು ಪೂರೈಕೆ ಆದರೆ ಕೊರತೆಯನ್ನು ಸರಿಪಡಿಸಲು ಸಾಧ್ಯವಾಗಲಿದೆ

ಕೆ.ವಿ. ತ್ರಿಲೋಕಚಂದ್ರ, ಆರೋಗ್ಯ ಇಲಾಖೆ ಆಯುಕ್ತ

₹40 ಸಾವಿರದವರೆಗೂ ದರ?

ಬೆಂಗಳೂರು: ಪೂರೈಕೆಯಾಗುವ ರೆಮ್‌ಡಿಸಿವಿರ್ ಚುಚ್ಚುಮದ್ದಿನಲ್ಲಿ ಬಹುಪಾಲನ್ನು ಸರ್ಕಾರಿ ಕೋಟಾ ರೋಗಿಗಳಿಗಾಗಿ ಕಾಯ್ದಿರಿಸಲಾಗುತ್ತಿದೆ. ಖಾಸಗಿ ಆಸ್ಪತ್ರೆಗಳಿಗೆ ಈ ಔಷಧಿಯೇ ಸಿಗುತ್ತಿಲ್ಲ. ಈ ವೈಫಲ್ಯಕ್ಕೆ ಸರ್ಕಾರವೇ ಹೊಣೆ ಎಂದು ರಾಜ್ಯ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳ ಸಂಘದ(ಫನಾ) ಅಧ್ಯಕ್ಷ ಡಾ.ಎಚ್.ಎಂ. ಪ್ರಸನ್ನ ಆರೋಪಿಸುತ್ತಾರೆ.

'ಸರ್ಕಾರಿ ಕೋಟಾದ ರೋಗಿಗಳಿಗೆ ಕಾಯ್ದಿರಿಸಿದ್ದ ಚುಚ್ಚುಮದ್ದಿನ ಸಂಖ್ಯೆಗೆ ಅನುಗುಣವಾಗಿ ಚಿಕಿತ್ಸೆ ನೀಡಿಲ್ಲ. ಚುಚ್ಚುಮದ್ದು ಎಲ್ಲಿಗೆ ಹೋಗಿದೆ ಎಂಬುದು ಗೊತ್ತಿಲ್ಲ. ಕಾಳಸಂತೆಯಲ್ಲಿ ದುಬಾರಿ ದರಕ್ಕೆ ಮಾರುತ್ತಿದ್ದಾರೆ. ಪ್ರತಿ ವಯಲ್‌ಗೆ ₹ 20,000ದಿಂದ ₹ 40,000ದವರೆಗೂ ನೀಡಿ ಔಷಧ ಖರೀದಿಸಿ ತರಬೇಕಾದ ಸ್ಥಿತಿ ಇದೆ. ರೆಮ್‌ಡೆಸಿವರ್ ಪೂರೈಕೆಗೆ ಸಂಬಂಧಿಸಿದಂತೆ ಸರ್ಕಾರದ ಕೆಲಸ ಹೇಳಿಕೆಗಳಿಗಷ್ಟೇ ಸೀಮಿತವಾಗಿದೆ' ಎಂದು ದೂರಿದರು.

ಇನ್ನಷ್ಟು ಸುದ್ದಿಗಳು 2, 3, 4

802 ಟನ್ ಆಮ್ಲಜನಕ ಪೂರೈಸಿ: ಕೇಂದ್ರಕ್ಕೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು: ರಾಜ್ಯಕ್ಕೆ ಹಂಚಿಕೆ ಮಾಡಲು ಕೊಟ್ಟಿರುವ ಒಪ್ಪಿಗೆಯಂತೆ ದಿನಕ್ಕೆ 802 ಟನ್ ಆಮ್ಲಜನಕ ಪೂರೈಸಲು ಕೂಡಲೇ ಕ್ರಮ ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಆಮ್ಲಜನಕ ಕೊರತೆ ಬಗ್ಗೆ ಇದೇ 24ರಂದು ಕೇಂದ್ರ ಸರ್ಕಾರದ ಜತೆ ಸಮಾಲೋಚನೆ ನಡೆಸಲಾಗಿದೆ' ಎಂದು ರಾಜ್ಯ ಸರ್ಕಾರ ಸಲ್ಲಿಸಿದ ವಿವರಣೆ ಆಧರಿಸಿ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದ ಕುಮಾರ್ ಅವರಿದ್ದ ವಿಶೇಷ ವಿಭಾಗೀಯ ಪೀಠ ಈ ಆದೇಶ ನೀಡಿತು. 'ಆಮ್ಲಜನಕ ಮತ್ತು ರೆಮ್‌ಡಿಸಿವಿರ್ ಪೂರೈಕೆಯ ಕೊರತೆ ಆತಂಕಕಾರಿ ವಿಷಯ' ಎಂದೂ ಪೀಠ ಹೇಳಿತು.

ಆಮ್ಲಜನಕ ಮತ್ತು ರೆಮ್‌ಡಿಸಿವಿರ್ ಕೊರತೆ ಇದೆ ಎಂದು ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಂ ಅಸೋಸಿಯೇಷನ್ (ಫನಾ) ಅಧ್ಯಕ್ಷ ಡಾ. ಎಚ್.ಎಂ. ಪ್ರಸನ್ನ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

6ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

14,00,775 ▲	ಒಟ್ಟು ಸೋಂಕಿತರು (13,68,945 ನಿನ್ನೆಯ ವಿವರ)
3,01,899 ▲	ಸಕ್ರಿಯ ಪ್ರಕರಣಗಳು
10,84,050 ▲	ಗುಣಮುಖರಾದವರು
14,807 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	31,830	▲
ಗುಣಮುಖ	10,793	▲
ಸಾವು	180	▼

2,063 ಐಸಿಯುನಲ್ಲಿ ಇರುವವರು ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ತಡೆಗೆ ಸಿದ್ಧತೆ ಏನು: 'ಸುಪ್ರೀಂ' ಪ್ರಶ್ನೆ

ಮಾಹಿತಿ ನೀಡಲು ಕೇಂದ್ರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ವೈದ್ಯಕೀಯ ಆಮ್ಲಜನಕದ ಬೇಡಿಕೆ ಮತ್ತು ಪೂರೈಕೆ, ಆರೋಗ್ಯ ಮೂಲಸೌಕರ್ಯ, ಅಗತ್ಯವಾಗಿ ಬೇಕಾದ ಔಷಧಗಳು ಮತ್ತು ಲಸಿಕೆಯ ಲಭ್ಯತೆಯ ಸ್ಥಿತಿಗತಿ ಕುರಿತು ಮಾಹಿತಿ ಕೊಡಬೇಕು ಎಂದು ಸುಪ್ರೀಂ ಕೋರ್ಟ್ ಮಂಗಳವಾರ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಕೋವಿಡ್–19ರ ಎರಡನೇ ಅಲೆಯು ತೀವ್ರವಾಗಿ ಹರಡುತ್ತಿದ್ದು ಅದನ್ನು ತಡೆಯಲು ಮಾಡಿಕೊಂಡಿರುವ ಸಿದ್ಧತೆ ಏನು ಎಂದು ಕೋರ್ಟ್ ಪ್ರಶ್ನಿಸಿದೆ.

ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ಈ ಪ್ರಕರಣವನ್ನು ಸ್ವಯಂ ಪ್ರೇರಣೆಯಿಂದ ಕೈಗೆತ್ತಿಕೊಂಡಿದೆ.

ಕೋವಿಡ್ ತಡೆ ಲಸಿಕೆ ತಯಾರಿಸುವ ಕಂಪನಿಗಳು ಲಸಿಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಭಿನ್ನ ದರ ನಿಗದಿ ಮಾಡಿದ್ದರ ಹಿಂದಿನ ತರ್ಕ ಏನು ಎಂದೂ ಪೀಠವು ಪ್ರಶ್ನಿಸಿದೆ. ಪಶ್ಚಿಮ ಬಂಗಾಳ ಸರ್ಕಾರದ ಪರ ವಕೀಲರು ಈ ವಿಚಾರವನ್ನು ಎತ್ತಿದರು.

'ನಾವು ಕಾರ್ಯಾಂಗದ ಕೆಲಸದಲ್ಲಿ ಮಧ್ಯಪ್ರವೇಶಿಸುತ್ತಿಲ್ಲ. ಸಲಹೆಗಳನ್ನು ಮಾತ್ರ ನೀಡುತ್ತಿದ್ದೇವೆ. 18 ದಾಟಿದ ಎಲ್ಲರಿಗೂ ಮೇ 1ರಿಂದ ಲಸಿಕೆ ನೀಡಲಾಗುವುದು ಎಂದ ಮೇಲೆ, ಈ ಹೆಚ್ಚುವರಿ ಬೇಡಿಕೆಯನ್ನು ಪೂರೈಸುವುದು ಹೇಗೆ ಎಂಬುದನ್ನು ತಿಳಿಯಲು ಬಯಸಿದ್ದೇವೆ' ಎಂದು ಪೀಠವು ಹೇಳಿದೆ. ಆರೋಗ್ಯ ಮೂಲಸೌಕರ್ಯ ಲಭ್ಯತೆ ಬಗ್ಗೆ ರಾಜ್ಯ ಸರ್ಕಾರಗಳೂ ಮಾಹಿತಿ ನೀಡಬೇಕು ಎಂದೂ ಹೇಳಿದೆ.

'ಹೈಕೋರ್ಟ್ ಸ್ಥಾನ ಆಕ್ರಮಣವಲ್ಲ'

ಕೋವಿಡ್‌ಗೆ ಸಂಬಂಧಿಸಿದ ಪ್ರಕರಣವನ್ನು ವಿಚಾರಣೆಗೆ ಎತ್ತಿಕೊಂಡಿದ್ದರ ಹಿಂದೆ ಹೈಕೋರ್ಟ್‌ಗಳ ಸ್ಥಾನವನ್ನು ಆಕ್ರಮಿಸಿಕೊಳ್ಳುವ ಉದ್ದೇಶ ಇಲ್ಲ ಎಂದು ಪೀಠವು ಸ್ಪಷ್ಟಪಡಿಸಿದೆ. 'ತಮ್ಮ ವ್ಯಾಪ್ತಿಯಲ್ಲಿ ಏನು ನಡೆಯುತ್ತಿದೆ ಎಂಬುದರ ಮೇಲೆ ನಿಗಾ ಇರಿಸಲು ಹೈಕೋರ್ಟ್‌ಗಳೇ ಸೂಕ್ತ' ಎಂದೂ ಪೀಠ ತಿಳಿಸಿದೆ.

ಹಾಗಿದ್ದರೂ ರಾಷ್ಟ್ರೀಯ ಬಿಕ್ಕಟ್ಟಿನ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಮೂಕಪ್ರೇಕ್ಷಕನಂತೆ ಇರುವುದಕ್ಕೂ ಆಗದು ಎಂದು ಪೀಠ ಹೇಳಿದೆ.

ಇದೇ 22ರಂದು ಸುಪ್ರೀಂ ಕೋರ್ಟ್ ಸ್ವಯಂಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡಿತ್ತು. ಹೈಕೋರ್ಟ್‌ಗಳು ಕೋವಿಡ್‌ಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸುವುದನ್ನು ತಡೆಯುವುದೇ ಇದರ ಉದ್ದೇಶ ಎಂದು ಹಲವು ಹಿರಿಯ ವಕೀಲರು ಟೀಕಿಸಿದ್ದರು. ಹಾಗಾಗಿ, ಸುಪ್ರೀಂ ಕೋರ್ಟ್ ಈ ಸ್ಪಷ್ಟನೆ ನೀಡಿದೆ ಎಂದು ವಿಶ್ಲೇಷಿಸಲಾಗಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ
ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–7

ಮಕ್ಕಳ ಹಕ್ಕುಗಳ ಸಂಸ್ಥೆಯಿಂದ ಆಪ್ತ ಸಮಾಲೋಚನೆ

ಕೋವಿಡ್ ಭಯ: ಮಕ್ಕಳಲ್ಲಿ ವಿಚಿತ್ರ ವರ್ತನೆ

• ವಿಜಯಕುಮಾರ್ ಎಸ್.ಕೆ.

ಬೆಂಗಳೂರು: ಕೊರೊನಾ ಎಂಬ ಪದ ಕಿವಿಗೆ ಬಿದ್ದ ಕೂಡಲೇ ಕುರ್ಚಿ ಕೆಳಗೆ ಬಚ್ಚಿಟ್ಟುಕೊಳ್ಳುವ ಬಾಲಕ, ಮುಸುಕು ಹೊದ್ದು ಕುಳಿತುಕೊಳ್ಳುವ ಬಾಲಕಿಯರು, ಅದೇ ಭಯದಲ್ಲಿ ಮಲಗಿ ಹಾಸಿಗೆಯಲ್ಲೇ ಮೂತ್ರ ವಿಸರ್ಜನೆ ಮಾಡಿಕೊಳ್ಳುವ 14 ವರ್ಷದ ಬಾಲಕ...

ಇದು ಕೋವಿಡ್ ಎರಡನೇ ಅಲೆ ಮಕ್ಕಳ ಮನಸ್ಸನ್ನು ಅದೆಷ್ಟು ಗಾಸಿ ಮಾಡಿಸಿದೆ ಎಂಬುದಕ್ಕೆ ಉದಾಹರಣೆಗಳು. ಈ ರೀತಿ ವಿಚಿತ್ರವಾಗಿ ವರ್ತಿಸುತ್ತಿರುವ ಮಕ್ಕಳಿಗೆ ಮನೋಸ್ಥೈರ್ಯ ತುಂಬುವ ಕೆಲಸವನ್ನು ಬೆಂಗಳೂರಿನ ಮಕ್ಕಳ ಹಕ್ಕುಗಳ ಸಂಸ್ಥೆ ಮಾಡುತ್ತಿದೆ.ಕೋವಿಡ್ ಭೀತಿಯಿಂದ ಮಕ್ಕಳು ಮಾನಸಿಕ ಖಿನ್ನತೆಗೆ ಒಳಗಾಗುತ್ತಿರುವ ಹಲವು ಪ್ರಕರಣಗಳು ಈ ಸಂಸ್ಥೆ ಮುಂದೆ ಬರುತ್ತಿವೆ. ಸಂಸ್ಥೆಯ ನಿರ್ದೇಶಕ ನಾಗಸಿಂಹ ಜಿ.ರಾವ್ ಅವರು ಮಕ್ಕಳನ್ನು ಆನ್‌ಲೈನ್‌ನಲ್ಲೇ ಆಪ್ತ ಸಮಾಲೋಚನೆಗೆ ಒಳಪಡಿಸಿ ಅವರಿಗೆ ಸ್ಥೈರ್ಯ ತುಂಬುತ್ತಿದ್ದಾರೆ.

ರಾಜಾಜಿನಗರದ 9 ವರ್ಷದ ಬಾಲಕ ಪದೇ ಪದೇ ಕುರ್ಚಿಯ ಅಡಿಯಲ್ಲಿ ಮೌನವಾಗಿ ಕುಳಿತುಬಿಡುತ್ತಿದ್ದ.

6ನೇ ಪುಟ ನೋಡಿ

ಸಲಹೆಗಳೇನು

- ಮಕ್ಕಳಲ್ಲಿ ಕೋವಿಡ್ ಭಯ ಹುಟ್ಟಿಸಬೇಡಿ
- ಖಿನ್ನತೆಗೆ ಒಳಗಾಗಿದ್ದರೆ ಮಕ್ಕಳನ್ನು ನಿಂದಿಸಿ ಅವಮಾನ ಮಾಡದೇ, ಆಪ್ತತೆಯಿಂದ ಮಾತನಾಡಿಸಿ
- ಆಪ್ತ ಸಮಾಲೋಚಕರ ಬಳಿ ಏನು ಹೇಳಿದೆ ಎಂದು ಪ್ರಶ್ನಿಸಬೇಡಿ
- ಮಕ್ಕಳ ಖಾಸಗಿತನ ರಕ್ಷಿಸಿ, ಸಮಸ್ಯೆಗಳನ್ನು ಸಮಾಧಾನದಿಂದ ಆಲಿಸಿ
- ಮಕ್ಕಳ ವಿಚಿತ್ರ ವರ್ತನೆ ಬಗ್ಗೆ ಅವರ ಮುಂದೆಯೇ ಚರ್ಚಿಸಬೇಡಿ
- ಕತೆ, ಹಾಡು ಹೇಳಿಸಿ, ಆಟ ಆಡಿಸಿ ಹೆದರಿಕೆ ಹೋಗಲಾಡಿಸಿ

ಅಗತ್ಯ ಸೇವೆಗೆ 150 ಬಿಎಂಟಿಸಿ ಬಸ್ ಸಂಚಾರ

ಲಾಕ್‌ಡೌನ್: ಆಟೊ, ಟ್ಯಾಕ್ಸಿ ಇಲ್ಲ

ಬೆಂಗಳೂರು: ಲಾಕ್‌ಡೌನ್ ಇದ್ದರೂ ಕಾರ್ಯನಿರ್ವಹಿಸುವ ಜನರ ಸಂಚಾರಕ್ಕೆ ಅನುಕೂಲ ಆಗುವಂತೆ 150 ಬಸ್‌ಗಳನ್ನು ರಸ್ತೆಗಿಳಿಸಲು ಬಿಎಂಟಿಸಿ ನಿರ್ಧರಿಸಿದೆ.

ಬೆಳಿಗ್ಗೆ 6ರಿಂದ ರಾತ್ರಿ 7 ಗಂಟೆಯವರೆಗೆ ಈ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ. ಕೆಂಪೇಗೌಡ ಬಸ್ ನಿಲ್ದಾಣದಿಂದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾರ್ಯಾಚರಣೆ ಮಾಡುವ 6 ಬಸ್‌ಗಳು ದಿನದ 24 ಗಂಟೆಯೂ ಸಂಚಾರ ನಡೆಸಲಿವೆ ಎಂದು ಬಿಎಂಟಿಸಿ ತಿಳಿಸಿದೆ.

ಸಾಮಾನ್ಯ ಬಸ್‌ಗಳು ಶಿವಾಜಿನಗರ, ಕೆಂಪೇಗೌಡ ಬಸ್ ನಿಲ್ದಾಣ, ಮಲ್ಲೇಶ್ವರ, ಹಂಪಿನಗರ, ಬನಶಂಕರಿ, ಕೆ.ಆರ್. ಮಾರುಕಟ್ಟೆ, ಕೆಂಗೇರಿ, ಹೆಬ್ಬಾಳ, ಬೊಮ್ಮನಹಳ್ಳಿ, ಯಶವಂತಪುರ, ಶ್ರೀನಗರ, ಶಾಂತಿನಗರದ ನಿಲ್ದಾಣಗಳಿಂದ ನಗರದ ವಿವಿಧೆಡೆಗೆ ಸಂಚರಿಸಲಿವೆ ಎಂದು ಬಿಎಂಟಿಸಿ ಮಾಹಿತಿ ನೀಡಿದೆ.

ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರ ಸಂಪೂರ್ಣ ಸ್ಥಗಿತವಾಗಲಿದೆ. ಆದರೆ, ವಿಮಾನ ನಿಲ್ದಾಣದಿಂದ ಫ್ಲೈಬಸ್‌ಗಳ ಸಂಚಾರ ಮಾತ್ರ ಇರಲಿದೆ. ಆಟೊರಿಕ್ಷಾ ಮತ್ತು ಟ್ಯಾಕ್ಸಿಗಳ ಸಂಚಾರ ಸಂಪೂರ್ಣ ಸ್ಥಗಿತವಾಗಲಿದೆ.

'ಸರ್ಕಾರದ ಆದೇಶಕ್ಕೆ ಮನ್ನಣೆ ನೀಡಿ ಆಟೊರಿಕ್ಷಾ ಮತ್ತು ಟ್ಯಾಕ್ಸಿಗಳನ್ನು ರಸ್ತೆಗೆ ಇಳಿಸದಿರಲು ನಿರ್ಧರಿಸಿದ್ದೇವೆ' ಎಂದು ಆಟೊ ಮತ್ತು ಟ್ಯಾಕ್ಸಿ ಚಾಲಕರ ಸಂಘದ ಅಧ್ಯಕ್ಷ ಜವರೇಗೌಡ ತಿಳಿಸಿದರು.

ಗಾರ್ಮೆಂಟ್ಸ್ ಕಾರ್ಖಾನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಉತ್ಪಾದನಾ ಚಟುವಟಿಕೆಗಳು ಕಾರ್ಯನಿರ್ವಹಿಸಲಿದೆ. ಕೋವಿಡ್ ಮಾತ್ರವಲ್ಲದೇ ಬೇರೆ ಕಾಯಿಲೆಗಳಿಂದ ಬಳಲುತ್ತಿರುವ ಜನ ಕೂಡ ಆಸ್ಪತ್ರೆಗಳಿಗೆ ಅಲೆದಾಡಬೇಕಿದೆ. ಬಿಎಂಟಿಸಿ ಕಲ್ಪಿಸಿರುವ 150 ಬಸ್‌ಗಳ ಸೇವೆ ಸಾಲದು ಎಂಬುದು ಕಾರ್ಮಿಕರ ಅಭಿಪ್ರಾಯ.

ಸಂಚಾರಕ್ಕೆ ನಿರ್ಬಂಧ ಇದ್ದರೂ ಕೆಲಸ ಮಾಡುತ್ತಿರುವ ಕಂಪನಿಯ ಗುರುತಿನ ಚೀಟಿ ತೋರಿಸಿದರೆ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗುವುದು ಎಂದು ಪೊಲೀಸ್ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಇಂದಿನ ಪಾಡ್‌ಕಾಸ್ಟ್ ವಿಶೇಷ
ಝುಣ ಝುಣ ಕಾಂಚಾಣ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಜೆಎಸ್‌ಡಬ್ಲ್ಯುಗೆ ಜಮೀನು ಮಾರಾಟ; ಅಡಗಿದ ವಿರೋಧ

ಆನಂದ್ ಸಿಂಗ್ ಮೌನ–ಚರ್ಚೆಗೆ ಗ್ರಾಸ

• ಶಶಿಕಾಂತ ಎಸ್. ಶೆಂಬೆಳ್ಳಿ

ಪ್ರಜಾವಾಣಿ ವಿಶೇಷ

ಹೊಸಪೇಟೆ (ವಿಜಯನಗರ): ಈ ಹಿಂದೆ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರ, ಜಿಂದಾಲ್ ಸ್ಟೀಲ್ ವೆಸ್ಟರ್ನ್‌ಗೆ (ಜೆಎಸ್‌ಡಬ್ಲ್ಯು) ಜಮೀನು ಪರಭಾರೆ ಮಾಡಲು ಮುಂದಾದಾಗ ಅದನ್ನು ವಿರೋಧಿಸಿ ಆನಂದ್ ಸಿಂಗ್ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದರು. ಈಗ ಅವರೇ ಸಂಪುಟ ದರ್ಜೆ ಮಂತ್ರಿ, ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ಮೌನ ತಾಳಿರುವುದರ ಬಗ್ಗೆ ಜಿಲ್ಲೆಯಾದ್ಯಂತ ಚರ್ಚೆ ನಡೆಯುತ್ತಿದೆ.

2019ರಲ್ಲಿ ಸಮ್ಮಿಶ್ರ ಸರ್ಕಾರ ಜಿಂದಾಲ್‌ಗೆ 3,667.31 ಎಕರೆ ಜಮೀನು ಪರಭಾರೆಗೆ ಮುಂದಾಗಿತ್ತು. ಅದಕ್ಕೆ ಆನಂದ್ ಸಿಂಗ್ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಬಳಿಕ ಅವರು ಜಿಂದಾಲ್ ಸುತ್ತಮುತ್ತಲಿನ ಗ್ರಾಮಗಳಿಗೆ ಭೇಟಿ ನೀಡಿ ಜನರಲ್ಲಿ ಜಾಗೃತಿ ಮೂಡಿಸಿದ್ದರು. ಈಗ ಚಕಾರ ಎತ್ತದಿರುವುದು ಪ್ರಶ್ನೆಗಳನ್ನು ಹುಟ್ಟುಹಾಕಿದೆ.

6ನೇ ಪುಟ ನೋಡಿ

ಸಂಡೂರು ತಾಲ್ಲೂಕಿನ ತೋರಣಗಲ್ ಸಮೀಪದ ಜಿಂದಾಲ್ ಕಾರ್ಖಾನೆ –ಸಾಂದರ್ಭಿಕ ಚಿತ್ರ

ಜಿಂದಾಲ್ ಸೇರಿ ಯಾವುದೇ ಕಂಪನಿಗೆ ಜಮೀನು ಕೊಡಲು ತಕರಾರಿಲ್ಲ. ಆದರೆ, ಕಂಪನಿ ಮುಚ್ಚಿದ ನಂತರ ಆ ಜಮೀನು ಪುನಃ ಸರ್ಕಾರಕ್ಕೆ ಸೇರಬೇಕು

ಆನಂದ್ ಸಿಂಗ್, ಮೂಲಸೌಕರ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಸಚಿವ

ಜಿಂದಾಲ್ ಮುಂದೆ ಬಿಜೆಪಿ ಮಂಡಿಯೂರಿದ್ದು ಯಾಕೆ?– ಎಚ್‌ಡಿಕೆ



ಬೆಂಗಳೂರು: 'ಜಿಂದಾಲ್ ಕಂಪನಿ ಮುಂದೆ ಬಿಜೆಪಿ ಸರ್ಕಾರ ಏಕಾಏಕಿ ಮಂಡಿಯೂರಿದ್ದಕ್ಕೆ ನಿರ್ದಿಷ್ಟ ಕಾರಣ ಇದೆ. ಅದೇನೆಂದು ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಗೊತ್ತಿದ್ದು, ಅವರೇ ಬಹಿರಂಗಪಡಿಸಲಿ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, 'ಜಿಂದಾಲ್‌ಗೆ 3,677 ಎಕರೆ ಭೂಮಿ ಮಾರಾಟ ಮಾಡಲು ನಿರ್ಧರಿಸಿದ್ದ ನನ್ನ ನೇತೃತ್ವದ ಮೈತ್ರಿ ಸರ್ಕಾರದ ವಿರುದ್ಧ ಬಿಜೆಪಿ ಹೋರಾಟ ನಡೆಸಿತ್ತು. ಯಡಿಯೂರಪ್ಪ ಅಹೋರಾತ್ರಿ ಧರಣಿಗೆ ಮುಂದಾಗಿದ್ದರೆ ಬಿಜೆಪಿ ಯುವ ಮೋರ್ಚಾ ವಿಧಾನಸೌಧ ಮುತ್ತಿಗೆ ಹಾಕಿತ್ತು. ಸರ್ಕಾರದ ವಿರುದ್ಧ ಕಿಕ್ ಬ್ಯಾಕ್ ಆರೋಪವನ್ನೂ ಮಾಡಲಾಗಿತ್ತು' ಎಂದು ಅವರು ನೆನಪಿಸಿಕೊಂಡಿದ್ದಾರೆ.

6ನೇ ಪುಟ ನೋಡಿ

ಜಿಂದಾಲ್ 'ಈಸ್ಟ್ ಇಂಡಿಯಾ ಕಂಪನಿ'ಯಂತಿದೆ. ಅದಕ್ಕೆ ಜಮೀನು ಕೊಡಬಾರದು ಎಂದಿದ್ದ ಆನಂದ್ ಸಿಂಗ್ ಈಗ ಆ ಕಂಪನಿ ಪರವಾಗಿದ್ದಾರಾ?

ಪಿ. ಶಬ್ಬೀರ್, ಜೆಡಿಎಸ್ ಮುಖಂಡ

ಜಿಂದಾಲ್‌ಗೆ ಜಮೀನು ಕೊಡುವುದನ್ನು ವಿರೋಧಿಸಿ ಹಿಂದೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದ ಆನಂದ್ ಸಿಂಗ್ ಈಗೇಕೆ ಮೌನವಾಗಿದ್ದಾರೆ?

ಸಣ್ಣಕ್ಕಿ ರುದ್ರಪ್ಪ, ರೈತ ಮುಖಂಡ

ರೈತನ ತೋಟದಲ್ಲಿ ಹವಾಮಾನ ಮುನ್ಸೂಚನೆ ಯಂತ್ರ

• ಡಿ.ಜಿ.ಮಲ್ಲಿಕಾರ್ಜುನ

ಶಿಡ್ಲಘಟ್ಟ (ಚಿಕ್ಕಬಳ್ಳಾಪುರ): ತಿಂಗಳ ಮುಂಚಿತವಾಗಿ ಹವಾಮಾನ ಮುನ್ಸೂಚನೆ ನೀಡುವ ಸೆನ್ಸರ್ ಆಧಾರಿತ ಅತ್ಯಾಧುನಿಕ ಪುಟ್ಟ ಸಾಧನವೊಂದನ್ನು ತಾಲ್ಲೂಕಿನ ಮೇಲೂರು ಗ್ರಾಮದ ರೈತರೊಬ್ಬರು ತಮ್ಮ ತೋಟದಲ್ಲಿ ಅಳವಡಿಸಿಕೊಂಡಿದ್ದಾರೆ.

ಬಿ.ಎನ್.ಸಚಿನ್

ಮೇಲೂರಿನ ಬಿ.ಎನ್.ಸಚಿನ್ ತಮ್ಮ ಜಮೀನಿನಲ್ಲಿ ಸ್ವಂತ ಹವಾಮಾನ ಯಂತ್ರ ಅಳವಡಿಸಿಕೊಂಡಿರುವ ಚಿಕ್ಕಬಳ್ಳಾಪುರ ಜಿಲ್ಲೆಯ ಮೊದಲ ರೈತ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಇವರ ಜಮೀನಿನ ಸುತ್ತಮುತ್ತ ಒಂದು ಕಿ.ಮೀ ವ್ಯಾಪ್ತಿಯಲ್ಲಿರುವ ಇತರ ಜಮೀನುಗಳ ರೈತರು ಕೂಡ ಈ ಸಾಧನದ ಉಪಯೋಗ ಪಡೆದುಕೊಳ್ಳಬಹುದಾಗಿದೆ.

ಹವಾಮಾನ ಮುನ್ಸೂಚನೆ ನೀಡುವ ಯಂತ್ರ

ಹವಾಮಾನ ಏರಿಳಿತ, ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ ಮಾಹಿತಿ ನೀಡುವ 'ವೆದರ್ ಫೋರ್‌ಕಾಸ್ಟ್' ಯಂತ್ರದ ಬಗ್ಗೆ ಸ್ನೇಹಿತರಿಂದ ತಿಳಿದುಕೊಂಡ ಸಚಿನ್ ₹40 ಸಾವಿರ ಕೊಟ್ಟು ಉಪಕರಣ ಖರೀದಿಸಿ ಅದನ್ನು ಜಮೀನಿನಲ್ಲಿ ಅಳವಡಿಸಿದ್ದಾರೆ.

ಸೌರಶಕ್ತಿಯಿಂದ ಕಾರ್ಯನಿರ್ವಹಿಸುವ ಈ ಸಾಧನಕ್ಕೆ ವಿದ್ಯುತ್ ಬೇಕಿಲ್ಲ. ನಿರ್ವಹಣಾ ವೆಚ್ಚವೂ ಇಲ್ಲ. ಇದರಲ್ಲಿರುವ ಆಧುನಿಕ ಸೆನ್ಸರ್ ವ್ಯವಸ್ಥೆ ಸ್ಯಾಟ್‌ಲೈಟ್ ಸಂಪರ್ಕ ಸಾಧಿಸಿ ಹವಾಮಾನ ಮಾಹಿತಿ ಸಂಗ್ರಹಿಸುತ್ತದೆ. ಅದನ್ನು ರೈತರ ಮೊಬೈಲ್‌ಗೆ ರವಾನಿಸುತ್ತದೆ.

ಒಂದು ತಿಂಗಳ ಮುಂಚಿತವಾಗಿ ಹವಾಮಾನ ಮುನ್ಸೂಚನೆ, ಒಂದು ವಾರದ ಹವಾಮಾನ ಬದಲಾವಣೆಗಳನ್ನು ಗ್ರಹಿಸುವ ಸಾಮರ್ಥ್ಯ ಈ ಸಾಧನಕ್ಕಿದೆ.

6ನೇ ಪುಟ ನೋಡಿ

ಸಹಾಯಕ್ಕಾಗಿ 'ವಾಲಂಟಿಯರ್ ಟೀಂ'

ಬೆಂಗಳೂರು: ಕೋವಿಡ್ ರೋಗಿಗಳಿಗೆ ಹಾಸಿಗೆ ವ್ಯವಸ್ಥೆ ಮಾಡಿಕೊಡುವುದು, ಆಮ್ಲಜನಕ ಪಡೆಯಲು ನೆರವಾಗುವುದು, ಕೌನ್ಸೆಲಿಂಗ್ ಮಾಡುವುದು ಹೀಗೆ ಹಲವು ಕಾರ್ಯಗಳಿಗಾಗಿ ಸಮಾನ ಮನಸ್ಕರ ಗುಂಪೊಂದು 'ಕರ್ನಾಟಕ ಕೋವಿಡ್ ವಾಲಂಟಿಯರ್ ಟೀಂ' ರಚಿಸಿಕೊಂಡಿದೆ.

'ಈ ತಂಡವು ಮರ್ಸಿ ಮಿಷನ್, ಆ್ಯಕ್ಟಿವ್ ಹೆಲ್ತ್, ಕರ್ನಾಟಕ ಜನಾರೋಗ್ಯ ಚಳವಳಿ, ಕರ್ನಾಟಕ ಜನಶಕ್ತಿ, ಅಸಂಘಟಿತ ಕಾರ್ಮಿಕರ ಸಂಘಟನೆಗಳು ಈ ಕೆಲಸಕ್ಕೆ ಜೊತೆಗೂಡಿದೆ. ಈ ತಂಡ ಸೇರಬಯಸುವವರಿಗೆ 2 ಗಂಟೆಗಳ ಆನ್‌ಲೈನ್ ತರಬೇತಿಯನ್ನೂ ನೀಡಲಾಗುತ್ತದೆ. ಆಸಕ್ತರು 9731440071ಗೆ ಸಂಪರ್ಕಿಸಬಹುದು' ಎಂದು ಪ್ರಕಟಣೆ ತಿಳಿಸಿದೆ.

IN THE COURT OF THE XXVI ADDL. CITY CIVIL AND SESSION JUDGE MAYO HALL AT BENGALURU CITY
P & Sc. No. 25026/2021

Between: 1. Smt. Sapna, aged about 38 years, D/o Late R. Vijayalakshmi, W/o Krishna, R/at No.3, Kadsiranapalya, Indiranagar Post, Bengaluru-560038.

2. Smt. Lakshmi, aged about 35 years, D/o Late R. Vijayalakshmi, R/at No. 16, Vyrappa Garden, Near OM Shakthi Temple, Old Baiyappanahalli, M.S.Nagar Post, Bengaluru-560033. ... **Petitioner**

AND: NIL ... RESPONDENT

PUBLIC NOTICE

WHEREAS the petitioners being the legal representatives of the deceased R.Vijayalakshmi, have filed the above petition under Section 272 of Indian Succession Act and prayed for issuance of Succession Certificate in respect of the amount of Rs. 1,19,417.38 (Rupees One Lakh Nineteen Thousand Four Hundred and Seventy, Paisa Thirty Eight only) available in the FDR No. 60154524748, QIDR-GEN-PUB-IND 6-104.

Tht matter is set down for hearing on **27/05/2021.** If any person or persons have any interest with this matter, may appear before this Hon'ble Court either in person or duly instructed pleader/acting which the matter shall be proceeded with as per law.

Given under my hand and seal of the Court on the 23rd day of April 2021.

By order of the Court, XXVI Addl. City Civil and Sessions Judge, Mayo Hall, Bengaluru

R. KRISHNA REDDY, Advocate
No.213, 8th E Main, 1st Block, Kalyan Nagar, Bengaluru-560043.

ಕೋವಿಡ್: ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ನೇತೃತ್ವದಲ್ಲಿ ಸಭೆ

ಲಸಿಕೆ: ಇಂದಿನಿಂದ ನೋಂದಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಮೇ 1ರಿಂದ ಕೋವಿಡ್ ಲಸಿಕೆ ನೀಡಲು ಬುಧವಾರದಿಂದ ನೋಂದಣಿ ಆರಂಭವಾಗಲಿದೆ. ಲಸಿಕೆ ಪಡೆಯಲು ಅರ್ಹರಾಗಿರುವವರು ಕೋವಿನ್ ಪೋರ್ಟಲ್‌ನಲ್ಲಿ ಅಗತ್ಯ ಮಾಹಿತಿ ಒದಗಿಸಿ ನೋಂದಣಿ ಮಾಡಿಕೊಳ್ಳಬಹುದು.

ಪಾಲಿಕೆಯ ಹಿರಿಯ ಅಧಿಕಾರಿಗಳೊಂದಿಗೆ ಮಂಗಳವಾರ ವರ್ಚ್ಯುವಲ್ ಸಭೆ ನಡೆಸಿದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಮೂರನೇ ಹಂತದ ಲಸಿಕೆ ವಿತರಣೆಗೆ ಕೈಗೊಂಡಿರುವ ಸಿದ್ಧತೆಗಳನ್ನು ಪರಿಶೀಲಿಸಿದರು.

ಸಭೆಯಲ್ಲಿ ಮಾತನಾಡಿದ ಅವರು, 'ಈ ಬಾರಿ ನಗರದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ಸರ್ಕಾರದ ವತಿಯಿಂದ ಕೋವಿಡ್ ಲಸಿಕೆ ನೀಡಲಾಗುವುದು. ಖಾಸಗಿ ಆಸ್ಪತ್ರೆಗಳಿಗೆ ಸರ್ಕಾರ ಲಸಿಕೆ ಪೂರೈಸುವುದಿಲ್ಲ. ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳು ಕಂಪನಿಗಳಿಂದ ನೇರವಾಗಿ ಲಸಿಕೆ ಖರೀದಿಸಬೇಕು. ಸರ್ಕಾರ ನಿಗದಿಪಡಿಸಿದ ದರದಲ್ಲೇ ವಿತರಣೆ ಮಾಡಬೇಕು' ಎಂದರು.

ತ್ವರಿತ ಫಲಿತಾಂಶಕ್ಕೆ ಸೂಚನೆ: ನಗರದ ವ್ಯಾಪ್ತಿಯಲ್ಲಿ ಕೋವಿಡ್ ಪತ್ತೆ ಪರೀಕ್ಷೆಗೆ ಮಾದರಿಗಳನ್ನು ಸಂಗ್ರಹಿಸಿದ 24 ಗಂಟೆಗಳೊಳಗೆ ವರದಿ ನೀಡುವಂತೆ ಎಲ್ಲ ಪ್ರಯೋಗಾಲಯಗಳಿಗೂ ಸೂಚನೆ ನೀಡಬೇಕು. ಮಾದರಿಗಳ ಸಂಗ್ರಹದ ಸಮಯದಲ್ಲಿ ವಿಳಾಸ, ಮೊಬೈಲ್ ಸಂಖ್ಯೆ ಮತ್ತು ಪಿನ್ ಕೋಡ್ ನಿಖರವಾಗಿ ನಮೂದಿಸುವಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಖಾಸಗಿ ಪ್ರಯೋಗಾಲಯಗಳು ವರದಿಯನ್ನು ತಡವಾಗಿ ಐಸಿಎಂಆರ್ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡುತ್ತಿರುವುದರಿಂದ 'ಬಿಯು' ಸಂಖ್ಯೆ ಸೃಜಿಸುವುದು ವಿಳಂಬವಾಗುತ್ತಿದೆ. ಇದು ಕೋವಿಡ್ ರೋಗಿಗಳು ಆಸ್ಪತ್ರೆ ತಡವಾಗಿ ದಾಖಲಾಗಲು ಕಾರಣವಾಗುತ್ತಿದೆ. ಈ ವಿಚಾರದಲ್ಲಿ ಖಾಸಗಿ ಪ್ರಯೋಗಾಲಯಗಳಿಗೆ ಸ್ಪಷ್ಟವಾದ ಸೂಚನೆಗಳನ್ನು ನೀಡಬೇಕು ಎಂದರು.

ನಗರದ 141 ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ತಲಾ ₹ 2 ಲಕ್ಷ ಮತ್ತು ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ತಲಾ ₹ 25 ಲಕ್ಷ ಅನುದಾನವನ್ನು ಔಷಧಿ ಖರೀದಿಗಾಗಿ ಒದಗಿಸಲಾಗಿದೆ. ಎಲ್ಲರೂ ತಕ್ಷಣವೇ ಈ ಅನುದಾನವನ್ನು ಬಳಸಿಕೊಂಡು ಅಗತ್ಯ ಔಷಧಿಗಳನ್ನು ಖರೀದಿಸಿ, ದಾಸ್ತಾನು ಮಾಡಿಕೊಳ್ಳಬೇಕು ಎಂದು ಸೂಚಿಸಿದರು.

'ಸೋಂಕು ತಡೆಗಾಗಿ ಕರ್ಫ್ಯೂ; ತುರ್ತು ಸಹಾಯಕ್ಕೆ ನಮ್ಮ – 100'

ಬೆಂಗಳೂರು: 'ಕರ್ಫ್ಯೂ ಸಮಯದಲ್ಲಿ ಯಾವುದೇ ತುರ್ತು ಸಹಾಯ ಬೇಕಾದರೂ ನಮ್ಮ – 100ಕ್ಕೆ ಕರೆ ಮಾಡಬಹುದು' ಎಂದು ನಗರ ಪೊಲೀಸರು ಹೇಳಿದ್ದಾರೆ.

ಕರ್ಫ್ಯೂ ನಿಯಮಗಳನ್ನು ಜಾರಿಗೆ ತರಲು ನಗರದಾದ್ಯಂತ ಬಿಗಿ ಭದ್ರತೆ ಕೈಗೊಂಡಿರುವ ಪೊಲೀಸರು, ಗಸ್ತು ತಿರುಗಲು ಹೊಯ್ಸಳ ವಾಹನಗಳನ್ನು ನಿಯೋಜಿಸಿದ್ದಾರೆ. ಆಯಾ ಠಾಣೆ ವ್ಯಾಪ್ತಿಯಲ್ಲಿ ಗಸ್ತು ತಿರುಗುವ ಸಿಬ್ಬಂದಿ, ಯಾವುದೇ ತುರ್ತು ಸಂದರ್ಭದಲ್ಲೂ ಜನರಿಗೆ ಸಹಾಯ ಮಾಡಲಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, 'ಅಪರಾಧ ತಡೆಗಾಗಿ ನಗರದಲ್ಲಿ ಹೊಯ್ಸಳ ಗಸ್ತು ವಾಹನಗಳು ಸಂಚರಿಸುತ್ತಿದ್ದವು. ಇದೀಗ ಕರ್ಫ್ಯೂ ಸಂದರ್ಭದಲ್ಲೂ ವಾಹನಗಳು ಗಸ್ತು ತಿರುಗಲಿವೆ. ಯಾರಿಗಾದರೂ ತುರ್ತು ಸಹಾಯದ ಅವಶ್ಯಕತೆ ಇದ್ದರೆ, 100ಕ್ಕೆ ಕರೆ ಮಾಡಬಹುದು' ಎಂದರು.

ವರದಿ ವಿಳಂಬ: ಪ್ರಯೋಗಾಲಯ ಬಂದ್

ಬೆಂಗಳೂರು: 24 ಗಂಟೆಗಳೊಳಗೆ ಕೋವಿಡ್ ಪತ್ತೆ ಪರೀಕ್ಷಾ ವರದಿ ನೀಡಲು ವಿಫಲವಾದ ಆರೋಪದ ಮೇಲೆ ಪಶ್ಚಿಮ ವಲಯದಲ್ಲಿನ ಆರ್.ವಿ. ಮೆಟ್ರೊಪೊಲಿಸ್ ಪ್ರಯೋಗಾಲಯವನ್ನು ಬಿಬಿಎಂಪಿ ಅಧಿಕಾರಿಗಳು ಮಂಗಳವಾರ ಬಂದ್ ಮಾಡಿಸಿದ್ದಾರೆ.

ನಿಗದಿತ ಗಡುವಿನೊಳಗೆ ವರದಿ ನೀಡದ ಕಾರಣಕ್ಕೆ ಆರ್.ವಿ. ಮೆಟ್ರೊಪೊಲಿಸ್ ಪ್ರಯೋಗಾಲಯಕ್ಕೆ ಸೋಮವಾರ ಶೋಕಾಸ್ ನೋಟಿಸ್ ಜಾರಿ ಮಾಡಲಾಗಿತ್ತು. ಮಂಗಳವಾರ ಬೀಗಮುದ್ರೆ ಹಾಕಲಾಗಿದೆ ಎಂದು ಪಾಲಿಕೆ ಅಧಿಕಾರಿಗಳು ತಿಳಿಸಿದ್ದಾರೆ.

ಇದೇ ಆರೋಪದ ಮೇಲೆ ಮೆಡಲ್ ಮತ್ತು ಆರತಿ ಪ್ರಯೋಗಾಲಯಗಳನ್ನು ಸೋಮವಾರ ಬಂದ್ ಮಾಡಿಸಲಾಗಿತ್ತು.

ಸರಳವಾಗಿ ನೆರವೇರಿದ 'ಬೆಂಗಳೂರು ಕರಗ'

ಬೆಂಗಳೂರು: ಐತಿಹಾಸಿಕ 'ಬೆಂಗಳೂರು ಕರಗ' ಈ ಬಾರಿಯೂ ಕೊರೊನಾ ಕಾರಣದಿಂದ ಸರಳವಾಗಿ ಮಂಗಳವಾರ ಮಧ್ಯರಾತ್ರಿ ನೆರವೇರಿತು.

ನಗರದಲ್ಲಿ ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಹೆಚ್ಚುತ್ತಿರುವುದರಿಂದ ಬೆಂಗಳೂರು 'ಕರಗ ಶಕ್ತ್ಯೋತ್ಸವ'ವನ್ನು ರದ್ದುಪಡಿಸಿ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಆದೇಶ ಹೊರಡಿಸಿದ್ದರು. ಇದರಿಂದ ಸಾಂಕೇತಿಕವಾಗಿ ದೇವಸ್ಥಾನದ ಮಟ್ಟಿಗೆ ಕರಗ ಆಚರಿಸಲು ಆಡಳಿತ ಮಂಡಳಿ ಮುಂದಾಗಿತ್ತು.

'ದೇವಸ್ಥಾನದಲ್ಲೇ ಸರಳವಾಗಿ ಕರಗ ನಡೆಸಲು ನಿರ್ಧರಿಸಲಾಯಿತು. ಸಂಪ್ರದಾಯದಂತೆ ಕರಗದ ಮುನ್ನಾ ದಿನಗಳಲ್ಲಿ ನಡೆಯುವ ಧ್ವಜಾರೋಹಣ, ಹಸಿಕರಗ ಹಾಗೂ ಪೂಜಾ ಕೈಂಕರ್ಯಗಳೂ ಅತಿ ಸರಳವಾಗಿ ನೆರವೇರಿತು' ಎಂದು ತಿಗಳ ಸಮುದಾಯದ ಮುಖಂಡರಾದ ವಿಧಾನ ಪರಿಷತ್ ಸದಸ್ಯ ಪಿ.ಆರ್.ರಮೇಶ್ ತಿಳಿಸಿದರು.

'ಕರಗಕ್ಕೆ ಜೊತೆಯಾಗುತ್ತಿದ್ದ ವೀರಕುಮಾರರ ಗುಂಪಿಗೂ ತಡೆ ನೀಡಲಾಗಿತ್ತು. ನಗರದ ರಸ್ತೆಗಳಲ್ಲಿ ಕರಗ ಸಂಚರಿಸಲಿಲ್ಲ. ಹೆಚ್ಚು ಜನ ಸೇರದಂತೆ ಭಕ್ತರಲ್ಲೂ ಮನವಿ ಮಾಡಲಾಗಿತ್ತು. ಸರ್ಕಾರವೂ ದೇವಸ್ಥಾನದ ಸುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಒದಗಿಸಿತ್ತು. ಕೆಲವೇ ಮಂದಿಯ ಸಮ್ಮುಖದಲ್ಲಿ ಹೂವಿನ ಕರಗ ನಡೆಯಿತು. ದೇವಸ್ಥಾನದ ಸುತ್ತ ಮೂರು ಪ್ರದಕ್ಷಿಣೆ ಹಾಕುವ ಮೂಲಕ ಕರಗ ಸಂಪನ್ನಗೊಂಡಿತು' ಎಂದು ಮಾಹಿತಿ ನೀಡಿದರು.

ಈ ಬಾರಿ ಕರಗ ಮಹೋತ್ಸವವನ್ನು ಸರಳವಾಗಿ ಆಚರಿಸಲು ನಿರ್ಧರಿಸಿದ್ದು ತಿಗಳರಪೇಟೆಯ ಧರ್ಮರಾಯಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಇತ್ತು. ಪ್ರಜಾವಾಣಿ ಚಿತ್ರ : ಅನೂಪ್ ರಾಘ.ಟಿ.

ಸುದ್ದಿ 2 ನಿಮಿಷ

ರೋಗಿಗಳ ನೆರವಿಗೆ ಬರಲು ಮಠಾಧೀಶರಿಗೆ ಪತ್ರ

ಕಲಬುರ್ಗಿ: ಕೊರೊನಾ ಸೋಂಕು ವ್ಯಾಪಕವಾಗಿ ಹರಡಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸಾವಿಗೀಡಾಗುತ್ತಿದ್ದು, ಅಗತ್ಯ ವೈದ್ಯಕೀಯ ಪರಿಕರಗಳನ್ನು ಒದಗಿಸುವಂತೆ ಆಗ್ರಹಿಸಿ ನಾಡಿನ ವಿವಿಧ ಮಠಾಧೀಶರಿಗೆ ಮಾಜಿ ಶಾಸಕ ಬಿ.ಆರ್. ಪಾಟೀಲ ಪತ್ರ ಬರೆದಿದ್ದಾರೆ.

'ನಮ್ಮ ಎಲ್ಲ ಧಾರ್ಮಿಕ ಮತ-ಪಂಥಗಳ ಮುಂಚೂಣಿ ಮಠಾಧೀಶರು ಅನೇಕ ಸಂದರ್ಭದಲ್ಲಿ ಜನಪರವಾಗಿ ಸ್ಪಂದಿಸಿದ ನಿದರ್ಶನಗಳಿಗೆ ಕೊರತೆ ಇಲ್ಲ. ಅನೇಕ ಧಾರ್ಮಿಕ ಸಂಸ್ಥೆಗಳವರು ಆಸ್ಪತ್ರೆಗಳನ್ನು ಸ್ಥಾಪಿಸಿ ಜನರಿಗೆ ಆರೋಗ್ಯ ಸೇವೆ ಸಲ್ಲಿಸುತ್ತಿರುವುದು ಗಮನಾರ್ಹ ಸಂಗತಿ. ಈಗ ಸರ್ಕಾರಗಳು ತಮ್ಮ ಕೈಲಾದ ಪ್ರಯತ್ನ ಮಾಡುತ್ತಿವೆ. ಇಂತಹ ತುರ್ತು ಸಂದರ್ಭದಲ್ಲಿ ಜನರ ನೆರವಿಗೆ ಧಾವಿಸಬೇಕು' ಎಂದು ಅವರು ಕೋರಿದ್ದಾರೆ.

'ವೆಂಟಿಲೇಟರ್, ಆಕ್ಸಿಜನ್ ಸಿಲಿಂಡರ್, ಪೋರ್ಟೆಬಲ್ ಆಕ್ಸಿಜನ್ ಯಂತ್ರ, ಉಪಯುಕ್ತ ಮಾತ್ರೆ, ಚುಚ್ಚುಮದ್ದು ಹಾಗೂ ಇನ್ನಿತರೆ ಅವಶ್ಯವಿರುವ ಪರಿಕರಗಳನ್ನು ದೇಣಿಗೆ ರೂಪದಲ್ಲಿ ಅಗತ್ಯವಿರುವವರಿಗೆ ನೀಡಬೇಕು. ಮಠಾಧೀಶರು ಈ ಕಾರ್ಯಕ್ಕೆ ಮುಂದಾದರೆ ಸಾಕಷ್ಟು ದೇಣಿಗೆಯೂ ಬರುತ್ತದೆ. ಈ ಮಾನವೀಯ ಕಾರ್ಯಕ್ಕೆ ಎಲ್ಲರೂ ಮುಂದಾಗಬೇಕು' ಎಂದು ಮನವಿ ಮಾಡಿದ್ದಾರೆ.

'ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಎನ್‌ಪಿಎ ಇಳಿಕೆ'

ಬೆಂಗಳೂರು: 'ದಿ. ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್'ನ ವ್ಯವಹಾರವು 2020–21ನೇ ಹಣಕಾಸು ವರ್ಷದ ಆರಂಭದಲ್ಲಿ ₹ 3,714 ಕೋಟಿ ಇತ್ತು. ಇದು ಹಣಕಾಸು ವರ್ಷದ ಅಂತ್ಯದ ವೇಳೆಗೆ ₹ 3,800 ಕೋಟಿಗೆ, ಅಂದರೆ ಶೇಕಡ 4.99ರಷ್ಟು, ಏರಿದೆ ಎಂದು ಪ್ರಕಟಣೆ ತಿಳಿಸಿದೆ.

ಆದಾಯ ತೆರಿಗೆ ಪಾವತಿಗೂ ಮುನ್ನ ಬ್ಯಾಂಕ್ ₹ 81.23 ಕೋಟಿ ಲಾಭ ಗಳಿಸಿದೆ. ಆದಾಯ ತೆರಿಗೆ ಪಾವತಿಯ ಬಳಿಕ ಲಾಭವು ₹ 26.11 ಕೋಟಿಗಳಷ್ಟಾಗಿದೆ. ಬ್ಯಾಂಕ್‌ನ ನಿವ್ವಳ ಅನುತ್ಪಾದಕ ಆಸ್ತಿಗಳು ಶೇ 0.52ರಷ್ಟು ಕಡಿಮೆ ಆಗಿದ್ದು ಶೇ 3.38ಕ್ಕೆ ತಲುಪಿದೆ.

ಬ್ಯಾಂಕ್‌ನ ಷೇರು ಬಂಡವಾಳ ಮತ್ತು ಸ್ವಂತ ನಿಧಿಗಳು ಶೇ 20.39ರಷ್ಟು ಹೆಚ್ಚಾಗಿ ₹ 351.56 ಕೋಟಿಗೆ ಏರಿಕೆಯಾಗಿವೆ. ಬ್ಯಾಂಕ್‌ನ ಒಟ್ಟಾರೆ ದುಡಿಯುವ ಬಂಡವಾಳವೂ ಶೇ 7.84ರಷ್ಟು ಬೆಳವಣಿಗೆ ಕಂಡಿದ್ದು ₹ 2,652.93 ಕೋಟಿಗಳಷ್ಟಾಗಿದೆ ಎಂದು ಅದು ಹೇಳಿದೆ.

'ತುರ್ತು ಸೇವೆಗಳಿಗೆ ವಿನಾಯಿತಿ ನೀಡಲಾಗುವುದು'

ಬೆಂಗಳೂರು: ಸಂಪೂರ್ಣ ಲಾಕ್‌ಡೌನ್ ಆದರೂ ಅನಾರೋಗ್ಯದಂತಹ ತುರ್ತು ಸಂದರ್ಭಗಳಲ್ಲಿ ಸಾರ್ವಜನಿಕರ ಸಂಚಾರಕ್ಕೆ ಅವಕಾಶ ನೀಡಲಾಗುವುದು ಎಂದು ಸರ್ಕಾರದ ಉನ್ನತ ಮೂಲಗಳು ತಿಳಿಸಿವೆ.

ವಿನಾಯಿತಿಯ ಅಂಶಗಳು:

- ಏ.28 ರ ಬೆಳಿಗ್ಗೆ 6 ರಿಂದ 10 ಗಂಟೆಯ ಒಳಗೆ ಬೇರೆ ಊರುಗಳಿಂದ ನಗರಕ್ಕೆ ಬಂದರೆ ಕ್ಯಾಬ್, ಆಟೋಗಳನ್ನು ಬಳಸಬಹುದು. ಈ ಅವಧಿಯಲ್ಲಿ ಕ್ಯಾಬ್, ಆಟೋ ಸಂಚಾರಕ್ಕೆ ಅವಕಾಶ ಇದೆ. ಈ ರೀತಿ ಪ್ರಯಾಣ ಮಾಡುವಾಗ ಪೊಲೀಸರು ತಡೆದರೆ ಪ್ರಯಾಣದ ಟಿಕೆಟ್ ಮತ್ತು ಗುರುತಿನ ಚೀಟಿ ತೋರಿಸಬೇಕು. 10 ಗಂಟೆಯ ನಂತರ ಒಂದೆರಡು ಗಂಟೆ ವಿನಾಯಿತಿ ಇರುತ್ತದೆ. ಉಳಿದ ದಿನಗಳಲ್ಲಿ ಈ ವಿನಾಯಿತಿ ಇರುವುದಿಲ್ಲ.
- ಕೇಂದ್ರ, ರಾಜ್ಯ ಸರ್ಕಾರಿ ನೌಕರರು ಮತ್ತು ಇತರ ತುರ್ತು ಸೇವೆಗಳಿಗೆ ನಿಯೋಜಿತರಾದವರ ಓಡಾಟಕ್ಕೆ ಬಿಎಂಟಿಸಿಯ ತುರ್ತು ಸೇವೆ ಬಸ್ ಸಂಚಾರ ವ್ಯವಸ್ಥೆ ಇದೆ. ವಿಮಾನನಿಲ್ದಾಣದಿಂದ ನಗರದ ವಿವಿಧ ಭಾಗಗಳಿಗೆ ಬಸ್ ವ್ಯವಸ್ಥೆ ಇರುತ್ತದೆ.
- ಎಲ್ಲ ಆಸ್ಪತ್ರೆಗಳು, ಔಷಧಿ ಮಳಿಗೆಗಳು ಇಡೀ ದಿನ ತೆರೆದಿರುತ್ತವೆ. ವೈದ್ಯಕೀಯ ತುರ್ತು ಸಂದರ್ಭದಲ್ಲಿ ಸಾರ್ವಜನಿಕರು ರೋಗಿಯನ್ನು ಆಸ್ಪತ್ರೆಗೆ ಒಯ್ಯಬಹುದು. ಇದಕ್ಕಾಗಿ ಆಟೋ, ಟ್ಯಾಕ್ಸಿ ಅಥವಾ ಸ್ವಂತ ವಾಹನ ಬಳಸಬಹುದು. ರೋಗಿ ಜೊತೆ ಒಬ್ಬರು ಹೋಗಬಹುದು. ಪೊಲೀಸರಿಗೆ ಆರೋಗ್ಯದ ಪರಿಸ್ಥಿತಿ ವಿವರಿಸಿದರೆ, ವಾಹನಕ್ಕೆ ಅವಕಾಶ ನೀಡಲಾಗುವುದು.
- ಒಂದು ವೇಳೆ ಸ್ವಂತ ವಾಹನ ಇಲ್ಲದಿದ್ದರೆ, ಆಟೋ ಅಥವಾ ಟ್ಯಾಕ್ಸಿ ಸಿಗದಿದ್ದರೆ, 100 ಕ್ಕೆ ಕರೆ ಮಾಡಿದರೆ ಹೊಯ್ಸಳ ವಾಹನದ ಮೂಲಕ ಪೊಲೀಸರೇ ರೋಗಿ ಮತ್ತು ಸಂಬಂಧಿಗಳನ್ನು ಆಸ್ಪತ್ರೆಗೆ ಬಿಡುವ ವ್ಯವಸ್ಥೆ ಮಾಡಲಾಗಿದೆ.
- ಅಗತ್ಯ ವಸ್ತುಗಳನ್ನು ಮಾರುವವರು ಬೆಳಿಗ್ಗೆ 6 ಕ್ಕೆ ಆರಂಭಿಸಿ 10 ಗಂಟೆ ಒಳಗೆ ಬಾಗಿಲು ಹಾಕಿ ಮನೆ ಸೇರಬೇಕು.
- ವಿವಿಧ ಕೈಗಾರಿಕೆಗಳಿಗೆ ಹೋಗುವ ಸಿಬ್ಬಂದಿ ತಮ್ಮ ಕಾರ್ಖಾನೆಯ ಗುರುತಿನ ಚೀಟಿ ತೋರಿಸಬೇಕು. ಅವರ ವಾಹನಗಳಿಗೆ ಅವಕಾಶ ನೀಡಲಾಗುವುದು. ಸೂಕ್ತ ಗುರುತಿನ ಚೀಟಿ ಹೊಂದಿದ ಕಂಪನಿ ವಾಹನಗಳಿಗೂ ಅವಕಾಶ ನೀಡಲಾಗುವುದು. ಕಟ್ಟಡ ಕಾರ್ಮಿಕರಿಗೆ ಅವರ ಮಾಲೀಕರು ವಾಹನ ವ್ಯವಸ್ಥೆ ಮಾಡಿದರೆ, ಅನುಮತಿ ನೀಡಲಾಗುವುದು.

ಆಶಾ: ಪ್ರೋತ್ಸಾಹ ಧನಕ್ಕೆ ಒತ್ತಾಯ

ಬೆಂಗಳೂರು: ಕೋವಿಡ್ ನಿಯಂತ್ರಣ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡಿರುವ ಕಾರಣ ಅಗತ್ಯ ಸುರಕ್ಷತಾ ಸಾಧನಗಳು ಹಾಗೂ ಮಾಸಿಕ ವಿಶೇಷ ಪ್ರೋತ್ಸಾಹ ಧನ ₹ 5 ಸಾವಿರ ನೀಡಬೇಕು ಎಂದು ಆಶಾ ಕಾರ್ಯಕರ್ತೆಯರು ಒತ್ತಾಯಿಸಿದ್ದಾರೆ.

ಈ ಸಂಬಂಧ ಆರೋಗ್ಯ ಇಲಾಖೆ ಆಯುಕ್ತರು ಮತ್ತು ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕರಿಗೆ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಮನವಿ ಸಲ್ಲಿಸಿದೆ.

'ಕೋವಿಡ್ ಬಳಿಕ ನಿರ್ವಹಿಸುತ್ತಿರುವ ವಿಶೇಷ ಕಾರ್ಯಗಳಿಗೆ ಕಳೆದ ಒಂದು ವರ್ಷ ಮಾಸಿಕ ₹ 1 ಸಾವಿರ ವಿಶೇಷ ಗೌರವಧನ ನೀಡಲಾಗಿದೆ. ಈ ವರ್ಷ ಅದನ್ನು ₹ 5 ಸಾವಿರಕ್ಕೆ ಏರಿಕೆ ಮಾಡಬೇಕು. ಬಹುತೇಕ ಜಿಲ್ಲೆಗಳಲ್ಲಿ ಮಾಸಿಕ ಗೌರವಧನ ₹ 4 ಸಾವಿರವನ್ನು ಕಳೆದ ತಿಂಗಳಿನಿಂದ ನೀಡಿಲ್ಲ. ಕೂಡಲೇ ಅದನ್ನು ಬಿಡುಗಡೆ ಮಾಡಬೇಕು' ಎಂದು ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ ಒತ್ತಾಯಿಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

RENTAL PROPERTIES

Accommodation Available

House

RENT- 35000 or Lease- 16 lakhs, 4 BHK, Duplex,carpark, #13, G.R.S. Residency, Nisarga School Road, Nelagadaranahalli, Bangalore-73. 9341231487

REAL ESTATE SELLING

Sites

Jakkur

SITE FOR SALE-TELECOM LAYOUT: 40x60 site West Facing 7,600/- p.sft. Genuine Buyers- 8197971761/ 9916006002

Sunkadakatte

SALE, SUNKADAKATTE, Near Anjali School, 30X50, south facing. Rs. 5300/- sqft (negotiable). Contact: 9880439138

Commercial Land

Mysore

COMMERCIAL LAND 2 Acres is Available for Joint Venture. Developer can avail loan on Property. Contact 7676770503

DH ಪ್ರಜಾವಾಣಿ ಕ್ಲಾಸಿಫೈಡ್ಸ್
NAME CHANGE
BOOK YOUR NAME CHANGE AD IN DECCAN HERALD ALL KARNATAKA+ PRAJAVANI BENGALURU ALL DAY
CHANGE OF NAME @40/-* Per Words
Condition Apply*
For More Details Contact:
9880856233 | 9731810277
9901641752 | 9845114560 | 9886213331
080- 45557163 | 164

JOB OPPORTUNITIES

Engg/ Production Technical

WANTED-SITE LNSPECTION Engineers For A Reputed Valuation (Land and Buildings) Company Located at Bangalore. Qualification: B.E. (Civil Engineering) or D.C.E. (Civil Engineering) With Minimum 2 Years Experience in Valuation Field Send The Resume to: rmrvaluer@gmail.com Call:9715116111

Hospital & Medical Jobs

WANTED DUTY Doctor, NursingStaff for non COVID and COVID Patients Contact: 9900520357/ 9844032989 ChaitanyaHospital No-80/117, P&T Colony, R.T.Nagar, Bangalore-32

DOCTORS NEEDED urgently (For Bangalore) Male or Female, Qualification: BAMS (Ayurvedic) BHMS (Homeopathic) Freshers can also apply. Experience is not necessary. WhatsApp: 9886525234

Teachers/ Professors

Sri Venkateshwara Group of Institutions
Vidyanagar, NH-7, Airport Road, Bangalore - 562 157
Phone No: 97400 06262 / 99017 87070
Email: enquiry@svcs.in & principal@svcs.in / Url: www.svcs.in
S.V. Central School
A reputed CBSE School requires qualified & experienced
NTT, TGT and PGT Teachers
in the following discipline
Science, Social Science, Mathematics, English, Hindi, Sanskrit, French, Art Teachers.
Interested can apply with credentials within 15 days from this date.
Sd/- Principal
Sd/- Chief Executive Director
The above Institution which also runs a reputed Engineering College in the name of 'Sri Venkateshwara College of Engineering' in the same campus.

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

BUSINESS

Business to Business

Shares

WAT_R_U DOING AFTER WORK? Share Market, Deposit 2Lac earn 10% monthly Demat account Call: 8088665724

Business Offers

Finance

NRI'S INVESTMENT And Finance Available On LowInterestAgainst Properties,Land & Buildings,Sites,Flats Converted&Agricultural Lands Call:7411265189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

PERSONAL

Change of Name

14835196P, NK/MT, Muhammed Ali P, 2ATC, Mother name service record BEEVIKUTTY P instead of BEEVIKKUTTY notary KV Mani, Bangalore.

6497730L, SEP/ASH, Nanjappa BN, 2ATC, Mother name service record B N GOURANNA instead of B.N. GOWRAMMA notary KV Mani, Bangalore.

RAMANDEP KAUR W/o. 6498903K, NK, Sukhpal Singh, Vill: Husnar Gidderbaha Muktsar Punjab, my name RAMANDEP KAUR to RAMANDEEP KAUR notary, KV Mani, Bangalore.

14843515L, HAV/SKT, Praveen Sequeira 389(1), SUP/PL, ASC Mother name service record BENADITHA CRASTA instead of BENEDICTA CRASTA notary KV Mani, Bangalore.

CHANGE OF NAME
I, **Kusum Tayal** W/o Sri. Chetan Prakash Tayal at No 66, Fortune Valley, Dasarahalli Main Road, Bangalore-560024. Have Changed My name to **KUSUM TAAYAL,** Wide Affidavit Dated 22/04/2021. Sworn Before Notary L. Gopala Krishna Bangalore.

Lost

LOST: I, MD MONIRUZ ZAMAN have lost my original certificate of Diploma in Pharmacy No.M541016 on 05/04/2021, If found please contact-9019414733.

PUBLIC NOTICE

NOTICE

This is to inform that **K. R. Manjunath** Marketing Executive is no Longer Working with us. No further transactions of **FIBERR XEL** should be done with him and we are not responsible for the same.
M/s.FIBERR XEL, Bangalore

NOTICE
ITC LTD.- Foods Division, Malur
Invites Quotations for buying process waste & Scrap material from the Foods Plant. Interested Parties can submit the best quotation along with copies of all the applicable licenses for the below items.

Major Items
1. CFC Waste
2. Shredded Laminate Waste
3. Iron and Steel waste
4. Noodles Process Waste
5. Maida Waste
6. Dough Waste
7. Pasta process waste
8. Plastic Bag, etc.

Note: Detailed list of scarp items will be shared during the site visit.

- Crushing, Shredding, Packing, & Loading / Unloading & transportation shall be managed and borne by the buyer.
- The Buyer shall place and install necessary machinery/equipment in this regard at the unit.
- All applicable taxes shall charge extra on the quoted rates and are to be borne by the buyer. All relevant statutory compliances shall be fulfilled and ensured by the buyer.
- Sealed quotations are invited from the buyer (holding Pollution control Board license, ESI, PF etc) along with details of process for usage, sale or destruction of above waste, along with other statutory documents copy. Quotations are required for scrap, latest by 4th May 2021, addressed to Unit Finance Manager, ITC Ltd- Foods Division, Survey No.15/1 and 15/2,Food Factory Malur, Yeshwanthpura Village, Madivala,Gram Panchayat, Kasaba Hobli,Malur Taluk, Kolar, Karnataka-563130.
- Scrap can be inspected in all working days with prior intimation between 11 AM to 4 PM at factory address.
- The selected quotations shall be considered for a contract for a term up to one year.

PUBLIC NOTICE
To Place your Classified Ads Contact:
9880856233

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದ ಹಾಗೂ ಪೂರ್ವಾರ್ಹತೆ ಪಡೆಯಲಿಚ್ಛಿಸುವ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

- **ಕಾಮಗಾರಿಯ ಹೆಸರು:** ಬೆಳಗಾವಿ ಜಿಲ್ಲೆ, ಬೆನಕನಹಳ್ಳಿಯಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯ ವಾರ್ಷಿಕ ನಿರ್ವಹಣೆ ಕಾಮಗಾರಿ.
- Tender Reference No. KHB / 2020-21 /OW/Work_Indent 810 & IFT No.29/2021-22 Date: 26.04.2021
- ಟೆಂಡರ್‌ಗಿಟ್ಟ ಮೊತ್ತ: **ರೂ. 25,14,561/–**
- ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: **11.05.2021ರ ಸಂಜೆ 4.00 ಗಂಟೆಯವರೆಗೆ.**

ಕಾಮಗಾರಿಯ ಬಗ್ಗೆ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.
ದೂರವಾಣಿ: 080–22273511, 080–22100077
Website: www.khb.karnataka.gov.in, https://eproc.karnataka.gov.in
ವಾಸಾಸಂಇ/ಬೆಂ.ನ./ಜಿಎ/288/2021–22

ಕೋವಿಡ್–19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಸರ್ಕಾರ GOVERNMENT OF KARNATAKA
ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ
VIJAYANAGAR INSTITUTE OF MEDICAL SCIENCES, BALLARI
Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
Director: '08392-242387, PA : '08392-235201, FAX : 08392-235202, Principal : '08392-235204,
e-mail-ids : directorvimsbellary@gmail.com, www.vimsbellary.org.inprincipalvimsbellary@gmail.com
ಸಂ.ವಿಮ್ಸ್/ಸರಬರಾಜು/ಟೆಂಡರ್/47/2021–22 ದಿನಾಂಕ : 26.04.2021

ಅಲ್ಪಾವಧಿ ಇ–ಟೆಂಡರ್ ಅಧಿಸೂಚನೆ

ವಿಮ್ಸ್ ಸಂಸ್ಥೆಯ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆಗೆ ಔಷಧಿಗಳು, ಸರ್ಜಿಕಲ್ ಡಿಸ್ಪೋಸಬಲ್ಸ್ ಮತ್ತು ಇತರೆಗಳನ್ನು ಕೋವಿಡ್–19 ಸಲುವಾಗಿ ಸರಬರಾಜು ಮಾಡಲು ಅರ್ಹ ಟೆಂಡರುದಾರರಿಂದ ಕೆ.ಟಿ.ಪಿ.ಪಿ ಅಧಿನಿಯಮ–1999 ಮತ್ತು ನಿಯಮ–2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಪೋರ್ಟಲ್ ಮೂಲಕ ಈ ಕೆಳಗಿನಂತೆ ಟೆಂಡರನ್ನು ಆಹ್ವಾನಿಸಲಾಗಿರುತ್ತದೆ ಹಾಗು ಹೆಚ್ಚಿನ ಮಾಹಿತಿಯನ್ನು ಕಾರ್ಯಾಲಯದ ಕಛೇರಿ ಅವಧಿಯಲ್ಲಿ ಪಡೆಯಲು ಮತ್ತು ವೆಬ್‌ಸೈಟ್: **https://eproc.karnataka.gov.in** ಮೂಲಕ ಪಡೆಯಲು ಕೋರಿದೆ.

01	ಟೆಂಡರ್ ಫಾರಂ ಅನ್ನು ವೆಬ್‌ಸೈಟ್ – http//eproc.karnataka.gov.in ರಲ್ಲಿ ಡೌನ್ ಲೋಡ್ ಮಾಡಿಕೊಳ್ಳಲು ಪ್ರಾರಂಭದ ದಿನಾಂಕ	26/04/2021
02	ಟೆಂಡರಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	28.04.21 up to 5.00 PM
03	ಪ್ರಿ ಬಿಡ್ ಮಿಟಿಂಗ್ ದಿನಾಂಕ ಮತ್ತು ಸಮಯ	29.04.2021 @ 11.30 AM in the chambers of Dicetor, VIMS, Ballari
04	ಸ್ಯಾಂಪಲ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:	On or before 4.05.2021. up to 4.00 PM to the Medical Suprintendent, Medical College Hospital ,VIMS, Ballari. Without sample item will not be considered
05	ಟೆಂಡರ್‌ನ್ನು ಇ–ಪೋರ್ಟಲ್‌ನಲ್ಲಿ ಅಪ್‌ಲೋಡ್‌ಮಾಡಲು ಕೊನೆಯ ದಿನಾಂಕ ಮತ್ತು ಸಮಯ	4.05.2021 up to 5.00 PM
06	ಟೆಂಡರಿನ ಟೆಕ್ನೋ–ಕಮರ್ಷಿಯಲ್ ಬಿಡ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ (ಮೊದಲನೇ ಬಿಡ್)	5.05.2021 @ 5.15 PM
07	ಸದರಿ ಟೆಂಡರಿನ ಅಂದಾಜು ಮೊತ್ತ	197.81 Lakhs

ಸಹಿ/–
ನಿರ್ದೇಶಕರು, ವಿಮ್ಸ್, ಬಳ್ಳಾರಿ.
ವಾಸಾಸಂಇ/ಬಳ್ಳಾರಿ/ಶಿರಡಿ ಸಾಯಿ/59/2021–22

PUBLIC NOTICE

My client intends to develop residential units on the Schedule Property owned by **Smt.Bhagya**, wife of Late C. Jayaram, **Sri. Kiran**, son of Late C. Jayaram and **Sri. Kishore**, son of Late C. Jayaram. The Owners represent and warrant that they are the absolute owners of the Schedule Property and have good marketable, right, title and interest therein and that apart from the Joint Development Agreement entered with M/s. Skyline Construction & Housing Private Limited for the project "Skyline Paradiso", there are no other person/s having any right or claim over the Schedule Property and they have not entered into any Agreements/Memorandum of Understanding etc., with any third party. The Owners further represent that they have not mortgaged, created any lien, or encumbered the Schedule Property or any part thereof in any manner to any person/s. Any person/s having objection/s or claims shall with documentary evidence lodge their objection(s)/claim(s) **within twenty-one (21) days** from the date of publication of this notice with the undersigned,failing which my client shall proceed with the above-mentioned transaction.

SCHEDULE

All that piece and parcel of properties bearing Survey No. 68/2B, measuring 1 acre 1 gunta, Survey No. 70/2, measuring 28 guntas and Survey No. 71/2, measuring 39 guntas,measuring in total 2 acres 28 guntas, now bearing Bruhat Bangalore Mahanagara Palike Khatha No. 608/68/2,70/2,71/2 (converted vide Official Memorandum dated 29-10-1991 inNo. B. Dis. ALN. SR (N) 60/91-92 issued by the Special Deputy Commissioner, Bengaluru District, Bengaluru), situated at Allalasandra Village, Yelahanka Hobli, Bengaluru North Taluk, Bengaluru Urban District, and are bounded on the:

East by : Property bearing Survey Nos. 70/1 and 71/1(Owned by Aiar's Land) and 35 feet Road;
West by : Property bearing Survey No.69, remaining portion of Survey no. 68/2B), (Land belonging to Central Institute of Medicinal and Aromatic Plants), Kaluve/Halla and thereafter surveyNos.93, 94.
North by : Remaining portion of Survey No. 68/2B,property bearing Survey Nos. 69, 70/1 (Land belonging to Central Institute of Medicinal and Aromatic Plants);
South by : Property bearing Survey Nos.68/2A and 71/1 (Aiar's Land).

Jayanth M. Pattanshetti,
Advocate,
102, Ground Floor, "Rams Infantry Manor",
No. 70 Infantry Road Bangalore – 560 001.
E-mail: mails@pattanshetti.in,
agarwalkrishna2015@gmail.com
Ph: 25593195 / +919741555524/ 41238367

Place: Bangalore
Date: 26/04/2021

ಮಗುವಿಗೆ ಜನ್ಮನೀಡಿ ಕೊನೆಯುಸಿರೆಳೆದರು...

• ರಶೀದ್ ಕಪ್ಪನ್

ಬೆಂಗಳೂರು: ಮದುವೆಯಾಗಿ ನಾಲ್ಕು ವರ್ಷ ಕಳೆದಿದ್ದು, ಮಗುವಿನ ನಿರೀಕ್ಷೆಯಲ್ಲಿದ್ದ ನಗರದ ಪೂರ್ವಭಾಗದ ದಂಪತಿಯ ಜೀವನದಲ್ಲಿ ಕೋವಿಡ್ ಸಾಂಕ್ರಾಮಿಕ ಅಲ್ಲೋಲಕಲ್ಲೋಲ ಸೃಷ್ಟಿಸಿದೆ. ಕೋವಿಡ್ ದೃಢಪಟ್ಟಿದ್ದ ತುಂಬು ಗರ್ಭಿಣಿಯ ಜೀವ ಉಳಿಸಲು ವೈದ್ಯರು ನಡೆಸಿದ ಪ್ರಯತ್ನ ವಿಫಲವಾಗಿದ್ದು, ಹೆಣ್ಣು ಮಗು ಜನಿಸಿದ ಮೂರು ದಿನಗಳಲ್ಲೇ ತಾಯಿ ಕೊನೆಯುಸಿರೆಳೆದಿದ್ದಾರೆ.

ಮೊದಲ ಮಗುವಿನ ನಿರೀಕ್ಷೆಯಲ್ಲಿದ್ದ ದಂಪತಿಗೆ ಕೋವಿಡ್ ದೃಢಪಡುತ್ತಿದ್ದಂತೆ ಆಘಾತವಾಗಿತ್ತು. ಪತ್ನಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಿದ್ದ ಮೆಕ್ಯಾನಿಕಲ್ ಎಂಜಿನಿಯರ್ ಅಭಿಷೇಕ್ (ಹೆಸರು ಬದಲಿಸಲಾಗಿದೆ), ಶುಭ ಸುದ್ದಿಗಾಗಿ ಕಾತರಿಸುತ್ತಿದ್ದರು. ತಾಯಿಯ ಆರೋಗ್ಯ ಕ್ಷೀಣಿಸುತ್ತಿದ್ದಂತೆಯೇ ವೈದ್ಯರು ಮೂರು ದಿನಗಳ ಹಿಂದೆ ಶಸ್ತ್ರಚಿಕಿತ್ಸೆ ನಡೆಸಿ ಮಗುವನ್ನು ಹೊರತೆಗೆದರು.

ಶಸ್ತ್ರಚಿಕಿತ್ಸೆ ನಡೆಸಿ ಹೊರತೆಗೆದ ಕ್ಷಣದಲ್ಲೇ ಮಗುವನ್ನು ಬೇರೆ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ನವಜಾತ ಶಿಶುವಿಗೆ ಸೋಂಕು ತಗಲದಂತೆ ತಡೆಯಲು ಕೋವಿಡ್ ಆಸ್ಪತ್ರೆಯಿಂದ ಬೇರೆಡೆ ಕರೆದೊಯ್ಯಲಾಗಿತ್ತು. ಇದರಿಂದಾಗಿ ಹುಟ್ಟಿದ ಮಗುವನ್ನು ನೋಡುವುದಕ್ಕೂ ತಾಯಿಗೆ ಅವಕಾಶವೇ ಸಿಗಲಿಲ್ಲ. ಸೋಮವಾರ ಕೋವಿಡ್ ಉಲ್ಬಣಿಸಿ ಕೊನೆಯುಸಿರೆಳೆದರು. ಪತ್ನಿಯ ನಿಧನದ ಸುದ್ದಿ ತಿಳಿದು ಆಸ್ಪತ್ರೆಯ ಆವರಣದಲ್ಲಿಯೇ ಕುಸಿದುಬಿದ್ದ ಗಂಡನ ಸ್ಥಿತಿ ಕರುಳು ಹಿಂಡುವಂತಿತ್ತು.



ದಂಪತಿ ಆರಂಭದಿಂದಲೂ ಎಚ್ಚರಿಕೆ ವಹಿಸಿದ್ದರು. ಗೃಹಿಣಿಯಾಗಿದ್ದ ರಾಧಾ (ಹೆಸರು ಬದಲಿಸಲಾಗದೆ), ತಾಯಿಯ ಮನೆಯಲ್ಲೇ ಉಳಿದುಕೊಂಡಿದ್ದರು. ಸ್ಥೂಲಕಾಯ ಹೊಂದಿದ್ದ ಅವರು ಗರ್ಭಿಣಿಯಾದ ಅವಧಿಯಲ್ಲೇ ಕೋವಿಡ್‌ನ ಭಯವೂ ಇತ್ತು. ಇತ್ತೀಚೆಗೆ ಗಂಡ, ಹೆಂಡತಿ ಇಬ್ಬರಿಗೂ ಕೋವಿಡ್ ದೃಢಪಟ್ಟಿತ್ತು. ಗಂಡನನ್ನು ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದರೂ, ವಾಪಸ್ ಬಂದು ಮನೆಯಲ್ಲೇ ಪ್ರತ್ಯೇಕವಾಸದಲ್ಲಿ ಇದ್ದರು. ಹೆಂಡತಿಯನ್ನು ಮೈಸೂರು ರಸ್ತೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಳಿಕ ಹೆರಿಗೆ ಆಸ್ಪತ್ರೆಯೊಂದಕ್ಕೆ ಸ್ಥಳಾಂತರಿಸಲಾಗಿತ್ತು.

‘ಆಸ್ಪತ್ರೆಯಲ್ಲಿದ್ದಾಗ ಹೊಟ್ಟೆಯಲ್ಲಿ ಮಗುವಿನ ಚಲನವಲನ ತಿಳಿಯುತ್ತಿಲ್ಲ ಎಂದು ಆಕೆ ಚಿಂತೆಗೊಳಗಾಗಿದ್ದರು. ಮಗು ಅಪಾಯದಲ್ಲಿದೆ ಎಂದು ದಂಪತಿ ಆತಂಕಕ್ಕೊಳಗಾಗಿದ್ದರು. ತಕ್ಷಣವೇ ವೈದ್ಯರು ಕಾರ್ಯಪ್ರವೃತ್ತರಾಗಬೇಕಾದ ಸ್ಥಿತಿ ನಿರ್ಮಾಣವಾಗಿತ್ತು’ ಎಂದು ಅವರ ಕುಟುಂಬದ ಸ್ನೇಹಿತ ಮಹೇಶ್ ವಿವರಿಸಿದರು.

‘ರಾಧಾ ಎಂಟೂವರೆ ತಿಂಗಳ ಗರ್ಭಿಣಿಯಾಗಿದ್ದರು. ತುರ್ತು ಶಸ್ತ್ರಕ್ರಿಯೆ ನಡೆಸಿ ಮಗುವನ್ನು ಹೊರಕ್ಕೆ ತೆಗೆದರೆ ಮಾತ್ರ ತಾಯಿಯ ಜೀವ ಉಳಿಸಬಹುದು ಎಂದು ವೈದ್ಯರು ಯೋಚಿಸಿದ್ದರು. ಆದರೆ, ಮಗುವನ್ನು ಜೀವಂತವಾಗಿ ಹೊರಕ್ಕೆ ತೆಗೆದರೂ ತಾಯಿ ಉಳಿಯಲಿಲ್ಲ. ಮಗುವಿನ ಜತೆ ಭವಿಷ್ಯದ ಕ್ಷಣಗಳನ್ನು ಕಳೆಯಲು ದಂಪತಿ ನೂರಾರು ಕನಸು ಹೊಂದಿದ್ದರು. ಎಲ್ಲವನ್ನೂ ಕೋವಿಡ್ ಕಸಿದಿದೆ’ ಎಂದು ದುಃಖಿಸಿದರು.

ಮಗುವನ್ನು ಬೇರೆ ಆಸ್ಪತ್ರೆಯಲ್ಲಿ ಇನ್‌ಕ್ಯುಬೇಟರ್‌ನಲ್ಲಿ ಇರಿಸಲಾಗಿದೆ. ಪತ್ನಿಯ ನಿಧನದ ಆಘಾತದಿಂದ ಅಭಿಷೇಕ್ ಇನ್ನೂ ಹೊರಬಂದಿಲ್ಲ. ಅದರ ಜತೆಯಲ್ಲೇ ರಾಧಾ ಅವರ ತಾಯಿಗೂ ಕೋವಿಡ್ ತಗುಲಿದೆ. ಅವರನ್ನೂ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಗಳ ನಿಧನದ ವಿಷಯ ಇನ್ನೂ ಅವರಿಗೆ ತಿಳಿದಿಲ್ಲ.

ಇಡೀ ಕುಟುಂಬದ ಕನಸನ್ನೇ ಕೊಂದ ಕೋವಿಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ವಲಯ ವ್ಯಾಪ್ತಿಯ ನಾಯಂಡಹಳ್ಳಿಯ ಕುಟುಂಬವೊಂದರ ಭವಿಷ್ಯವನ್ನೇ ಕೋವಿಡ್ ಕಸಿದುಕೊಂಡಿದೆ!

ಈ ಕುಟುಂಬದ ಐವರು ಸದಸ್ಯರ ಪೈಕಿ ಮೂವರಿಗೆ (ತಾಯಿ, ಹಿರಿಯ ಮಗ ಮತ್ತು ಕಿರಿಯ ಮಗ) ಕೊರೊನಾ ಸೋಂಕು ದೃಢಪಟ್ಟಿದ್ದು, ಈ ಪೈಕಿ ತಾಯಿ ಮತ್ತು ಹಿರಿಯ ಮಗ ನಿಧನರಾಗಿದ್ದಾರೆ. ಕಿರಿಯ ಮಗ ಆಸ್ಪತ್ರೆಯಲ್ಲಿ ಜೀವನ್ಮರಣ ಹೋರಾಟ ನಡೆಸುತ್ತಿದ್ದಾರೆ.



ದುರಂತವೆಂದರೆ, ವಾರದ ಹಿಂದೆ ತಾಯಿ ಇನ್ನಿಲ್ಲವಾದಾಗ ಅಂತಿಮ ವಿಧಿವಿಧಾನದಲ್ಲಿ ಭಾಗವಹಿಸಲು ಕೂಡಾ ಈ ಇಬ್ಬರು ಮಕ್ಕಳಿಗೆ ಸಾಧ್ಯ ಆಗಿರಲಿಲ್ಲ. ಅಷ್ಟೇ ಅಲ್ಲದೆ, ಆ ಸಂದರ್ಭದಲ್ಲಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಚಿಕಿತ್ಸೆ ಪಡೆಯುತ್ತಿದ್ದ ಹಿರಿಯ ಮಗನಿಗೆ ತಾಯಿ ಮೃತಪಟ್ಟ ವಿಷಯವನ್ನೇ ತಿಳಿಸಿರಲಿಲ್ಲ. ನಾಲ್ಕು ದಿನಗಳ ಬಳಿಕ ಅವರು ಕೂಡಾ ಕೊನೆಯುಸಿರೆಳೆದಿದ್ದಾರೆ.

‘ಇನ್ನೂ ದುರಂತವೆಂದರೆ, ಚಿಕಿತ್ಸೆ ಪಡೆಯುತ್ತಿರುವ ಕಿರಿಯ ಸಹೋದರನಿಗೆ, ತನ್ನ ಅಣ್ಣ ಸಾವಿಗೀಡಾಗಿರುವುದು ಇನ್ನೂ ಗೊತ್ತಿಲ್ಲ. ತೀವ್ರ ಮಾನಸಿಕ ಒತ್ತಡದಲ್ಲಿರುವ ಈ ಸಹೋದರ, ಕೋವಿಡ್‌ನಿಂದ ಚೇತರಿಸಿಕೊಂಡರೂ, ತಾಯಿ ಮತ್ತು ಅಣ್ಣನಿಲ್ಲದ ಕೊರಗಿನಿಂದ ಹೊರಬರುವುದು ಬಹಳ ಕಷ್ಟವಿದೆ’ ಎನ್ನುತ್ತಾರೆ ವೈದ್ಯರು.

‘ವಿವಾಹಿತರಾಗಿರುವ ಇಬ್ಬರು ಸಹೋದರರು ತಮ್ಮ ಪತ್ನಿಯರು ಮತ್ತು ತಾಯಿಯೊಂದಿಗೆ ಒಂದೇ ಮನೆಯಲ್ಲಿದ್ದರು. ಇತರರಿಗೆ ಮಾದರಿಯಂತೆ ಇಡೀ ಕುಟುಂಬ ಜೀವನ ನಡೆಸುತ್ತಿತ್ತು’ ಎನ್ನುತ್ತಾರೆ ಅಕ್ಕಪಕ್ಕದ ನಿವಾಸಿಗಳು.

‘ಪ್ರಜಾವಾಣಿ’ ಜೊತೆ ಮಾತನಾಡಿದ ಕಿರಿಯ ಸಹೋದರನ ಪತ್ನಿ, ‘ಪತಿ ಚೇತರಿಸಿಕೊಂಡು ಮನೆಗೆ ಬರುವ ವಿಶ್ವಾಸವಿದೆ. ಆದರೆ, ಭವಿಷ್ಯದ ಕನಸುಗಳನ್ನೆಲ್ಲ ನಾವು ಕಳೆದುಕೊಂಡೆವು. ಎಲ್ಲ ನೋವುಗಳನ್ನು ನಾವಿಬ್ಬರು ಹೆಣ್ಣು ಮಕ್ಕಳು ಅನುಭವಿಸಿದೆವು. ಇಂಥ ಕಷ್ಟ ಯಾರಿಗೂ ಬರಬಾರದು. ನನ್ನ ಪತಿಯನ್ನು ಸಂತೈಸುವ ಸ್ಥಿತಿಯಲ್ಲಿ ನಾನಿಲ್ಲ. ಮನೆಗೆ ಬಂದ ಬಳಿಕ ಪತಿ, ಈಗಾಗಲೇ ಸಂಭವಿಸಿದ ದುರಂತ ಸನ್ನಿವೇಶಕ್ಕೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬಹುದು ಎನ್ನುವುದನ್ನೂ ಊಹಿಸಲು ಸಾಧ್ಯ ಆಗುತ್ತಿಲ್ಲ’ ಎಂದು ನೋವಿನಿಂದ ಹೇಳಿಕೊಂಡರು.

ಬೆಂಗಳೂರಿನಿಂದ ಜನರ ವಲಸೆ • ತಮ್ಮೂರಿನತ್ತ ಹೊರಟ ಗಾರ್ಮೆಂಟ್ಸ್ ಕಾರ್ಖಾನೆ ಕಾರ್ಮಿಕರು • ನಿಲ್ದಾಣಗಳಲ್ಲಿ ಜನಸಂದಣಿ, ಬಸ್‌ಗಳು ಭರ್ತಿ

‘ಅನ್ನ ಕಿತ್ತ ಕರ್ಫ್ಯೂ; ಊರಿಗೆ ಹೋಗದೇ ವಿಧಿಯಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಗೆ ಅನ್ನ ಅರಸಿ ಬಂದಿದ್ದ ಸಾವಿರಾರು ಮಂದಿ ಮಂಗಳವಾರವೂ ತಮ್ಮೂರಿನತ್ತ ತಂಡೋಪತಂಡವಾಗಿ ಗುಳೆ ಹೋಗಿದ್ದಾರೆ.

‘ಮಂಗಳವಾರ ರಾತ್ರಿಯಿಂದಲೇ ರಾಜ್ಯದಾದ್ಯಂತ ಕರ್ಫ್ಯೂ’ ಎಂಬ ಸುದ್ದಿ ತಿಳಿಯುತ್ತಿದ್ದಂತೆ ಸೋಮವಾರ ಮಧ್ಯಾಹ್ನದಿಂದಲೇ ಜನರು ತಮ್ಮೂರಿನತ್ತ ಹೊರಟರು. ಮಂಗಳವಾರವೂ ಬೆಳಿಗ್ಗೆಯಿಂದ ರಾತ್ರಿಯವರೆಗೂ ಸಾವಿರಾರು ಮಂದಿ ತಮ್ಮೂರಿನ ಬಸ್‌ಗಳು ಹಾಗೂ ರೈಲುಗಳನ್ನು ಹತ್ತಿದರು.

ನಗರದಲ್ಲಿ ಗಾರ್ಮೆಂಟ್ಸ್ ಕಾರ್ಖಾನೆಗಳು ಹೆಚ್ಚಿದ್ದು, ಸಾವಿರಾರು ಮಂದಿ ಕೆಲಸಗಾರರಿದ್ದಾರೆ. ಅವರಲ್ಲಿ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಗಾರ್ಮೆಂಟ್ಸ್ ಕಾರ್ಖಾನೆಗಳನ್ನೂ ಸರ್ಕಾರ ಬಂದ್ ಮಾಡಿದ್ದರಿಂದ, ಕೆಲಸಗಾರರು ಗಂಟುಮೂಟೆ ಕಟ್ಟಿಕೊಂಡು ಕುಟುಂಬ ಸಮೇತರಾಗಿ ಬೆಂಗಳೂರು ತೊರೆದರು.

ಮೆಜೆಸ್ಟಿಕ್ ಕೇಂದ್ರ ಬಸ್ ನಿಲ್ದಾಣ, ಯಶವಂತಪುರ, ಮೈಸೂರು ರಸ್ತೆಯ ಸ್ಯಾಟಲೈಟ್ ನಿಲ್ದಾಣ ಸೇರಿದಂತೆ ಸುತ್ತಮುತ್ತ ಸ್ಥಳಗಳಲ್ಲಿ ಜನಸಂದಣಿ ಇತ್ತು. ಮಕ್ಕಳು, ವೃದ್ಧರ ಸಮೇತ ಗಂಟುಮೂಟೆ ಜೊತೆಯಲ್ಲಿ ಜನರು ಕುಳಿತುಕೊಂಡಿದ್ದು ಕಂಡುಬಂತು.

ವಲಸಿಗರು ತಮ್ಮ ಲಗೇಜುಗಳ ಸಮೇತ ಸ್ವಂತ ಊರುಗಳಿಗೆ ಹೊರಟು ನಿಂತಿರುವುದು ಮಂಗಳವಾರ ನಗರದ ಏರ್‌ಪೋರ್ಟ್ ರಸ್ತೆಯಲ್ಲಿ ಕಂಡುಬಂತು (ಎಡಚಿತ್ರ) ಲಾಕ್‌ಡೌನ್ ಕಾರಣ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಹಲವರು ತಮ್ಮ ತಮ್ಮ ಊರುಗಳಿಗೆ ಹೊರಟುನಿಂತಿರುವುದು – ಪ್ರಜಾವಾಣಿ ಚಿತ್ರಗಳು

ಕರ್ಫ್ಯೂವನ್ನೇ ಬಂಡವಾಳ ಮಾಡಿಕೊಂಡಿದ್ದ ಖಾಸಗಿ ಬಸ್‌ಗಳ ಮಾಲೀಕರು, ಪ್ರಯಾಣ ದರವನ್ನು ಏಕಾಏಕಿ ಮೂರು ಪಟ್ಟು ಹೆಚ್ಚಿಸಿದ್ದರು. ಹೀಗಾಗಿ, ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಹೆಚ್ಚಿನ ಬೇಡಿಕೆ ಬಂದಿತ್ತು. ಜನರ ಸಂಖ್ಯೆ ಹೆಚ್ಚಿದ್ದರಿಂದಾಗಿ ಮಂಗಳವಾರ 1,200ಕ್ಕೂ ಹೆಚ್ಚು ಬಸ್‌ಗಳನ್ನು ಸೇವೆಗೆ ಒದಗಿಸಲಾಗಿತ್ತು.

ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಗದಗ, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ಬಾಗಲಕೋಟೆ, ಶಿವಮೊಗ್ಗ ಸೇರಿದಂತೆ ಹಲವು ನಗರಗಳಿಗೆ ಬಸ್‌ಗಳು ಸಂಚರಿಸಿದವು. ಹಲವು ಬಸ್‌ಗಳು ಪ್ರಯಾಣಿಕರಿಂದ ಭರ್ತಿ ಆಗಿದ್ದವು. ಕೆಲ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಕಡಿಮೆ ಇತ್ತು.

ಹಲವರು ಖಾಸಗಿ ವಾಹನಗಳಲ್ಲಿ ಊರಿಗೆ ಹೋದರು. ತುಮಕೂರು ರಸ್ತೆ ಹಾಗೂ ಮೈಸೂರು ರಸ್ತೆಯಲ್ಲಿ ವಾಹನಗಳ ಸಂಚಾರದಿಂದ ದಟ್ಟಣೆ ಉಂಟಾಯಿತು.

ತುಮಕೂರು ರಸ್ತೆಯ ಪಾರ್ಲೆ ಕಾರ್ಖಾನೆ ಬಳಿಯ ಟೋಲ್‌ಗೇಟ್ ಹಾಗೂ ನೆಲಮಂಗಲ ಬಳಿಯ ಟೋಲ್‌ಗೇಟ್‌ನಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ದ್ವಿಚಕ್ರ ವಾಹನದಲ್ಲೂ ಬಹುಪಾಲು ಮಂದಿ ಕುಟುಂಬ ಸಮೇತರಾಗಿ ಹೋದರು. ಕೆಲವರು ಕಾರುಗಳಲ್ಲಿ ಗೃಹೋಪಯೋಗಿ ವಸ್ತುಗಳು ಹಾಗೂ ಪಾತ್ರೆಗಳನ್ನು ತುಂಬಿಕೊಂಡು ಹೋಗಿದ್ದು ಕಂಡುಬಂತು.

ಊರು ತೊರೆಯುವ ವೇಳೆ ಮೆಜೆಸ್ಟಿಕ್ ನಿಲ್ದಾಣದಲ್ಲಿ ತಮ್ಮ ಅಳಲು ತೋಡಿಕೊಂಡ ರಾಯಚೂರಿನ ಸುನಂದಾ, ‘ಅನ್ನ ಅರಸಿ ಕುಟುಂಬ ಸಮೇತ ನಗರಕ್ಕೆ ಬಂದಿದ್ದೆ. ಕರ್ಫ್ಯೂ ನಮ್ಮ ಅನ್ನ ಕಿತ್ತುಕೊಂಡಿದೆ. ವಿಧಿಯಿಲ್ಲದೇ ಊರಿಗೆ ಹೊರಟಿದ್ದೇವೆ’ ಎಂದರು.

ಬಾಗಲಕೋಟೆಯ ಪರಮೇಶ್ ಬಡಿಗೇರ್, ‘ನಗರದ ಸ್ಥಿತಿ ನೋಡಿದರೆ ಭಯವಾಗುತ್ತಿದೆ. ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ತಂದೆ- ತಾಯಿ ಜೊತೆ ವಾಸವಿದ್ದೆ. ತಂದೆ-ತಾಯಿಗೆ ಹುಷಾರಿಲ್ಲದಿದ್ದರೆ ಆಸ್ಪತ್ರೆಗೆ ತೋರಿಸುವುದು ಕಷ್ಟವಾಗಲಿದೆ. ಹೀಗಾಗಿ ಊರಿಗೆ ಹೊರಟಿದ್ದೇವೆ’ ಎಂದರು.

ಯಾದಗಿರಿಯ ಪುಟ್ಟಮ್ಮ ಜಾಲಿಹಳ್ಳಿ, ‘ಕೊರೊನಾ ಸೋಂಕು ಹೆಚ್ಚಳವಾದರೂ ನಮ್ಮ ಸುರಕ್ಷತೆಯಲ್ಲಿ ನಾವಿದ್ದುಕೊಂಡು ಕೆಲಸಕ್ಕೆ ಹೋಗುತ್ತಿದ್ದೆವು. ಇದೀಗ ಎಲ್ಲವನ್ನೂ ಬಂದ್ ಮಾಡಿದ್ದಾರೆ. ಕೆಲಸವಿಲ್ಲವೆಂದು ಮಾಲೀಕರು ಹೇಳಿದ್ದಾರೆ. ಕರ್ಫ್ಯೂ ಮುಂದುವರಿಯುವ ಆತಂಕವೂ ಇದೆ. ಕೆಲಸವಿಲ್ಲದೆ ಬಾಡಿಗೆ ಮನೆಯಲ್ಲಿ ಜೀವನ ಕಷ್ಟ. ನಗರ ತೊರೆಯುವುದು ಅನಿವಾರ್ಯ’ ಎಂದರು.

ಮೆಜೆಸ್ಟಿಕ್ ನಿಲ್ದಾಣಕ್ಕೆ ಸಾರಿಗೆ ಸಚಿವ ಲಕ್ಷ್ಮಣ ಸವದಿ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ ಭೇಟಿ ನೀಡಿ ಪ್ರಯಾಣಿಕರನ್ನು ಮಾತನಾಡಿಸಿದರು.

‘ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದ ಸರ್ಕಾರ’

ಗಾರ್ಮೆಂಟ್ಸ್ ನೌಕರ ಶಿವಮೊಗ್ಗದ ರಮೇಶ್, ‘ಕಳೆದ ಲಾಕ್‌ಡೌನ್‌ನಿಂದಾಗಿ ಸಂಬಳವಿಲ್ಲದೆ ಕಷ್ಟ ಅನುಭವಿಸಿದ್ದೆವು. ಈ ವರ್ಷ ಪುನಃ ಕೆಲಸಕ್ಕೆ ಕರೆಸಿದ್ದು ಖುಷಿ ತಂದಿತ್ತು. ಈಗ ದಿಢೀರ್ ಕಾರ್ಖಾನೆ ಬಂದ್ ಮಾಡಿಸಿದ್ದು, ಊರಿನತ್ತ ಹೊರಟಿದ್ದೇವೆ’ ಎಂದರು.

‘ಕೊರೊನಾ 2ನೇ ಅಲೆ ಬರುವ ಮಾಹಿತಿ ಸರ್ಕಾರಕ್ಕೆ ಇತ್ತು. ಅಷ್ಟಾದರೂ ಸರ್ಕಾರ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಿಲ್ಲ. ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡಿದರು ಎಂಬಂತೆ ಸೋಂಕಿತರು ಹೆಚ್ಚಾಗಿ ಸಾವುಗಳು ಜಾಸ್ತಿಯಾದಾಗ ಬಿಗಿ ಕರ್ಫ್ಯೂ ಎನ್ನುತ್ತಿದೆ’ ಎಂದೂ ಅವರು ದೂರಿದರು.

ಹಳ್ಳಿಗಳಲ್ಲಿ ಸೋಂಕು ಹೆಚ್ಚಳ ಸಾಧ್ಯತೆ?

ಬಹುತೇಕ ಪ್ರಯಾಣಿಕರು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದೇ ಬಸ್‌ಗಳಲ್ಲಿ ಪ್ರಯಾಣಿಸಿದರು. ಶೇ 50ರಷ್ಟು ಆಸನದ ನಿಯಮವೂ ಪಾಲನೆಯಾಗಲಿಲ್ಲ. ಎಲ್ಲ ಸೀಟುಗಳನ್ನು ಭರ್ತಿ ಮಾಡಿಯೇ ಬಸ್‌ಗಳನ್ನು ಮುಂದಕ್ಕೆ ಬಿಡಲಾಯಿತು.

‘ಸಾವಿರಾರು ಸಂಖ್ಯೆ ಜನರು, ಬೆಂಗಳೂರು ತೊರೆದು ಹಳ್ಳಿ ಸೇರುತ್ತಿದ್ದಾರೆ. ಅವರಲ್ಲಿ ಯಾರಿಗಾದರೂ ಕೊರೊನಾ ಸೋಂಕು ಕಾಣಿಸಿಕೊಂಡರೆ ಮತ್ತಷ್ಟು ಅಪಾಯಗಳು ಎದುರಾಗುವ ಸಾಧ್ಯತೆ ಇದೆ. ಅಂಥ ಹಳ್ಳಿಗಳಲ್ಲಿ ಸೋಂಕು ಪ್ರಮಾಣ ಹೆಚ್ಚಾಗಬಹುದು’ ಎಂದು ಸಾರಿಗೆ ಸಿಬ್ಬಂದಿಯೇ ಅಭಿಪ್ರಾಯಪಟ್ಟರು.

ಲಾಕ್‌ಡೌನ್ ಕಾರಣ ಊರುಗಳತ್ತ ಹೊರಟ ಕಾರ್ಮಿಕರು • ನಿರ್ಮಾಣ ಚಟುವಟಿಕೆಗಳಿಗೆ ತೊಡಕಾಗುವ ಸಾಧ್ಯತೆ

ವಿನಾಯಿತಿ ಇದ್ದರೂ ಆವರಿಸಿದ ಆತಂಕ

• ಜಿ.ಶಿವಕುಮಾರ

ಪ್ರಜಾವಾಣಿ ವಿಶೇಷ

ಬೆಂಗಳೂರು: ನಿರ್ಮಾಣ ವಲಯಕ್ಕೆ ಲಾಕ್‌ಡೌನ್‌ನಿಂದ ಸಂಪೂರ್ಣ ವಿನಾಯಿತಿ ಸಿಕ್ಕರೂ ಈ ಉದ್ಯಮ ನಷ್ಟದ ಭೀತಿ ಎದುರಿಸುತ್ತಿದೆ.

ನಗರಗಳಲ್ಲಿ ಬದುಕು ಕಟ್ಟಿಕೊಂಡಿದ್ದ ಬಹುಪಾಲು ಕಟ್ಟಡ ಕಾರ್ಮಿಕರು ಲಾಕ್‌ಡೌನ್ ಬೆನ್ನಲ್ಲೇ ಊರಿನ ಹಾದಿ ಹಿಡಿದಿದ್ದಾರೆ. ಬಿಕ್ಕಟ್ಟು ಹೀಗೆ ಮುಂದುವರಿದರೆ ಅವರು ಮತ್ತೆ ನಗರಕ್ಕೆ ಕಾಲಿಡುವುದು ಕಷ್ಟ. ಹಾಗೇನಾದರೂ ಆದರೆ ನಿರ್ಮಾಣ ಚಟುವಟಿಕೆಗಳಿಗೆ ಹಿನ್ನಡೆಯಾಗಬಹುದೆಂಬ ಆತಂಕ ರಿಯಲ್ ಎಸ್ಟೇಟ್ ಉದ್ಯಮವನ್ನು ಆವರಿಸಿದೆ.

'ನಮ್ಮಲ್ಲಿ ಒಟ್ಟು 2 ಸಾವಿರ ಕಾರ್ಮಿಕರಿದ್ದಾರೆ. ಅವರಿಗೆ ದಿನಸಿ ಸೇರಿದಂತೆ ಅಗತ್ಯ ಸೌಕರ್ಯ ನೀಡಿ ಉಳಿಸಿಕೊಂಡಿದ್ದೇವೆ. 14 ದಿನಗಳ ನಂತರವೂ ಕೋವಿಡ್ ಪ್ರಕರಣಗಳು ಹೆಚ್ಚಿದರೆ ಸರ್ಕಾರ ಮತ್ತಷ್ಟು ಬಿಗಿ ಕ್ರಮ ಕೈಗೊಳ್ಳಬಹುದು. ನಿರ್ಮಾಣ ಚಟುವಟಿಕೆಗಳನ್ನು ಸ್ಥಗಿತಗೊಳಿಸಲೂಬಹುದು. ಹಾಗೇನಾದರೂ ಆದರೆ ಕಾರ್ಮಿಕರಲ್ಲಿ ಭೀತಿ ಸೃಷ್ಟಿಯಾಗುತ್ತದೆ. ನಾವು ಏನೇ ಸೌಲಭ್ಯ ಕಲ್ಪಿಸಿದರೂ ಇಲ್ಲಿ ಇರಲು ಒಪ್ಪುವುದಿಲ್ಲ. ಊರಿಗೆ ಹೋಗಬೇಡಿ ಎಂದು ಅವರನ್ನು ತಡೆಯುವುದಕ್ಕೂ ಆಗುವುದಿಲ್ಲ. ಇದರಿಂದ ಉದ್ಯಮಕ್ಕೆ ಹಿನ್ನಡೆಯುಂಟಾಗಬಹುದು' ಎಂದು ಡಿಎಸ್ ಮ್ಯಾಕ್ಸ್ ಕಂಪನಿಯ ನಿರ್ದೇಶಕ ಎಸ್.ಪಿ.ದಯಾನಂದ್ 'ಪ್ರಜಾವಾಣಿ'ಗೆ ತಿಳಿಸಿದರು.



ದಯಾನಂದ್

'ಲಾಕ್‌ಡೌನ್ ಜಾರಿಗೊಳಿಸಿರುವ ಕಾರಣ ಗ್ರಾಹಕರು ಮನೆಯಿಂದ ಹೊರಬರುವುದಿಲ್ಲ. ಬಹುತೇಕರು ಉದ್ಯೋಗ ನಷ್ಟದ ಭೀತಿ ಎದುರಿಸುತ್ತಾರೆ. ಅಂತಹವರು ಮನೆ ಹಾಗೂ ಫ್ಲ್ಯಾಟ್ ಕೊಂಡು ಕೊಳ್ಳುವ ಸಾಹಸಕ್ಕೆ ಕೈಹಾಕುವುದಿಲ್ಲ. ಇದರಿಂದ ನಮ್ಮ ಆದಾಯಕ್ಕೆ ಪೆಟ್ಟು ಬೀಳುತ್ತದೆ. ಹೋದ ವರ್ಷವೂ ಇದೇ ಪರಿಸ್ಥಿತಿ ಇತ್ತು. ನವೆಂಬರ್‌ನಲ್ಲಿ ಉದ್ಯಮ ಸ್ವಲ್ಪ ಚೇತರಿಸಿಕೊಂಡಿತ್ತು. ಈ ವರ್ಷದ ಫೆಬ್ರುವರಿ ವೇಳೆಗೆ ವ್ಯಾಪಾರ ವಹಿವಾಟು ಸಹಜ ಸ್ಥಿತಿಗೆ ಮರಳಿತ್ತು. ಹೀಗಾಗಿ ಹೊಸ ಯೋಜನೆಗಳನ್ನು ಶುರುಮಾಡಿದ್ದೆವು. ಈಗ ಮತ್ತೆ ಬಿಕ್ಕಟ್ಟು ಸೃಷ್ಟಿಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರದ ಜೊತೆ ಕೈಜೋಡಿಸಲೇಬೇಕು' ಎಂದರು.

'ಕಾರ್ಮಿಕರ ನೋಂದಣಿಯಾಗಬೇಕು'

'ನಮ್ಮಲ್ಲಿ ವಲಸೆ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಅವರೆಲ್ಲಾ ಕ್ಯಾಂಪ್‌ಗಳಲ್ಲಿ ನೆಲೆಸಿರುತ್ತಾರೆ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಇವರ ಹೆಸರು ನೋಂದಣಿಯಾದರೆ ಅನೇಕ ಸವಲತ್ತುಗಳು ಸಿಗುತ್ತವೆ. ಈ ಕಾರ್ಯ ಬೇಗ ಆಗಬೇಕು. ಈ ಸಂಬಂಧ ನಾವು ಅಧಿಕಾರಿಗಳೊಂದಿಗೆ ಮಾತನಾಡಿದ್ದೇವೆ. ಸರ್ಕಾರಕ್ಕೂ ಮನವಿ ಸಲ್ಲಿಸಿದ್ದೇವೆ' ಎಂದು ಸುರೇಶ್ ಹರಿ ಹೇಳಿದರು.

'ಮಂಡಳಿಯು ಆನ್‌ಲೈನ್ ನೋಂದಣಿ ವ್ಯವಸ್ಥೆ ಜಾರಿಗೆ ತಂದಿದೆ. ಇದರ ಬದಲು ಅಧಿಕಾರಿಗಳು ಕ್ಯಾಂಪ್‌ಗಳಿಗೆ ಭೇಟಿ ನೀಡಿ ಕಾರ್ಮಿಕರ ನೋಂದಣಿ ಮಾಡಿಕೊಳ್ಳಬೇಕು. ಆ ಕೆಲಸ ಆದರೆ ಅಸಂಘಟಿತ ಕಾರ್ಮಿಕರು ಮತ್ತೆ ತಮ್ಮ ಊರುಗಳತ್ತ ಗುಳೆ ಹೋಗುವುದನ್ನು ತಡೆಯಬಹುದು' ಎಂದರು.

ಸುರೇಶ್ ಹರಿ

'ದಿನಗೂಲಿ ಕಾರ್ಮಿಕರು ಇಲ್ಲದೆ ನಿರ್ಮಾಣ ಕೆಲಸಗಳನ್ನು ಮುಂದುವರಿಸುವುದು ಕಷ್ಟ. ಈಗಿನ ಪರಿಸ್ಥಿತಿಯಲ್ಲಿ ಗ್ರಾಹಕರು ಫ್ಲ್ಯಾಟ್‌ಗಳನ್ನು ಕೊಂಡುಕೊಳ್ಳುವುದಕ್ಕೆ ಹಿಂದೇಟು ಹಾಕುತ್ತಾರೆ. ಬೇಡಿಕೆಯೇ ಇಲ್ಲದಿದ್ದಾಗ ಉದ್ಯಮಿಗಳೂ ಬಂಡವಾಳ ಹೂಡುವುದಕ್ಕೆ ಮನಸ್ಸು ಮಾಡುವುದಿಲ್ಲ. ಆಗ ನಿರ್ಮಾಣ ಚಟುವಟಿಕೆಗಳನ್ನು ಸ್ಥಗಿತಗೊಳಿಸುವುದು ಅನಿವಾರ್ಯ' ಎಂದು ಕ್ರೆಡೈ ಬೆಂಗಳೂರು ಮುಖ್ಯಸ್ಥ ಸುರೇಶ್ ಹರಿ ಅವರು ಹೇಳಿದರು.

'ಲಾಕ್‌ಡೌನ್ ಕಾರಣ ಬಸ್ ಹಾಗೂ ಮೆಟ್ರೊ ಸಂಚಾರ ಸ್ಥಗಿತಗೊಂಡಿದೆ. ಹೀಗಾಗಿ ನಮ್ಮ ವಾಹನಗಳಲ್ಲೇ ಕಾರ್ಮಿಕರನ್ನು ಕೆಲಸದ ಸ್ಥಳಕ್ಕೆ ಕರೆದೊಯ್ಯಲು ಸಿದ್ಧತೆ ಮಾಡಿಕೊಂಡಿದ್ದೇವೆ. ಈ ಸಂಬಂಧ ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ದೊಡ್ಡ ಸೈಟ್‌ಗಳಲ್ಲಿ ಕಾರ್ಮಿಕರಿಗೆ ತಂಗಲು ವ್ಯವಸ್ಥೆ ಮಾಡಲಾಗಿರುತ್ತದೆ. ಅಲ್ಲಿ ಈ ಸಮಸ್ಯೆ ಉದ್ಭವಿಸುವುದಿಲ್ಲ. ಸಣ್ಣ ಸೈಟ್‌ಗಳಿಗೆ ಬೇರೆ ಕಡೆಯಿಂದ ಕಾರ್ಮಿಕರನ್ನು ಕರೆದುಕೊಂಡು ಹೋಗಬೇಕಾಗುತ್ತದೆ. ಅಂತಹವರಿಗೆ ಗುರುತಿನ ಚೀಟಿ ನೀಡುವುದಾಗಿ ಅಧಿಕಾರಿಗಳು ಹೇಳಿದ್ದಾರೆ. ನಮ್ಮಿಂದ ಯಾವುದೇ ಲೋಪವಾಗದಂತೆ ಎಚ್ಚರವಹಿಸುತ್ತೇವೆ' ಎಂದರು.

ಸುದ್ದಿ 2 ನಿಮಿಷ

ಅಂಗವಿಕಲರಿಗೆ ಲಸಿಕೆ ಖಾತ್ರಿಪಡಿಸಲು ಸೂಚನೆ

ಬೆಂಗಳೂರು: ಕೋವಿಡ್ ಲಸಿಕೆ ಅಭಿಯಾನದಲ್ಲಿ ಅಂಗವಿಕಲರಿಗೆ ಲಸಿಕೆ ನೀಡಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ. ಲಸಿಕಾ ಕೇಂದ್ರದ ಮುಂದೆ ಸರತಿ ಸಾಲಿನಲ್ಲಿ ಅವರು ನಿಲ್ಲದಂತೆ ನೋಡಿಕೊಳ್ಳಬೇಕು ಎಂದೂ ತಿಳಿಸಿದೆ.

ಲಸಿಕೆ ಸಂಬಂಧ ಅಂಗವಿಕಲರು ಎಸ್‌ಎಂಎಸ್, ವಾಟ್ಸ್‌ಆ್ಯಪ್ ಅಥವಾ ಇ-ಮೇಲ್ ಮೂಲಕ ಕಳುಹಿಸುವ ಮನವಿಗಳನ್ನು ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು ಸ್ವೀಕರಿಸಬೇಕು ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಸೂಚಿಸಿತು. ವಿಚಾರಣೆಯನ್ನು ಮೇ 12ಕ್ಕೆ ಮುಂದೂಡಿತು.

ಅರ್ಜಿ ಸಲ್ಲಿಸಿದ್ದ ಅಂಗವಿಕಲ ರಕ್ಷಣಾ ಸಮಿತಿ ಪರ ಹಾಜರಿದ್ದ ವಕೀಲ ವಿಶ್ವಶೇಖರ್, 'ಕಾಯ್ದೆ ಪ್ರಕಾರ ಲಸಿಕೆ ನೀಡುವಾಗ ಅಂಗವಿಕಲರಿಗೆ ಆದ್ಯತೆ ನೀಡಬೇಕು' ಎಂದು ವಾದಿಸಿದರು.

'ಮನೆ ಆರೈಕೆಗೆ ಮಾರ್ಗದರ್ಶನ: 1,100 ಸಿಬ್ಬಂದಿ ನೇಮಕ'

ಬೆಂಗಳೂರು: ಮನೆ ಆರೈಕೆಯಲ್ಲಿರುವ (ಹೋಂ ಐಸೊಲೇಷನ್) ಕೋವಿಡ್ ರೋಗಿಗಳಿಗೆ ಮಾರ್ಗದರ್ಶನ ನೀಡಲು ಸರ್ಕಾರ ಸ್ಥಾಪಿಸಿರುವ ಕಾಲ್‌ಸೆಂಟರ್‌ಗೆ ಹೊಸದಾಗಿ 1,100 ಜನರನ್ನು ನಿಯೋಜಿಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ತಿಳಿಸಿದರು.

ಕೋವಿಡ್ ಟಾಸ್ಕ್‌ಫೋರ್ಸ್ ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಸದ್ಯಕ್ಕೆ ಕಾಲ್ ಸೆಂಟರ್‌ನಲ್ಲಿ 400 ಸಿಬ್ಬಂದಿ ಇದ್ದಾರೆ ಎಂದು ಹೇಳಿದರು.

ಮನೆ ಆರೈಕೆಯಲ್ಲಿರುವವರಿಗೆ ಕರೆ ಮಾಡಿ ಮಾರ್ಗದರ್ಶನ ನೀಡಲು ₹11 ಕೋಟಿ ವೆಚ್ಚದಲ್ಲಿ 6 ತಿಂಗಳ ಅವಧಿಗೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಲಾಗುವುದು. ₹20 ಕೋಟಿ ವೆಚ್ಚದಲ್ಲಿ ಟೆಲಿ ಮೆಡಿಸಿನ್ ಮತ್ತು ವೈದ್ಯಕೀಯ ವ್ಯವಸ್ಥೆ ಮಾಡಲು ತೀರ್ಮಾನಿಸಲಾಗಿದೆ ಎಂದು ಅವರು ಹೇಳಿದರು.

ಪ್ರತಿ ಜಿಲ್ಲೆಯಲ್ಲೂ 50 ರಿಂದ 100 ಹಾಸಿಗೆಗಳ ಕೋವಿಡ್ ಕೇರ್ ಸೆಂಟರ್‌ಗಳನ್ನು ನಿರ್ಮಿಸಲಾಗುವುದು. ಅಲ್ಲಿ ಶೇ 10 ರಿಂದ ಶೇ 20 ರಷ್ಟು ಆಕ್ಸಿಜನ್ ಹಾಸಿಗೆಗಳಿರಲಿವೆ. ಪ್ರತಿ ಕೇಂದ್ರದಲ್ಲೂ 20 ಹಾಸಿಗೆಗಳಿಗೆ ಪೋರ್ಟೆಬಲ್ ಆಕ್ಸಿಜನ್ ನೀಡಲಾಗುವುದು. ಒಟ್ಟು 40 ಸಾವಿರ ಪೋರ್ಟೆಬಲ್ ಆಕ್ಸಿಜನ್ ಆಮದು ಮಾಡುವ ಪ್ರಯತ್ನ ನಡೆದಿದೆ. ನಗರದ ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಒಂದು ಅಥವಾ ಎರಡು ಕೇರ್ ಸೆಂಟರ್ ತೆರೆಯಲಾಗುವುದು ಎಂದರು.

ನಾಗರಹೊಳೆ, ಬಂಡೀಪುರದಲ್ಲಿ ಸಫಾರಿ ಬಂದ್

ಮೈಸೂರು: ಕೋವಿಡ್–19 ಪ್ರಕರಣ ಹೆಚ್ಚುತ್ತಿರುವುದರಿಂದ ರಾಜ್ಯ ಸರ್ಕಾರದ ಮಾರ್ಗಸೂಚಿ ಅನ್ವಯ ಏ.27ರಿಂದ ಮೇ 12 ರವರೆಗೆ ನಾಗರಹೊಳೆ ಹಾಗೂ ಬಂಡೀಪುರ ಅಭಯಾರಣ್ಯಗಳಲ್ಲಿ ಸಫಾರಿ ಬಂದ್ ಮಾಡಲಾಗಿದೆ.

'ಬಂಡೀಪುರ ವಲಯದಲ್ಲಿರುವ ವಸತಿ ಗೃಹಗಳನ್ನು ನೀಡಲಾಗುವುದಿಲ್ಲ. ವನ್ಯಪ್ರಾಣಿಗಳ ವೀಕ್ಷಣೆಗೆ ಅವಕಾಶ ಇರುವುದಿಲ್ಲ. ಗೋಪಾಲಸ್ವಾಮಿ ಬೆಟ್ಟ ವಲಯ ವ್ಯಾಪ್ತಿಯಲ್ಲಿರುವ ಹಿಮವದ್ ಗೋಪಾಲಸ್ವಾಮಿ ದೇವಸ್ಥಾನಕ್ಕೆ ಭಕ್ತಾದಿಗಳು ಹಾಗೂ ಸಾರ್ವಜನಿಕರ ಪ್ರವೇಶಕ್ಕೆ ನಿರ್ಬಂಧಿಸಲಾಗಿದೆ' ಎಂದು ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಎಸ್.ಆರ್.ನಟೇಶ್ ತಿಳಿಸಿದ್ದಾರೆ.

'ಕರ್ಫ್ಯೂ ಅವಧಿಯಲ್ಲಿ ಸಫಾರಿ ಇರುವುದಿಲ್ಲ' ಎಂದು ನಾಗರಹೊಳೆ ಹುಲಿ ಯೋಜನಾ ನಿರ್ದೇಶಕ ಡಿ.ಮಹೇಶ್ ಕುಮಾರ್ ಹೇಳಿದ್ದಾರೆ.

ಮಾರುಕಟ್ಟೆ ಸ್ಥಳಾಂತರ: ವರ್ತಕರಿಗೆ ಪಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ನಿಯಂತ್ರಣಕ್ಕೆ ಮೇ 12ರವರೆಗೆ 'ಕೊರೊನಾ ಕರ್ಫ್ಯೂ' ಜಾರಿ ಮಾಡಿರುವುದರಿಂದ ಕೆ.ಆರ್. ಮಾರುಕಟ್ಟೆ ಹೊರತುಪಡಿಸಿ ಉಳಿದ ಮಾರುಕಟ್ಟೆಗಳು ನಗರದ ವಿವಿಧ ಭಾಗಗಳಿಗೆ ತಾತ್ಕಾಲಿಕವಾಗಿ ಸ್ಥಳಾಂತರಗೊಂಡಿವೆ. ಕರ್ಫ್ಯೂ ವೇಳೆ ವರ್ತಕರಿಗೆ ಯಾವುದೇ ತೊಡಕಾಗದಂತೆ ಎಪಿಎಂಸಿ ಪಾಸ್ ವ್ಯವಸ್ಥೆ ವಿತರಿಸುತ್ತಿದೆ.

ಮಂಗಳವಾರ ರಾತ್ರಿಯಿಂದಲೇ ಕೊರೊನಾ ಕರ್ಫ್ಯೂ ಜಾರಿಯಾಗಿದ್ದು, 14 ದಿನಗಳ ಕಾಲ ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ಮಾತ್ರ ಹೂವು, ಹಣ್ಣು, ತರಕಾರಿ ಸೇರಿದಂತೆ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

ಈಗಾಗಲೇ ಕಲಾಸಿಪಾಳ್ಯದ ತರಕಾರಿ ಸಗಟು ಮಾರುಕಟ್ಟೆ ಸಿಂಗೇನ ಅಗ್ರಹಾರ ಪ್ರಾಂಗಣಕ್ಕೆ ಸ್ಥಳಾಂತರಗೊಂಡಿದೆ. ಯಶವಂತಪುರದ ಎಪಿಎಂಸಿ ಪ್ರಾಂಗಣದಲ್ಲಿದ್ದ ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ ಮಾರುಕಟ್ಟೆಯನ್ನು ದಾಸನಪುರ ಎಪಿಎಂಸಿ ಪ್ರಾಂಗಣಕ್ಕೆ ಸ್ಥಳಾಂತರಿಸಲಾಗಿದೆ.

ಸಿಂಗೇನ ಅಗ್ರಹಾರದಲ್ಲಿ ಸಗಟು ವರ್ತಕರಿಗೆ ಮಳಿಗೆ ನಿರ್ಮಿಸಲಾಗುತ್ತಿದೆ

'ಮುಂಜಾಗ್ರತಾ ಕ್ರಮವಾಗಿ ಎಪಿಎಂಸಿ ವ್ಯಾಪ್ತಿಯ ಮಾರುಕಟ್ಟೆಗಳನ್ನು ಸ್ಥಳಾಂತರಿಸಲಾಗಿದೆ. ದೂರದ ಸ್ಥಳಗಳಿಗೆ ಮಾರುಕಟ್ಟೆ ಸ್ಥಳಾಂತರಗೊಂಡಿರುವುದರಿಂದ ವರ್ತಕರ ವ್ಯಾಪಾರಕ್ಕೆ ಸಮಸ್ಯೆಯಾಗದಂತೆ ಎಪಿಎಂಸಿ ವತಿಯಿಂದ ಪಾಸ್ ವಿತರಿಸಲಾಗುತ್ತಿದೆ. ವರ್ತಕರು, ಹಮಾಲಿಗಳು ಹಾಗೂ ಎಪಿಎಂಸಿ ಮಳಿಗೆಗಳಲ್ಲಿ ಕೆಲಸ ಮಾಡುವವರು ಪಾಸ್ ಅನ್ನು ಕಚೇರಿಯಿಂದ ಪಡೆಯಬಹುದು' ಎಂದು ಎಪಿಎಂಸಿ ನಿರ್ದೇಶಕ ಕರೀಗೌಡ ತಿಳಿಸಿದರು.

'ಎಪಿಎಂಸಿ ಸೂಚನೆ ಮೇರೆಗೆ ಸಿಂಗೇನ ಅಗ್ರಹಾರಕ್ಕೆ ಕಲಾಸಿಪಾಳ್ಯ ತರಕಾರಿ ಸಗಟು ಮಾರುಕಟ್ಟೆ ಸ್ಥಳಾಂತರಗೊಂಡಿದೆ. ಈ ವೇಳೆ ವರ್ತಕರ ಸಂಚಾರಕ್ಕೆ ವಿಶೇಷ ಪಾಸ್ ಅಗತ್ಯವಾಗಿತ್ತು. ಎಪಿಎಂಸಿ ವತಿಯಿಂದ ವರ್ತಕರಿಗೆ ಪಾಸ್ ವಿತರಿಸುತ್ತಿರುವುದು ಸ್ವಾಗತಾರ್ಹ' ಎಂದು ಕಲಾಸಿಪಾಳ್ಯದ ತರಕಾರಿ ಮತ್ತು ಹಣ್ಣು ಸಗಟು ವರ್ತಕರ ಸಂಘದ ಅಧ್ಯಕ್ಷ ಆರ್.ವಿ.ಗೋಪಿ ಹೇಳಿದರು.

ಹಾಪ್‌ಕಾಮ್ಸ್‌ನಲ್ಲೂ ಖರೀದಿಗೆ ಅವಕಾಶ

'ಹಾಪ್‌ಕಾಮ್ಸ್‌ನ ಎಲ್ಲ ಮಳಿಗೆಗಳಲ್ಲಿ ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ಖರೀದಿಗೆ ಅವಕಾಶ ಇರುತ್ತದೆ. ಇದನ್ನು ಹೊರತುಪಡಿಸಿ ಹೆಚ್ಚುವರಿಯಾಗಿ ಹಾಪ್‌ಕಾಮ್ಸ್‌ನ 11 ಸಂಚಾರಿ ಮಳಿಗೆಗಳು ಕಾರ್ಯನಿರ್ವಹಿಸಲಿವೆ' ಎಂದು ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಉಮೇಶ್ ಎಸ್.ಮಿರ್ಜಿ ತಿಳಿಸಿದರು.

'ಕರ್ಫ್ಯೂ ಇರುವುದರಿಂದ ಹಾಪ್‌ಕಾಮ್ಸ್‌ಗೆ ಉತ್ಪನ್ನಗಳ ಪೂರೈಕೆಗೆ ಸಮಸ್ಯೆ ಇಲ್ಲ. ರೈತರು ಎಂದಿನಂತೆ ಮುಂಜಾನೆಯೇ ಹಣ್ಣು–ತರಕಾರಿಗಳನ್ನು ಸರಬರಾಜು ಮಾಡುತ್ತಾರೆ. ಕರ್ಫ್ಯೂ ವೇಳೆ ನಗರದಲ್ಲಿ ತರಕಾರಿ–ಹಣ್ಣಿಗೆ ಬೇಡಿಕೆ ಕಂಡುಬಂದಲ್ಲಿ, ಅಂತಹ ಭಾಗಗಳಿಗೂ ಹೆಚ್ಚುವರಿ ಸೇವೆ ನೀಡಲಾಗುವುದು. ಕಬ್ಬನ್ ಪಾರ್ಕ್ ಹಾಗೂ ಲಾಲ್‌ಬಾಗ್‌ನಲ್ಲಿರುವ ಮಳಿಗೆಗಳಲ್ಲಿ ಈಗ ವ್ಯಾಪಾರ ಇಲ್ಲ. ಅಲ್ಲಿನ ಸಿಬ್ಬಂದಿಯನ್ನು ಬೇರೆ ಮಳಿಗೆಗಳಿಗೆ ನಿಯೋಜಿಸಲಾಗುವುದು' ಎಂದು ಮಾಹಿತಿ ನೀಡಿದರು.

ನಾಲ್ಕು ಗಂಟೆ ಮಾತ್ರ ಖರೀದಿಗೆ ಅವಕಾಶ ನೀಡಿರುವುದರಿಂದ ವ್ಯಾಪಾರ ನಡೆಯುವುದಿಲ್ಲ. ಅವಧಿ ವಿಸ್ತರಿಸಿದರೆ ವ್ಯಾಪಾರಿಗಳಿಗೂ ಅನುಕೂಲ.

ಹರೀಶ್, ತರಕಾರಿ ವ್ಯಾಪಾರಿ

ಮನೆಯಲ್ಲೇ ನಿವೃತ್ತ ಅಧಿಕಾರಿ ಮೃತದೇಹ: ಬಿಬಿಎಂಪಿ ಸಿಬ್ಬಂದಿ ವಿರುದ್ಧ ಅಸಮಾಧಾನ

ಅಂತ್ಯಸಂಸ್ಕಾರಕ್ಕೆ ಕಾಲಹರಣ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ತಗುಲಿ ಮೃತಪಟ್ಟಿದ್ದ ವಿಧಾನಸೌಧದ ನಿವೃತ್ತ ಮಹಿಳಾ ಅಧಿಕಾರಿಯೊಬ್ಬರ ಅಂತ್ಯ ಸಂಸ್ಕಾರಕ್ಕೂ ಬಿಬಿಎಂಪಿ ಸಿಬ್ಬಂದಿ ಕಾಲಹರಣ ಮಾಡಿರುವ ಆರೋಪ ಕೇಳಿಬಂದಿದೆ.

ಲಿಂಗರಾಜಪುರದಲ್ಲಿ ವಾಸವಿದ್ದ ನಿವೃತ್ತ ಅಧಿಕಾರಿ ಇಂದಿರಾಬಾಯಿ ಅವರಿಗೆ ಇತ್ತೀಚೆಗೆ ಕೊರೊನಾ ಸೋಂಕು ತಗುಲಿತ್ತು. ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದರು. ಆದರೆ, ಆರೋಗ್ಯದಲ್ಲಿ ಏರುಪೇರಾಗಿ ಸೋಮವಾರ ತೀರಿಕೊಂಡಿದ್ದರು.

ಮನೆಯಲ್ಲಿದ್ದ ಮೃತದೇಹವನ್ನು ತೆಗೆದುಕೊಂಡು ಹೋಗಿ ಅಂತ್ಯ ಸಂಸ್ಕಾರ ಮಾಡುವಂತೆ ಕೋರಿ ಬಿಬಿಎಂಪಿ ಅಧಿಕಾರಿಗಳಿಗೆ ಪರಿಚಯಸ್ಥರು ಕೋರಿದ್ದರು.



ನೋಂದಣಿಯನ್ನೂ ಮಾಡಿದ್ದರು. ಅಧಿಕಾರಿಗಳಿಂದ ಯಾವುದೇ ಸ್ಪಂದನೆ ವ್ಯಕ್ತವಾಗಿರಲಿಲ್ಲ. ಮಂಗಳವಾರ ರಾತ್ರಿಯವರೆಗೂ ಮನೆಯಲ್ಲೇ ಮೃತದೇಹವಿತ್ತು.

ವಿಷಯ ತಿಳಿದ ಹೆಣ್ಣೂರು ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಮುನಿರಾಜು, ಸಂಸದ ಪಿ.ಸಿ.ಮೋಹನ್ ಅವರಿಗೆ ಮಾಹಿತಿ ನೀಡಿದ್ದರು. ಅದಕ್ಕೆ ಸ್ಪಂದಿಸಿದ ಸಂಸದ, ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಿ ರಾತ್ರಿ 9 ಗಂಟೆಗೆ ಆಂಬುಲೆನ್ಸ್ ಮೂಲಕ ಮೃತದೇಹವನ್ನು ಅಂತ್ಯಸಂಸ್ಕಾರಕ್ಕೆ ಕಳುಹಿಸಿದರು.

'ಸರ್ಕಾರ ನಿಯಮಾವಳಿ ಅನ್ವಯ ಅಂತ್ಯಕ್ರಿಯೆ ನಡೆಸಲು ಬೆಳಿಗ್ಗೆಯಿಂದ ಯಾರೊಬ್ಬರೂ ಸ್ಪಂದಿಸಲಿಲ್ಲ. ನಿವೃತ್ತ ಅಧಿಕಾರಿಗೇ ಈ ಸ್ಥಿತಿಯಾದರೆ, ಸಾಮಾನ್ಯ ಜನರ ಪಾಡೇನು. ಒಬ್ಬರ ಮೇಲೊಬ್ಬರು ಬೊಟ್ಟು ಮಾಡಿ ಹೊಣೆಗಾರಿಕೆಯಿಂದ ಅಧಿಕಾರಿಗಳು ತಪ್ಪಿಸಿಕೊಂಡಿದ್ದರು. ಸಂಸದರಿಗೆ ತಿಳಿಸಿದ ನಂತರ, ಸಮಸ್ಯೆ ಇತ್ಯರ್ಥವಾಯಿತು' ಎಂದು ಮುನಿರಾಜು 'ಪ್ರಜಾವಾಣಿ'ಗೆ ಹೇಳಿದರು.

ವೈದೇಹಿ ಆಸ್ಪತ್ರೆ: ಶೇ 75 ರಷ್ಟು ಹಾಸಿಗೆ ಕೋವಿಡ್ ಚಿಕಿತ್ಸೆಗೆ ಮೀಸಲು

ಕೋವಿಡ್ ಪೀಡಿತರ ಸಂಖ್ಯೆ ನಗರದಲ್ಲಿ ಏರಿಕೆ ಕಾಣುತ್ತಿರುವ ಕಾರಣ ಶೇ 75 ರಷ್ಟು ಹಾಸಿಗೆಗಳನ್ನು ಸರ್ಕಾರ ಶಿಫಾರಸು ಮಾಡುವ ಸೋಂಕಿತರಿಗೆ ಮೀಸಲಿಡುವುದಾಗಿ ವೈಟ್‌ಫೀಲ್ಡ್‌ನಲ್ಲಿರುವ ವೈದೇಹಿ ಆಸ್ಪತ್ರೆಯು ಭರವಸೆ ನೀಡಿದೆ.

ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಆಸ್ಪತ್ರೆಗೆ ಮಂಗಳವಾರ ಭೇಟಿ ನೀಡಿ, ಆಡಳಿತ ಮಂಡಳಿಯ ಜತೆಗೆ ಮಾತುಕತೆ ನಡೆಸಿದರು. 'ಶೇ 75 ರಷ್ಟು ಹಾಸಿಗೆಗಳನ್ನು ಸರ್ಕಾರ ಶಿಫಾರಸು ಮಾಡುವ ಸೋಂಕಿತರಿಗೆ ಮೀಸಲಿಡಬೇಕು. ಆಸ್ಪತ್ರೆಯಲ್ಲಿ ಆಮ್ಲಜನಕ ಹಾಸಿಗೆಗಳ ಸಂಖ್ಯೆಯನ್ನೂ ಹೆಚ್ಚಿಸಬೇಕು. ಕೊರೊನಾ ಸೋಂಕಿತರ ಜತೆಗೆ ಕೋವಿಡೇತರ ರೋಗಿಗಳಿಗೂ ಆದ್ಯತೆ ಕೊಡಬೇಕು' ಎಂದರು.

ಸಂಕ್ಷಿಪ್ತ ಸುದ್ದಿ

ಡಿಪ್ಲೊಮಾ ಪರೀಕ್ಷೆಗಳು ಮುಂದಕ್ಕೆ

ಬೆಂಗಳೂರು: ಮೇ 3ರಿಂದ ನಡೆಯಬೇಕಿದ್ದ ಡಿಪ್ಲೊಮಾ ವಿಷಯದ ಎಲ್ಲ ಸೆಮಿಸ್ಟರ್‌ನ ಪರೀಕ್ಷೆಗಳನ್ನು ಮುಂದೂಡಲಾಗಿದೆ.

'ಕೊರೊನಾ ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಪರೀಕ್ಷೆಗಳನ್ನು ಮುಂದಕ್ಕೆ ಹಾಕಲಾಗಿದೆ. ಪರಿಷ್ಕೃತ ದಿನಾಂಕವನ್ನು ಶೀಘ್ರ ತಿಳಿಸಲಾಗುತ್ತದೆ' ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಆಯುಕ್ತರ ಪ್ರಕಟಣೆ ತಿಳಿಸಿದೆ.

ಬೆಡ್ ಸಿಗದೆ ಸೋಂಕಿತ ಸಾವು



ಆನೇಕಲ್: ಕೊರೊನಾ ಸೋಂಕಿತರೊಬ್ಬರು ಬೆಡ್‌ಗಾಗಿ ಪಟ್ಟಣದ ಸರ್ಕಾರಿ ಆಸ್ಪತ್ರೆ ಬಳಿಯೇ ಕಾದು ಕುಳಿತು ಅಲ್ಲಿಯೇ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಹಾಲ್ದೇನಹಳ್ಳಿಯ ನಾಗೇಶ್(32) ಮೃತರು. ನಾಗೇಶ್ ಜ್ವರದಿಂದ ಬಳಲುತ್ತಿದ್ದು ಚಿಕಿತ್ಸೆಗಾಗಿ ಆಸ್ಪತ್ರೆಗೆ ಬಂದಿದ್ದರು ಎನ್ನಲಾಗಿದೆ.

ಕೋವಿಡ್ ನಿರ್ವಹಣೆ: ಗುಜರಾತ್ ಸರ್ಕಾರಕ್ಕೆ ಕೋರ್ಟ್ ತರಾಟೆ

ಅಹಮದಾಬಾದ್ (ಪಿಟಿಐ): 'ಕೋವಿಡ್ ಪರಿಸ್ಥಿತಿ ನಿರ್ವಹಣೆ ಕುರಿತಂತೆ ಗುಜರಾತ್ ಸರ್ಕಾರದ ಕಾರ್ಯವೈಖರಿ ತೃಪ್ತಿಕರವಾಗಿಲ್ಲ' ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ. 'ಇಡೀ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕೊರತೆ ಇದೆ. ಚಿಕಿತ್ಸೆಯಿಲ್ಲದೇ ಆಸ್ಪತ್ರೆಯ ಹೊರಗೆ ರೋಗಿಗಳು ಸಾಯುತ್ತಿದ್ದಾರೆ' ಎಂದು ತರಾಟೆಗೆ ತೆಗೆದುಕೊಂಡಿದೆ.

ಆರೋಗ್ಯ ಮೂಲಸೌಕರ್ಯ ಅಭಿವೃದ್ಧಿಗೆ ಪ್ರಧಾನಿ ಮೋದಿ ಸೂಚನೆ

ನವದೆಹಲಿ: ಆಕ್ಸಿಜನ್ ಉತ್ಪಾದನಾ ಘಟಕಗಳ ಸ್ಥಾಪನೆ ಮತ್ತು ಆರೋಗ್ಯ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವ ಕುರಿತಂತೆ ರಾಜ್ಯ ಸರ್ಕಾರಗಳ ಜೊತೆಗೂಡಿ ಕೆಲಸ ನಿರ್ವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಮಂಗಳವಾರ ಅಧಿಕಾರಿಗಳಿಗೆ ಸೂಚಿಸಿದರು.

ಆಕ್ಸಿಜನ್ ಪೂರೈಕೆ ತ್ವರಿತಗೊಳಿಸಲು ರಚಿಸಲಾದ ಉನ್ನತಾಧಿಕಾರ ತಂಡ, ವೈದ್ಯಕೀಯ ಮೂಲಸೌಕರ್ಯ ಮತ್ತು ಕೋವಿಡ್ ನಿರ್ವಹಣೆ ಮತ್ತು ಸಂವಹನಕ್ಕೆ ಸಂಬಂಧಿಸಿದ ತಂಡವು ದೇಶದಲ್ಲಿನ ಪರಿಸ್ಥಿತಿಯನ್ನು ಕುರಿತಂತೆ ಪ್ರಧಾನಿ ಅವರಿಗೆ ಮಾಹಿತಿ ನೀಡಿತು.

ಬನ್ನೇರುಘಟ್ಟ: 11ರವರೆಗೆ ಪ್ರವೇಶವಿಲ್ಲ

ಆನೇಕಲ್: ಸರ್ಕಾರ ಕರ್ಫ್ಯೂ ಘೋಷಿಸಿರುವ ಹಿನ್ನೆಲೆಯಲ್ಲಿ ಏ.28 ರಿಂದ ಮೇ.11ರವರೆಗೆ ಬನ್ನೇರುಘಟ್ಟ ಜೈವಿಕ ಉದ್ಯಾನವನ್ನು ತೆರೆಯುವುದಿಲ್ಲ. ಹಾಗಾಗಿ ಪ್ರವಾಸಿಗರು ಸಹಕರಿಸಬೇಕು. ಸರ್ಕಾರ ಕೊರೊನಾ ಸೋಂಕು ತಡೆಗಟ್ಟಲು ಕೈಗೊಂಡಿರುವ ಮಾರ್ಗಸೂಚಿಯಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕಿ ವನಶ್ರೀ ವಿಪಿನ್ ಸಿಂಗ್ ತಿಳಿಸಿದ್ದಾರೆ.

ತೋಟದಮನೆಗೆ ಬಂದ ಕಾಡುಪಾಪ

ಬೆಂಗಳೂರು: ಸೂಲಿಕೆರೆ ಅರಣ್ಯದ ಬಳಿ ರಾಮಸಂದ್ರದಲ್ಲಿ ತೋಟದ ಮನೆಗೆ ಬಂದಿದ್ದ ಕಾಡುಪಾಪವನ್ನು ವನ್ಯಜೀವಿ ಕಾರ್ಯಕರ್ತರೊಬ್ಬರು ಸಂರಕ್ಷಿಸಿ ಕಾಡಿಗೆ ಬಿಟ್ಟಿದ್ದಾರೆ.

'ರಾಮಸಂದ್ರದ ವ್ಯಕ್ತಿಯೊಬ್ಬರ ತೋಟದ ಮನೆಯ ಬಳಿ ಭಾನುವಾರ ರಾತ್ರಿ ಕಾಡು ಪಾಪ ಕಾಣಿಸಿಕೊಂಡಿತ್ತು. ಇದನ್ನು ಕಂಡು ನಾಯಿಗಳು ಬೊಗಳುತ್ತಿದ್ದವು. ಸ್ಥಳೀಯರು ನನಗೆ ಮಾಹಿತಿ ನೀಡಿದ್ದರು. ತಕ್ಷಣವೇ ಸ್ಥಳಕ್ಕೆ ಧಾವಿಸಿದೆ. ಇದು ವನ್ಯಜೀವಿ ಕಾಯ್ದೆಯಡಿ ವಿಶೇಷ ರಕ್ಷಣೆ ಇರುವ ಪ್ರಾಣಿ. ಹಾಗಾಗಿ ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದೆ' ಎಂದು ವನ್ಯಜೀವಿ ಸಂರಕ್ಷಕ ಎಚ್.ಎನ್. ಸೋಮು 'ಪ್ರಜಾವಾಣಿ'ಗೆ ತಿಳಿಸಿದರು.

ಕ್ರಿಮಿನಲ್ ಪ್ರಕರಣಗಳಲ್ಲಷ್ಟೇ ಖುದ್ದು ಹಾಜರಾತಿ

ಬೆಂಗಳೂರು: ನಗರ ಮತ್ತು ಗ್ರಾಮಾಂತರ ಜಿಲ್ಲೆಯ ನ್ಯಾಯಾಲಯಗಳಿಗೆ ಅನ್ವಯ ಆಗುವಂತೆ ಮಾರ್ಗದರ್ಶಿ ಸೂತ್ರಗಳನ್ನು(ಎಸ್‌ಒಪಿ) ಹೈಕೋರ್ಟ್ ಹೊರಡಿಸಿದೆ. ಸಾಕ್ಷ್ಯಗಳ ದಾಖಲು ಪ್ರಕ್ರಿಯೆಯನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ಮಾಡಲು ತಿಳಿಸಿದೆ.

ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್ ಸಮಯ ನಿಗದಿ ಮಾಡಿರುವ ಕ್ರಿಮಿನಲ್ ಪ್ರಕರಣಗಳಲ್ಲಿ ಮಾತ್ರ ಸಾಕ್ಷಿದಾರರ ಖುದ್ದು ಹಾಜರಾತಿಗೆ ಅವಕಾಶ ನೀಡಲಾಗಿದೆ ಎಂದು ವಿವರಿಸಿದೆ.

ಸೈಯದ್ ಇಸಾಕ್ ಗ್ರಂಥಾಲಯಕ್ಕೆ 8,243 ಪುಸ್ತಕ: ಸುರೇಶ್ ಕುಮಾರ್

ಬೆಂಗಳೂರು: ಮೈಸೂರಿನ ಕನ್ನಡ ಪುಸ್ತಕ ಪ್ರೇಮಿ ಸೈಯದ್ ಇಸಾಕ್ ಅವರ ಗ್ರಂಥಾಲಯ ಬೆಂಕಿಗೆ ಆಹುತಿಯಾಗಿರುವುದರಿಂದ, ಅದರ ಮರುಸ್ಥಾಪನೆಗೆ ಸಾರ್ವಜನಿಕ ಗ್ರಂಥಾಲಯ ಇಲಾಖೆ ವತಿಯಿಂದ 8,243 ಪುಸ್ತಕಗಳನ್ನು ದಾನ ರೂಪದಲ್ಲಿ ನೀಡಲಾಗುವುದು' ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ತಿಳಿಸಿದ್ದಾರೆ.

'ಗ್ರಂಥಾಲಯ ಬೆಂಕಿಗೆ ಆಹುತಿಯಾದ ಸುದ್ದಿ ತಿಳಿದ ತಕ್ಷಣವೇ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕರಿಗೆ ಇಲಾಖೆಯಿಂದ ಪುಸ್ತಕಗಳನ್ನು ಒದಗಿಸಲು ಸೂಚಿಸಲಾಗಿತ್ತು. ಅಲ್ಲದೆ, ಸೈಯದ್ ಇಸಾಕ್ ಅವರ ಗ್ರಂಥಾಲಯಕ್ಕೆ ನೆರವು ಒದಗಿಸುವಂತೆ ಕೋಲ್ಕತ್ತದ ರಾಜಾರಾಂ ಮೋಹನರಾಯ್ ಗ್ರಂಥಾಲಯ ಪ್ರತಿಷ್ಠಾನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ' ಎಂದು ಸುರೇಶ್ ಕುಮಾರ್ ತಿಳಿಸಿದ್ದಾರೆ.

₹ 44.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಅಪರಾಧ ಪ್ರಕರಣದಲ್ಲಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದು ಕಳ್ಳತನ ಮಾಡುತ್ತಿದ್ದ ಆರೋಪದಡಿ ಮೂವರನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಸಿ.ಕೆ. ಅಚ್ಚುಕಟ್ಟು ನಿವಾಸಿ ಯೋಗೇಶ್ ಅಲಿಯಾಸ್ ಚಪಾತಿ (24), ಎಲೆಕ್ಟ್ರಾನಿಕ್ ಸಿಟಿಯ ಯಶವಂತ್ (೨೨) ಹಾಗೂ ಬನಶಂಕರಿಯ ಮೋಹನ್‌ಕುಮಾರ್ (29) ಬಂಧಿತರು. ಅವರಿಂದ ₹ 44.50 ಲಕ್ಷ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಮೂವರ ವಿರುದ್ಧವೂ ಪ್ರಕರಣಗಳು ದಾಖಲಾಗಿದ್ದವು. ಜೈಲಿನಲ್ಲೇ ಪರಿಚಿತರಾದ ಅವರು ಕಳ್ಳತನಕ್ಕೆ ಸಂಚು ರೂಪಿಸಿದ್ದರು. ಜೈಲಿನಿಂದ ಹೊರಬರುತ್ತಿದ್ದಂತೆ ಕೃತ್ಯ ಎಸಗಿದ್ದರು.'

'ಏಪ್ರಿಲ್ 17ರಂದು ಮಧ್ಯಾಹ್ನ ಎಸ್‌ಬಿಐ ಬ್ಯಾಂಕ್ ಕಾಲೊನಿಯಲ್ಲಿ ಆರೋಪಿಗಳು ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು. ಅವರನ್ನು ವಶಕ್ಕೆ ಪಡೆದು ಠಾಣೆಗೆ ಕರೆತಂದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು' ಎಂದೂ ಹೇಳಿದರು.

ಹನುಮ ಜಯಂತಿ: ಸರಳ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಇರುವುದರಿಂದ ನಗರದಾದ್ಯಂತ ಹನುಮಂತನ ದೇಗುಲಗಳಲ್ಲಿ ಮಂಗಳವಾರ ಸರಳವಾಗಿ ಹನುಮ ಜಯಂತಿ ನೆರವೇರಿತು.

ಹನುಮ ಜಯಂತಿ ಅಂಗವಾಗಿ ಪ್ರತಿ ವರ್ಷ ಹನುಮಂತನ ವಿಶೇಷ ಪೂಜೆ, ಮೆರವಣಿಗೆ, ಪಲ್ಲಕ್ಕಿ ಉತ್ಸವ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ವಿಜೃಂಭಣೆಯಿಂದ ನಡೆಯುತ್ತಿತ್ತು. ಕೊರೊನಾ ತಡೆಗಾಗಿ ದೇವಸ್ಥಾನಗಳಿಗೆ ಭಕ್ತರ ಪ್ರವೇಶ ನಿರ್ಬಂಧಿಸಿರುವುದರಿಂದ ಹನುಮಂತನಿಗೆ ಸಾಂಕೇತಿಕವಾಗಿ ಪೂಜೆ ಮಾತ್ರ ನಡೆಯಿತು.

ಜಯನಗರದ 5ನೇ ಬಡಾವಣೆಯಲ್ಲಿರುವ ನಂಜನಗೂಡು ರಾಘವೇಂದ್ರ ಸ್ವಾಮಿ ಮಠದಲ್ಲಿ ಹನುಮ ಜಯಂತಿ ಪ್ರಯುಕ್ತ ಹಿರಿಯ ವ್ಯವಸ್ಥಾಪಕ ಆರ್. ಕೆ.ವಾದೀಂದ್ರ ಆಚಾರ್ಯರ ನೇತೃತ್ವದಲ್ಲಿ ಆಂಜನೇಯಸ್ವಾಮಿಗೆ ಜೇನುತುಪ್ಪ ಸಹಿತ ಮಧು ಅಭಿಷೇಕ ಮಾಡಲಾಯಿತು.

'ಮಠಕ್ಕೆ ಭಕ್ತರ ಪ್ರವೇಶಕ್ಕೆ ಅವಕಾಶ ಇಲ್ಲದ ಕಾರಣ ಭಕ್ತರ ಹೆಸರುಗಳಿಂದ ಸಂಕಲ್ಪಿಸಿ, ಲೋಕ ಕಲ್ಯಾಣಕ್ಕಾಗಿ ಸಾಮೂಹಿಕ 'ಸತ್ಯನಾರಾಯಣ ವ್ರತ' ಪೂಜೆಯು ನೆರವೇರಿಸಲಾಯಿತು' ಎಂದು ಪುರೋಹಿತ ಕಿಶೋರ್ ಆಚಾರ್ಯ ತಿಳಿಸಿದರು.

ಆನ್‌ಲೈನ್ ಸಪ್ತಾಹ: ಹಿಂದೂ ಜನಜಾಗೃತಿ ಸಮಿತಿಯು ಹನುಮ ಜಯಂತಿ ಅಂಗವಾಗಿ ಆನ್‌ಲೈನ್ ಮೂಲಕ 'ಬಲೋಪಸನಾ ಸಪ್ತಾಹ' ಆಯೋಜಿಸಿತ್ತು. ಒಂದು ವಾರದಿಂದ ನಡೆದ ಸಪ್ತಾಹದಲ್ಲಿ ಪ್ರತಿದಿನ ಸಂಜೆ 7ರಿಂದ 8ಗಂಟೆಯವರೆಗೆ ನಡೆದ ಕಾರ್ಯಕ್ರಮದಲ್ಲಿ ಯುವಜನರು ಭಾಗವಹಿಸಿದ್ದರು.



ಜಯನಗರದ ನಂಜನಗೂಡು ರಾಘವೇಂದ್ರ ಸ್ವಾಮಿ ಮಠದಲ್ಲಿ ಆಂಜನೇಯಸ್ವಾಮಿಗೆ ಜೇನುತುಪ್ಪ ಅಭಿಷೇಕ ನಡೆಯಿತು

ರೌಡಿ ಕಾರ್ತಿಕ್ ಗಡಿಪಾರು

ಬೆಂಗಳೂರು: ಹಲಸೂರು ಠಾಣೆ ರೌಡಿ ಪಟ್ಟಿಯಲ್ಲಿ ಹೆಸರಿರುವ ಕಾರ್ತಿಕ್ ಅಲಿಯಾಸ್ ರಾಹುಲ್ (30) ಎಂಬಾತನನ್ನು ಗಡಿಪಾರು ಮಾಡಿ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಯೂ ಆಗಿರುವ ಪೂರ್ವ ವಿಭಾಗದ ಡಿಸಿಪಿ ಎಸ್.ಡಿ. ಶರಣಪ್ಪ ಆದೇಶ ಹೊರಡಿಸಿದ್ದು, ನಗರದಲ್ಲೇ ಇದು ಮೊದಲ ಪ್ರಕರಣವಾಗಿದೆ.

'ಅತ್ಯಾಚಾರ, ದರೋಡೆ, ಕೊಲೆ ಯತ್ನ, ಜೀವ ಬೆದರಿಕೆ, ಸರ್ಕಾರಿ ನೌಕರರ ಮೇಲೆ ಹಲ್ಲೆ ಪ್ರಕರಣದಲ್ಲಿ ಕಾರ್ತಿಕ್ ಆರೋಪಿ ಆಗಿದ್ದ. 10 ವರ್ಷಗಳಿಂದ ಅಪರಾಧ ಕೃತ್ಯ ಎಸಗುತ್ತಿದ್ದ ರೌಡಿ, ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ತರುತ್ತಿದ್ದ. ಆತನ ಗಡಿಪಾರಿಗೆ ಇನ್‌ಸ್ಪೆಕ್ಟರ್ ಪ್ರಸ್ತಾವ ಸಲ್ಲಿಸಿದ್ದರು' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪ್ರಸಕ್ತ ಇದೇ ಏಪ್ರಿಲ್ 26ರಿಂದ 2022ರ ಏಪ್ರಿಲ್ 26ರವರೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಗಡಿಪಾರು ಮಾಡಲಾಗಿದೆ' ಎಂದರು.

ಚುನಾವಣೆಗೆ ಅಕ್ರಮ ಹಣ

ಐಎಂಎ ಹಗರಣ: ಬೇಗ್ ವಿರುದ್ಧ ಪೂರಕ ದೋಷಾರೋಪ

ಪ್ರಜಾವಾಣಿ ವಾರ್ತೆ

ನವದೆಹಲಿ: ಐಎಂಎ ಬಹುಕೋಟಿ ವಂಚನೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಬಿಐ, ಕರ್ನಾಟಕದ ಮಾಜಿ ಸಚಿವ ರೋಷನ್ ಬೇಗ್ ವಿರುದ್ಧ ಮಂಗಳವಾರ ಪೂರಕ ದೋಷಾರೋಪ ಪಟ್ಟಿ ಸಲ್ಲಿಸಿದೆ. ಐಎಂಎ ಗ್ರೂಪ್‌ನಿಂದ ಅಕ್ರಮವಾಗಿ ಪಡೆದ ಹಣವನ್ನು ವಿಧಾನಸಭೆ ಚುನಾವಣೆಗೆ ಬಳಸಿದ್ದಾಗಿ ದೂರಿದೆ.

ಐಎಂಎ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಮನ್ಸೂರ್ ಖಾನ್ ಹಾಗೂ ಅವರ ಸಂಸ್ಥೆ, ಬೇಗ್ ಒಡೆತನದ ದಾನೀಶ್ ಪಬ್ಲಿಕೇಶನ್ಸ್ ಸಂಸ್ಥೆಗಳ ಹೆಸರನ್ನೂ ಬೆಂಗಳೂರಿನ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ರೋಷನ್ ಬೇಗ್ ಅವರು ವಿಧಾನಸಭೆ ಚುನಾವಣೆಯ ವೆಚ್ಚಕ್ಕಾಗಿ ಐಎಂಎ ನಿಧಿಯಿಂದ ಹಲವು ಕೋಟಿ ರೂಪಾಯಿಗಳನ್ನು ಪಡೆದಿದ್ದಾರೆ. ಅವರು ತಮ್ಮ ಸಂಸ್ಥೆಯ ನೌಕರರ ವೇತನ ಸೇರಿದಂತೆ ದಿನನಿತ್ಯದ ಖರ್ಚಿಗೆ ಈ ಹಣವನ್ನು ಬಳಸಿದ್ದಾರೆ ಎಂದು ಆರೋಪಿಸಲಾಗಿದೆ.

ಆರೋಪಿಯು ಜನಪ್ರಿಯತೆ ಹೆಚ್ಚಿಸಿಕೊಳ್ಳಲು ತನ್ನ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಇದೇ ಹಣವನ್ನು ವ್ಯಯಿಸಿದ ಆರೋಪಗಳಿವೆ ಎಂದು ಸಿಬಿಐ ವಕ್ತಾರ ಆರ್.ಸಿ. ಜೋಶಿ ತಿಳಿಸಿದ್ದಾರೆ.

ತನ್ನ ಅಕ್ರಮ ಚಟುವಟಿಕೆಗಳನ್ನು ಮುಂದುವರೆಸುವ ಉದ್ದೇಶದಿಂದ ಐಎಂಎ, ಸಿದ್ದರಾಮಯ್ಯ ನೇತೃತ್ವದ ಅಂದಿನ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದ ಬೇಗ್ ಅವರಿಗೆ ಈ ಹಣವನ್ನು ನೀಡಿತ್ತು ಎಂದು ಸಿಬಿಐ ದೂರಿದೆ.

ಹೂಡಿಕೆಗೆ ಉತ್ತಮ ಲಾಭ ನೀಡುವುದಾಗಿ ಆಮಿಷ ಒಡ್ಡಿ ಅಂದಾಜು ಒಂದು ಲಕ್ಷಕ್ಕೂ ಅಧಿಕ ಹೂಡಿಕೆದಾರರಿಂದ ₹ 4,000 ಕೋಟಿಯಷ್ಟು ಹಣವನ್ನು ಐಎಂಎ ಗ್ರೂಪ್ ಸಂಗ್ರಹಿಸಿದೆ. ಹಗರಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ 4 ಪ್ರಕರಣಗಳನ್ನು ದಾಖಲಿಸಿಕೊಂಡಿರುವ ಸಿಬಿಐ, ಈ ಹಿಂದೆಯೇ ಮನ್ಸೂರ್ ಖಾನ್, ಅವರ ಕಂಪನಿಯ ನಿರ್ದೇಶಕರು, ಕಂದಾಯ ಮತ್ತು ಪೊಲೀಸ್ ಅಧಿಕಾರಿಗಳು ಸೇರಿದಂತೆ 33 ಆರೋಪಿಗಳ ವಿರುದ್ಧ 3 ದೋಷಾರೋಪ ಪಟ್ಟಿ ಹಾಗೂ 3 ಪೂರಕ ದೋಷಾರೋಪ ಪಟ್ಟಿಗಳನ್ನು ಸಲ್ಲಿಸಿದೆ.

ಅಕ್ರಮ ಕಂಪನಿಗಳಿಗೆ ₹ 500 ಕೋಟಿವರೆಗೂ ದಂಡ • ಮಾಲೀಕರ ಲಾಬಿ ಕಾರಣವೇ?

ಅಕ್ರಮ ಗಣಿಗೆ ತಡೆ: ಭೂವಿಜ್ಞಾನಿ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಮಂಡ್ಯ: ಜಿಲ್ಲೆಯಲ್ಲಿ ಅಕ್ರಮ ಕಲ್ಲು ಗಣಿಗಾರಿಕೆ ತಡೆಯಲು ಯತ್ನಿಸಿದ್ದ, ಅಕ್ರಮ ಕಲ್ಲು ಗಣಿ ಕಂಪನಿಗಳಿಗೆ ₹500 ಕೋಟಿವರೆಗೂ ದಂಡ ವಿಧಿಸಿದ್ದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಹಿರಿಯ ಭೂವಿಜ್ಞಾನಿ ಟಿ.ವಿ.ಪುಷ್ಪಾ ಅವರನ್ನು ಸರ್ಕಾರ ಮಂಗಳವಾರ ವರ್ಗಾವಣೆ ಮಾಡಿದೆ.

ದಿಟ್ಟತನದಿಂದ ಕೆಲಸ ಮಾಡುತ್ತಿದ್ದ ಭೂವಿಜ್ಞಾನಿಯನ್ನು ಏಕಾಏಕಿ ವರ್ಗಾವಣೆ ಮಾಡಿರುವುದಕ್ಕೆ ವಿವಿಧ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗಣಿ ಮಾಲೀಕರ ಲಾಬಿಗೆ ಒಳಗಾಗಿರುವ ಸರ್ಕಾರ, ವಿಜಯಪುರ ಜಿಲ್ಲೆಗೆ ವರ್ಗಾವಣೆ ಮಾಡಿದೆ. ಅದೂ ಕೋವಿಡ್ ಸಂದರ್ಭದಲ್ಲಿ ವರ್ಗಾವಣೆ ಮಾಡಿರುವುದು ಅನುಮಾನಾಸ್ಪದವಾಗಿದೆ ಎಂದು ಆರೋಪಿಸಿದ್ದಾರೆ.

ಟಿ.ವಿ.ಪುಷ್ಪಾ

ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ದಶಪಥ ಕಾಮಗಾರಿಗಾಗಿ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಿದ ಆರೋಪದ ಮೇಲೆ ದಿಲೀಪ್ ಬಿಲ್ಡ್‌ಕಾನ್ ಕಂಪನಿಗೆ ಪುಷ್ಪಾ ₹102 ಕೋಟಿ ದಂಡ ವಿಧಿಸಿದ್ದರು. ಕೇಂದ್ರದ ಪರಿಸರ ಅನುಮೋದನೆ ಪಡೆಯದೆ ಕಲ್ಲು ಗಣಿಗಾರಿಕೆ ನಡೆಸಿದ್ದ ಕಂಪನಿ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗುವಂತೆ ಮಾಡಿದ್ದರು. ಜೊತೆಗೆ ಹಲವು ಅಕ್ರಮ ಗಣಿ ಮಾಲೀಕರಿಗೆ ಕೋಟ್ಯಂತರ ರೂಪಾಯಿ ದಂಡ ವಿಧಿಸಿ ಬಿಸಿ ಮುಟ್ಟಿಸಿದ್ದರು.

ಪುಷ್ಪಾ ಅವರು ಹಿರಿಯ ಭೂವಿಜ್ಞಾನಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಅಕ್ರಮ ಗಣಿಗಾರಿಕೆ ಪ್ರದೇಶಕ್ಕೆ ದಿಢೀರ್ ಭೇಟಿ ನೀಡಿ ಯಂತ್ರಗಳನ್ನು ಜಪ್ತಿ ಮಾಡಿದ್ದರು. ಗಣಿಗಾರಿಕೆ ನಿಷೇಧದ ನಡುವೆಯೂ ರಾತ್ರಿ ವೇಳೆ ಗಣಿ ಚಟುವಟಿಕೆ ನಡೆಸುತ್ತಿದ್ದ ಗಣಿ ಮಾಲೀಕರ ವಿರುದ್ಧ ಪ್ರಕರಣ ದಾಖಲು ಮಾಡಿದ್ದರು. ಗಣಿಗಾರಿಕೆ ನಿಷೇಧ ಇದ್ದಾಗ ನಿಷೇಧಾಜ್ಞೆ ಕಟ್ಟುನಿಟ್ಟಾಗಿ ಜಾರಿಗೊಳಿಸಿ ಕ್ರಮ ಕೈಗೊಂಡಿದ್ದರು. ಪೊಲೀಸ್ ಚೆಕ್‌ಪೋಸ್ಟ್ ಮೀರಿ ಹೋಗುತ್ತಿದ್ದ ಜಲ್ಲಿ ಲಾರಿಗಳನ್ನು ತಡೆಯುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಹುಣಸೋಡು ಸ್ಫೋಟದ ನಂತರ ಅಪಾರ ಪ್ರಮಾಣದ ಅಕ್ರಮ ಸ್ಫೋಟಕಗಳನ್ನು ವಶಪಡಿಸಿಕೊಂಡಿದ್ದರು. ಮನೆ, ಆಲೆಮನೆ, ತೋಟಗಳಲ್ಲಿ ಸಂಗ್ರಹಿಸಿಟ್ಟಿದ್ದ ಜಿಲೆಟಿನ್ ಕಡ್ಡಿಗಳನ್ನು ವಶಕ್ಕೆ ಪಡೆದಿದ್ದರು. ಗಣಿ ಮಾಲೀಕರು ಹಲವು ವರ್ಷಗಳಿಂದ ಬಾಕಿ ಉಳಿಸಿಕೊಂಡಿದ್ದ ರಾಜಧನ ವಸೂಲಿಗೆ ಯತ್ನಿಸಿದ್ದರು.

ಪಾಂಡವಪುರ ತಾಲ್ಲೂಕು ಬೇಬಿಬೆಟ್ಟದಲ್ಲಿ ಕಲ್ಲು ಗಣಿ ನಷ್ಟದ ಸರ್ವೆಗೆ ಡ್ರೋನ್ ಕ್ಯಾಮೆರಾ ಬಳಸುವುದಕ್ಕೆ ಸರ್ಕಾರದಿಂದ ವಿಶೇಷ ಅನುಮತಿ ಪಡೆದಿದ್ದರು. ಡ್ರೋನ್ ಕ್ಯಾಮೆರಾ ಸರ್ವೆ ಆರಂಭವಾಗುವ ಮೊದಲೇ ಪುಷ್ಪಾ ಅವರ ವರ್ಗಾವಣೆಯಾಗಿದೆ.

'ಅರಣ್ಯ ಪ್ರದೇಶ, ಗೋಮಾಳದಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದ ಮಾಲೀಕರ ವಿರುದ್ಧ ಪುಷ್ಪಾ ಕ್ರಮಕ್ಕೆ ಮುಂದಾಗಿದ್ದರು. ಇದನ್ನು ಸಹಿಸದ ಗಣಿ ಮಾಲೀಕರು ಸರ್ಕಾರದ ಮೇಲೆ ಒತ್ತಡ ತಂದು ವರ್ಗಾವಣೆ ಮಾಡಿಸಿದ್ದಾರೆ' ಎಂದು ಆರ್‌ಟಿಐ ಕಾರ್ಯಕರ್ತ ಕೆ.ಆರ್. ರವೀಂದ್ರ ದೂರಿದರು.

ನೆರೆ ರಾಜ್ಯಗಳ ಪಾಲಾದ ಆಕ್ಸಿಜನ್ ಕಾನ್ಸನ್‌ಟ್ರೇಟರ್ • ಚೀನಾದತ್ತ ಮುಖ ಮಾಡಿದ ಕರ್ನಾಟಕ

ಆಮ್ಲಜನಕ ಉತ್ಪಾದನಾ ಯಂತ್ರಗಳಿಗೆ ಭಾರಿ ಬೇಡಿಕೆ!

• ಎಸ್ ರವಿಪ್ರಕಾಶ್

ಬೆಂಗಳೂರು: ಸಾಮಾನ್ಯ ವಾತಾವರಣದಲ್ಲಿರುವ ಗಾಳಿಯನ್ನು ಹೀರಿ ಶುದ್ಧ ವೈದ್ಯಕೀಯ ಆಮ್ಲಜನಕವನ್ನು ಕೊಡುವ 'ಆಕ್ಸಿಜನ್ ಕಾನ್ಸನ್‌ಟ್ರೇಟರ್'ಗಳಿಗೆ ಭಾರಿ ಬೇಡಿಕೆ ಸೃಷ್ಟಿಯಾಗಿದ್ದು, ಇದರ ಪೂರೈಕೆಗೆ ಚೀನಾದತ್ತ ಮುಖ ಮಾಡಿ ನಿಲ್ಲುವ ಸ್ಥಿತಿ ಸೃಷ್ಟಿಯಾಗಿದೆ.

ಕೋವಿಡ್ ಎರಡನೇ ಅಲೆ ಆರಂಭವಾಗುತ್ತಿದ್ದಂತೆ ಮಹಾರಾಷ್ಟ್ರ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಗುಜರಾತ್ ರಾಜ್ಯಗಳಿಗೆ ಬೆಂಗಳೂರಿನಿಂದಲೇ ಸಾವಿರಾರು 'ಆಕ್ಸಿಜನ್ ಕಾನ್ಸಂಟ್ರೇಟರ್'ಗಳು ಮಾರಾಟವಾದವು. ಇದರ ಪರಿಣಾಮ ಕರ್ನಾಟಕದಲ್ಲಿ ಎರಡನೇ ಅಲೆ ಆರಂಭವಾಗುವ ವೇಳೆಗೆ ಇಲ್ಲಿ ಆಕ್ಸಿಜನ್ ಕಾನ್ಸನ್‌ಟ್ರೇಟರ್‌ಗಳ ಲಭ್ಯತೆ ಇಲ್ಲದಲಿಲ್ಲ.

ಬಹುತೇಕ ಎಲ್ಲ ಪ್ರತಿಷ್ಠಿತ ಬ್ರ್ಯಾಂಡ್‌ಗಳ ಕಾನ್ಸನ್‌ಟ್ರೇಟರ್‌ಗಳ ಅಭಾವ ಸೃಷ್ಟಿಯಾಗಿದೆ. ಇದರ ಲಾಭ ಪಡೆದು ಸ್ಥಳೀಯವಾಗಿ ತಯಾರಾಗುವ ಕಾನ್ಸನ್‌ಟ್ರೇಟರ್‌ಗಳನ್ನು ಎರಡು ಪಟ್ಟು ಬೆಲೆಗೆ ಮಾರಾಟ ಮಾಡಲಾಗುತ್ತಿದೆ. ಇದರಲ್ಲಿ ವೈದ್ಯಕೀಯ ಆಮ್ಲಜನಕದ ಗುಣಮಟ್ಟದ ಖಾತರಿ ಇರುವುದಿಲ್ಲ ಎನ್ನುತ್ತಾರೆ ತಜ್ಞರು.

'ಪ್ರಜಾವಾಣಿ' ಜತೆ ಮಾತನಾಡಿದ ಆಕ್ಸಿಜನ್ ಕಾನ್ಸನ್‌ಟ್ರೇಟರ್‌ಗಳ ಆಮದು ಕಂಪನಿ 'ಮೆಡಿಕ್ವಿಪ್'ನ ಸಹ ಸಂಸ್ಥಾಪಕ ಸುಹಾಸ್, 'ಈ ಸಾಧನಗಳಿಗೆ ದೇಶ ವ್ಯಾಪಿ ವಿಪರೀತ ಬೇಡಿಕೆ ಬಂದಿದೆ. ಎರಡನೇ ಅಲೆ ಆರಂಭವಾಗುವ ಮೊದಲು ಅಂದರೆ ನವೆಂಬರ್ ವೇಳೆ ನಮ್ಮ ಬಳಿ ಜರ್ಮನ್ ತಂತ್ರಜ್ಞಾನದ ಆಕ್ಸಿ-ಮೆಡ್ ಬ್ರ್ಯಾಂಡ್‌ನ 2,500 ಕಾನ್ಸನ್‌ಟ್ರೇಟರ್‌ಗಳಿಗೂ ಹೆಚ್ಚು ಸ್ಟಾಕ್ ಇತ್ತು. ಎರಡನೇ ಅಲೆ ಶುರುವಾಗುತ್ತಿದ್ದಂತೆ ಮಹಾರಾಷ್ಟ್ರ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಗುಜರಾತ್‌ಗಳಿಗೆ ಎರಡೇ ದಿನಗಳಲ್ಲಿ ಅಷ್ಟೂ ಯಂತ್ರಗಳು ಮಾರಾಟವಾದವು' ಎಂದು ಹೇಳಿದರು.

ಆಕ್ಸಿಜನ್ ಕಾನ್ಸಂಟ್ರೇಟರ್

ಪ್ರಜಾವಾಣಿ ವಿಶೇಷ

> **ಕಾನ್ಸಂಟ್ರೇಟರ್‌ಗಳು ಜರ್ಮನ್ ತಂತ್ರಜ್ಞಾನವಾಗಿದ್ದು, ಚೀನಾ ಅಸೆಂಬಲ್ ಮಾಡಿ ಕಳಿಸುತ್ತದೆ. ಒಂದು ದಿನಕ್ಕೆ 800 ಕಾನ್ಸಂಟ್ರೇಟರ್ ತಯಾರಿಕೆ ಮಾಡಲು ಸಾಧ್ಯ**
> **ಸುಹಾಸ್,** ಮೆಡಿಕ್ವಿಪ್ ಸಹ ಸಂಸ್ಥಾಪಕ

ಹಿಂದೆ ಈ ಕಾನ್ಸನ್‌ಟ್ರೇಟರ್‌ಗಳನ್ನು ಸಿಪಿಡಿ ಅಂದರೆ ಶ್ವಾಸಕೋಶದ ತೊಂದರೆಗಳಿಗೆ ಬಳಸಲಾಗುತ್ತಿತ್ತು. ಕೋವಿಡ್ ಬಂದ ಬಳಿಕ ಎಲ್ಲ ಸಾಧನಗಳೂ ಕೋವಿಡ್ ರೋಗಿಗಳಿಗೇ ಬಳಕೆ ಆಗುತ್ತಿದೆ. ಇವುಗಳನ್ನು ಚೀನಾದಿಂದ ಆಮದು ಮಾಡಿಕೊಳ್ಳಬೇಕು. ವಿಶ್ವ ವ್ಯಾಪಿ ಬೇಡಿಕೆ ಹೆಚ್ಚಿರುವುದರಿಂದ ಪ್ರತಿನಿತ್ಯ ಪ್ರತಿ ಆಮದುದಾರನಿಗೆ 200 ರಿಂದ 300 ಕಾನ್ಸನ್‌ಟ್ರೇಟರ್‌ಗಳು ಮಾತ್ರ ಆಮದಾಗುತ್ತಿವೆ ಎಂದು ಹೇಳಿದರು.

'ನಮ್ಮ ಬಳಿ ಅಲ್ಪ ಪ್ರಮಾಣದಲ್ಲಿದ್ದ 200 ಕ್ಕೂ ಹೆಚ್ಚು ಕಾನ್ಸನ್‌ಟ್ರೇಟರ್‌ಗಳನ್ನು ಕರ್ನಾಟಕದಲ್ಲಿ ಮಾರಾಟ ಮಾಡಲಾಗಿದೆ. ಸುಸ್ಥಿತಿಯಲ್ಲಿದ್ದ ಕೆಲವು ಹಳೆ ಸಾಧನಗಳನ್ನು ಅಗತ್ಯ ಇರುವ ರೋಗಿಗಳಿಗೆ ಬಳಸಲು ದಾನ ಮಾಡಿದ್ದೇವೆ. ಬೆಳಿಗ್ಗೆಯಿಂದ ರಾತ್ರಿವರೆಗೆ ಬೇಡಿಕೆಯ ಕರೆಗಳು ಬರುತ್ತಿವೆ' ಎಂದು ಸುಹಾಸ್ ತಿಳಿಸಿದರು.

'ಹೊಸದಾಗಿ 4,000 ಸಾಧನಗಳಿಗೆ ಬೇಡಿಕೆ ಸಲ್ಲಿಸಲಾಗಿದೆ. ಅಲ್ಲಿಂದ ವಿಶೇಷ ಕಾರ್ಗೋ ವಿಮಾನಗಳ ಮೂಲಕ ತರಿಸುವ ವ್ಯವಸ್ಥೆಯಾಗಿದೆ' ಎಂದು ಅವರು ತಿಳಿಸಿದರು.

ಕಾರ್ಯ ವಿಧಾನ ಹೀಗೆ...

ಕಾನ್ಸನ್‌ಟ್ರೇಟರ್‌ಗಳು ವಾತಾವರಣದಲ್ಲಿನ ಗಾಳಿಯನ್ನು ಹೀರಿ ಅದರಲ್ಲಿರುವ ಆಮ್ಲಜನಕ ಮತ್ತು ನೈಟ್ರೋಜನ್ ಅನ್ನು ಪ್ರತ್ಯೇಕಿಸಿ, ಶುದ್ಧ ವೈದ್ಯಕೀಯ ಆಮ್ಲಜನಕ ನೀಡುತ್ತದೆ.

ಸಿಲಿಂಡರ್‌ನಂತೆ ಪದೇ ಪದೇ ರೀಫಿಲ್ ಮಾಡಬೇಕಾಗಿಲ್ಲ. ಪ್ಲಗ್ ಹಾಕಿ ಸ್ವಿಚ್ ಆನ್ ಮಾಡಿದರೆ ಸಾಕು. ರೋಗಿಯ ಮೂಗಿನ ಮೂಲಕ ನಳಿಕೆಯಲ್ಲಿ ವೈದ್ಯರು ನಿಗದಿ ಮಾಡಿದಷ್ಟು ಪ್ರಮಾಣದಲ್ಲಿ ಆಮ್ಲಜನಕ ಹರಿಸಬಹುದು. ದೇಶ ವಿದೇಶಗಳಲ್ಲಿ ಆಕ್ಸಿಜನ್ ಬಾರ್‌ಗಳಲ್ಲಿ ಇವುಗಳನ್ನು ಬಳಸಲಾಗುತ್ತದೆ. 5 ಲೀಟರ್ ಕಾನ್ಸನ್‌ಟ್ರೇಟರ್ ಬೆಲೆ ಸುಮಾರು ₹45 ಸಾವಿರ. ಸಣ್ಣ ಆಸ್ಪತ್ರೆಗಳು, ನರ್ಸಿಂಗ್ ಹೋಂ ಅಥವಾ ಮನೆಗಳಲ್ಲೂ ಇಟ್ಟುಕೊಳ್ಳಬಹುದು. ಶ್ವಾಸಕೋಶಗಳಿಗೆ ಸಂಬಂಧಿಸಿದ (Chronic Obstructive Pulmonary Disease, COPD) ಕಾಯಿಲೆಗಳಿಗಾಗಿ ಇದನ್ನು ಬಳಸಲಾಗುತ್ತಿದೆ.

'ಸಾರಿಗೆ ನೌಕರರ ಅಮಾನತು: ಎರಡು ವಾರದಲ್ಲಿ ತೀರ್ಮಾನಿಸಿ'

ಬೆಂಗಳೂರು: ಮುಷ್ಕರದಲ್ಲಿ ಭಾಗಿಯಾಗಿದ್ದ ಸಾರಿಗೆ ನೌಕರರ ಅಮಾನತು ವಿಷಯದ ಸಂಬಂಧ ಎರಡು ವಾರದಲ್ಲಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು ಎಂದು ಸಾರಿಗೆ ನಿಗಮಗಳಲ್ಲಿನ ಮೇಲ್ಮನವಿ ಪ್ರಾಧಿಕಾರಗಳಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

'ಸಾಂಕ್ರಾಮಿಕ ರೋಗದ ನಡುವೆ ಬಸ್‌ಗಳ ಕಾರ್ಯಾಚರಣೆ ಸಮರ್ಪಕವಾಗಿ ನಿರ್ವಹಣೆಯಾಗುವ ಉದ್ದೇಶದಿಂದ ಸರ್ಕಾರ ಮತ್ತು ನೌಕರರ ಕೂಟದ ನಡುವೆ ಮಾತುಕತೆ ಏರ್ಪಡುವುದು ಅಗತ್ಯ' ಎಂದು ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

ನೌಕರರ ಮುಷ್ಕರದ ವಿಷಯದಲ್ಲಿ ಮಧ್ಯಪ್ರವೇಶ ಕೋರಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಯನ್ನು ಪೀಠ ನಡೆಸಿತು. 'ನ್ಯಾಯಾಲಯದ ನಿರ್ದೇಶನದ ಮೇರೆಗೆ ಮುಷ್ಕರ ವಾಪಸ್ ಪಡೆದ ಬಳಿಕವೂ ವರ್ಗಾವಣೆ ಮಾಡಲಾಗಿದೆ' ಎಂದು ನೌಕರರ ಪರ ವಕೀಲರು ಹೇಳಿದರು.

'ಅಮಾನತುಗೊಂಡಿರುವ ಎಲ್ಲಾ ನೌಕರರು ಮನವಿಗಳನ್ನು ನಿಗಮಗಳಿಗೆ ಸಲ್ಲಿಸಬೇಕಾಗುತ್ತದೆ. ನಿಗಮಗಳು ಅವುಗಳನ್ನು ಮೇಲ್ಮನವಿ ಅಧಿಕಾರಿಗಳಿಗೆ ರವಾನಿಸಬೇಕು. ವರ್ಗಾವಣೆಗೆ ಸಂಬಂಧಿಸಿದ ಎಲ್ಲಾ ಮನವಿಗಳನ್ನು 10 ದಿನಗಳ ಅವಧಿಯಲ್ಲಿ ಪರಿಗಣಿಸಬೇಕು. ನೌಕರರ ವಜಾ ಪ್ರಶ್ನಿಸಿರುವ ಮನವಿಗಳನ್ನು 2 ತಿಂಗಳಲ್ಲಿ ಇತ್ಯರ್ಥಪಡಿಸಬೇಕು. ಬೇಡಿಕೆ ವಿಷಯದಲ್ಲಿ ಸರ್ಕಾರ ಮತ್ತು ನೌಕರರ ನಡುವೆ ಮಾತುಕತೆ ಫಲಿಸದಿದ್ದರೆ ಮಧ್ಯಸ್ಥಿಕೆ ವಹಿಸಲು ನಿವೃತ್ತ ನ್ಯಾಯಾಧೀಶರನ್ನು ನೇಮಕ ಮಾಡಲಾಗುವುದು ಎಂದು ಪೀಠ ತಿಳಿಸಿತು.

ಅಣ್ಣನಾಗಿ ಅವನನ್ನು ಉಳಿಸಿಕೊಂಡ ಕಷ್ಟ ದೇವರಿಗೆ ಗೊತ್ತು: ಜಗ್ಗೇಶ್

ನಟ ಕೋಮಲ್ ಆರೋಗ್ಯ ಸುಧಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ಸಹೋದರ, ನಟ ಕೋಮಲ್ ಅವರಿಗೂ ಕೋವಿಡ್–19 ದೃಢಪಟ್ಟಿತ್ತು. ಸೋಂಕಿನಿಂದ ಅವರ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು. ಇದೀಗ ಆತನ ಆರೋಗ್ಯ ಸುಧಾರಿಸಿದೆ' ಎಂದು ನಟ ಜಗ್ಗೇಶ್ ಟ್ವೀಟ್ ಮೂಲಕ ತಿಳಿಸಿದ್ದಾರೆ.

'ಚಿತ್ರರಂಗದಲ್ಲಿ ಸಂಕಷ್ಟ ಅನುಭವಿಸಿದ ಕೋಮಲ್ ಸ್ವಾಭಿಮಾನದಿಂದ ಬದುಕಲು ಬೆಂಗಳೂರಿನ ಕಾರ್ಪೊರೇಷನ್‌ನಲ್ಲಿ ಸ್ವಂತ ವ್ಯವಹಾರ ಶುರು ಮಾಡಿ ಯಶಸ್ವಿಯಾದ. ಆದರೆ ಇತ್ತೀಚೆಗೆ ತನಗೆ ಬರಬೇಕಾದ ಬಿಲ್‌ಗೆ ಅಲ್ಲಿನ ಕೆಲ ಲಂಚಬಾಕ ಅಧಿಕಾರಿಗಳು ಹಣಕ್ಕೆ ಪೀಡಿಸಿ ಅಲೆಸಿಬಿಟ್ಟರು. ಅದನ್ನು ಪಡೆಯಲು ದಿನ ಓಡಾಡುತ್ತಿದ್ದ ತಮ್ಮನಿಗೆ ಕೊರೊನಾ ಮಾರಿ ಮೈಸೇರಿ, ಆತನ ಆರೋಗ್ಯ ಸ್ಥಿತಿ ಗಂಭೀರವಾಗಿತ್ತು. ದೇವರಿಗೆ ಗೊತ್ತು, ನಾನು ಎಲ್ಲರಿಂದ ಮುಚ್ಚಿಟ್ಟು ಅಣ್ಣನಾಗಿ ಅವನ ಉಳಿಸಿಕೊಂಡ ಕಷ್ಟ. ಅವನಿಗೆ ಚಿಕಿತ್ಸೆ ನೀಡಿದ ಡಾ.ಮಧುಮತಿ, ನಾದಿನಿ ಡಾ.ಲಲಿತ ಹಾಗೂ ನರ್ಸ್‌ಗಳ ಪಾದಕ್ಕೆ ನನ್ನ ನಮನ' ಎಂದು ಟ್ವೀಟ್‌ನಲ್ಲಿ ಜಗ್ಗೇಶ್ ಭಾವುಕರಾಗಿ ಬರೆದುಕೊಂಡಿದ್ದಾರೆ.

ವೆಂಟಿಲೇಟರ್‌ನಲ್ಲಿ ನಟ ಕೋಮಲ್

ಕೋಮಲ್ ಆರೋಗ್ಯ ಗಂಭೀರವಾಗಿರುವ ಬಗ್ಗೆ ಜಗ್ಗೇಶ್ ಈವರೆಗೂ ಮಾಹಿತಿ ಹಂಚಿಕೊಂಡಿರಲಿಲ್ಲ. ಕೋಮಲ್ ಆರೋಗ್ಯ ಸುಧಾರಿಸಿದ ಬಳಿಕ ಅವರು ವೆಂಟಿಲೇಟರ್‌ನಲ್ಲಿ ಇರುವ ಚಿತ್ರವನ್ನೂ ಟ್ವೀಟ್ ಜೊತೆಗೆ ಅಪ್‌ಲೋಡ್ ಮಾಡಿದ್ದಾರೆ.

ಉಪಚುನಾವಣೆ: ಕೋವಿಡ್ ನಿಯಮ ಉಲ್ಲಂಘನೆಯ 61 ಪ್ರಕರಣ ದಾಖಲು

ರಾಯಚೂರು/ ಬೀದರ್: ವಿಧಾನಸಭೆ ಉಪ ಚುನಾವಣೆ ಸಮಯದಲ್ಲಿ ರಾಜಕಾರಣಿಗಳು ಕೋವಿಡ್ ನಿಯಮ ಉಲ್ಲಂಘಿಸಿದ್ದಕ್ಕಾಗಿ ಮಸ್ಕಿ ಕ್ಷೇತ್ರದಲ್ಲಿ 46 ಹಾಗೂ ಬಸವಕಲ್ಯಾಣ ಕ್ಷೇತ್ರದಲ್ಲಿ 15 ಪ್ರಕರಣಗಳು ದಾಖಲಾಗಿವೆ.

ಚುನಾವಣೆ ಅಧಿಸೂಚನೆಗೂ ಮುನ್ನ ಮಸ್ಕಿ ಪಟ್ಟಣದ ಭ್ರಮರಾಂಬ ದೇವಸ್ಥಾನ ಪಕ್ಕದ ಮೈದಾನದಲ್ಲಿ ಬಿಜೆಪಿಯಿಂದ ಬಹಿರಂಗ ಸಮಾವೇಶ ಆಯೋಜಿಸಲಾಗಿತ್ತು. ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಪಾಲ್ಗೊಂಡಿದ್ದರು. ಹೆಚ್ಚಿನ ಸಂಖ್ಯೆಯ ಜನರನ್ನು ಸೇರಿಸಿದ್ದಕ್ಕಾಗಿ ಬಿಜೆಪಿ ತಾಲ್ಲೂಕು ಘಟಕದ ಅಧ್ಯಕ್ಷ ಶಿವಪುತ್ರಪ್ಪ ಅರಳಿಹಳ್ಳಿ ಸೇರಿ ಕೆಲವು ಕಾರ್ಯಕರ್ತರ ವಿರುದ್ಧ ಮಸ್ಕಿ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಅಧಿಸೂಚನೆ ಬಳಿಕ ಅದೇ ಮೈದಾನದಲ್ಲಿ ಕಾಂಗ್ರೆಸ್ ಪಕ್ಷದಿಂದ ಬಹಿರಂಗ ಪ್ರಚಾರ ಸಮಾವೇಶ ಆಯೋಜಿಸಲಾಗಿತ್ತು. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿ ಹಲವು ಗಣ್ಯರು ಭಾಗವಹಿಸಿದ್ದರು. ಜನರನ್ನು ಸೇರಿಸಿದ್ದಕ್ಕಾಗಿ ಮಸ್ಕಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಪಾಟೀಲ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಪ್ರಚಾರದ ಸಂದರ್ಭದಲ್ಲಿ ಮಸ್ಕಿ ಪಟ್ಟಣದ ತೇರುಬೀದಿಯಲ್ಲಿ ಕಾಂಗ್ರೆಸ್, ಬಿಜೆಪಿಯಿಂದ ಪ್ರತ್ಯೇಕ ಸಾರ್ವಜನಿಕ ಸಭೆ ನಡೆದವು. ಬಳಗಾನೂರ, ತುರ್ವಿಹಾಳ, ಸಂತೆಕಲ್ಲೂರು, ಬಪ್ಪೂರು ಸೇರಿದಂತೆ ಹಲವು ಕಡೆಗಳಲ್ಲಿ ಬಹಿರಂಗ ಸಭೆ ನಡೆದವು.

ಕ್ಷೇತ್ರದಲ್ಲಿ ಕೋವಿಡ್ ನಿಯಮ ಉಲ್ಲಂಘನೆಯ ಒಟ್ಟಾರೆ 46 ಪ್ರಕರಣ ದಾಖಲಿಸಿ, ದಂಡವನ್ನೂ ವಸೂಲಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆದರೆ, ವಸೂಲಾದ ದಂಡದ ಮೊತ್ತದ ಬಗ್ಗೆ ಅವರು ಮಾಹಿತಿ ನೀಡಲಿಲ್ಲ.

ಬಸವಕಲ್ಯಾಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮಾಲಾ ನಾರಾಯಣರಾವ್ ಅವರ ವಿರುದ್ಧ ಎರಡು, ಅವರ ಪಕ್ಷದ ಕಾರ್ಯಕರ್ತರ ಮೇಲೆ ಐದು ಸೇರಿ ಕಾಂಗ್ರೆಸ್‌ನವರ ವಿರುದ್ಧ ಏಳು ಪ್ರಕರಣ ದಾಖಲಾಗಿವೆ.

ಬಿಜೆಪಿ ಬಸವಕಲ್ಯಾಣ ಬ್ಲಾಕ್ ಅಧ್ಯಕ್ಷ ಅಶೋಕ ವಕಾರೆ ಹಾಗೂ ಕಾರ್ಯಕರ್ತರು ಸೇರಿ ಆರು ಪ್ರಕರಣ, ಜೆಡಿಎಸ್‌ನ ಕಾರ್ಯಕರ್ತ ಷರೀಫ್ ಪಾಷಾ ಹಾಗೂ ಎಐಎಂಐಎಂ ಕಾರ್ಯಕರ್ತ ಮಹಮ್ಮದ್ ಅಲಿ ಹಕೀಮ್ ವಿರುದ್ಧ ತಲಾ ಒಂದು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸೋಮೇಶ್ವರದಲ್ಲಿ ಬ್ರಹ್ಮರಥೋತ್ಸವ; ಸಾವಿರಾರು ಜನ ಭಾಗಿ

ನಿಯಮ ಉಲ್ಲಂಘಿಸಿದವರ ವಿರುದ್ಧ ಕ್ರಮ: ಡಿಸಿ

ಪ್ರಜಾವಾಣಿ ವಾರ್ತೆ

ಉಳ್ಳಾಲ: ಸೋಮೇಶ್ವರದ ಸೋಮನಾಥೇಶ್ವರ ದೇವಸ್ಥಾನದಲ್ಲಿ ಸೋಮವಾರ ರಾತ್ರಿ ಬ್ರಹ್ಮ ರಥೋತ್ಸವ, ಸುಡುಮದ್ದು ಪ್ರದರ್ಶನ ನಡೆದಿದ್ದು, ಭಾರೀ ಸಂಖ್ಯೆಯಲ್ಲಿ ಜನ ಜಮಾಯಿಸಿದ್ದರು.

ಕೋವಿಡ್–19 ಮಾರ್ಗಸೂಚಿಯ ಉಲ್ಲಂಘನೆ ಮಾಡಿರುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ.

'ಸರ್ಕಾರದ ನಿರ್ದೇಶನಕ್ಕೆ ವಿರುದ್ಧವಾಗಿ ಬಹಳಷ್ಟು ಜನರನ್ನು ಸೇರಿಸಿಕೊಂಡು ಧಾರ್ಮಿಕ ಆಚರಣೆಗಳನ್ನು ನಡೆಸಲಾಗಿದೆ. ಈಗಾಗಲೇ ಆಡಳಿತ ಸಮಿತಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆದರೂ ಸಾವಿರಾರು ಮಂದಿಯನ್ನು ಸೇರಿಸಿ ಬ್ರಹ್ಮ ರಥೋತ್ಸವವನ್ನು ನಡೆಸಲಾಗಿದೆ. ವರದಿ ತಯಾರಿಸಿ, ಪೊಲೀಸ್ ಇಲಾಖೆಗೆ ಸಲ್ಲಿಸುವಂತೆ ಉಪ ವಿಭಾಗಾಧಿಕಾರಿಗೆ ಸೂಚಿಸಿದ್ದೇನೆ' ಎಂದು ಅವರು ಹೇಳಿದ್ದಾರೆ.

'ಕಾಯ್ದೆಯಡಿ 5 ವರ್ಷಗಳ ಜಾಮೀನು ರಹಿತ ಶಿಕ್ಷೆ ಇದೆ. ಎರಡನೇ ಬಾರಿ ನೋಟಿಸ್ ನೀಡಿದ ನಂತರವೂ ಕಾರ್ಯಕ್ರಮ ನಡೆಸಿದ ಸೋಮೇಶ್ವರ ಆಡಳಿತ ಸಮಿತಿ ವಿರುದ್ಧ ಹ್ಯಾಬಿಚುವಲ್ ಅಫೆಂಡರ್ಸ್ ಆಕ್ಟ್ ಅಡಿ ಮತ್ತೆ ಪ್ರಕರಣ ದಾಖಲಿಸಲು ಅವಕಾಶವಿದೆ. ಪೊಲೀಸ್ ಕಮಿಷನರ್ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ತಿಳಿಸಿದ್ದಾರೆ.

ಸೋಮನಾಥೇಶ್ವರ ದೇವಸ್ಥಾನದಲ್ಲಿ ಸೋಮವಾರ ರಾತ್ರಿ ನಡೆದ ಬ್ರಹ್ಮ ರಥೋತ್ಸವದಲ್ಲಿ ಪಾಲ್ಗೊಂಡಿದ್ದ ಜನ.

ಹವಾಮಾನ ನ್ಯಾಯಕ್ಕಾಗಿ ಹೋರಾಟ

ವನ್ಯಾಗೆ ಗ್ಲೋಬಲ್ ಸಿಟಿಜನ್ ಸಂಸ್ಥೆ ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಶಿರಸಿ: ತಾಲ್ಲೂಕಿನ ಭೈರುಂಬೆಯ ಶಾರದಾಂಬಾ ಆಂಗ್ಲ ಮಾಧ್ಯಮ ಪ್ರೌಢ ಶಾಲೆಯ 9ನೇ ತರಗತಿ ವಿದ್ಯಾರ್ಥಿನಿ ವನ್ಯಾ ಸಾಯಿಮನೆ ಅವರ ಪರಿಸರ ಕಾಳಜಿಯನ್ನು ಅಮೆರಿಕದ ಗ್ಲೋಬಲ್ ಸಿಟಿಜನ್ ಸಂಸ್ಥೆ ಶ್ಲಾಘಿಸಿದೆ.

ಈಕೆಯನ್ನು ಜಾಗತಿಕ ಮಟ್ಟದಲ್ಲಿ ಹವಾಮಾನ ನ್ಯಾಯಕ್ಕಾಗಿ ಹೋರಾಡುವ ಐವರು ಪ್ರಮುಖ ಮಹಿಳೆ, ಬಾಲಕಿಯರ ಸಾಲಿಗೆ ಸೇರಿಸಿದೆ. ವನ್ಯಾ, ಪರಿಸರ ತಜ್ಞ ಬಾಲಚಂದ್ರ ಸಾಯಿಮನೆ ಅವರ ಪುತ್ರಿ. ಬಾಲ್ಯದಿಂದಲೇ ಪರಿಸರ, ಹವಾಮಾನದ ಕುರಿತು ಕಾಳಜಿ ಹೊಂದಿರುವ ಈಕೆ ತನ್ನದೇ ಸ್ವಂತ ಬ್ಲಾಗ್ ಬಳಸಿ ಪರಿಸರ ಸಂಬಂಧಿ ಲೇಖನ ಬರೆಯುತ್ತಿದ್ದಾಳೆ. ಹವಾ ಮಾನ ಬಿಕ್ಕಟ್ಟಿನ ಕುರಿತು ಲೇಖನ ಬರೆದಿರುವ ಜತೆಗೆ, ಪಶ್ಚಿಮ ಘಟ್ಟ ಎದುರಿಸುತ್ತಿರುವ ಅಪಾಯದ ಕುರಿತು ಧ್ವನಿ ಎತ್ತಿದ್ದು ಉಲ್ಲೇಖನೀಯ ಎಂಬುದಾಗಿ ಗ್ಲೋಬಲ್ ಸಿಟಿಜನ್ ಸಂಸ್ಥೆ ತನ್ನ ವೆಬ್‌ಸೈಟ್‌ನಲ್ಲಿ ಶ್ಲಾಘಿಸಿದೆ.

ನಿಧನ ವಾರ್ತೆ

ಮಾಜಿ ಸಂಸದ ಎಸ್‌.ಬಿ. ಸಿದ್ನಾಳ



ಬೆಳಗಾವಿ: ಜಿಲ್ಲೆಯ ಹಿರಿಯ ರಾಜಕಾರಣಿ, ಬೆಳಗಾವಿ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಎಸ್.ಬಿ. ಸಿದ್ನಾಳ (85) ಅವರು ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು (ಉದ್ಯಮಿಗಳಾದ ಶಶಿಕಾಂತ ಸಿದ್ನಾಳ ಹಾಗೂ ಶಿವಕಾಂತ ಸಿದ್ನಾಳ), ಪುತ್ರಿ, ಇಬ್ಬರು ಸೊಸೆಯಂದಿರು ಹಾಗೂ ಮೊಮ್ಮಕ್ಕಳು ಇದ್ದಾರೆ.

ಅಂತ್ಯಕ್ರಿಯೆಯು ಬೈಲಹೊಂಗಲ ತಾಲ್ಲೂಕು ಸಾಣಿಕೊಪ್ಪದ ತೋಟದಲ್ಲಿ ಸಂಜೆ ನೆರವೇರಿತು.

ಬೈಲಹೊಂಗಲ ತಾಲ್ಲೂಕಿನ ಸಂಪಗಾಂವದವರಾದ ಅವರು ಇಲ್ಲಿನ ಮಹಾಂತೇಶ ನಗರದಲ್ಲಿ ವಾಸವಿದ್ದರು. ಸತತ 4 ಬಾರಿ ಅಂದರೆ 1980, 1984, 1989 ಹಾಗೂ 1991ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಗೆದ್ದು ಸಂಸದರಾಗಿದ್ದರು. ಕ್ಷೇತ್ರದಲ್ಲಿ ಮೊದಲ ಹ್ಯಾಟ್ರಿಕ್ ಗೆಲುವಿನ ದಾಖಲೆ ಇವರ ಹೆಸರಲ್ಲಿದೆ.

80ರ ದಶಕದಲ್ಲಿ ಕಾಂಗ್ರೆಸ್‌ನಲ್ಲಿ ಪ್ರಭಾವಿ ನಾಯಕರಾಗಿದ್ದರು. ಇಂದಿರಾ ಗಾಂಧಿ ಹಾಗೂ ಎಸ್. ನಿಜಲಿಂಗಪ್ಪ ಅವರ ಭಿನ್ನಮತದಿಂದ ಪಕ್ಷ ಇಬ್ಭಾಗವಾದಾಗ ಸಿದ್ನಾಳ ಅವರು ಇಂದಿರಾ ಗಾಂಧಿ ಅವರ ಜೊತೆ ಗುರುತಿಸಿಕೊಂಡಿದ್ದರು.

ಆದರೆ, ಕೇಂದ್ರ ಸಚಿವರಾಗುವ ಅವಕಾಶ ಅವರಿಗೆ ಸಿಗಲಿಲ್ಲ,

ಇದು ರಾಜಕಾರಣ ಮಾಡುವ ಸಮಯವೇ: ಸಿ.ಟಿ.ರವಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ರಾಜ್ಯಪಾಲರು ಸಭೆ ನಡೆಸಲು ಮುಂದಾದರೆ ಅವರಿಗೆ ಸಾಂವಿಧಾನಿಕ ಅಧಿಕಾರ ಇಲ್ಲ ಎನ್ನುತ್ತೀರಿ. ಪ್ರಧಾನಿ ಸಭೆ ಕರೆದರೆ ಅವರೇನು 'ಹೆಡ್ ಮಾಸ್ತ್ರಾ' ಎಂದು ಹೇಳುತ್ತೀರಿ. ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರೇ ನಿಮಗೆ ಏನಾಗಿದೆ? ಇದು ರಾಜಕಾರಣ ಮಾಡುವ ಸಮಯವೇ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಪ್ರಶ್ನಿಸಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇದು ಕರ್ತವ್ಯ ನಿರ್ವಹಿಸುವ ಸಂದರ್ಭ, ಅಧಿಕಾರ ಚಲಾಯಿಸುವ ಸಂದರ್ಭವಲ್ಲ. ಕೋವಿಡ್ ಎರಡನೇ ಅಲೆಯಲ್ಲಿ ಏಪ್ರಿಲ್ ಮೊದಲ ವಾರ ಏಕಾಏಕಿ ಪ್ರಕರಣಗಳ ಸಂಖ್ಯೆ 15 ಪಟ್ಟು ಹೆಚ್ಚಾಗಿದೆ. ಹೀಗಾಗಬಹುದು ಎಂದು ಯಾರೂ ಊಹಿಸಿರಲಿಲ್ಲ. ವಿರೋಧ ಪಕ್ಷಗಳು ಕೋವಿಡ್ ವಿರುದ್ಧ ಹೋರಾಡುತ್ತಿರುವವರ ವಿರುದ್ಧ ಹೋರಾಡುವ ಸಣ್ಣತನ ಪ್ರದರ್ಶಿಸದೇ ಸಹಕಾರ ನೀಡಬೇಕು' ಎಂದು ಅವರು ಕೋರಿದರು.

'ಮಾರ್ಚ್‌ನಲ್ಲಿ ರಾಜಕಾರಣಿಗಳು, ಮಾಧ್ಯಮಗಳು ಎಲ್ಲರೂ ಸಿ.ಡಿ ಬಗ್ಗೆ ಚರ್ಚೆ ಮಾಡಿದರೇ ಹೊರತು ಕೋವಿಡ್ ಬಗ್ಗೆ ಮುಂಜಾಗ್ರತೆ ವಹಿಸುವ ಕುರಿತು ಯಾರೂ ಚರ್ಚಿಸಿಲ್ಲ. ಎರಡನೇ ಅಲೆ ಹೆಚ್ಚುತ್ತಿದೆ ಸರ್ಕಾರ ನಿಯಂತ್ರಣ ಹೇರಬೇಕು ಎಂದು ಮಾಧ್ಯಮಗಳು, ಪ್ರತಿ ಪಕ್ಷಗಳು ಸಹಿತ ಯಾರೂ ಒತ್ತಡ ಹೇರುವ ಕೆಲಸ ಮಾಡಲಿಲ್ಲ' ಸಿ.ಟಿ.ರವಿ ಅವರು ಹೇಳಿದರು.

'ಜನರ ಸಾವು, ನೋವಿಗೆ ಸರ್ಕಾರದ ನಿರ್ಲಕ್ಷ್ಯ ಕಾರಣ'

ಬೆಂಗಳೂರು: 'ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ವರದಿಯನ್ನು ರಾಜ್ಯ ಸರ್ಕಾರ ಸಂಪೂರ್ಣ ನಿರ್ಲಕ್ಷಿಸಿದ್ದು ಜನರ ಸಾವು, ನೋವು, ಸಂಕಟ, ಕಣ್ಣೀರಿಗೆ ಕಾರಣ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಕೇಂದ್ರ ಮತ್ತು ರಾಜ್ಯ ಸರ್ಕಾರ ತಮ್ಮ ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯತನದ ಬದಲಿಗೆ ಲಾಕ್‌ಡೌನ್ ಘೋಷಿಸಿ ದುಡಿಯುವ ವರ್ಗ ಮತ್ತು ಸಮುದಾಯಗಳನ್ನು ಹಸಿವಿಗೆ ದೂಡಿವೆ' ಎಂದರು.

'ಲಕ್ಷಾಂತರ ಮಂದಿ ಆರೋಗ್ಯ ಸವಲತ್ತು ಸಿಗದೆ ಸಾವು ಬದುಕಿನ ನಡುವೆ ಸೆಣಸುತ್ತಿದ್ದಾರೆ. ಇದರ ಸಂಪೂರ್ಣ ಹೊಣೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಹೊತ್ತುಕೊಳ್ಳಬೇಕು' ಎಂದರು.

'ರಾಜ್ಯ ಸರ್ಕಾರ ಎಲ್ಲದರಲ್ಲೂ ಸುಳ್ಳು ಹೇಳುತ್ತಿದೆ. ಸಾವಿನ ಸಂಖ್ಯೆಯನ್ನೂ ಮುಚ್ಚಿಡುತ್ತಿದೆ. ಸರ್ಕಾರದ ಲೆಕ್ಕಕ್ಕೂ, ಬಿಬಿಎಂಪಿ ನೀಡುವ ಲೆಕ್ಕಕ್ಕೂ, ಅಂಕಿ-ಸಂಖ್ಯೆ ಇಲಾಖೆಯ ಲೆಕ್ಕಕ್ಕೂ ಭಾರೀ ವ್ಯತ್ಯಾಸವಿದೆ. ಆ ಮೂಲಕ, ತನ್ನ ಲೋಪಗಳಿಗೆ ತೇಪೆ ಹಾಕಿಕೊಳ್ಳಲು ಸರ್ಕಾರ ಯತ್ನಿಸುತ್ತಿದೆ'' ಎಂದು ದೂರಿದರು.

ಸಿದ್ದರಾಮಯ್ಯ

'ತಜ್ಞ ವೈದ್ಯ ದೇವಿಪ್ರಸಾದ್ ಶೆಟ್ಟಿ ಅವರ ಪ್ರಕಾರ ಸೋಂಕಿತರ ಪ್ರಮಾಣ ಇನ್ನೂ ಐದು ಪಟ್ಟು ಹೆಚ್ಚಿದೆ. ಕೋವಿಡ್ ಪರೀಕ್ಷೆಗಳು ಕಡಿಮೆ ನಡೆಯುತ್ತಿರುವುದರಿಂದ ಪಾಸಿಟಿವ್ ಪ್ರಕರಣಗಳ ಪ್ರಮಾಣ ಕೂಡ ಕಡಿಮೆ ಇದೆ. ಹೀಗಾಗಿ, ಈಗಿರುವುದಕ್ಕಿಂತ ಐದು ಪಟ್ಟು ಹೆಚ್ಚು ಸೋಂಕಿತರು ಇರುವ ಸಾಧ್ಯತೆ ಇದೆ' ಎಂದು ಸಿದ್ದರಾಮಯ್ಯ ಆತಂಕ ವ್ಯಕ್ತಪಡಿಸಿದರು.

'ಆಕ್ಸಿಜನ್, ವೆಂಟಿಲೇಟರ್, ಬೆಡ್‌ಗಳು, ಆಸ್ಪತ್ರೆಗಳು, ಔಷಧಗಳು, ಲಸಿಕೆ, ರೆಮ್‌ಡಿಸಿವಿರ್ ಚುಚ್ಚುಮದ್ದು ಇಲ್ಲದೆ ಜನ ಸಾಯುವ ಸಮಯದಲ್ಲಿಯೂ ಅನಾಗರಿಕ, ಅಮಾನವೀಯ ಹೇಳಿಕೆಗಳನ್ನು ನೀಡುತ್ತಿರುವ ಬಿಜೆಪಿ ಮುಖ್ಯಮಂತ್ರಿಗಳು, ಪ್ರಧಾನಿ, ಕೇಂದ್ರ ಸಚಿವರನ್ನು ಜನರು ಕ್ಷಮಿಸುವುದಿಲ್ಲ' ಎಂದರು.

ಸೂಪರ್‌ಮೂನ್

ಶಿಡ್ಲಘಟ್ಟದಲ್ಲಿ ಮಂಗಳವಾರ ಸಂಜೆ ವಸಂತಕಾಲದ ಮೊದಲ ಹುಣ್ಣಿಮೆ ಮತ್ತು ಪ್ರಕಾಶಮಾನವಾದ ಸೂಪರ್ ಪಿಂಕ್ ಚಂದ್ರ ಕಾಣಿಸಿತು. ಹುಣ್ಣಿಮೆ ಭೂಮಿಗೆ ಹತ್ತಿರದಲ್ಲಿದ್ದಾಗ ಚಂದ್ರ ಪ್ರಕಾಶಮಾನವಾಗಿದ್ದು ದೊಡ್ಡದಾಗಿರುತ್ತದೆ. ಇದನ್ನು ನಾವು 'ಸೂಪರ್‌ಮೂನ್' ಎಂದು ಕರೆಯುತ್ತೇವೆ. ಅಮೆರಿಕದಲ್ಲಿ ಪಿಂಕ್ ಬಣ್ಣದ ಹೂಬಿರಿಯುವ ಸಮಯವಾದ್ದರಿಂದ 'ಪಿಂಕ್ ಮೂನ್' ಎಂದು ಕೂಡ ಕರೆಯುವರು

ಚಿತ್ರ–ಡಿ.ಜಿ.ಮಲ್ಲಿಕಾರ್ಜುನ

ಪ್ರಜಾವಾಣಿ

ಗ್ರೀನ್ ಟಾಕ್ | ಪ್ರಕೃತಿ ಮಡಿಲ ಮಾತು

ಕಬ್ಬನ್ ಪಾರ್ಕ್‌ಗೆ 'ಚಿಕಿತ್ಸೆ'!

ಲಕ್ಷಾಂತರ ಗಿಡಮರಗಳ ಕಬ್ಬನ್ ಪಾರ್ಕ್ ಪ್ರೇಮಿಗಳ ಸ್ವರ್ಗವೂ ಹೌದು. ಇಂತಹ ತಾಣದಲ್ಲಿ 75 'ಚಿಕಿತ್ಸೆ'ಯಾಗಿದೆ. ಅವು ಯಶಸ್ಸನ್ನೂ ಕಂಡಿವೆ...

https://bit.ly/3vAVtYf

ಪದವಿ: ಮೇ 10 ರವರೆಗೆ 'ಮನೆಯಿಂದ ಪಾಠ'

ಬೆಂಗಳೂರು: ರಾಜ್ಯದಲ್ಲಿ ಇದೇ 28ರಿಂದ ಮೇ 10ರವರೆಗೆ ಲಾಕ್‌ಡೌನ್ ಘೋಷಿಸಿರುವುದರಿಂದ, ಈ ಅವಧಿಯಲ್ಲಿ ಸರ್ಕಾರಿ ಮತ್ತು ಖಾಸಗಿ ಅನುದಾನಿತ ಪದವಿ ಕಾಲೇಜುಗಳ ಬೋಧಕರು ಆನ್‌ಲೈನ್ ಮೂಲಕ ಮನೆ ಯಿಂದಲೇ ವಿದ್ಯಾರ್ಥಿಗಳಿಗೆ ಪಾಠ ಮಾಡಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಅವಶ್ಯಕತೆಗೆ ಅನುಗುಣವಾಗಿ, ಪ್ರಾಂಶುಪಾಲರ ಆದೇಶದಂತೆ ಬೋಧಕ, ಬೋಧಕೇತರ ಸಿಬ್ಬಂದಿ ಕಾಲೇಜಿಗೆ ಬಂದು ಕರ್ತವ್ಯ ನಿರ್ವಹಿಸಬೇಕು ಎಂದೂ ಕಾಲೇಜು ಶಿಕ್ಷಣ ಇಲಾಖೆ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ

ಸಹಾಯವಾಣಿ ಆರಂಭಿಸಿ: ಕೆಪಿಸಿಸಿಗೆ ರಣದೀಪ್ ಸುರ್ಜೇವಾಲ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್ ರೋಗಿಗಳಿಗೆ ಹಾಸಿಗೆ, ಆಕ್ಸಿಜನ್, ಔಷಧಿ, ಆಂಬ್ಯುಲೆನ್ಸ್, ವೈದ್ಯಕೀಯ ಸೇವೆ ಲಭ್ಯವಾಗುವಂತೆ ಮಾಡಲು ಕೆಪಿಸಿಸಿ ವತಿಯಿಂದ ನಿಯಂತ್ರಣ ಕೊಠಡಿ ಮತ್ತು ಸಹಾಯವಾಣಿ ಆರಂಭಿಸಬೇಕು' ಎಂದು ಪಕ್ಷದ ನಾಯಕರಿಗೆ ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಲಹೆ ನೀಡಿದ್ದಾರೆ.

ರಾಜ್ಯದಲ್ಲಿನ ಕೋವಿಡ್ ಪರಿಸ್ಥಿತಿ ಬಗ್ಗೆ ಹಿರಿಯ ಮುಖಂಡರ ಜೊತೆ ಮಂಗಳವಾರ ವಿಡಿಯೊ ಸಂವಾದ ನಡೆಸಿದ ಅವರು, 'ಯಡಿಯೂರಪ್ಪ ಸರ್ಕಾರ ತನ್ನ ಜವಾಬ್ದಾರಿಯಿಂದ ಜಾರಿಕೊಳ್ಳುವ ಮೂಲಕ ಜನರನ್ನು ನಡು ನೀರಲ್ಲಿ ಕೈಬಿಟ್ಟಿದೆ. ಇಂಥ ಸಂದರ್ಭದಲ್ಲಿ ಕಾಂಗ್ರೆಸ್ ಹೊಣೆಯರಿತು ಕೆಲಸ ಮಾಡಬೇಕು' ಎಂದರು.

'ಪಕ್ಷದ ಜತೆ ಇರುವ ವೈದ್ಯರಿಂದ ಸೋಂಕಿತರಿಗೆ ಮಾರ್ಗದರ್ಶನ ನೀಡಬೇಕು. ವೈದ್ಯರಿಗೆ ಪಿಪಿಇ ಕಿಟ್, ಜನರಿಗೆ ಸ್ಯಾನಿಟೈಸರ್ ವ್ಯವಸ್ಥೆ ಕಲ್ಪಿಸಬೇಕು. ಸೋಂಕಿತರಿಗೆ ಹಾಸಿಗೆ ಸಿಗದ ಕಡೆ ಹೆಚ್ಚುವರಿ ಹಾಸಿಗೆ, ಆಮ್ಲಜನಕ ಪೂರೈಸಬೇಕು. ಕೋವಿಡ್ ನಿರ್ಬಂಧದಿಂದ ಸಂಕಷ್ಟಕ್ಕೀಡಾಗುವ ಮನೆಗಳಿಗೆ ಆಹಾರ ಪೂರೈಸಬೇಕು. 2–3 ದಿನಗಳಲ್ಲಿ ಈ ಕೆಲಸ ಆರಂಭಿಸಬೇಕು' ಎಂದು ಅವರು ಹೇಳಿದರು.

'ದಿನಗೂಲಿಗಳು, ವ್ಯಾಪಾರಿಗಳು, ಚಾಲಕರಿಗೆ ನಷ್ಟ ಪರಿಹಾರ ಪ್ಯಾಕೇಜ್ ಘೋಷಿಸುವಂತೆ ಮುಖ್ಯಮಂತ್ರಿ ಬಳಿ ಆಗ್ರಹಿಸಬೇಕು. ಲಸಿಕೆ ಪೂರೈಕೆ ವಿಚಾರದಲ್ಲೂ ಮುಖ್ಯಮಂತ್ರಿಗೆ ಪತ್ರ ಬರೆದು, ಎಲ್ಲರಿಗೂ ಉಚಿತವಾಗಿ ಸಿಗುವಂತೆ ಮಾಡಬೇಕು' ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ನಮ್ಮ ಪಕ್ಷದ ನಾಯಕರ ವೈದ್ಯಕೀಯ ಸಂಸ್ಥೆಗಳಿಗೆ ರೆಮ್‌ಡಿಸಿವಿರ್ ಪೂರೈಕೆಯಾಗುತ್ತಿಲ್ಲ. ಮುಖ್ಯ ಕಾರ್ಯದರ್ಶಿ ಮತ್ತು ಆರೋಗ್ಯ ಇಲಾಖೆ ಕಾರ್ಯದರ್ಶಿ ಜತೆ ಈ ಬಗ್ಗೆ ಚರ್ಚಿಸಿದ್ದೇನೆ. ವೈದ್ಯಕೀಯ ಸಂಸ್ಥೆಗಳನ್ನು ನಡೆಸುತ್ತಿರುವ ಶಾಸಕ ಜಿ. ಪರಮೇಶ್ವರ, ಸಿಎಲ್‌ಪಿ ನಾಯಕರು ಹಾಗೂ ಇತರ ಹಿರಿಯರ ಜತೆಗೂ ಮಾತನಾಡುತ್ತೇನೆ' ಎಂದು ಸುರ್ಜೇವಾಲಗೆ ತಿಳಿಸಿದರು.

ಮಹಾರಾಷ್ಟ್ರ: ಗರ್ಭಿಣಿ ಹುಲಿಯ ಭೀಕರ ಹತ್ಯೆ

ಮುಂಬೈ: ಮಹಾರಾಷ್ಟ್ರದ ವಿದರ್ಭ ಪ್ರಾಂತ್ಯದ ಯಾವತ್ಮಾಲ್ ಜಿಲ್ಲೆಯ ಪಂಢರ್ಕ್‌ವಾಡಾದ ಅರಣ್ಯ ಪ್ರದೇಶದಲ್ಲಿ ನಾಲ್ಕು ಭ್ರೂಣಗಳನ್ನು ಹೊಂದಿದ್ದ ಹೆಣ್ಣು ಹುಲಿಯನ್ನು ಭೀಕರವಾಗಿ ಹತ್ಯೆ ಮಾಡಿದ ಘಟನೆ ಭಾನುವಾರ ನಡೆದಿದೆ.

ಹುಲಿಯ ಹತ್ಯೆಯು ಭಾನುವಾರ ನಡೆದಿದ್ದು, ಸೋಮವಾರ ಸಂಜೆ ಪ್ರಕರಣ ಬೆಳಕಿಗೆ ಬಂದಿದೆ. ಉಗುರುಗಳ ಸಲುವಾಗಿ ಹುಲಿಯ ಮುಂದಿನ ಎರಡು ಕಾಲುಗಳ ಪಂಜವನ್ನು ಕಳ್ಳಬೇಟೆಗಾರರು ಕತ್ತರಿಸಿದ್ದಾರೆ.

ಈ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತಂದಿರುವ ಸಾತ್ಪುಡ ಫೌಂಡೇಷನ್‌ನ ಸ್ಥಾಪಕ ಮತ್ತು ವನ್ಯಜೀವಿ ಸಂರಕ್ಷಣಾಧಿಕಾರಿ ಕಿಶೋರ್ ರಿಥೆ, ಕಳ್ಳಬೇಟೆಗಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಕೋವಿಡ್: ಹೊಣೆ ಅರಿತು ಹೆಜ್ಜೆ ಇಡದ ಸರ್ಕಾರ

ಒಂದನೇ ಪುಟದಿಂದ

ನಿರ್ವಹಣೆಯಲ್ಲಿ ಎಡವಿದ್ದರಿಂದ ಪರದಾಟ



ಮೊದಲ ಬಾರಿ ಕೋವಿಡ್ ಬಂದಾಗಲೇ ವ್ಯವಸ್ಥೆಯನ್ನು ಸರಿಪಡಿಸಿಕೊಳ್ಳಬೇಕಿತ್ತು. ಸಾಕಷ್ಟು ಸಮಯಾವಕಾಶವೂ ಇತ್ತು. ಐಸಿಯು, ವೆಂಟಿಲೇಟರ್, ಆಮ್ಲಜನಕ, ಹಾಸಿಗೆ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು. ಆದರೆ, ಕೋವಿಡ್ ಮೊದಲ ಅಲೆಯಿಂದ ಸರ್ಕಾರ ಪಾಠ ಕಲಿತಿಲ್ಲ. ನಿರ್ವಹಣೆಯಲ್ಲೂ ಎಡವಿದ್ದು, ಈಗ ಪರದಾಡುತ್ತಿದೆ.

ಎರಡನೇ ಅಲೆ ಹರಡುವ ವಿಚಾರ ಗೊತ್ತಾದ ಕೂಡಲೇ ಎಚ್ಚೆತ್ತುಕೊಳ್ಳಬೇಕಿತ್ತು. ಸಂಪರ್ಕಿತರನ್ನು ಪತ್ತೆ ಹಚ್ಚಿ ಪರೀಕ್ಷೆಗೆ ಒಳಪಡಿಸಬೇಕಿತ್ತು. ಸರ್ಕಾರ ಈ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿತು. ಈಗ ಲಾಕ್‌ಡೌನ್ ಮಾಡಿರುವ ವಿಚಾರ ಸರಿಯಾಗಿದೆ. ಲಸಿಕಾ ಅಭಿಯಾನವನ್ನು ಮತ್ತಷ್ಟು ತ್ವರಿತಗೊಳಿಸಬೇಕು. ದೆಹಲಿ, ಮಹಾರಾಷ್ಟ್ರ ಸ್ಥಿತಿಯನ್ನು ತಲುಪುವ ಮುನ್ನವೇ ಕಾರ್ಯೋನ್ಮುಖವಾಗಬೇಕು.

ಡಾ.ಎಚ್.ಸುದರ್ಶನ್, ಆರೋಗ್ಯ ತಜ್ಞ, ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಗೌರವ ಕಾರ್ಯದರ್ಶಿ

ರಾಜಕೀಯ ಲಾಭದ ನಿರ್ಧಾರಕ್ಕೆ ಸೀಮಿತ

ಕೋವಿಡ್ ಮೊದಲ ಅಲೆಯಲ್ಲಾದ ಸಮಸ್ಯೆ ಗೊತ್ತಿದ್ದರೂ ರಾಜ್ಯ ಸರ್ಕಾರ ಪೂರ್ವಸಿದ್ಧತೆ ಮಾಡಿಕೊಳ್ಳಲಿಲ್ಲ. ಪರಿಣತರು ಬಾಯಿ ಬಡಿದುಕೊಂಡರೂ ಅವರ ಮಾತು ಕೇಳಲಿಲ್ಲ. ರಾಜಕೀಯ ಲಾಭಗಳಿಗಾಗಿ ತಮ್ಮದೇ ನಿರ್ಧಾರ ಕೈಗೊಂಡರು. ಕಳೆದ ವರ್ಷ ವೈದ್ಯರು, ನರ್ಸ್‌ಗಳು ಹಗಲು ರಾತ್ರಿ ಏಳೆಂಟು ತಿಂಗಳು ಕೆಲಸ ಮಾಡಿದರು. ಆದರೆ, ಅವರ ಕೆಲಸವನ್ನು ಗೌರವಿಸುವ, ಪ್ರೋತ್ಸಾಹಿಸುವ ಕೆಲಸವನ್ನು ಮಾಡಲಿಲ್ಲ. ಸರಿಯಾಗಿ ವೇತನ ನೀಡಲೂ ಸತಾಯಿಸಿದರು.

ನನ್ನ ಪ್ರಕಾರ ಒಂದು ತಿಂಗಳ ಹಿಂದೆಯೇ ಲಾಕ್‌ಡೌನ್ ಮಾಡಬೇಕಿತ್ತು. ಆದರೆ, ಈಗ ಹಾಸಿಗೆ ಹೆಚ್ಚಿಸುವ, ಆಮ್ಲಜನಕದ ವ್ಯವಸ್ಥೆ ಮಾಡುವ ಹೇಳಿಕೆಗಳನ್ನು ನೀಡುತ್ತಾ ಸಾರ್ವಜನಿಕರನ್ನು ವಂಚಿಸಲಾಗುತ್ತಿದೆ. ಈಗಲೂ ರಾಜಕೀಯ ಆಶ್ವಾಸನೆ ನೀಡಲಾಗುತ್ತಿದೆ. ನರ್ಸ್, ವೈದ್ಯರ ಕೊರತೆ ವಿಪರೀತವಾಗಿ ಕಾಡುತ್ತಿದೆ. ಹೀಗಿದ್ದ ಮೇಲೆ ಹಾಸಿಗೆ ಇಟ್ಟುಕೊಂಡು ಏನು ಮಾಡುವುದು? ಕೋವಿಡ್ ಮೂರನೇ ಅಲೆ ಬರುವ ಮುನ್ನವಾದರೂ ಎಚ್ಚೆತ್ತುಕೊಂಡು ವ್ಯವಸ್ಥೆ ಮಾಡಿಕೊಳ್ಳಲಿ.



-ಡಾ.ಆರ್.ಬಾಲಸುಬ್ರಹ್ಮಣ್ಯಂ, ವಿ–ಲೀಡ್ ಸಂಸ್ಥಾಪಕ

ರಾಜಕೀಯ, ಧಾರ್ಮಿಕ ಮುಖಂಡರ 'ಮದ್ದಿನ' ಅಪರಾಧ



ರಾಜಕೀಯ ನಾಯಕರು ಚುನಾವಣಾ ರ್‍ಯಾಲಿಗಳಲ್ಲಿ ಪಾಲ್ಗೊಂಡು ಜನರಿಗೆ ಮಿಶ್ರ ಸಂದೇಶ ನೀಡಿದರು. ಧಾರ್ಮಿಕ ಮುಖಂಡರು ರಥೋತ್ಸವ, ಜಾತ್ರೆಗಳಲ್ಲಿ ಪಾಲ್ಗೊಂಡರು.

ಸಾರ್ವಜನಿಕರು ಕೂಡ ಎಚ್ಚರದಿಂದ ಇರಬೇಕಿತ್ತು. ಪ್ರತಿ ದೇಶವೂ ಎರಡನೆಯ ಅಲೆ ಎದುರಿಸಿದ್ದನ್ನು ಕಂಡು ನಾವು ಪಾಠ ಕಲಿಯಬಹುದಿತ್ತು.

ರಾಜಕೀಯ, ಧಾರ್ಮಿಕ ಮುಖಂಡರು ಮನೆಮದ್ದಿನಿಂದ, ಹನುಮಾನ್ ಚಾಳೀಸ ಪಠಿಸುವುದರಿಂದ, ಮಸಾಲೆಯುಕ್ತ ರಸಂ ಸೇವಿಸುವುದರಿಂದ ಕೊರೊನಾ ಗುಣಪಡಿಸಬಹುದು ಎಂದೆಲ್ಲ ಹೇಳಿದ್ದು ಅಪರಾಧ.

ಮಾಸ್ಕ್ ಧರಿಸಿಕೊಂಡು, ಅಂತರ ಕಾಯ್ದುಕೊಂಡು ನಾವು ಲಸಿಕೆ ಹಾಕಿಸುವುದನ್ನು ಚುರುಕುಗೊಳಿಸಬೇಕು. ದಿನಗೂಲಿ ನೌಕರರು, ವರ್ತಕರು, ವಾಣಿಜ್ಯೋದ್ಯಮಿಗಳ ಬಗ್ಗೆ ಕಳವಳಗೊಂಡಿದ್ದೇನೆ. ಅವರು ಹಸಿವಿನತ್ತ ಮುಖ ಮಾಡಿದ್ದಾರೆ. ಅವರಿಗೆ ಹಣಕಾಸಿನ ನೆರವು ನೀಡಲು ಸರ್ಕಾರಕ್ಕೆ ಸಾಧ್ಯವಿಲ್ಲದಿದ್ದರೆ ಲಾಕ್‌ಡೌನ್ ನಿಯಮಗಳಲ್ಲಿ ಬದಲಾವಣೆ ತಂದು, ಅವರ ಸಮಸ್ಯೆಗಳಿಗೆ ಸ್ಪಂದಿಸಬಹುದೇ ಎಂದು ಆಲೋಚಿಸಲಿ.

– ಕ್ಯಾಪ್ಟನ್ ಜಿ.ಆರ್. ಗೋಪಿನಾಥ್, ಉದ್ಯಮಿ

ಸರ್ಕಾರಗಳ ಕ್ರೌರ್ಯದ ಪರಮಾವಧಿ

ಎರಡನೇ ಅಲೆ ಎದುರಿಸಲು ಸರ್ಕಾರಕ್ಕೆ ಒಂದು ವರ್ಷ ಸಮಯ ಇತ್ತು. ಆದರೆ, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಈ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಲಸಿಕೆಯನ್ನು ಎಲ್ಲರಿಗೂ ತಲುಪಿಸಲಿಲ್ಲ. ಚುನಾವಣೆ ಮತ್ತು ಕುಂಭಮೇಳಗಳನ್ನು ನಡೆಸಿ ಸೋಂಕು ವ್ಯಾಪಿಸಲು ಮತ್ತಷ್ಟು ಕೊಡುಗೆ ನೀಡಿದರು. ಕೊರೊನಾ ಸಂಕಷ್ಟದ ಮಧ್ಯೆಯೂ ಕೇಂದ್ರ ಸರ್ಕಾರದವರು ರಾಮಮಂದಿರಕ್ಕೆ ಜನರಿಂದ ದೇಣಿಗೆ ಸಂಗ್ರಹಿಸಿದರು. ಅದರ ಬದಲು ಕೊರೊನಾ ನಿಗ್ರಹಕ್ಕೆ ಹಣ ಕೊಡಿ ಎಂದರೆ ಜನ ಇದಕ್ಕಿಂತ ಹೆಚ್ಚಿನ ಹಣ ಕೊಡುತ್ತಿದ್ದರು. ಅದರಿಂದಲಾದರೂ ವೈದ್ಯಕೀಯ ಸೌಲಭ್ಯ ಕಲ್ಪಿಸಬಹುದಾಗಿತ್ತು. ಹಾಸಿಗೆ–ವೆಂಟಿಲೇಟರ್, ಆಮ್ಲಜನಕದ ಸೌಲಭ್ಯವನ್ನೂ ಕಲ್ಪಿಸದೆ ಜನರು ಕೋವಿಡ್‌ನಿಂದ ಸಾಯುವಂತೆ ಮಾಡಿದ ಕ್ರೂರಿ, ಕೊಲೆಗಡುಕ ಸರ್ಕಾರಗಳಿವು.

ಕೆ.ನೀಲಾ, ಹೋರಾಟಗಾರ್ತಿ, ಕಲಬುರ್ಗಿ

ನಿರ್ಲಕ್ಷ್ಯದ ಪರಿಣಾಮ

ತಜ್ಞರು ನೀಡಿದ ಎಚ್ಚರಿಕೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸಿ ಆಸ್ಪತ್ರೆಗಳಿಗೆ ಮೂಲಸೌಕರ್ಯ ಒದಗಿಸಿ ಸಜ್ಜುಗೊಳಿಸಬೇಕಿತ್ತು. ಬದಲಿಗೆ ನಿರ್ಲಕ್ಷ್ಯ ತೋರಿದ್ದರಿಂದ ಸಮುದಾಯದ ಮಟ್ಟಕ್ಕೆ ಸೋಂಕು ಹರಡಿತು. ಇದೀಗ ತಡವಾಗಿಯಾದರೂ ಸರ್ಕಾರ ಲಾಕ್‌ಡೌನ್ ಘೋಷಿಸಿದೆ. ಸಂಕಷ್ಟಕ್ಕೆ ಸಿಲುಕುವ ಬಡವರಿಗೆ ಹೆಚ್ಚುವರಿಯಾಗಿ ಆಹಾರ–ಧಾನ್ಯ ವಿತರಿಸಲು ಮುಂದಾಗಬೇಕು. ತಾಲ್ಲೂಕು ಮಟ್ಟದ ಸರ್ಕಾರಿ ಆಸ್ಪತ್ರೆಗಳಲ್ಲೇ ಚಿಕಿತ್ಸೆಗೆ ಅಗತ್ಯವಿರುವ ಮೂಲಸೌಕರ್ಯ ಕಲ್ಪಿಸಬೇಕು. ಖಾಸಗಿಯವರು ಚಿಕಿತ್ಸೆ ಹೆಸರಿನಲ್ಲಿ ರೋಗಿಗಳನ್ನು ಸುಲಿಗೆ ಮಾಡದಂತೆ ಕಠಿಣ ಕ್ರಮ ಕೈಗೊಳ್ಳಬೇಕು.

– ಡಾ. ಇಸಬೆಲಾ ಝೇವಿಯರ್, ಮಾನವ ಹಕ್ಕುಗಳ ಹೋರಾಟಗಾರ್ತಿ, ಧಾರವಾಡ

ಮಳೆ: ಸಿಡಿಲು ಬಡಿದು ಮಹಿಳೆ ಸಾವು

ಚಿಕ್ಕಮಗಳೂರು ಜಿಲ್ಲೆಯ ಹೊರನಾಡು ಬಳಿಯ ಚಿಕ್ಕನಾಕೂಡಿಗೆ ಹಳ್ಳದಲ್ಲಿ ನೀರು ರಭಸವಾಗಿ ಹರಿಯಿತು

ವಿಜಯಪುರ: ಜಿಲ್ಲೆಯ ಇಂಡಿ ತಾಲ್ಲೂಕಿನ ಅಂಜುಟಗಿ ಗ್ರಾಮದ ತೋಟದ ವಸ್ತಿಯಲ್ಲಿ ಸೋಮವಾರ ರಾತ್ರಿ ಸಿಡಿಲು ಬಡಿದು ಮಹಾದೇವಿ ನಿಂಬರಗಿ (50) ಎಂಬುವವರು ಸಾವಿಗೀಡಾಗಿದ್ದಾರೆ. ಸಿಡಿಲಿಗೆ ಒಂದು ಎಮ್ಮೆ ಕೂಡ ಮೃತಪಟ್ಟಿದೆ.

ತಿಕೋಟಾ ತಾಲ್ಲೂಕಿನ ಕನಮಡಿ ಗ್ರಾಮದಲ್ಲಿ ಸಿಡಿಲಿಗೆ ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದು, ವಿಜಯಪುರದ ಬಿಎಲ್‌ಡಿಇ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮಂಗಳವಾರವೂ ಹುಬ್ಬಳ್ಳಿ-ಧಾರವಾಡ, ಹಾವೇರಿ ಜಿಲ್ಲೆಯ ಸವಣೂರ, ಹಾನಗಲ್‌ನಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ.

ಉತ್ತಮ ಮಳೆ: ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕಳಸ, ಹೊರನಾಡು, ಕೊಟ್ಟಿಗೆಹಾರ, ಬಾಳೆಹೊನ್ನೂರು ಸುತ್ತಲಿನ ಪ್ರದೇಶಗಳಲ್ಲಿ ಮಧ್ಯಾಹ್ನ ಸುಮಾರು ಮುಕ್ಕಾಲು ಗಂಟೆ ಮಳೆಯಾಗಿದೆ. ಭದ್ರಾ ನದಿ, ಹಳ್ಳಗಳಲ್ಲಿ ಹರಿವು ರಭಸವಾಗಿತ್ತು.

ಉಡುಪಿ ಜಿಲ್ಲೆಯ ಬ್ರಹ್ಮಾವರ, ಹೆಬ್ರಿಯಲ್ಲೂ ಉತ್ತಮ ಮಳೆ ಸುರಿದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ತುಂತುರು ಮಳೆಯಾಗಿದೆ.

ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿಗೆ ಕೋವಿಡ್

ಶಿರಸಿ: ವಿಧಾನಸಭಾ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಕೋವಿಡ್ ಇರುವುದು ಮಂಗಳವಾರ ದೃಢಪಟ್ಟಿದೆ.

ನೆಗಡಿ ಲಕ್ಷಣ ಕಾಣಿಸಿದ್ದರಿಂದ ಅವರು ಕೋವಿಡ್ ಪರೀಕ್ಷೆಗೊಳಪಟ್ಟಿದ್ದರು. ಈ ವೇಳೆ ಸೋಂಕು ಇರುವುದು ದೃಢವಾಯಿತು. ಅವರಿಗೆ ರೋಗ ಲಕ್ಷಣ ಇಲ್ಲದ ಕಾರಣ ಶಿರಸಿಯ ತಮ್ಮ ಮನೆಯಲ್ಲಿ ಪ್ರತ್ಯೇಕವಾಗಿ ಕ್ವಾರಂಟೈನ್‌ನಲ್ಲಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ, ಕಲಬುರಗಿ**

ಸಂ.ಕಾನಿಅ/ಲೋಇ/ಕವಿ/ಶಾಶಾ-2/.ಟೆಂಡರ್.ಅಧಿಸೂಚನೆ/2020-21/403 ದಿನಾಂಕ:27.04.2021

ಅಲ್ಪಾವಧಿ ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ , ಇಲಾಖೆ, ಕಲಬುರಗಿ ವಿಭಾಗ ಕಾರ್ಯಾಲಯದಿಂದ ಕೆ.ಕೆ.ಆರ್.ಡಿ.ಬಿ, ಯೋಜನೆಯಡಿ 03 ಕಾಮಗಾರಿಗಳಿಗೆ ಟೆಂಡರ ಕರೆಯಲಾಗಿದೆ ಇಂಡೆಂಟ್ ಸಂಖ್ಯೆ: 136333, 136761, 136630. 2) ಕಾಮಗಾರಿ ಅಂದಾಜು ಮೊತ್ತ : ರೂ. ಕನಿಷ್ಠ 127.52 ಲಕ್ಷಗಳು ಗರಿಷ್ಠ 207.01 ಲಕ್ಷಗಳು. 3) ಗುತ್ತಿಗೆದಾರರ ಅರ್ಹತೆ ವಿವರ : ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಹಾಗೂ ಮೇಲ್ಪಟ್ಟು ಗುತ್ತಿಗೆದಾರರಾಗಿರಬೇಕು. 4) ಪ್ರೀ ಬಿಡ್ ಸಭೆ ದಿನಾಂಕ : 11.05.2021 (11.00 ಗಂಟೆ). 5) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ : 12.05.2021 (17.30 ಗಂಟೆ). 6) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 13.05.2021 (16.00 ಗಂಟೆ). 7) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 15.05.2021 (16.30 ಗಂಟೆ). 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: 17.05.2021 (11.30 ಗಂಟೆ). 9) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ. 10) ಸೂಚನೆ : ಜಿ.ಎಸ್.ಟಿ. ಪ್ರತ್ಯೇಕವಾಗಿ ನೀಡಲಾಗುವುದು. 11) ಅಂತರ್ಜಾಲ ತಾಣದ ವಿಳಾಸ : www.e-proc.Karnataka.gov.in

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/112/ಎಂ.ಸಿ&ಎ/2021-22

ಕರ್ನಾಟಕ ಸರಕಾರ (ಜಿಲ್ಲಾ ಪಂಚಾಯತ್, ಗದಗ)
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಗದಗ
Ph : 08372-233996, 231744 E-mail ID : dhogadag@gmail.com

ಕ್ರ.ಸಂ/ಜಿ.ಆ.ಕು.ಕ.ಗ/ಸರಬ/20/2021-22 ದಿನಾಂಕ : 22-04-2021

ಅಲ್ಪಾವಧಿ ಟೆಂಡರ್ ಪ್ರಕಟಣೆ

ಇ-ಪ್ರಕ್ಯೂರಮೆಂಟ್ ಮೂಲಕ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಗದಗ ಇಲ್ಲಿ **ಅರ್ಹ ಸಂಸ್ಥೆಗಳಿಂದ ದ್ವಿ-ಲಕೋಟಿ ಪದ್ದತಿಯಲ್ಲಿ ಇ-ಪ್ರಕ್ಯೂರಮೆಂಟ ಮೂಲಕ ಜಂಬು ವೈದ್ಯಕೀಯ ಆಕ್ಷಿಜನ್ ಸಿಲಿಂಡರ್ ರಿಫ್ಲಿಂಗ್ ಮಾಡಲು** ಅಲ್ಪಾವಧಿ **ಟೆಂಡರನ್ನು** ಕರೆಯಲಾಗಿದೆ.

ಟೆಂಡರ್ ನೋಟೀಫಿಕೇಷನ್ ನಂ DHO/SUP/20/2020-21 ದಿನಾಂಕ : 24-04-2021

ಇ-ಪ್ರಕ್ಯೂರಮೆಂಟ್ ಮೂಲಕ **ಜಂಬು ವೈದ್ಯಕೀಯ ಆಕ್ಷಿಜನ್ ಸಿಲಿಂಡರ್ ರಿಫ್ಲಿಂಗ್ ಮಾಡಲು**
ಅಲ್ಪಾವಧಿ ಟೆಂಡರ್ ಪೂರೈಕೆ ಮಾಡುವ ಕುರಿತು
(ಇ-ಪ್ರಕ್ಯೂರಮೆಂಟ್ ಮೂಲಕ ಪೋರ್ಟಲ್ ಮಾತ್ರ)
website : https://eproc.karnataka.gov.in
ಬಿಡ್ ಡಾಕ್ಯೂಮೆಂಟ್-2 ಬಿಡ್ ಕವರಗಳು
ಟೆಂಡರ್ ಬಿಡ್ ಮಾಡಿ ಸಲ್ಲಿಸುವ ಕೊನೆಯ ದಿನಾಂಕ : **03.05.2021**
ಟೆಂಡರ್ ಫೀ ಇ-ಪ್ರಕ್ಯೂರಮೆಂಟ್ ಪೋರ್ಟಲ್ ಮೂಲಕ

ಟೆಂಡರ್ ಕರೆದ ದಿನಾಂಕ : **24.04.2021,** ಟೆಂಡರ್ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ : **03.05.2021,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **04.05.2021** 11:00 AM, ಆರ್ಥಿಕ ಬಿಡ್ ತೆರೆಯುವ ದಿನಾಂಕ : **06.05.2021** 11:00 AM

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ ಗದಗ, ಜಿಲ್ಲಾ ಆಡಳಿತ ಭವನ, ರೂಮ್ ನಂ: 101, ಹುಬ್ಬಳ್ಳಿ ರೋಡ್ ಗದಗ ಮೋಬೈಲ್ ನಂ: **9845820512**

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಅಧಿಕಾರಿಗಳು ಗದಗ

ವಾಸಾಸಂಇ/ಗದಗ/ಎಂ.ಸಿ.ಎ/55/2021-22

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ ರಸ್ತೆ, ಮೈಸೂರು – 570005, ದೂರವಾಣಿ/ಫ್ಯಾಕ್ಸ್: 0821-2420624

ಸಂಖ್ಯೆ: ಮೈನಪ್ರಾ/ಅಅ/ಪಿಬಿ/ಟಿಎನ್/01/2021-22 ದಿನಾಂಕ: 27.04.2021

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **ಸಮಾಲೋಚಕರನ್ನು Empanelled ಮೂಲಕ ನೇಮಿಸಿಕೊಳ್ಳಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ.** ಸದರಿ ಟೆಂಡರ್ ಅನ್ನು ಸಲ್ಲಿಸಲು ದಿನಾಂಕ: **15.05.2021ರ ಸಂಜೆ 4.00 ಗಂಟೆಯವರೆಗೆ** ಸಮಯವನ್ನು ನಿಗಧಿಪಡಿಸಲಾಗಿದ್ದು, ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ: **17.05.2021ರ 16.30 ಗಂಟೆಯ ನಂತರ** ತೆರೆಯಲಾಗುವುದು.

ಅರ್ಹ ನೋಂದಾಯಿತ ಸಮಾಲೋಚಕರುಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ನಿಯಮಾವಳಿಯಂತೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ದೂರವಾಣಿ ಸಂಖ್ಯೆ: 0821-2420624 ರಿಂದ ಹಾಗೂ ಪ್ರಾಧಿಕಾರದ ವೆಬ್‌ಸೈಟ್ **www.mudamysore.gov.in** ನಲ್ಲಿ ಪ್ರಕಟಣೆಯ ಮಾಹಿತಿಯನ್ನು ಪಡೆಯಬಹುದು.

ಸಹಿ/- ಅಧೀಕ್ಷಕ ಅಭಿಯಂತರರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರ ಕಛೇರಿ, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ

ನಂ. ಪಂರಾಇಂವಿ/ಹಾವೇರಿ/ಪಿಬಿ-5/ಟೆಂಡರ್/2021-22/432 ದಿನಾಂಕ : 27-04-2021

ಟೆಂಡರ ಪ್ರಕಟಣೆ (E.GOK ಇ-ಪ್ರಕ್ಯೂರಮೆಂಟ್ ಮುಖಾಂತರ ಮಾತ್ರ)

2020-21ನೇ ಸಾಲಿನ ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಬ್ಯಾಡಗಿ ತಾಲೂಕಿನ ಆಯ್ದ ಗ್ರಾಮಗಳಿಗೆ ತ್ಯಾಜ್ಯ ವಿಲೇವಾರಿ ವಾಹನ ಪೂರೈಸಲು ಟೆಂಡರ ಕರೆಯಲಾಗಿದೆ.

Sl. No	Indent Numbers	Brief description	Unit	Total Quantity required	Estimate Cost Rs. (in lakhs)	EMD in Rupees	Delivery Schedule
1	RDPR/ 2021-22/ IND2226	Package:2 SUPPLY OF 4 WHEELER GARBAGE VEHICLES BS6 WITH CUSTOMIZED OPEN BOX TIPPER WITH PARTITION INCLUDING PUBLIC ANNONOUNCEMENT SYSTEM (Hangal Tq: Gejjihalli, Hirekanagi, Honkan, Kiravadi, Aladakatti)	Nos	5	**27.50**	**55,000/-**	Delivery in 15 days from the date of LOI/ Work Order.
2	RDPR/ 2021-22/ IND2227	Package:3 SUPPLY OF 4 WHEELER GARBAGE VEHICLES BS6 WITH CUSTOMIZED OPEN BOX TIPPER WITH PARTITION INCLUDING PUBLIC ANNONOUNCEMENT SYSTEM (Hangal Tq: Hullatti, Uppunasi, Baichuvalli, Malagund, Kusanur, Mantagi)	Nos	6	**33.00**	**66,000/-**	Delivery in 15 days from the date of LOI/ Work Order.
3	RDPR/ 2021-22/ IND2228	Package:4 SUPPLY OF 4 WHEELER GARBAGE VEHICLES BS6 WITH CUSTOMIZED OPEN BOX TIPPER WITH PARTITION INCLUDING PUBLIC ANNONOUNCEMENT SYSTEM (Hangal Tq: Herur, Karagudari, Maranabeed, Masanakatti, Shiragod, Kelavarakoppa, Hirehullal, Yalavatti, Somasagar)	Nos	9	**49.50**	**99,000/-**	Delivery in 15 days from the date of LOI/ Work Order.

(1) ಇ-ಪ್ರಕ್ಯೂರಮೆಂಟ್ ಮೂಲಕ ಟೆಂಡರಗಳನ್ನು ಡೌನಲೋಡ್ ಮಾಡುವ ದಿನಾಂಕ : **27-04-2021** (2) ಇ-ಪ್ರಕ್ಯೂರಮೆಂಟ್ ಮೂಲಕ ಭರ್ತಿಮಾಡಿದ ಟೆಂಡರಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **11-05-2021** ರ 16:00 ಗಂಟೆವರೆಗೆ (3) ಇ-ಪ್ರೋಕ್ಯೂರಮೆಂಟ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : **13-05-2021**ರ 17:00 ಗಂಟೆಗೆ (4) ಇ-ಪ್ರೋಕ್ಯೂರಮೆಂಟ್ ಆರ್ಥಿಕ ಬಿಡ್ ತೆರೆಯುವ ದಿನಾಂಕ (ಸಾಧ್ಯವಾದಲ್ಲಿ) : **17-05-2021**ರ 11:00 ಗಂಟೆಗೆ

ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು E-GOK ಇ-ಪ್ರಕ್ಯೂರಮೆಂಟ್ ಪ್ಲಾಟ್‌ಫಾರಂನಲ್ಲಿ **www.eproc.karnataka.gov.in** ರಲ್ಲಿ ಪಡೆಯಬಹುದು ಹಾಗೂ ವಿಭಾಗ ಕಛೇರಿಯಲ್ಲಿ ಹೆಚ್ಚಿನ ಮಾಹಿತಿಗಳನ್ನು ಪಡೆಯತಕ್ಕದ್ದು.

ವಾಸಾಸಂಇ/ಹಾವೇರಿ/ಎಂ.ಸಿ.ಎ/31/2021-22 **ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಹಾವೇರಿ**

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
**ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಕರ್ನಾಟಕ ನೀರಾವರಿ ನಿಗಮ ನಿಯಮಿತ,
ತುಂಗಾ ಮೇಲ್ದಂಡೆ ಯೋಜನಾ ವಿಭಾಗ, ಶಿವಮೊಗ್ಗ**
ಫೋನ್: 08182-254832 ಫ್ಯಾಕ್ಸ್ : 08182-254832
E-mail : eeutpsmg@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ- ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

1) ಟೆಂಡರ್ ಪ್ರಕಟಣೆ ಸಂಖ್ಯೆ: ಕನೀನಿನಿ/ ತುಂ.ಮೆ.ಯೋ. ವಿ/ಪಿಬಿ-2/ ಟೆಂಡರ್/04 ದಿನಾಂಕ: 23.04.2021.

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ ಪದ್ಧತಿಯ ಮೂಲಕ ಒಂದು (1) ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.

(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ **ಮೊತ್ತ ರೂ. 143.00 ಲಕ್ಷಗಳಾಗಿರುತ್ತದೆ.** (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ ಸ್ಪಷ್ಟೀಕರಣಗಳಿಗಾಗಿ ಕೊನೆಯ **ದಿನಾಂಕ: 28.04.2021, 17.30 ಘಂಟೆಯವರೆಗೆ.** (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ **ದಿನಾಂಕ: 23.04.2021 ರಿಂದ 03.05.2021** ಸಾಯಂಕಾಲ 17.30 ಘಂಟೆಯವರೆಗೆ (ಕಚೇರಿ ವೇಳೆಯಲ್ಲಿ)

ಟೆಂಡರನ್ನು ತೆರೆಯುವ ದಿನಾಂಕ/ ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ **https://eproc.karnataka.gov.in/** ವೆಬ್‌ಸೈಟ್‌ನಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಕ.ನೀ.ನಿ.ನಿ., ತುಂ.ಮೆ.ಯೋ. ವಿಭಾಗ, ಶಿವಮೊಗ್ಗ

ವಾ.ಸಾ.ಸಂ.ಇ./ಶಿ/ನಂ.145-04 ಝೇಂಕಾರ್/2020-21

ಕರ್ನಾಟಕ ಸರ್ಕಾರ
**ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ-585105**
ದೂರವಾಣಿ ಸಂಖ್ಯೆ: 08472-278634/256944, E-mail: eerwssglb14@gmail.com

ಸಂ.ಕಾ.ನಿ.ಅ/ಗ್ರಾ.ಕು.ನೀ&ನೈ/.ವಿ.ಕ/ ತಾ .ಶಾ /2021-22/133 ದಿನಾಂಕ: 26-04-2021

ಅಲ್ಪಾವಧಿ ಟೆಂಡರ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪದ್ದತಿಯಲ್ಲಿ e-procurement portal ನಡಿಯಲ್ಲಿ ಮಾತ್ರ) (ದ್ವಿಲಕೋಟೆಯಲ್ಲಿ)

ಕರ್ನಾಟಕ ಘನತೆವೆತ್ತ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿರವರಿಂದ ಕುಡಿಯುವ ನೀರು ಕಾಮಗಾರಿಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ ಆಹ್ವಾನಿಸಲಾಗಿದ್ದು ವಿವರ ಈ ಕೆಳಗಿನಂತಿದೆ.

1) ಕಾಮಗಾರಿಯ ವಿವರ: ಕಲಬುರಗಿ ತಾಲೂಕಿನ 07 ಪ್ಯಾಕೇಜ್ (Indent No-33843, 33844, 33845, 33846, 33847, 33848, 33849), 2) ಟೆಂಡರಿಗಿಟ್ಟ ಮೊತ್ತ : ಕನಿಷ್ಠ : 1,55,00,000/-, ಗರಿಷ್ಠ 2,37,44,000/-, 3) ಲೆಕ್ಕ ಶಿರ್ಷಿಕೆ : Jal Jeevan Mission 2020-21, 4) ಗುತ್ತಿಗೆದಾರರ ಅರ್ಹತೆ: 3ನೇ & 2ನೇ ದರ್ಜೆ ಗುತ್ತಿಗೆದಾರರು & ಮೇಲ್ಮಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ : 28-04-2021 ರಿಂದ 12-05-2021, 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ : ಇ-ಪ್ರೋಕ್ಯೂರಮೆಂಟ್ ಪ್ರಕಾರ, 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ : 12-05-2021 ಸಾಯಂಕಾಲ 4:00 ಗಂಟೆವರೆಗೆ, 8) ಪ್ರೀ ಬಿಡ್ಡ್ ಸಭೆ ದಿನಾಂಕ : 05-05-2021 ಬೆ. 11.00 ಗಂಟೆಯ ನಂತರ, 9) ತಾಂತ್ರಿಕ ಬಿಡ್ಡ ತೆರೆಯುವ ದಿನಾಂಕ : 13-05-2021 ಸಾಯಂಕಾಲ 4:01 ಗಂಟೆವರೆಗೆ, 10) ಆರ್ಥಿಕ ಬಿಡ್ಡ ತೆರೆಯುವ ದಿನಾಂಕ : 15-05-2021 ಬೆ. 11.00 ಗಂಟೆಯ ನಂತರ, 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ : ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಮೊದಲನೆ ಮಹಡಿ, ಕುಸನೂರ ರೋಡ, ಕಲಬುರಗಿ, 12) ಅಂತರಜಾಲ ತಾಣದ ವಿಳಾಸ : www.eproc.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/107/ಎಂ.ಸಿ&ಎ/2021-22

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001.
ದೂ.080-25586520/25589112 ಫ್ಯಾಕ್ಸ್ : 080-25886321
ಇ-ಮೇಲ್: ho@kspcb.gov.in ವೆಬ್‌ಸೈಟ್: http://kspcb.gov.in

ನಂ.ಕರಾಮಾನಿಮಂ/166/ಹಿಪಅ/ಗಣಿ/ಪಸಾಸ/2021-22/468 ದಿನಾಂಕ:27.04.2021

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈ. ಲಿ. ಇವರು ಸರ್ವೆ ನಂ. 79 ಮತ್ತು 84 ಚಿಕ್ಕಬಗನಾಳ ಗ್ರಾಮ, ಸರ್ವೆ ನಂ. 90/5, 90/7, 90/8, 90/9 ಮತ್ತು 91/6 ಕುನಿಕೇರಿ ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು (41.50) ಎಕರೆ ಪ್ರದೇಶದಲ್ಲಿ ಸ್ಪಾಂಜ್ ಐರನ್ ಸ್ಥಾವರದ ಸಾಮರ್ಥ್ಯವನ್ನು 175 ಟಿ.ಪಿ.ಡಿ. ಇಂದ 375 ಟಿ.ಪಿ.ಡಿ.ಗೆ, 72,000 ಟಿ.ಪಿ.ಎ. ಸಾಮರ್ಥ್ಯದ ರೋಲಿಂಗ್ ಮಿಲ್, 12 ಮೆ.ವ್ಯಾ. (ಡಬ್ಲ್ಯೂ.ಹೆಚ್.ಆರ್.ಬಿ-06ಮೆ.ವ್ಯಾ., ಎ.ಎಫ್.ಬಿ.ಸಿ.-06 ಮೆ.ವ್ಯಾ.) ಸಾಮರ್ಥ್ಯದ ಸಹ ವಿದ್ಯುತ್ ಘಟಕದ ಸ್ಥಾಪನೆಯೊಂದಿಗೆ ಉಕ್ಕು ಸ್ಥಾವರದ ವಿಸ್ತರಣೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ. ಸದರಿ ಯೋಜನೆಯು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ 14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ಪರಿಸರ ಸಾರ್ವಜನಿಕ ಆಲಿಕೆಯನ್ನು ನಡೆಸಬೇಕಿದೆ. ಕೇಂದ್ರ ಅರಣ್ಯ ಪರಿಸರ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: F.No.J-11011/163/2010-IA.II(I) ದಿನಾಂಕ 13.06.2019 ಮತ್ತು ದಿನಾಂಕ: 15.02.2020 ಮತ್ತು 18.02.2021ರಂದು ಉದ್ದಿಮೆಯವರು ನೀಡಿದ ನಿವೇದನೆಯ ಪತ್ರದ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆಯನ್ನು ಮಂಡಳಿವತಿಯಿಂದ ನಡೆಸಲಾಗುತ್ತಿದೆ.

ಯೋಜನೆಯ ವಿವರಗಳು ಕೆಳಕಂಡಂತಿವೆ.

1. **ಕಂಪನಿಯ ಹೆಸರು ಮತ್ತು ವಿಳಾಸ: ಮೆ. ಬಾಬಾ ಅಖಿಲಾ ಸಾಯಿ ಜ್ಯೋತಿ ಇಂಡಸ್ಟ್ರೀಸ್ ಪ್ರೈ. ಲಿ.** ಸರ್ವೆ ನಂ. 83, 87 ಮತ್ತು 91 ಚಿಕ್ಕಬಗನಾಳ ಗ್ರಾಮ, ಕರ್ಕಿಹಳ್ಳಿ ಅಂಚೆ, ಕೊಪ್ಪಳ ಜಿಲ್ಲೆ – 583 228.
2. **ಉದ್ದೇಶಿತ ಯೋಜನೆಯ ಸ್ಥಳ : ಸರ್ವೆ ನಂ. 79 ಮತ್ತು 84 ಚಿಕ್ಕಬಗನಾಳ ಗ್ರಾಮ, ಸರ್ವೆ ನಂ. 90/5, 90/7, 90/8, 90/9 ಮತ್ತು 91/6 ಕುನಿಕೇರಿ ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ.**
3. **ಯೋಜನೆಯ ಕಾರ್ಯ ಚಟುವಟಿಕೆ:** ಸ್ಪಾಂಜ್ ಐರನ್ ಸ್ಥಾವರದ ಸಾಮರ್ಥ್ಯವನ್ನು 175 ಟಿ.ಪಿ.ಡಿ. ಇಂದ 375 ಟಿ.ಪಿ.ಡಿ.ಗೆ, 72,000 ಟಿ.ಪಿ.ಎ. ಸಾಮರ್ಥ್ಯದ ರೋಲಿಂಗ್ ಮಿಲ್, 12 ಮೆ.ವ್ಯಾ. (ಡಬ್ಲ್ಯೂ.ಹೆಚ್.ಆರ್.ಬಿ.- 06ಮೆ.ವ್ಯಾ., ಎ.ಎಫ್.ಬಿ.ಸಿ. - 06 ಮೆ.ವ್ಯಾ.) ಸಾಮರ್ಥ್ಯದ ಸಹ ವಿದ್ಯುತ್ ಘಟಕದ ಸ್ಥಾಪನೆಯೊಂದಿಗೆ ಉಕ್ಕು ಸ್ಥಾವರದ ವಿಸ್ತರಣೆಯ ಪ್ರಸ್ತಾವನೆಯನ್ನು ಮಾಡಲು ಉದ್ದೇಶಿಸಿರುತ್ತಾರೆ.
4. **ಮಾಲಿನ್ಯ ನಿಯಂತ್ರಣ ಕ್ರಮಗಳು:** ಶೂನ್ಯ ದ್ರವ ವಿಸರ್ಜನೆಯನ್ನು ನಿರ್ವಹಿಸುವುದರಿಂದ, ಭೂಮಿ ಮತ್ತು ಜಲಮೂಲಗಳಲ್ಲಿ ಯಾವುದೇ ನೀರನ್ನು ಹೊರಹಾಕಲಾಗುವುದಿಲ್ಲ. ಪ್ರಕ್ರಿಯೆಯಿಂದ ಉತ್ಪತ್ತಿಯಾದ ತಿರಸ್ಕರಿಸಿದ ನೀರನ್ನು ಪ್ರಕ್ರಿಯೆಯಲ್ಲಿ ಮರುಬಳಕೆ ಮಾಡಲಾಗುತ್ತದೆ. ಕೈಗಾರಿಕಾ ಮತ್ತು ದೇಶೀಯ ಉದ್ದೇಶಗಳಿಗಾಗಿ ಅಂತರ್ಜಲವನ್ನು ಅಮೂರ್ತಗೊಳಿಸಲಾಗುತ್ತದೆ. ಉದ್ಯಮದ ಪರಧಿಯ ಉದ್ದಕ್ಕೂ ಮತ್ತು ಉದ್ಯಮದ ಆವರಣದಲ್ಲಿ ಹಸಿರುಪಟ್ಟಿಯನ್ನು ಅಭಿವೃದ್ಧಿಪಡಿಸಲಾಗುತ್ತದೆ. ವಾಹನಗಳ ಸರಿಯಾದ ನಿರ್ವಹಣೆ ನಿಯಮಿತವಾಗಿ ನಡೆಸಲಾಗುತ್ತದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾನದಂಡಗಳ ಪ್ರಕಾರ ಗಾಳಿಯ ಗುಣಮಟ್ಟದಲ್ಲಿನ ಬದಲಾವಣೆಗಳನ್ನು ಮೇಲ್ವಿಚಾರಣೆ ಮಾಡಲು ನಿಯತಕಾಲಿಕವಾಗಿ ವಾಯು ಗುಣಮಟ್ಟದ ಮೇಲ್ವಿಚಾರಣೆ ನಡೆಸಲಾಗುವುದು.
5. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ಉದ್ದೇಶಿತ ಯೋಜನಾ ಸ್ಥಳ, ಸರ್ವೆ ನಂ. 79 ಮತ್ತು 84 ಚಿಕ್ಕಬಗನಾಳ ಗ್ರಾಮ, ಸರ್ವೆ ನಂ. 90/5, 90/7, 90/8, 90/9 ಮತ್ತು 91/6 ಕುನಿಕೇರಿ ಗ್ರಾಮ, ಕೊಪ್ಪಳ ತಾಲ್ಲೂಕು ಮತ್ತು ಜಿಲ್ಲೆ ದಿನಾಂಕ: 28.05.2021 (ಶುಕ್ರವಾರ) ರಂದು ಪೂರ್ವಾಹ್ನ 11:00 ಗಂಟೆಗೆ**
6. **ಯೋಜನೆಯ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಇಡುವ ಸ್ಥಳ :** (ಅ) ಜಿಲ್ಲಾಧಿಕಾರಿಗಳ ಕಛೇರಿ, ಕೊಪ್ಪಳ ಜಿಲ್ಲೆ, ಕೊಪ್ಪಳ (ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಕೊಪ್ಪಳ (ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಕೊಪ್ಪಳ (ಈ) ತಾಲ್ಲೂಕು ಪಂಚಾಯಿತಿ, ಕೊಪ್ಪಳ (ಉ) ಗ್ರಾಮ ಪಂಚಾಯಿತಿ ಕಾರ್ಯಾಲಯ, ಚಿಕ್ಕಬಗನಾಳ ಮತ್ತು ಕುನಿಕೇರಿ (ಊ) ಪ್ರಾದೇಶಿಕ ಅಧಿಕಾರಿಗಳ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕೊಪ್ಪಳ (ಋ) ಕೇಂದ್ರ ಪರಿಸರ ಅರಣ್ಯ ಮತ್ತು ಹವಮಾನ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ-3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 034 (ಎ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ.49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560 001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆಟಿಪ್ಪಣಿಗಳು ಹಾಗೂ ಅಹವಾಲುಗಳನ್ನು ಮೌಖಿಕ/ಲಿಖಿತ/ಇ-ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in** ನಲ್ಲಿ ಪಡೆಯಬಹುದು.

ಸಹಿ/-
ಸದಸ್ಯ ಕಾರ್ಯದರ್ಶಿ

"ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ, ಪರಿಸರ ಹಾನಿ ತಪ್ಪಿಸಿ"

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.

ಕ್ರಸಂ:ಕಾಇಂ:ಲೋಇವಿ:ತುಮ:ಜೆಇ-3:ಟೆಂಡರ್-1/2021-22 ದಿನಾಂಕ: 23.04.2021

ಟೆಂಡರ್ ಪ್ರಕಟಣೆ ಸಂ.1/2021-22 ದಿನಾಂಕ: 23.04.2021 ದ್ವಿಲಕೋಟೆ

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:1/2021-22. ದಿನಾಂಕ: 23.04.2021 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳ ಅಡಿಯಲ್ಲಿ 05ಕಾಮಗಾರಿಗಳಿಗೆ ಇ-ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ.175-32 ಲಕ್ಷಗಳು** ಹಾಗೂ ಕನಿಷ್ಠ ಮೊತ್ತ **ರೂ.53-16ಲಕ್ಷಗಳು,** ಅರ್ಹ ಗುತ್ತಿಗೆದಾರರು: **3 ನೇ ದರ್ಜೆ ಹಾಗೂ 1ನೇ ದರ್ಜೆ** ಮೇಲ್ಪಟ್ಟು, ಕಾಲಾವಧಿ: 6ತಿಂಗಳು ಗರಿಷ್ಠ 11 ತಿಂಗಳು, ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **12.05.2021**ರ 16.00 ಗಂಟೆಗೆ, ಇ-ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **28.04.2021 ರಿಂದ 13.05.2021**ರ 16.00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **13.05.2021** ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **15.05.2021** ಬೆಳಗ್ಗೆ 11.00 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ದಿನಾಂಕಃ **17.05.2021** ಬೆಳಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/-ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.

DIPR/TUM/34/MCA/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.

ಮದರ್ ಡೇರಿ (ಕಹಾಮ ಘಟಕ)
ಜಿ.ಕೆ.ವಿ.ಕೆ. ಅಂಚೆ, ಯಲಹಂಕ, ಬೆಂಗಳೂರು - 560 065
ದೂರವಾಣಿ: 080-22179006, ಫ್ಯಾಕ್ಸ್: 080-28462652
ಇ-ಮೇಲ್: purchase@motherdairykmf.in

ಟೆಂಡರ್ ಪ್ರಕಟಣೆ

ಮದರ್ ಡೇರಿ, ಯಲಹಂಕ,ಬೆಂಗಳೂರು ಮದರ್ ಡೇರಿ ಮತ್ತು ನಂದಿನಿ ಐಸ್ ಕ್ರೀಂ ಘಟಕ ಬಳ್ಳಾರಿಗೆ ಅವಶ್ಯಕವಿರುವ ಈ ಕೆಳಕಂಡ ಸಾಮಗ್ರಿಗಳ ಪೂರೈಕೆಗಾಗಿ ಅರ್ಹ ಟೆಂಡರ್‌ದಾರರಿಂದ ಟೆಂಡರ್ ಆಹ್ವಾನಿಸಿದೆ.

ಅ.ಸಂ.ಮಡೇ/ಖರೀದಿ/ಇ-ಸಂಗ್ರಹಣೆ/ಟೆಂಡರ್-186/2021-22 ದಿನಾಂಕ: 20-04-2021

ಅ. ವಾರ್ಷಿಕ ದರ ಗುತ್ತಿಗೆ ಆಧಾರದಲ್ಲಿ ಸಾಮಗ್ರಿ ಸರಬರಾಜು ಮಾಡುವ ಬಗ್ಗೆ: 1) ಶ್ರಿಂಕ್ ಫಿಲಂ -12 ಮೆ.ಟನ್ 2) 10 ಕಿ.ಗ್ರಾಂ. ಡೇರಿ ವೈಟನರ್ ತುಂಬಲು ಬೇಕಾಗಿರುವ ಜಾರ್‌ಗಳು-1.12 ಲಕ್ಷ ಸಂಖ್ಯೆ 3) 10 ಕಿ.ಗ್ರಾಂ. ಡೇರಿ ವೈಟನರ್ ತುಂಬಲು ಬೇಕಾಗಿರುವ ಜಾರ್ ಲೈನರ್‌ಗಳು -1.12 ಲಕ್ಷ ಸಂಖ್ಯೆ.

ಆ. ದರ ಗುತ್ತಿಗೆ ಆಧಾರದಲ್ಲಿ ಸಾಮಗ್ರಿ ಸರಬರಾಜು ಮಾಡುವ ಬಗ್ಗೆ: 1) ನಂದಿನಿ 30 ಮಿಲಿ ಕಪ್ ಇಪ್ಲೂಟ್ ಬಾಕ್ಸ್-1.08 ಲಕ್ಷ ಸಂಖ್ಯೆ **2)** ನಂದಿನಿ 65 ಮಿಲಿ ಕಪ್ ಇಪ್ಲೂಟ್ ಬಾಕ್ಸ್ - 1.75 ಲಕ್ಷ ಸಂಖ್ಯೆ **3)** ನಂದಿನಿ 50 ಮಿಲಿ ಕೋನ್ ಇಪ್ಲೂಟ್ ಬಾಕ್ಸ್-2 ಲಕ್ಷ ಸಂಖ್ಯೆ **4)** ನಂದಿನಿ 120 ಮಿಲಿ ಕೋನ್ ಇಪ್ಲೂಟ್ ಬಾಕ್ಸ್-1 ಲಕ್ಷ ಸಂಖ್ಯೆ **5)** ನಂದಿನಿ ಮ್ಯಾಂಗೋ ಸಂಡೇ ಇ ಪ್ಲೂಟ್ ಬಾಕ್ಸ್-1 ಲಕ್ಷ ಸಂಖ್ಯೆ **6)** ನಂದಿನಿ ಜ್ಯೂನಿಯರ್ ಚಾಕೋಬಾರ್ / ಕುಲ್ಫಿ ಇಪ್ಲೂಟ್ ಬಾಕ್ಸ್-0.50 ಲಕ್ಷ ಸಂಖ್ಯೆ **7)** ನಂದಿನಿ ಡಾಲಿ/ಚಾಕೋಬಾರ್ ಇಪ್ಲೂಟ್ ಬಾಕ್ಸ್ -1 ಲಕ್ಷ ಸಂಖ್ಯೆ **8)** ಅಮೂಲ್ 65 ಮಿಲಿ ಕಪ್ ಇಪ್ಲೂಟ್ ಬಾಕ್ಸ್-0.60 ಲಕ್ಷ ಸಂಖ್ಯೆ.

ಉತ್ಪಾದಕರು ಹಾಗೂ ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಆನ್‌ಲೈನ್ ಮುಖಾಂತರ ಮಾತ್ರ ಟೆಂಡರಿನಲ್ಲಿ ಭಾಗವಹಿಸಬೇಕಾಗಿರುತ್ತದೆ. ಟೆಂಡರ್ ದಾಖಲಾತಿಯನ್ನು **ದಿನಾಂಕ: 23-04-2021** ರಿಂದ ಇ-ಸಂಗ್ರಹಣೆ ವೆಬ್‌ಸೈಟ್: https://eproc.karnataka.gov.in/ ನಲ್ಲಿ download ಮಾಡಿಕೊಂಡು **ದಿನಾಂಕ. 07-05-2021**ರ ಸಂಜೆ **05.00** ಗಂಟೆಯ ಒಳಗಾಗಿ Submit ಮಾಡಬಹುದಾಗಿರುತ್ತದೆ.

ಸಹಿ/- ನಿರ್ದೇಶಕರು, ಮದರ್ ಡೇರಿ ಪರವಾಗಿ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಖ್ಯೆ : ಎಸ್‌ಇಇ/ಬಿಸಡಬ್ಲ್ಯೂ/ಎಇಇ(ಸಿ)/2021-22/449-56 ದಿನಾಂಕ: 26.04.2021

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಬೆವಿಕಂನಿಂದ ಬೆಂಗಳೂರು ಪಶ್ಚಿಮ ವೃತ್ತದಲ್ಲಿ ವಿಚಾರಣೆ ಸಂಖ್ಯೆ: **SEE/BCW/ AEE(CIVIL)/2021-22/Enq.No-01 ದಿನಾಂಕ: 26.04.2021**ರ ಅನ್ವಯ ಸಿ.ಎ. ಸೈಟ್ ಸಂಖ್ಯೆ 5, 3ನೇ ಹಂತ, ಭೀಮಾಜ್ಯೋತಿನಗರ, ಹೆಚ್‌ಬಿಸಿಎಸ್ ಬಡಾವಣೆ, ಬಸವೇಶ್ವರನಗರ, ಬೆಂಗಳೂರು – 560 079 ರಲ್ಲಿರುವ ಬೆಂಗಳೂರು ಪಶ್ಚಿಮ ವೃತ್ತದ ಅಧೀಕ್ಷಕ ಅಭಿಯಂತರರು (ವಿದ್ಯುತ್), (ಕಾ, ಕಾ&ನಿ) ರವರ ಕಛೇರಿಗೆ ಒಂದು ವರ್ಷದ ಅವಧಿಗೆ ಹೌಸ್‌ಕೀಪಿಂಗ್ ಸೇವೆಯನ್ನು ಒದಗಿಸಲು **ದ್ವಿಲಕೋಟೆ ಪದ್ಧತಿಯಲ್ಲಿ** ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರಿಗಿಟ್ಟ ಅಂದಾಜು ಮೊತ್ತ : **ರೂ. 4.72 ಲಕ್ಷಗಳು.** ಟೆಂಡರ್ ಬಗೆಗಿನ ಪ್ರಶ್ನೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ : **10.05.2021ರ ಸಂಜೆ 5.00 ಗಂಟೆಯವರೆಗೆ.** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **12.05.2021ರ ಸಂಜೆ 4.00 ಗಂಟೆಯವರೆಗೆ.** ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **15.05.2021ರ ಸಂಜೆ 4.30 ಗಂಟೆಯವರೆಗೆ.** ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ : ನಂತರ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಿಂದ **ದಿನಾಂಕ 28.04.2021**ನಿಂದ ಪಡೆದುಕೊಳ್ಳಬಹುದು ಅಥವಾ ಇ-ಪ್ರೊಕ್ಯೂರ್‌ಮೆಂಟ್ ಹೆಲ್ಪ್‌ಡೆಸ್ಕ್ +91-80-46010000 / +91-80-68948777 ಅಥವಾ ಇ-ಮೇಲ್ : support@eprochelpdesk.com ನ್ನು ಸಂಪರ್ಕಿಸಬಹುದು.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile App ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/-
ಅಧೀಕ್ಷಕ ಅಭಿಯಂತರರು (ವಿದ್ಯುತ್),(ಕಾ, ಕಾ&ನಿ)
ಬೆಂಗಳೂರು ಪಶ್ಚಿಮ ವೃತ್ತ, ಬೆವಿಕಂ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು-1 (ಕೆರೆಗಳು)ರವರ ಕಚೇರಿ, 3ನೇ ಮಹಡಿ, ಬಿಬಿಎಂಪಿ ಕೇಂದ್ರ ಕಚೇರಿ, ಎನ್.ಆರ್. ಚೌಕ, ಬೆಂಗಳೂರು-560002.

ಸಂಖ್ಯೆ : ಕಾಪಾಅ1(ಕೆರೆಗಳು)/ಟೆಂಡರ್/04/2020-21 ದಿನಾಂಕ: 26-04-2021

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಜಿಒಕೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಕಾರ್ಯಪಾಲಕ ಅಭಿಯಂತರರು-1 (ಕೆರೆಗಳು), ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಯೋಜನಾ ನಿರ್ವಹಣೆ ಸಮಾಲೋಚನಾ ಸೇವೆಗಳನ್ನು ಒಳಗೊಂಡಂತೆ ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣ ಒದಗಿಸಲು ಸಮಾಲೋಚಕ ಸಲಹೆಗಾರರನ್ನು ನೇಮಿಸಲು (ತಾಂತ್ರಿಕ ಮತ್ತು ಆರ್ಥಿಕ) ಪ್ರಸ್ತಾವನೆಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ)
1	ಹರಳೂರು ಕೆರೆಯ ತುರ್ತು ಕಾಮಗಾರಿ	100.00
2	ಕಸವನಹಳ್ಳಿ ಕೆರೆಯ ತುರ್ತು ಕಾಮಗಾರಿ	50.00
3	ಕೈಕೊಂಡರಹಳ್ಳಿ ಕೆರೆಯ ತುರ್ತು ಕಾಮಗಾರಿ	100.00
4	ಸಾರಕ್ಕಿ ಕೆರೆಯ ತುರ್ತು ಕಾಮಗಾರಿ	100.00

ಟೆಂಡರ್‌ನೊಂದಿಗೆ ಇಎಂಡಿ ಮೊತ್ತಕ್ಕೆ ಬದಲಾಗಿ ಸರ್ಕಾರದ ಆದೇಶ ಸಂಖ್ಯೆ : ಆಇ 675 ವೆಚ್ಚ-12 2020 ಬೆಂಗಳೂರು ದಿನಾಂಕ: 22.12.2020ರನ್ವಯ ಇಎಂಡಿ ಘೋಷಣಾ ನಮೂನೆ (ಡಿಕ್ಲೇರೇಷನ್ ಫಾರಂ) ಅನ್ನು ಸಲ್ಲಿಸತಕ್ಕದ್ದು.

ಟೆಂಡರ್ ದಿನಾಂಕಗಳು: (1) ಆರ್‌ಎಫ್‌ಪಿ ದಾಖಲೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ನಿಂದ ದಿನಾಂಕ: **27.04.2021** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವ ಸಭೆ: **04.05.2021ರ ಸಂಜೆ 4.00 ಗಂಟೆಗೆ ಮುಖ್ಯ ಅಭಿಯಂತರರು, ಕೆರೆ ರವರ ಕಚೇರಿಯಲ್ಲಿ.** (3) ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.05.2021ರ ಸಂಜೆ 4.00 ಗಂಟೆಯವರೆಗೆ.** (4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **13.05.2021ರ ಸಂಜೆ. 4.30 ಗಂಟೆಗೆ ಈ ಮೇಲಿನ ಕಚೇರಿಯಲ್ಲಿ.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಪಡೆದುಕೊಳ್ಳಬಹುದಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು-1 (ಕೆರೆಗಳು)

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

**ಜಿಲ್ಲಾ ಪಂಚಾಯತ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು
ನೈರ್ಮಲ್ಯ ವಿಭಾಗ, ಕೊಪ್ಪಳ.**

ಸಂಖ್ಯೆ.ಗ್ರಾ.ಕು.ನೀ&ನೈ/ವಿಕೊ/ಟೆಂಡರ್/2020-21/182 ದಿನಾಂಕ:23.04.2021

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎರಡನೇ ಕರೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಸಾರ್ವಜನಿಕ ಸಂಗ್ರಹಣೆಯಲ್ಲಿ, ಪಾರದರ್ಶಕತೆ ಅಧಿನಿಯಮ 1999 ರ ಪ್ರಕಾರ ಪಾರದರ್ಶಕತೆ ಆಕ್ಟ್ 2000 ನಿಯಮದಂತೆ Standard Bid Document KW ರ ನಿಯಮಗಳನ್ವಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಗುತ್ತಿಗೆದಾರರಿಂದ ಇ-ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಅನುಬಂಧದಲ್ಲಿಯ 2020-21 ನೇ ಸಾಲಿನ ಜಲ ಜೀವನ್ ಮಿಶನ್ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ದ್ವಿತೀಯ ಕರೆಯ ಟೆಂಡರ್ ಆಹ್ವಾನಿಸಿದೆ. ಅರ್ಹ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಪೋರ್ಟಲ್ **http://eproc.karnataka.gov.in** ಮುಖಾಂತರ ಭಾಗವಹಿಸಬಹುದು.

ಸಾಮಾನ್ಯ ಸೂಚನೆಗಳು:

1) ಗುತ್ತಿಗೆದಾರರು ಟೆಂಡರ್ ಬಿಡ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. 2) ಪೂರ್ವಾರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಹಾಗೂ ದಾಖಲೆಗಳನ್ನು ಸ್ಕ್ಯಾನ್ ಮಾಡಿ, ಆನ್‌ಲೈನ್‌ನಲ್ಲಿ ಟೆಂಡರ್ ಭರ್ತಿ ಸಮಯದಲ್ಲಿ ಲಗತ್ತಿಸಬೇಕು. 3) ನಿಗದಿತ ಇ.ಎಮ್.ಡಿ ಹಣವನ್ನು ಆನ್‌ಲೈನ್ ಮೂಲಕ ನಿಗದಿಪಡಿಸಿದಂತೆ ಸಂದಾಯ ಮಾಡಬೇಕು. 4) ಡಬಲ್ ಕವರ್ ಟೆಂಡರ್ ಆಹ್ವಾನಿಸಿದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿ ಕೆಲಸದ ವೇಳೆಯಲ್ಲಿ ಅಥವಾ **email:eerwsskpl@gmail.com** ದ್ವಾರ ಮಾಹಿತಿ ಪಡೆಯಬಹುದು. ಟೆಂಡರ್ ಹಾಗೂ ಮಾಹಿತಿಯನ್ನು ಸದರಿ ವೆಬ್‌ಸೈಟಿನಲ್ಲಿ ದಿನಾಂಕ:27/04/2021 ರಿಂದ Download ಮಾಡಿಕೊಳ್ಳಬಹುದಾಗಿದೆ.

1) ಟೆಂಡರ್ ಪ್ರೋಸೆಸಿಂಗ್ ಶುಲ್ಕ : **ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿರುವಂತೆ.** 2) ಕಾಮಗಾರಿಯನ್ನು ಪೂರ್ಣಗೊಳಿಸಲು ನಿಗದಿತ ಕಾಲಾವಧಿ: **6 ತಿಂಗಳು (ಮಳೆಗಾಲ ಸೇರಿದಂತೆ).** 3) ಟೆಂಡರ್ ಆಕ್ಷೇಪಣೆ/ ಸೃಷ್ಟೀಕರಣಗಳಿಗಾಗಿ ನಿಗದಿಪಡಿಸಿದ ಅಂತಿಮ ದಿನಾಂಕ ಹಾಗೂ ಸಮಯ: **01/05/2021 ರಂದು 11:00 ಗಂಟೆ ನಂತರ ಡೌನ್‌ಲೋಡ್** ಮಾಡಿಕೊಳ್ಳಬಹುದು. 4) ಟೆಂಡರ್‌ಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ ಹಾಗೂ ಸಮಯ: **10/05/2021 ರಂದು 16:00 ಗಂಟೆ.** 5) ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ: **11/05/2021 ರಂದು 11:00 ಗಂಟೆಗೆ** ಕಛೇರಿ ಸಮಯದಲ್ಲಿ ಅಥವಾ ರಜಾ ಇದ್ದ ಪಕ್ಷದಲ್ಲಿ ಮರುದಿನ.

ಟಿಪ್ಪಣಿ: ಬಿಡ್‌ಗಳನ್ನು ತೆರೆಯುವ ವೇಳೆಯಲ್ಲಿ ಟೆಂಡರ್‌ನಲ್ಲಿ ಭಾಗವಹಿಸಿದ ಗುತ್ತಿಗೆದಾರರು ಇ.ಎಮ್.ಡಿ ಹಾಗೂ ಇತರೆ ಪ್ರಮಾಣ ಪತ್ರಗಳ ಮೂಲ ದಾಖಲೆಗಳನ್ನು ಬಿಡ್ ತೆರೆದ ನಂತರ ವಿಭಾಗ ಕಛೇರಿಗೆ ಪರಿಶೀಲನೆಗಾಗಿ ಒದಗಿಸತಕ್ಕದ್ದು.

ಸಹಿ/-
ಕಾರ್ಯಪಾಲಕ ಅಭಿಯಂತರರು,
ಗ್ರಾ.ಕು.ನೀ & ನೈರ್ಮಲ್ಯ ವಿಭಾಗ, ಕೊಪ್ಪಳ

ವಾಸಾಸಂಇ/ಕೊಪ್ಪಳ/38/ಅಲಕ್‌ನಂದ/2021-22

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರು-1, (ಕೆರೆಗಳು), 3ನೇ ಮಹಡಿ,
ಅನೆಕ್ಸ್ ಕಟ್ಟಡ-3, ಬಿಬಿಎಂಪಿ ಕೇಂದ್ರ ಕಚೇರಿ, ಎನ್.ಆರ್. ಚೌಕ, ಬೆಂಗಳೂರು-02.

ಸಂಖ್ಯೆ:ಕಾಪಾಅ-1(ಕೆರೆಗಳು)/ಟೆಂಡರ್/05/2021-22 ದಿನಾಂಕ: 27-04-2021

ಅಲ್ಪಾವಧಿ ಟೆಂಡರ್‌ಗಳ ಆಹ್ವಾನ (ಐಎಫ್‌ಟಿ)
(ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು-1 (ಕೆರೆಗಳು) ಬಿಬಿಎಂಪಿ ಬೆಂಗಳೂರು ರವರ ಪರವಾಗಿ ಈ ಕೆಳಕಂಡ ಕಾಮಗಾರಿಗಳಿಗೆ ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣಾ ಸೇವೆಗಳಿಗೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸಲು ಸಲಹೆಗಾರರನ್ನು (ತಾಂತ್ರಿಕ ಮತ್ತು ಆರ್ಥಿಕ) ನೇಮಕಮಾಡಲು ಟೆಂಡರ್‌ನ್ನು ಆಹ್ವಾನಿಸಿದ್ದಾರೆ.

ಇಎಂಡಿಗೆ ಬದಲಾಗಿ ಟೆಂಡರ್ ಮಾಡುವವರು ಸರ್ಕಾರಿ ಆದೇಶ ಸಂಖ್ಯೆ ಆಇ 675 ವೆಚ್ಚ 12/2020, ಬೆಂಗಳೂರು, ದಿನಾಂಕಃ 22-12-2020 ರಂತೆ ಘೋಷಣಾ ಪತ್ರ ಸಲ್ಲಿಸಬೇಕು.

ಕ್ರ. ಸಂ.	ಕೆಲಸದ ಹೆಸರು	ಯೋಜನಾ ಮೊತ್ತ (ರೂ.ಲಕ್ಷಗಳಲ್ಲಿ)
01	ಹರಳೂರು ಕೆರೆಯ ತುರ್ತು ಕಾಮಗಾರಿಗೆ ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣಾ ಸೇವೆಗಳನ್ನು ಸೇರಿದಂತೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸುವುದು.	100.00
02	ಕಾಸವನಹಳ್ಳಿ ಕೆರೆಯ ತುರ್ತು ಕಾಮಗಾರಿಗೆ ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣಾ ಸೇವೆಗಳನ್ನು ಸೇರಿದಂತೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸುವುದು.	50.00
03	ಕಾಯಕೊಂಡ್ರಹಳ್ಳಿ ಕೆರೆಯ ತುರ್ತು ಕಾಮಗಾರಿಗೆ ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣಾ ಸೇವೆಗಳನ್ನು ಸೇರಿದಂತೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸುವುದು.	100.00
04	ಸಾರಕ್ಕಿ ಕೆರೆಯ ತುರ್ತು ಕಾಮಗಾರಿಗೆ ನಿರ್ಮಾಣ ಮೇಲ್ವಿಚಾರಣೆ ಮತ್ತು ಗುಣಮಟ್ಟ ನಿಯಂತ್ರಣಾ ಸೇವೆಗಳನ್ನು ಸೇರಿದಂತೆ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸುವುದು.	100.00

ಟೆಂಡರ್‌ನ ಕಾರ್ಯಸೂಚಿ: 1) ಆರ್‌ಎಫ್‌ಪಿ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ **ದಿನಾಂಕ: 28-04-2021 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2)** ಬಿಡ್‌ಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸುವ **ದಿನಾಂಕ: 11-05-2021ರ ಸಂಜೆ 4:00 ಗಂಟೆಯೊಳಗೆ. 3)** ಪೂರ್ವ ಬಿಡ್ ಸಭೆಯನ್ನು **ದಿನಾಂಕ: 04-05-2021 ರಂದು ಸಂಜೆ 4:30 ಗಂಟೆಗೆ ನಡೆಸಲಾಗುವುದು. 4)** ತಾಂತ್ರಿಕ ಬಿಡ್ ಅನ್ನು **ದಿನಾಂಕ: 13-05-2021 ರಂದು ಸಂಜೆ 4:30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ **https://eproc.karnataka.gov.in** ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು-1, ಕೆರೆಗಳು, ಬೃಬೆಂಮಪಾ.

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಿಯಾಯಿತಿ ದರದಲ್ಲಿ ಭೂಮಿ ಕೊಡಲು ನಿರ್ಣಯ • ಸರ್ಕಾರಕ್ಕೆ ಶಾಸಕ ಎಚ್‌.ಕೆ.ಪಾಟೀಲ ಛೀಮಾರಿ

‘ಜಿಂದಾಲ್‌ಗೆ ಭೂಮಿ– ನಾಚಿಕೆಗೇಡಿನ ಸಂಗತಿ’

ಪ್ರಜಾವಾಣಿ ವಾರ್ತೆ

ಗದಗ: ‘ಸರ್ಕಾರಕ್ಕೆ ₹2,000 ಕೋಟಿಗೂ ಹೆಚ್ಚು ಹಣವನ್ನು ಹತ್ತಾರು ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವ ಕಟುಕಾತಿದಾರ ಜಿಂದಾಲ್ ಕಂಪನಿಗೆ ರಾಜ್ಯ ಸಚಿವ ಸಂಪುಟ ರಿಯಾಯಿತಿ ದರದಲ್ಲಿ ಭೂಮಿ ಕೊಡಲು ನಿರ್ಣಯ ಕೈಗೊಂಡಿರುವುದು ನಾಚಿಕೆಗೇಡಿನ ಸಂಗತಿ’ ಎಂದು ಶಾಸಕ ಎಚ್‌.ಕೆ.ಪಾಟೀಲ ಸರ್ಕಾರಕ್ಕೆ ಛೀಮಾರಿ ಹಾಕಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ‘ಹಿಂದೆ ವಿರೋಧ ಪಕ್ಷದ ನಾಯಕರಾಗಿದ್ದ ಸಂದರ್ಭದಲ್ಲಿ ಇಂದಿನ ಸಿಎಂ ಬಿ.ಎಸ್.ಯಡಿಯೂರಪ್ಪ ಅವರೇ ಇದರ ವಿರುದ್ಧ ತೀವ್ರವಾಗಿ ಪ್ರತಿಭಟಿಸಿದ್ದರು. ಏನೇ ಆದರೂ ಒಂದು ಇಂಚೂ ಭೂಮಿ ಬಿಟ್ಟು ಕೊಡುವುದಿಲ್ಲ ಎಂದು ಗಟ್ಟಿ ಧ್ವನಿ ಮೊಳಗಿಸಿದ್ದರು. ಆ ಛಲ ಈಗ ಎಲ್ಲಿ ಹೋಯಿತು? ಅವತ್ತು ಜನಪರವಾಗಿ ಮಾತನಾಡಿದ ಸಿಎಂ ಇಂದು ಮಂತ್ರಿಗಳು, ನಾಯಕರ ಒತ್ತಡಕ್ಕೆ ಮಣಿದಿದ್ದಾರೆಯೆ’ ಎಂದು ಪ್ರಶ್ನಿಸಿದರು.

‘ಲಾಕ್‌ಡೌನ್ ಘೋಷಣೆಯಾಗಿದೆ. ಕೋವಿಡ್–19 ನಿಯಂತ್ರಣಕ್ಕೆ ಗಟ್ಟಿ ನಿಲುವು ತೆಗೆದುಕೊಳ್ಳುವ ಸಂದರ್ಭದಲ್ಲಿ ಸಚಿವ ಸಂಪುಟ ಎಕರೆಗೆ ₹1.22 ಲಕ್ಷದಂತೆ ಕ್ರಯ ಮಾಡಲು ನಿರ್ಣಯಿಸಿರುವುದು ನಾಚಿಕೇಗೇಡಿನ ಸಂಗತಿ’ ಎಂದು ಕಿಡಿಕಾರಿದರು.

‘ಒಂದು ಎಕರೆ ಭೂಮಿಗೆ ಕನಿಷ್ಠ ₹80 ಲಕ್ಷ ಇದೆ. ಇಷ್ಟು ಕಡಿಮೆ ಬೆಲೆಗೆ ಜಿಂದಾಲ್ ಕಂಪನಿಗೆ ಕೊಡುವ ಉದ್ದೇಶವಾದರೂ ಏನು? ಇದರಿಂದಾಗಿ ₹2,500 ಕೋಟಿಗೂ ಹೆಚ್ಚು ಹಣವನ್ನು ಸಚಿವ ಸಂಪುಟ ರಾಜ್ಯ ಸರ್ಕಾರಕ್ಕೆ ಪಂಗ ನಾಮ ಹಾಕುತ್ತಿದೆ’ ಎಂದರು.

‘ಈ ಕಂಪನಿ ಮೇಲೆ ರಾಜ್ಯ ಸರ್ಕಾರ ಎಫ್‌ಐಆರ್ ಮಾಡಿದೆ. ಅಕ್ರಮ ರಫ್ತು ಕುರಿತಂತೆ ಲೋಕಾಯುಕ್ತ ವರದಿ ನೀಡಿದೆ. ಆ ವರದಿಯನ್ನೂ ಉಲ್ಲಂಘಿಸಿರುವ ಈ ಸಂದರ್ಭದಲ್ಲಿ ಲೋಕಾಯುಕ್ತ ಸುಮ್ಮನೆ ಇರಬಾರದು’ ಎಂದು ಆಗ್ರಹಿಸಿದರು.

‘ಈ ನಿರ್ಣಯವನ್ನು ತಕ್ಷಣವೇ ನಿಲುಗಡೆ ಮಾಡಬೇಕು. ಈ ನಿರ್ಣಯ ಅನುಷ್ಠಾನಕ್ಕೆ ಮುಂದಡಿ ಇಟ್ಟರೆ ಸರ್ಕಾರ ಉಳಿಯುವುದು ಕಷ್ಟವಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

‘ಕಿಕ್‌ಬ್ಯಾಕ್ ಅನುಮಾನ’

ಹೊಸಪೇಟೆ (ವಿಜಯನಗರ): ‘ಜಿಂದಾಲ್‌ಗೆ ಜಮೀನು ಪರಭಾರೆ ಮಾಡುವುದನ್ನು ಈ ಹಿಂದೆ ಬಲವಾಗಿ ವಿರೋಧಿಸಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವ ಆನಂದ್ ಸಿಂಗ್ ಹಾಗೂ ಬಿಜೆಪಿಯವರು ಈಗ ಅದನ್ನು ಮಾರಾಟ ಮಾಡಿರುವುದು ನೋಡಿದರೆ ಕಿಕ್‌ಬ್ಯಾಕ್ ಪಡೆದಿರುವ ಅನುಮಾನ ಬರುತ್ತಿದೆ. ಜನರು ಕೂಡ ಇದೇ ರೀತಿಯಾಗಿ ಮಾತನಾಡುತ್ತಿದ್ದಾರೆ’ ಎಂದು ಬಳ್ಳಾರಿ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆರೋಪಿಸಿದ್ದಾರೆ.

‘ಇದೇ ಜಿಂದಾಲ್‌ನಿಂದ ಈ ಹಿಂದೆ ಯಡಿಯೂರಪ್ಪನವರ ಪುತ್ರರು ಚೆಕ್ ರೂಪದಲ್ಲಿ ಕಿಕ್‌ಬ್ಯಾಕ್ ಪಡೆದುಕೊಂಡಿದ್ದರು. ಇಲ್ಲಿ ಪರಸ್ಪರ ಏನೋ ಋಣ ಸಂದಾಯ ವಾಗಿರುವಂತೆ ಕಾಣಿಸುತ್ತಿದೆ. ಜಿಂದಾಲ್‌ಗೆ ಇದುವರೆಗೆ ಎಷ್ಟು ಜಮೀನು ನೀಡಲಾಗಿದೆ. ಅದರಲ್ಲಿ ಎಷ್ಟು ಜಮೀನು ಬಳಕೆಯಾಗುತ್ತಿದೆ ಎನ್ನುವುದನ್ನು ಸರ್ಕಾರ ಹಾಗೂ ಕಂಪನಿ ಸಾರ್ವಜನಿಕವಾಗಿ ಬಹಿರಂಗಪಡಿಸಬೇಕು’ ಎಂದಿದ್ದಾರೆ.

ಆನಂದ್ ಸಿಂಗ್ ಮೌನ– ಚರ್ಚೆಗೆ ಗ್ರಾಸ

ಒಂದನೇ ಪುಟದಿಂದ

‘ಜಿಂದಾಲ್‌ಗೆ ಜಮೀನು ಕೊಡುತ್ತಿರುವುದನ್ನು ವಿರೋಧಿಸಿ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವೆ’ ಎಂದು ಆನಂದ್ ಸಿಂಗ್ ಹಲವು ಸಲ ಹೇಳಿದ್ದರು. ಆದರೆ, ದಿನಗಳೆದಂತೆ ಆ ವಿಷಯ ಮುನ್ನೆಲೆಗೆ ಸರಿಯಿತು. ‘ವಿಜಯನಗರ ಜಿಲ್ಲೆ ಮಾಡುವುದೇ ಏಕೈಕ ಗುರಿ’ ಎಂದರು. ಉಪಚುನಾವಣೆಯಲ್ಲಿ ಇದೇ ವಿಷಯ ಮುನ್ನೆಲೆಯಲ್ಲಿ ಇತ್ತು. ಎಲ್ಲೂ ಜಿಂದಾಲ್ ವಿಷಯ ಚರ್ಚೆಯಾಗಲಿಲ್ಲ. ಚುನಾವಣೆ ಪ್ರಚಾರಕ್ಕೆ ಬಂದಿದ್ದ ಮುಖ್ಯಮಂತ್ರಿಯಾದಿಯಾಗಿ ಯಾರೊಬ್ಬರೂ ಆ ಬಗ್ಗೆ ಮಾತನಾಡಲಿಲ್ಲ.

ಅಸಲಿಯತ್ತೇನು?: 2008, 2013ರಲ್ಲಿ ಸತತ ಎರಡು ಸಲ ಬಿಜೆಪಿಯಿಂದ ಶಾಸಕರಾಗಿ ಆಯ್ಕೆಯಾಗಿದ್ದ ಆನಂದ್ ಸಿಂಗ್ ಅವರು, 2018ರಲ್ಲಿ ದಿಢೀರನೆ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದರು. ಚುನಾವಣೆಯಲ್ಲೂ ಗೆದ್ದರು. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬರಲಿಲ್ಲ. ಅನೇಕ ತಿಂಗಳು ಕ್ಷೇತ್ರದಿಂದ ದೂರ ಉಳಿದರು. ಸಮ್ಮಿಶ್ರ ಸರ್ಕಾರ, ಜಿಂದಾಲ್‌ಗೆ ಜಮೀನು ಕೊಡುವುದನ್ನು ವಿರೋಧಿಸಿ, ಕಾಂಗ್ರೆಸ್ ಹಿರಿಯ ಮುಖಂಡ ಎಚ್.ಕೆ. ಪಾಟೀಲ ಸರ್ಕಾರಕ್ಕೆ ಪತ್ರ ಬರೆದರು. ಅದರ ಬೆನ್ನಲ್ಲೇ ಆನಂದ್ ಸಿಂಗ್ ಸಕ್ರಿಯರಾಗಿ ಈ ವಿಷಯ ಕೈಗೆತ್ತಿಕೊಂಡರು.

ಪುನಃ ಬಿಜೆಪಿಗೆ ಮರಳಬೇಕೆಂದು ಮೊದಲೇ ಮನಸ್ಸು ಮಾಡಿಕೊಂಡಿದ್ದ ಆನಂದ್ ಸಿಂಗ್ ಸೂಕ್ತ ಸಂದರ್ಭಕ್ಕಾಗಿ ಕಾಯುತ್ತಿದ್ದರು. ಅದು ಜಿಂದಾಲ್ ಮೂಲಕ ಈಡೇರಿತು. ಬಿಜೆಪಿಯಿಂದ ಪುನಃ ಶಾಸಕರಾಗಿ ಆಯ್ಕೆಯಾದರು. ‘ವಿಜಯನಗರ ಜಿಲ್ಲೆ ಮಾಡುವುದು ನನ್ನ ಮುಖ್ಯ ಉದ್ದೇಶ. ಮಂತ್ರಿ ಸ್ಥಾನ ಬೇಕಿಲ್ಲ’ ಎಂದು ಹೋದಲ್ಲೆಲ್ಲ ಹೇಳಿದರು. ಆದರೆ, ವಿಜಯನಗರ ಜಿಲ್ಲೆ ಘೋಷಣೆಯಾಗುವುದಕ್ಕೂ ಮುನ್ನವೇ ಸಚಿವರಾದರು. ಒಂದು ವರ್ಷದ ಬಳಿಕ ಜಿಲ್ಲೆಯೂ ಘೋಷಣೆಯಾಯಿತು. ರಾಜಕೀಯ ಕಾರಣಕ್ಕೆ ಜಿಂದಾಲ್ ವಿಷಯ ಬಳಸಿಕೊಂಡರೆ ಹೊರತು ರೈತರ ಮೇಲಿನ ಕಾಳಜಿಯಿಂದಲ್ಲ ಎನ್ನುವುದು ಅವರ ವಿರುದ್ಧದ ಆರೋಪ.

‘ಸಂಪುಟ ಸಭೆಗೂ ಮುನ್ನ ಸಚಿವರಿಗೆ ಚರ್ಚೆಯಾಗುವ ವಿಷಯಗಳ ಕುರಿತು ಟಿಪ್ಪಣಿ ನೀಡಲಾಗುತ್ತದೆ. ಜಮೀನು ವಿಷಯ ತೀರ್ಮಾನವಾಗಲಿದೆ ಎಂದು ಗೊತ್ತಿದ್ದರೂ ಸಭೆಯಿಂದ ದೂರ ಉಳಿದರು. ಸರ್ಕಾರ ನಿರ್ಧಾರ ಪ್ರಕಟಿಸಿದ ನಂತರವೂ ಮಾತಾಡಲಿಲ್ಲ’ ಎಂದು ರೈತ ಮುಖಂಡ ಸಣ್ಣಕ್ಕಿ ರುದ್ರಪ್ಪ, ಜೆಡಿಎಸ್ ಮುಖಂಡ ಪಿ.ಶಬ್ಬೀರ್ ಅಸಮಾಧಾನ ವ್ಯಕ್ತಪಡಿಸಿದರು.

ಮೂಲಸೌಕರ್ಯ ಅಭಿವೃದ್ಧಿ, ಹಜ್ ಮತ್ತು ವಕ್ಫ್ ಖಾತೆ ಸಚಿವರಾಗಿರುವ ಆನಂದ್ ಸಿಂಗ್ ಅವರನ್ನು ಸಂಪರ್ಕಿಸಿದಾಗ, ‘ಜಿಂದಾಲ್‌ಗೆ ಜಮೀನು ಮಾರಾಟ ಮಾಡುವ ವಿಷಯ ಸಂಪುಟದಲ್ಲಿ ಚರ್ಚೆಗೆ ಬಂದಾಗ ನೋಡೋಣ ಎಂದು ಸುಮ್ಮನಿದ್ದೆ. ಸೋಮವಾರ ನಡೆದ ಸಂಪುಟ ಸಭೆಗೂ ನಾನು ಹೋಗಲು ಆಗಲಿಲ್ಲ. ಸಭೆಯ ಅಜೆಂಡಾ ಕೂಡ ಗಮನಿಸಿರಲಿಲ್ಲ. ಜಮೀನು ಮಾರಾಟ ಮಾಡುವ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದು ಮಾಧ್ಯಮಗಳಲ್ಲಿ ನೋಡಿ ತಿಳಿದುಕೊಂಡಿದ್ದೇನೆ. ನಿಯಮಗಳನ್ನು ಪರಿಶೀಲಿಸಿ, ಪರಿಸ್ಥಿತಿಗಳನ್ನು ಅವಲೋಕಿಸಿ, ಜಮೀನು ಕೊಡಲು ಸಾಧ್ಯವೇ ಎನ್ನುವುದರ ಬಗ್ಗೆ ಮುಖ್ಯಮಂತ್ರಿಯವರ ಗಮನಕ್ಕೆ ತರುತ್ತೇನೆ’ ಎಂದು ಪ್ರತಿಕ್ರಿಯಿಸಿದ್ದಾರೆ.

‘ಜಿಂದಾಲ್ ಮುಂದೆ ಬಿಜೆಪಿ ಮಂಡಿಯೂರಿದ್ದು ಯಾಕೆ?’

ಒಂದನೇ ಪುಟದಿಂದ

‘ಜಿಂದಾಲ್‌ಗೆ ಭೂಮಿ ನೀಡುವ ವಿಚಾರದಲ್ಲಿ ಅಂದು ನನ್ನ ಸರ್ಕಾರದ ವಿರುದ್ಧ ಆರೋಪ ಮಾಡಿದ್ದ ಯಡಿಯೂರಪ್ಪ ಇಂದು ಅದೇ ಆರೋಪಗಳನ್ನು ತಮ್ಮ ಮೇಲೆ ಹೊತ್ತುಕೊಳ್ಳುವರೇ?’ ಎಂದು ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

‘ಅಂದು ಕಾಂಗ್ರೆಸ್ ಶಾಸಕ, ಬಳಿಕ ಬಿಜೆಪಿ ಸೇರಿದ ಸಚಿವ ಆನಂದ್ ಸಿಂಗ್, ಜಿಂದಾಲ್ ಅನ್ನು ಈಸ್ಟ್ ಇಂಡಿಯಾ ಕಂಪನಿ ಎಂದಿದ್ದರು. ಅವರ ಇರುವ ಈಗಿನ ಸಂಪುಟ ಸಭೆ ಜಿಂದಾಲ್‌ಗೆ ಭೂಮಿ ನೀಡಿದೆ. ಆನಂದ್ ಸಿಂಗ್ ಈಗ ಈಸ್ಟ್ ಇಂಡಿಯಾ ಕಂಪನಿ ಪರವಾಗಿದ್ದಾರಾ?’ ಎಂದು ಕುಮಾರಸ್ವಾಮಿ ಕುಟುಕಿದ್ದಾರೆ.

‘ಜಿಂದಾಲ್‌ಗೆ ಭೂಮಿ ನೀಡುವ ವಿಚಾರವಾಗಿ ಅಂದು ಟೀಕೆ ಮಾಡಿ ದಾಖಲೆಗಳನ್ನು ಬಿಡುಗಡೆ ಮಾಡಿದ್ದ ಕಾಂಗ್ರೆಸ್ ಶಾಸಕ ಎಚ್.ಕೆ.ಪಾಟೀಲ್ ಈಗ ಏನು ಮಾಡುತ್ತಿದ್ದಾರೆ. ಈಗ ಅವುಗಳನ್ನು ಮತ್ತೊಮ್ಮೆ ಬಿಡುಗಡೆ ಮಾಡಲು ಯಾರ ಅಡ್ಡ ಇದ್ದಾರೆ?’ ಎಂದು ಪ್ರಶ್ನಿಸಿದ್ದಾರೆ.

ಸುದ್ದಿ 2 ನಿಮಿಷ

ಕರ್ಫ್ಯೂ ಉಲ್ಲಂಘಿಸಿದರೆ ಕ್ರಮ: ಸಚಿವ ಬಸವರಾಜ ಬೊಮ್ಮಾಯಿ

ಬೆಂಗಳೂರು: ‘ರಾಜ್ಯದಾದ್ಯಂತ ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ಲಾಕ್‌ಡೌನ್ ಮಾದರಿಯಲ್ಲಿ 14 ದಿನಗಳ ಕಟ್ಟುನಿಟ್ಟಿನ ಕರ್ಫ್ಯೂ ಮಂಗಳವಾರ (ಏ. 27) ರಾತ್ರಿ 9 ಗಂಟೆಯಿಂದ ಆರಂಭಗೊಂಡಿದೆ. ನಿಯಮ ಉಲ್ಲಂಘಿಸಿದರೆ ಕಠಿಣ ಕ್ರಮ ನಿಶ್ಚಿತ’ ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ಜನರ ಸಹಕಾರದಿಂದ ಮಾತ್ರ ಕೊರೊನಾ ಸೋಂಕು ತಡೆಯಲು ಸಾಧ್ಯ. ಹೀಗಾಗಿ, ಜನರು ಸ್ವಯಂ ನಿಯಂತ್ರಣದ ಮೂಲಕ ಸಹಕಾರ ನೀಡಬೇಕು’ ಎಂದು ಮನವಿ ಮಾಡಿದರು.



‘ಕರ್ಫ್ಯೂ ಅವಧಿಯ ದಿನಗಳಲ್ಲಿ ಪ್ರತಿಯೊಬ್ಬರು ಜಾಗೃತರಾಗಿರಬೇಕು. ತಮ್ಮ ಆರೋಗ್ಯದ ಜೊತೆ ಇತರರ ಆರೋಗ್ಯವೂ ಮುಖ್ಯ ಎಂಬುದನ್ನು ಅರಿತುಕೊಳ್ಳಬೇಕು. ಸರ್ಕಾರ ಹೇರಿರುವ ನಿರ್ಬಂಧಕ್ಕೆ ಅನುಗುಣವಾಗಿ ನಡೆದುಕೊಳ್ಳುವುದು ಬಹಳ ಅವಶ್ಯ’ ಎಂದರು.

‘ಮಹಾರಾಷ್ಟ್ರ ಸರ್ಕಾರ ಬಿಗಿ ಕ್ರಮ ಕೈಗೊಂಡಿದೆ. ನಂತರ ಆ ರಾಜ್ಯದಲ್ಲಿ ಸೋಂಕಿತರ ಸಂಖ್ಯೆ ಕಡಿಮೆಯಾಗುತ್ತಿದೆ. ಹೀಗಾಗಿ, ರಾಜ್ಯದಲ್ಲೂ ಬಿಗಿ ಕ್ರಮಗಳನ್ನು ತೆಗೆದುಕೊಳ್ಳಲು ಮುಖ್ಯಮಂತ್ರಿ ತೀರ್ಮಾನಿಸಿದರು. ಸರ್ಕಾರದ ನಿಯಮಗಳನ್ನು ಎಲ್ಲರೂ ಪಾಲಿಸಬೇಕು. ಅನಗತ್ಯವಾಗಿ ಹೊರಗೆ ಓಡಾಡುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದ್ದೇನೆ’ ಎಂದೂ ಬೊಮ್ಮಾಯಿ ಹೇಳಿದರು.

ಮದ್ಯ ಖರೀದಿಗೆ 2 ಲೀಟರ್ ಮಿತಿ

ಬೆಂಗಳೂರು: ರಾಜ್ಯದಲ್ಲಿ ಬುಧವಾರದಿಂದ ಮೇ 12 ರವರೆಗೆ ಬೆಳಿಗ್ಗೆ 6 ರಿಂದ 10 ಗಂಟೆಯ ಒಳಗೆ ಮದ್ಯದಂಗಡಿಗಳಿಂದ ಮದ್ಯ ಖರೀದಿಸಿ ಮನೆಗೆ ಒಯ್ಯಲು ಅವಕಾಶ ನೀಡಲಾಗಿದೆ.

ಅಬಕಾರಿ ಇಲಾಖೆ ಈ ಸಂಬಂಧ ಆದೇಶವನ್ನು ಹೊರಡಿಸಿದ್ದು, ಮೈಕ್ರೊ ಬ್ರಿವರೀಸ್‌ಗಳಿಂದ ಗರಿಷ್ಠ 2 ಲೀಟರ್ ಮದ್ಯ ಖರೀದಿಗೆ ಮಿತಿ ನಿಗದಿಪಡಿಸಲಾಗಿದೆ. ಮದ್ಯದಂಗಡಿಗಳಲ್ಲಿ ಕೋವಿಡ್ ಮಾರ್ಗಸೂಚಿಯನ್ನು ಪಾಲಿಸಿ ಮದ್ಯ ಮಾರಾಟ ಮಾಡಬೇಕು.

ಎಂಆರ್‌ಪಿ ಮಳಿಗೆ ಮತ್ತು ಮದ್ಯದಂಗಡಿಗಳಲ್ಲಿ ಸಿಬ್ಬಂದಿ ಗ್ಲೋವ್, ಮಾಸ್ಕ್‌ಗಳನ್ನು ಧರಿಸುವುದು ಮತ್ತು ಅಂತರ ಕಾಯ್ದುಕೊಳ್ಳುವುದು ಕಡ್ಡಾಯದೆ. ಮಾಲ್ ಮತ್ತು ಸೂಪರ್ ಮಾರ್ಕೆಟ್‌ಗಳಲ್ಲಿರುವ ಮದ್ಯದಂಗಡಿಗಳಿಗೆ ಈ ಆದೇಶ ಅನ್ವಯ ಆಗುವುದಿಲ್ಲ ಎಂದೂ ಅಬಕಾರಿ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಆರೈಕೆ ಮಾಹಿತಿ ಬಂಧುಗಳಿಗೆ ಕೊಡಿ: ಜಗ್ಗೇಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ರೋಗಿ ಆಸ್ಪತ್ರೆಗೆ ದಾಖಲಾದ 2–3 ದಿನಗಳಲ್ಲೇ ಸಾವನ್ನಪ್ಪುತ್ತಿದ್ದಾರೆ. ಯಾವ ಚಿಕಿತ್ಸೆ ನೀಡುತ್ತಾರೆ ಎಂಬುದು ಬಂಧುಗಳಿಗೆ ತಿಳಿಯುತ್ತಿಲ್ಲ. ಸಾವಾಗಿದೆ ಎನ್ನುತ್ತಾರೆ ಆದರೆ ಮುಖ ಸಹಿತ ನೋಡಲು ಆಗುತ್ತಿಲ್ಲ’ ಎಂದು ಚಿತ್ರನಟ ಮತ್ತು ಬಿಜೆಪಿ ವಕ್ತಾರರೂ ಆಗಿರುವ ಜಗ್ಗೇಶ್ ಟ್ವೀಟ್ ಮಾಡಿದ್ದಾರೆ.

‘ಯಾವುದೇ ಮಾಹಿತಿ ಪಡೆಯಲು ಬೆರಳೆಣಿಕೆಯ ಸಿಬ್ಬಂದಿ ಹೊರತುಪಡಿಸಿ ತಜ್ಞರು ಸಿಗುತ್ತಿಲ್ಲ. ರೋಗಿಗಳನ್ನು ನೋಡಲು ಅವರ ಮನೆಯವರಿಗೆ ಕೋವಿಡ್ ಮಾರ್ಗಸೂಚಿ ಅನುಸರಿಸಿ ಅವಕಾಶ ನೀಡಬೇಕು. ಇಲ್ಲವಾದರೆ ಒಳಗೇನು ನಡೆಯುತ್ತಿದೆ ಎಂಬುದು ಹೊರಗೆ ಗೊತ್ತಾಗುವುದಿಲ್ಲ’ ಎಂದು ಹೇಳಿದ್ದಾರೆ.

‘ರೋಗಿಯನ್ನು ದಾಖಲಿಸಿದ ನಂತರ ವಿಷಯ ಹೊರಗೆ ತಿಳಿಸದೇ ರೋಗಿಯ ಸಾವಿನ ಜತೆಗೆ ಮನೆಯವರೂ ಸಾಯುವಂತೆ ಮಾಡಬಾರದು. ಅರಿವು ಇಲ್ಲದವರು ಸರ್ಕಾರದ ಕೆಲಸ ಮತ್ತು ಶ್ರಮವನ್ನು ದೂಷಣೆ ಮಾಡಿ ಸತ್ಯ ತಿರುಚಿ ಅಪಪ್ರಚಾರ ಮಾಡುತ್ತಿದ್ದಾರೆ. ಆದ್ದರಿಂದ ರೋಗಿಯ ಆರೈಕೆ ಬಂಧುಗಳಿಗೂ ಸರ್ಕಾರದ ಶ್ರಮ ತಿಳಿಯುವಂತೆ ಮಾಡಬೇಕು’ ಎಂದು ತಿಳಿಸಿದ್ದಾರೆ.

ಆಮ್ಲಜನಕ ನಿರ್ವಹಣೆ ಲೋಪ: ತಲೆದಂಡ

ಪ್ರಜಾವಾಣಿ ವಾರ್ತೆ

ಕೋಲಾರ: ಐವರು ಕೊರೊನಾ ಸೋಂಕಿತರ ಜೀವ ಬಲಿ ಪಡೆದ ಎಸ್‌ಎನ್‌ಆರ್ ಜಿಲ್ಲಾ ಆಸ್ಪತ್ರೆಯ ತೀವ್ರ ನಿಗಾ ಘಟಕದ (ಐಸಿಯು) ವೈದ್ಯಕೀಯ ಆಮ್ಲಜನಕ ನಿರ್ವಹಣೆ ಲೋಪ ಪ್ರಕರಣಕ್ಕೆ ಸಂಬಂಧಿಸಿ ಜಿಲ್ಲಾ ಶಸ್ತ್ರಚಿಕಿತ್ಸಕ ಮತ್ತು ಸ್ಥಾನಿಕ ವೈದ್ಯಾಧಿಕಾರಿಯ ತಲೆದಂಡವಾಗಿದೆ.

ಸೋಂಕಿತರ ಸಾವಿನ ವಿಷಯ ತಿಳಿಯುತ್ತಲೇ ಸೋಮವಾರ ತಡರಾತ್ರಿ ಆಸ್ಪತ್ರೆಗೆ ದೌಡಾಯಿಸಿದ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಅವರು ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎಸ್.ಜಿ.ನಾರಾಯಣಸ್ವಾಮಿ ಮತ್ತು ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿ (ಆರ್‌ಎಂಒ) ಡಾ.ನಾರಾಯಣಸ್ವಾಮಿ ಅವರ ಅಮಾನತಿಗೆ ಆದೇಶಿಸಿದರು. ಜತೆಗೆ ಅವರ ವಿರುದ್ಧ ಇಲಾಖಾ ತನಿಖೆಗೆ ಸೂಚನೆ ನೀಡಿದರು.

ಪ್ರಕರಣ ಸಂಬಂಧ ಅಹೋರಾತ್ರಿ ವೈದ್ಯಕೀಯ ಸಿಬ್ಬಂದಿಯ ಸಭೆ ನಡೆಸಿದ ಸಚಿವರು, ‘ಬೆಂಗಳೂರಿನಲ್ಲಿ ಸದ್ಯ ಕನಿಷ್ಠ ಒಂದು ವೆಂಟಿಲೇಟರ್ ಪಡೆಯಲು ಸಾಹಸ ಮಾಡಬೇಕಿದೆ. ಆದರೆ, ಎಸ್‌ಎನ್‌ಆರ್ ಆಸ್ಪತ್ರೆಯಲ್ಲಿರುವ 40 ವೆಂಟಿಲೇಟರ್‌ಗಳಲ್ಲಿ ಒಂದನ್ನೂ ಬಳಕೆ ಮಾಡುತ್ತಿಲ್ಲ. ಇದು ದೊಡ್ಡ ಲೋಪ’ ಎಂದು ಕೆಂಡಾಮಂಡಲರಾದರು.

‘ಜಿಲ್ಲಾ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಿಕೆಯಲ್ಲಿ ಕೆಲ ಲೋಪಗಳಾಗಿವೆ. ಸೋಂಕಿತರ ಆರೈಕೆಗಾಗಿ ಅವರ ಕುಟುಂಬ ಸದಸ್ಯರಿಗೆ ಐಸಿಯುನಲ್ಲಿ ಇರಲು ಅವಕಾಶ ನೀಡಿರುವುದು ತಪ್ಪು. ಈ ರೀತಿಯ ವ್ಯವಸ್ಥೆಯನ್ನು ಯಾವುದೇ ಆಸ್ಪತ್ರೆಯಲ್ಲಿ ನೋಡಿಲ್ಲ’ ಎಂದು ಅಸಮಾಧಾನ ಹೊರಹಾಕಿದರು.

ಇದರ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಕೂಡ ಮಂಗಳವಾರ ಜಿಲ್ಲೆಗೆ ಭೇಟಿ ಕೊಟ್ಟು ಕೋವಿಡ್ ಸಂಬಂಧ ಅಧಿಕಾರಿಗಳೊಂದಿಗೆ ಸರಣಿ ಸಭೆ ನಡೆಸಿದರು.

‘ತಪ್ಪಿತಸ್ಥರಿಗೆ ಶಿಕ್ಷೆ ತಪ್ಪಿದ್ದಲ್ಲ’

‘ನಿವೃತ್ತಿ ಅಂಚಿನಲ್ಲಿರುವ ಜಿಲ್ಲಾ ಶಸ್ತ್ರಚಿಕಿತ್ಸಕರು ಮತ್ತು ಸ್ಥಾನಿಕ ವೈದ್ಯಾಧಿಕಾರಿ ಕರ್ತವ್ಯ ಲೋಪ ಎಸೆಗಿದ್ದಾರೆ. ಅವರಿಗೆ ಶಿಕ್ಷೆ ಆಗಲೇಬೇಕು. ಆಸ್ಪತ್ರೆಯ ಆಮ್ಲಜನಕ ವ್ಯವಸ್ಥೆ ಹೊಣೆಯನ್ನು ಎಲೆಕ್ಟ್ರಿಷಿಯನ್‌ಗೆ ವಹಿಸಿದ್ದರೆ ಅದು ಕೂಡ ದೊಡ್ಡ ತಪ್ಪು. ಆ ಬಗ್ಗೆ ಪ್ರತ್ಯೇಕ ತನಿಖೆ ಮಾಡಲಾಗುವುದು’ ಎಂದು ಸುಧಾಕರ್ ತಿಳಿಸಿದರು.

‘ಆಸ್ಪತ್ರೆಗೆ ವೈದ್ಯಕೀಯ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗಿಲ್ಲ. ಕೊನೆಯ ಕ್ಷಣದಲ್ಲಿ ಸೋಂಕಿತರು ಆಸ್ಪತ್ರೆಗೆ ಬಂದ ಕಾರಣ ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟಿದ್ದಾರೆ. ಸೋಂಕಿತರ ಸಾವಿನ ವರದಿ ಪರಿಶೀಲನೆ ಮಾಡುತ್ತೇನೆ. ಜಿಲ್ಲೆಯ ಕೋವಿಡ್ ಪರಿಸ್ಥಿತಿ ಬಗ್ಗೆ ಪ್ರತಿನಿತ್ಯ ನಾನೇ ನಿಗಾ ವಹಿಸುತ್ತೇನೆ’ ಎಂದರು.

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರಸಭೆಗೆ ಮಂಗಳವಾರ ನಡೆದ ಚುನಾವಣೆಯಲ್ಲಿ ನ್ಯೂಟೌನ್ ಮತಗಟ್ಟೆ ಬಳಿ ಮತದಾರರು ಗುಂಪು ಸೇರಿ ಮತದಾರರ ಪಟ್ಟಿಯನ್ನು ಪರಿಶೀಲಿಸುವ ಮೂಲಕ ಕೋವಿಡ್ ನಿಯಮಾವಳಿ ಉಲ್ಲಂಘಿಸಿದರು. ಪ್ರಜಾವಾಣಿ ಚಿತ್ರ–ಶಿವಮೊಗ್ಗ ನಾಗರಾಜ್

3ಲಕ್ಷ ದಾಟಿದ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಏರುಗತಿ ಪಡೆದುಕೊಂಡಿದ್ದು, 31,830 ಮಂದಿ ಕೋವಿಡ್ ಪೀಡಿತರಾಗಿರುವುದು ಮಂಗಳವಾರ ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 3 ಲಕ್ಷದ ಗಡಿ ದಾಟಿದೆ.

ಕಳೆದ ತಿಂಗಳು ಇದು ವೇಳೆ ರಾಜ್ಯದಲ್ಲಿ 21 ಸಾವಿರ ಸಕ್ರಿಯ ಪ್ರಕರಣಗಳಿದ್ದವು. ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆ ಕೋವಿಡ್ ವೇಗವಾಗಿ ವ್ಯಾಪಿಸಿಕೊಳ್ಳುತ್ತಿರುವ ಪರಿಣಾಮ ಸಕ್ರಿಯ ಪ್ರಕರಣಗಳ ಸಂಖ್ಯೆ ದಿಢೀರ್ ಏರಿಕೆ ಕಂಡಿದೆ. ಕೇವಲ 72 ಗಂಟೆಗಳ ಅವಧಿಯಲ್ಲಿ 96,378 ಮಂದಿ ಸೋಂಕಿತರಾಗಿದ್ದಾರೆ. ಇದರಿಂದಾಗಿ ರಾಜ್ಯದಲ್ಲಿ ಮೊದಲ ಪ್ರಕರಣ ವರದಿಯಾಗಿ ಒಂದು ವರ್ಷದ ಒಂದು ತಿಂಗಳು ಕಳೆಯುವಷ್ಟರಲ್ಲಿ ಕೋವಿಡ್ ಪೀಡಿತರಾದವರ ಸಂಖ್ಯೆ 14 ಲಕ್ಷ ದಾಟಿದೆ. ಸೋಂಕು ದೃಢ ಪ್ರಮಾಣ ಶೇ 18.71ಕ್ಕೆ ಏರಿಕೆಯಾಗಿದೆ.



ಸೋಂಕಿತರಲ್ಲಿ ಬೆಂಗಳೂರಿನಲ್ಲಿ 97 ಮಂದಿ ಸೇರಿದಂತೆ ರಾಜ್ಯದಲ್ಲಿ 180 ಮಂದಿ ಸಾವಿಗೀಡಾಗಿದ್ದಾರೆ. ಬಳ್ಳಾರಿಯಲ್ಲಿ 18 ಮಂದಿ, ಮೈಸೂರಿನಲ್ಲಿ 9 ಮಂದಿ, ಕಲಬುರ್ಗಿಯಲ್ಲಿ 7 ಮಂದಿ, ರಾಮನಗರದಲ್ಲಿ 6 ಮಂದಿ, ಬೀದರ್, ಧಾರವಾಡ, ಹಾಸನದಲ್ಲಿ ತಲಾ ಐದು ಮಂದಿ ಮೃತಪಟ್ಟಿದ್ದಾರೆ. ಮರಣ ಹೊಂದಿದವರಲ್ಲಿ 19 ವರ್ಷದ ಯುವತಿ ಕೂಡ ಸೇರಿದ್ದು, 46 ಮಂದಿ 50 ವರ್ಷದೊಳಗಿನವರಾಗಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಸಂಖ್ಯೆ 14,807ಕ್ಕೆ ತಲುಪಿದೆ.

ಹೊಸದಾಗಿ ವರದಿಯಾದ ಕೋವಿಡ್ ಪ್ರಕರಣಗಳಲ್ಲಿ 20 ಮಂದಿಯಲ್ಲಿ ಡಬಲ್ ಮ್ಯುಟೆಂಟ್ ಬಿ.1.617 ಮಾದರಿಯ ವೈರಾಣು ಕಾಣಿಸಿಕೊಂಡಿದೆ. ಹಾವೇರಿ (99) ಹೊರತುಪಡಿಸಿ ಉಳಿದ ಎಲ್ಲ ಜಿಲ್ಲೆಗಳಲ್ಲಿ ಮಂಗಳವಾರ ದೃಢಪಟ್ಟ ಪ್ರಕರಣಗಳ ಸಂಖ್ಯೆ ಮೂರಂಕಿ ಹಾಗೂ ಅದಕ್ಕಿಂತ ಹೆಚ್ಚು ವರದಿಯಾಗಿವೆ. ಬೆಂಗಳೂರಿನಲ್ಲಿ 17,550 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಮೈಸೂರು (2,042), ತುಮಕೂರು (1,196), ಬಳ್ಳಾರಿ (907), ಕಲಬುರ್ಗಿ (772), ಮಂಡ್ಯ (737), ರಾಯಚೂರು (736) ಜಿಲ್ಲೆಯಲ್ಲಿಯೂ ಅಧಿಕ ಪ್ರಕರಣಗಳು ವರದಿಯಾಗಿವೆ.

ಒಂದು ದಿನದ ಅವಧಿಯಲ್ಲಿ 1.70 ಲಕ್ಷ ಮಂದಿಗೆ ಪರೀಕ್ಷೆ ಮಾಡಲಾಗಿದೆ. ತೀವ್ರ ನಿಗಾ ಘಟಕಕ್ಕೆ (ಐಸಿಯು) ದಾಖಲಾಗುವವರ ಸಂಖ್ಯೆ ಕೂಡ ಏರಿಕೆ ಕಂಡಿದೆ. ಸದ್ಯ 2,063 ಮಂದಿ ಐಸಿಯುನಲ್ಲಿದ್ದಾರೆ. ಕೋವಿಡ್ ಪೀಡಿತರಲ್ಲಿ 10,793 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಸಂಖ್ಯೆ 10.84 ಲಕ್ಷಕ್ಕೆ ಏರಿಕೆಯಾಗಿದೆ.

ಕೋವಿಡ್ ಭಯ: ಮಕ್ಕಳಲ್ಲಿ ವಿಚಿತ್ರ ವರ್ತನೆ

ಒಂದನೇ ಪುಟದಿಂದ

ಕೋವಿಡ್ ವಿಷಯ ಮನೆಯಲ್ಲಿ ಚರ್ಚೆಯಾದಾಗ ಅಥವಾ ಟಿ.ವಿಯಲ್ಲಿ ಬಂದಾಗ ಬಾಲಕ ಹೀಗೆ ಮಾಡುತ್ತಿರುವುದನ್ನು ಪೋಷಕರು ಗಮನಿಸಿದ್ದರು. ಆತ ಹೀಗೆ ವರ್ತಿಸಲು ಕಾರಣವಿತ್ತು. ಬಾಲಕನ ಸ್ನೇಹಿತನ ತಂದೆ ಕೋವಿಡ್‌ಗೆ ತುತ್ತಾಗಿದ್ದರು. ಆ ಸಂದರ್ಭದಲ್ಲಿ ಆದ ಎಲ್ಲಾ ಬೆಳವಣಿಗೆಗಳನ್ನು ಸ್ನೇಹಿತನಿಗೆ ತಿಳಿಸಿದ್ದ. ಅದೇ ವಿಷಯ ಮನಸ್ಸಿಗೆ ತುಂಬಿಕೊಂಡಿದ್ದ ಬಾಲಕ, ಮನೆಯಲ್ಲಿ ಮತ್ತೆ ಆ ವಿಷಯ ಚರ್ಚೆಯಾದಾಗ ಈ ರೀತಿ ವಿಚಿತ್ರವಾಗಿ ವರ್ತಿಸುತ್ತಿದ್ದ. ಆತನಿಗೆ ಆಪ್ತ ಸಮಾಲೋಚನೆ ಮಾಡಲಾಗಿದೆ ಎಂದು ನಾಗಸಿಂಹ ರಾವ್ ‘ಪ್ರಜಾವಾಣಿ’ಗೆ ತಿಳಿಸಿದರು.

ಇನ್ನೊಂದೆಡೆ ಚಿತ್ರದುರ್ಗದ 12 ವರ್ಷ ಮತ್ತು 9 ವರ್ಷದ ಅಕ್ಕ–ತಂಗಿಯರು ಕೋವಿಡ್ ವಿಷಯ ಕಿವಿಗೆ ಬಿದ್ದ ಕೂಡಲೇ ಮುಸುಕು ಹೊದ್ದು ಕುಳಿತುಕೊಳ್ಳುತ್ತಿದ್ದಾರೆ. ಕೋವಿಡ್ ಮೊದಲನೇ ಅಲೆಯ ಸಂದರ್ಭದಲ್ಲಿ ಜಾಗೃತಿ ಮೂಡಿಸುವ ನಾಟಕಗಳನ್ನೂ ಈ ಬಾಲಕಿಯರು ಮಾಡಿದ್ದರು. ಎರಡನೇ ಅಲೆ ಇದೇ ಮಕ್ಕಳನ್ನು ಖಿನ್ನತೆಗೆ ಒಳಗಾಗಿಸಿದೆ.

‘ದೇವನಹಳ್ಳಿಯ 14 ವರ್ಷದ ಬಾಲಕ ಇತ್ತೀಚೆಗೆ ಹಾಸಿಗೆಯಲ್ಲೇ ಮೂತ್ರ ವಿಸರ್ಜನೆ ಮಾಡಿಕೊಳ್ಳುತ್ತಿದ್ದಾನೆ. ಆತನನ್ನು ಆಪ್ತ ಸಮಾಲೋಚನೆಗೆ ಒಳಪಡಿಸಿದಾಗ ಕೊರೊನಾ ಸೋಂಕಿನ ಭಯ ಎಂಬುದು ಗೊತ್ತಾಗಿದೆ. ಆ ಮಕ್ಕಳ ಮನಸ್ಸಿನಲ್ಲಿದ್ದ ಭೀತಿ ಹೊರ ಹಾಕುವ ಪ್ರಯತ್ನ ಮಾಡಲಾಗಿದೆ’ ಎಂದು ಹೇಳಿದರು.

‘ಟಿ.ವಿ ವಾಹಿನಿಗಳಲ್ಲಿ ಪ್ರಸಾರವಾಗುತ್ತಿರುವ ಚಿತಾಗಾರದ ಚಿತ್ರಣ, ಆಮ್ಲಜನಕ ಸಿಗದೆ ಆಗುತ್ತಿರುವ ಸಾವು–ನೋವುಗಳು, ಆನ್‌ಲೈನ್ ತರಗತಿಯಲ್ಲೂ ಕೋವಿಡ್ ಕುರಿತ ಜಾಗೃತಿ ಹೆಸರಿನಲ್ಲಿ ಭಯ ಹುಟ್ಟಿಸುತ್ತಿರುವುದು ಮಕ್ಕಳ ಮನಸ್ಸಿನಲ್ಲಿ ವಿಚಿತ್ರ ವಾತಾವರಣ ಸೃಷ್ಟಿಸಿದೆ’ ಎಂದು ರಾವ್ ವಿವರಿಸಿದರು.

ರೈತನ ತೋಟದಲ್ಲಿ ಹವಾಮಾನ ಮುನ್ಸೂಚನೆ ಯಂತ್ರ

ಒಂದನೇ ಪುಟದಿಂದ

ಮಳೆ ಬೀಳುವ ಸಾಧ್ಯತೆ, ಗಾಳಿ ಯಾವ ದಿಕ್ಕಿನಿಂದ ಬೀಸುತ್ತದೆ ಮತ್ತು ಎಷ್ಟು ವೇಗವಾಗಿ ಬೀಸುತ್ತದೆ ಎಂಬ ಸೂಕ್ಷ್ಮ ಮಾಹಿತಿಗಳನ್ನೂ ರೈತರಿಗೆ ನೀಡುತ್ತದೆ.

‘ಮಳೆ ಬೀಳುವ ಸೂಚನೆಯನ್ನು ಒಂದು ತಿಂಗಳ ಮುಂಚೆಯೇ ತಿಳಿಸುತ್ತದೆ. ಪ್ರತಿ ಗಂಟೆಗೊಮ್ಮೆ ಉಷ್ಣಾಂಶ ಮತ್ತು ಆರ್ದ್ರತೆ ಮಾಹಿತಿ ಲಭಿಸುತ್ತದೆ. ಮಣ್ಣಿನಲ್ಲಿರುವ ನೀರಿನ ಅಂಶದ ಬಗ್ಗೆಯೂ ಮಾಹಿತಿ ನೀಡುತ್ತದೆ. ಇದರಿಂದ ಬೆಳೆಗೆ ಎಷ್ಟು ನೀರು ಬೇಕಾಗುತ್ತದೆ ಎಂಬುದನ್ನು ಸುಲಭವಾಗಿ ನಿರ್ಧರಿಸಬಹುದು. ಅನಗತ್ಯವಾಗಿ ಬೆಳೆಗೆ ನೀರು ಹರಿಸುವುದು ತಪ್ಪುತ್ತದೆ’ ಎನ್ನುತ್ತಾರೆ ಸಚಿನ್.

ಮಳೆಯ ಮುನ್ಸೂಚನೆ ಸಿಗುವುದರಿಂದ ಬೆಳೆಯ ಕಟಾವಿನ ಅವಧಿಯನ್ನು ಮುಂಚಿತವಾಗಿ ನಿರ್ಧರಿಸಬಹುದು. ಔಷಧಿ ಸಿಂಪಡನೆಯ ಸಮಯ ನಿಗದಿ ಮಾಡಿಕೊಳ್ಳಬಹುದು. ವಾತಾವರಣದ ಏರುಪೇರಿನಿಂದಾಗಿ ಶಿಲೀಂಧ್ರಗಳು ಬೆಳೆ ಹಾನಿ ಮಾಡುವುದನ್ನು ತಪ್ಪಿಸಬಹುದು.

ಬೆಳೆಗೆ ಮಾರಕವಾಗುವ ಯಾವ ರೀತಿಯ ಶಿಲೀಂಧ್ರಗಳು ಉತ್ಪತ್ತಿಯಾಗಬಹುದು, ರೋಗ ತಗಲುವ ಸಾಧ್ಯತೆ ಬಗ್ಗೆ ಮೂರು ದಿನ ಮುಂಚಿತವಾಗಿ ಮಾಹಿತಿ ಲಭಿಸುತ್ತದೆ. ಹಾಗಾಗಿ ಸಾಕಷ್ಟು ಮುಂಚಿತವಾಗಿ ರೈತರು ಎಚ್ಚೆತ್ತುಕೊಳ್ಳಬಹುದು.

ಲಾಕ್‌ಡೌನ್: ಸರ್ಕಾರಿ ನೌಕರರಿಗೆ ಸುತ್ತೋಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 14 ದಿನ ಸಂಪೂರ್ಣ ಲಾಕ್‌ಡೌನ್ ಮಾಡಿರುವ ಕಾರಣ ಯಾವ್ಯಾವ ಇಲಾಖೆ ನೌಕರರು ಕಚೇರಿಗೆ ಹಾಜರಾಗಬೇಕು ಎಂಬುದರ ವಿವರವುಳ್ಳ ಸುತ್ತೋಲೆಯನ್ನು ಹೊರಡಿಸಲಾಗಿದೆ.

ಸಚಿವಾಲಯದಲ್ಲಿ ಅತ್ಯಗತ್ಯ ಸೇವೆಗಳನ್ನು ಒದಗಿಸುತ್ತಿರುವ ಇಲಾಖೆಗಳಾದ ಆರೋಗ್ಯ ಇಲಾಖೆ, ವೈದ್ಯಕೀಯ ಶಿಕ್ಷಣ ಇಲಾಖೆ, ಒಳಾಡಳಿತ ಮತ್ತು ಕಂದಾಯ ಇಲಾಖೆಗಳ ಎಲ್ಲ ಹಂತಗಳ ಅಧಿಕಾರಿ ಮತ್ತು ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗಬೇಕು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ನಗರಾಭಿವೃದ್ಧಿ ಇಲಾಖೆ, ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಇಂಧನ ಇಲಾಖೆ, ಸಿಬ್ಬಂದಿ ಮತ್ತು ಸುಧಾರಣಾ ಇಲಾಖೆ, ಇ–ಆಡಳಿತ, ಆರ್ಥಿಕ ಇಲಾಖೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಕೃಷಿ ಇಲಾಖೆ, ಕಾರ್ಮಿಕ ಇಲಾಖೆ, ತೋಟಗಾರಿಕೆ ಇಲಾಖೆ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗಳಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ಶೇ 50 ರಂತೆ ರೊಟೇಷನ್ ಆಧಾರದಲ್ಲಿ ಕರ್ತವ್ಯಕ್ಕೆ ಹಾಜರಾಗಬೇಕು.

ಕಚೇರಿಗೆ ಹಾಜರಾಗುವ ಅಧಿಕಾರಿ, ನೌಕರರಿಗೆ ಸಂಬಂಧಪಟ್ಟ ಇಲಾಖೆಗಳು ಸಾಧ್ಯವಿದ್ದಲ್ಲಿ ಸರ್ಕಾರಿ ವಾಹನಗಳನ್ನು (ಪೂಲ್ ವೆಹಿಕಲ್) ಒದಗಿಸಬೇಕು. ಮೇಲೆ ತಿಳಿಸಿದ ಇಲಾಖೆಗಳ ಉಳಿದ ಅಧಿಕಾರಿಗಳು, ನೌಕರರು ಕೇಂದ್ರ ಸ್ಥಾನದಲ್ಲಿ ಲಭ್ಯವಿರಬೇಕು ಮತ್ತು ಕೋವಿಡ್ ಕರ್ತವ್ಯಕ್ಕೆ ನಿಯೋಜಿಸಿದರೆ ತಪ್ಪದೇ ಹಾಜರಾಗಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ತಿಳಿಸಿದ್ದಾರೆ.

ದೃಷ್ಟಿಹೀನ ಮತ್ತು ಇತರೆ ಅಂಗವೈಕಲ್ಯ ಹೊಂದಿರುವ ಅಧಿಕಾರಿ ಮತ್ತು ಸಿಬ್ಬಂದಿ, ಗರ್ಭಿಣಿ ಸಿಬ್ಬಂದಿ ಕಚೇರಿಗೆ ಹಾಜರಾಗುವುದರಿಂದ ವಿನಾಯತಿ ನೀಡಲಾಗಿದೆ. ಈ ಆದೇಶ ಮೇ 12 ರವರೆಗೆ ಜಾರಿಯಲ್ಲಿರುತ್ತದೆ ಎಂದೂ ತಿಳಿಸಿದ್ದಾರೆ.

‘2 ತಿಂಗಳು ಉದ್ಘಾಟನಾ ಕಾರ್ಯಕ್ರಮಗಳಿಲ್ಲ’

ಬೆಂಗಳೂರು: ರಾಜ್ಯದಲ್ಲಿ ಇನ್ನು ಎರಡು ತಿಂಗಳು ಸರ್ಕಾರದ ವತಿಯಿಂದ ಉದ್ಘಾಟನೆ ಮತ್ತು ಶಂಕುಸ್ಥಾಪನೆಯಂತಹ ಕಾರ್ಯಕ್ರಮಗಳಿಗೆ ನಿರ್ಬಂಧ ವಿಧಿಸಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಜೂನ್ ಕೊನೆಯವರೆಗೂ ಈ ರೀತಿಯ ಕಾರ್ಯಕ್ರಮಗಳು ನಡೆಯುವುದಿಲ್ಲ ಎಂದರು.

ಬೆಂಗಳೂರಿನ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಲಭ್ಯವಿರುವ ಹಾಸಿಗೆಗಳ ವಿವರವನ್ನು ಸಾರ್ವಜನಿಕರ ಗಮನಕ್ಕೆ ಬರುವಂತೆ ಮಾಡಲು ಆನ್‌ಲೈನ್‌ನಲ್ಲಿ ಮಾಹಿತಿ ಹಾಕಲಾಗುವುದು. ಈ ಸಂಬಂಧ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಅಶೋಕ ಹೇಳಿದರು.

ಪಡಿತರ: 14 ಜಿಲ್ಲೆಗಳಲ್ಲಿ 3 ಕೆ.ಜಿ ರಾಗಿ, 2 ಕೆ.ಜಿ ಅಕ್ಕಿ

ಬೆಂಗಳೂರು: ‘ರಾಗಿಯನ್ನು ಆಹಾರಧಾನ್ಯವಾಗಿ ಬಳಸುವ 14 ಜಿಲ್ಲೆಗಳಲ್ಲಿ ಬಿಪಿಎಲ್ (ಆದ್ಯತಾ) ಪಡಿತರ ಚೀಟಿದಾರರಿಗೆ 5 ಕೆ.ಜಿ ಆಹಾರಧಾನ್ಯದ ಪೈಕಿ, 3 ಕೆ.ಜಿ ರಾಗಿ ಮತ್ತು 2 ಕೆ.ಜಿ ಅಕ್ಕಿ ವಿತರಿಸಲಾಗುತ್ತಿದೆ’ ಎಂದು ಆಹಾರ ಇಲಾಖೆಯ ಆಯುಕ್ತರಾದ ಶಮ್ಲಾ ಇಕ್ಬಾಲ್ ತಿಳಿಸಿದ್ದಾರೆ.

‘2020–21ನೇ ಸಾಲಿನ ಮುಂಗಾರು ಅವಧಿಯಲ್ಲಿ ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ 2.62 ಲಕ್ಷ ಟನ್ ಭತ್ತ, 4.52 ಟನ್ ರಾಗಿ ಮತ್ತು 72,238 ಟನ್ ಜೋಳ ಖರೀದಿಸಲಾಗಿದೆ. ಹೀಗೆ ಸಂಗ್ರಹಿಸಿದ ಆಹಾರಧಾನ್ಯವನ್ನು ರಾಜ್ಯದಲ್ಲಿಯೇ ಬಳಸಿಕೊಳ್ಳುವಂತೆ ಕೇಂದ್ರ ಸೂಚಿಸಿದೆ. ಹೀಗಾಗಿ, ಈ ಕ್ರಮ ತೆಗೆದುಕೊಳ್ಳಲಾಗಿದೆ’ ಎಂದು ಅವರು ಹೇಳಿದ್ದಾರೆ.

‘ಜೋಳ ಸಂಗ್ರಹ ಕಡಿಮೆ ಇರುವುದರಿಂದ ಜೋಳ ಸಂಗ್ರಹಿಸಿದ ರಾಯಚೂರು, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ 3 ಕೆ.ಜಿ ಜೋಳ ಮತ್ತು 2 ಕೆ.ಜಿ ಅಕ್ಕಿ ವಿತರಿಸಲು ಉದ್ದೇಶಿಸಲಾಗಿದೆ.

ಉಳಿದ ಜಿಲ್ಲೆಗಳಲ್ಲಿ ಪ್ರತಿ ತಿಂಗಳು 5 ಕಿಲೋ ಅಕ್ಕಿ ವಿತರಿಸಲಾಗುವುದು’ ಎಂದೂ ಅವರು ಮಾಹಿತಿ ನೀಡಿದ್ದಾರೆ.

‘ಅಕ್ಕಿ ಉಪಯೋಗಿಸುವ ಕರಾವಳಿ ಜಿಲ್ಲೆಗಳಲ್ಲಿ ಬಿಪಿಎಲ್ ಪಡಿತರ ಚೀಟಿದಾರರಿಗೆ ಪ್ರತಿ ತಿಂಗಳು 5 ಕೆ.ಜಿ ಅಕ್ಕಿ ವಿತರಿಸಲಾಗುತ್ತಿದೆ.

ಸಿಗದ ರೆಮ್‌ಡಿಸಿವಿರ್: ರೋಗಿಗಳ ಏದುಸಿರು

ಒಂದನೇ ಪುಟದಿಂದ

‘ಕೆಲವೇ ದಿನಗಳ ಅಂತರದಲ್ಲಿ 3.10 ಲಕ್ಷ ವಯಲ್‌ಗಳಷ್ಟು ರೆಮ್‌ಡಿಸಿವಿರ್ ಚುಚ್ಚುಮದ್ದು ಖರೀದಿಗೆ ಆದೇಶ ನೀಡಲಾಗಿದೆ. ಆದರೆ, ನಿತ್ಯ 10,000 ವಯಲ್‌ಗಳಷ್ಟು ಚುಚ್ಚುಮದ್ದು ಪಡೆಯುವುದಕ್ಕೂ ಸಾಧ್ಯವಾಗುತ್ತಿಲ್ಲ. ಹೊರ ರಾಜ್ಯಗಳಲ್ಲಿರುವ ಔಷಧ ತಯಾರಿಕಾ ಕಂಪನಿಗಳಿಂದಲೂ ಪಡೆಯಲು ಸಾಧ್ಯವಾಗುತ್ತಿಲ್ಲ’ ಎಂದು ನಿಗಮದ ಅಧಿಕಾರಿಯೊಬ್ಬರು ಪ್ರತಿಕ್ರಿಯಿಸಿದರು.

‘ಕೋವಿಡ್ ಮೊದಲ ಅಲೆಯ ಬಳಿಕ ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದ್ದಂತೆ ಬಹುತೇಕ ಕಂಪನಿಗಳು ರೆಮ್‌ಡಿಸಿವಿರ್ ಔಷಧಿ ಉತ್ಪಾದನೆ ಸ್ಥಗಿತಗೊಳಿಸಿದ್ದವು. ಎರಡನೇ ಅಲೆಯ ಮುನ್ಸೂಚನೆ ಇದ್ದರೂ ರಾಜ್ಯ ಸರ್ಕಾರ ಔಷಧಿ ದಾಸ್ತಾನಿಗೆ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ರೆಮ್‌ಡಿಸಿವಿರ್ ಔಷಧಿಯನ್ನು ಉತ್ಪಾದನಾ ಪ್ರಕ್ರಿಯೆ ಆರಂಭಿಸಿದ ಒಂದು ತಿಂಗಳ ಬಳಿಕವಷ್ಟೇ ಮಾರುಕಟ್ಟೆಗೆ ಒದಗಿಸಲು ಸಾಧ್ಯ. ಈಗ ಮತ್ತೆ ಔಷಧಿ ಉತ್ಪಾದನೆ ಆರಂಭವಾಗಿದ್ದರೂ, ಮಾರುಕಟ್ಟೆಗೆ ತಲುಪುವುದು ತಡವಾಗುತ್ತಿದೆ’ ಎನ್ನುತ್ತಾರೆ ರಾಜ್ಯದ ಪ್ರಮುಖ ಔಷಧಿ ವಿತರಕರೊಬ್ಬರು.

ಕೆಟಿಪಿಪಿ ನಿರ್ಬಂಧವೂ ಕಾರಣ?

ಕೋವಿಡ್ ಚಿಕಿತ್ಸೆಗೆ ಔಷಧಿ ಮತ್ತು ಉಪಕರಣಗಳ ಖರೀದಿಯಲ್ಲಿ ಹೆಚ್ಚಿನ ಸಂದರ್ಭದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾಯ್ದೆಯಿಂದ ವಿನಾಯ್ತಿ ನೀಡಲಾಗಿತ್ತು. ಆದರೆ, ರೆಮ್‌ಡಿಸಿವಿರ್ ಖರೀದಿಗೆ ಕೆಟಿಪಿಪಿ ಅಡಿಯಲ್ಲೇ ಟೆಂಡರ್ ನಡೆಸಲಾಗಿತ್ತು. ಕಡಿಮೆ ದರ ನಮೂದಿಸಿದ್ದ ಒಬ್ಬ ವಿತರಕರಿಗೆ ಮಾತ್ರ ಚುಚ್ಚುಮದ್ದು ಪೂರೈಕೆಗೆ ಆದೇಶ ನೀಡಲಾಗಿತ್ತು. ಇದು ರಾಜ್ಯದಲ್ಲಿ ರೆಮ್‌ಡಿಸಿವಿರ್ ಕೊರತೆ ಉಲ್ಬಣಿಸಲು ಪ್ರಮುಖ ಕಾರಣ ಎಂಬುದು ಔಷಧ ವಿತರಕರ ಆರೋಪ.

ಆರಂಭದಲ್ಲಿ ಪ್ರತಿ ವಯಲ್‌ಗೆ ₹ 1,296ರ ದರದಲ್ಲಿ ಚುಚ್ಚುಮದ್ದು ಪೂರೈಸಲು ಅತಿ ಕಡಿಮೆ ದರ ನಮೂದಿಸಿದ್ದ ಬಿಡ್‌ದಾರರು ಒಪ್ಪಿಕೊಂಡಿದ್ದರು. ಉಳಿದ ಕಂಪನಿಗಳು ಅದೇ ದರಕ್ಕೆ ಔಷಧಿ ಪೂರೈಸಲು ಒಪ್ಪಲಿಲ್ಲ. ಈಗ ರಾಷ್ಟ್ರೀಯ ಔಷಧಿ ದರನಿಗದಿ ಪ್ರಾಧಿಕಾರದ (ಎನ್‌ಪಿಪಿಎ) ದರಪಟ್ಟಿಯಂತೆ ಪ್ರತಿ ವಯಲ್‌ಗೆ ₹ 1,586ರ ದರದಲ್ಲಿ ರೆಮ್‌ಡಿಸಿವಿರ್ ಖರೀದಿ ಮಾಡಲಾಗುತ್ತಿದೆ.

802 ಟನ್ ಆಮ್ಲಜನಕ ಪೂರೈಸಿ: ಕೇಂದ್ರಕ್ಕೆ ಹೈಕೋರ್ಟ್ ನಿರ್ದೇಶನ

ಒಂದನೇ ಪುಟದಿಂದ

‘ಅಗತ್ಯ ಇರುವ ಪ್ರಮಾಣಕ್ಕಿಂತ ಶೇ 50ರಷ್ಟು ಕಡಿಮೆ ಆಮ್ಲಜನಕ ಮತ್ತು ಶೇ 25ರಷ್ಟು ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಖಾಸಗಿ ಆಸ್ಪತ್ರೆಗಳಿಗೆ ಪೂರೈಸಲಾಗುತ್ತಿದೆ’ ಎಂದು ಹೇಳಿದರು.

ಈ ನಡುವೆ ನ್ಯಾಯಾಲಯಕ್ಕೆ ಮೆಮೊ ಸಲ್ಲಿಸಿದ ರಾಜ್ಯ ಸರ್ಕಾರ, ‘ಏ.30ರ ವೇಳೆಗೆ 3,24,944 ಸೋಂಕಿತರಿಗೆ ಪೂರೈಸಲು ದಿನಕ್ಕೆ 1,471 ಟನ್ ಆಮ್ಲಜನಕ ಅಗತ್ಯವಿದೆ. ಆದರೆ, ಸ್ಥಳೀಯ ಉತ್ಪಾದನಾ ಸಾಮರ್ಥ 812 ಟನ್ ಇದೆ. ರಾಜ್ಯಕ್ಕೆ ದಿನಕ್ಕೆ 600 ಟನ್ ಆಮ್ಲಜನಕ ಕೊರತೆ ಇದೆ. 802 ಟನ್ ಆಮ್ಲಜನಕ ಪೂರೈಸಲು ಕೇಂದ್ರ ಸರ್ಕಾರ ಒಪ್ಪಿದೆ’ ಎಂದು ತಿಳಿಸಿತು.

‘ರಾಜ್ಯಕ್ಕೆ ಹಂಚಿಕೆ ಮಾಡಿರುವ ಆಮ್ಲಜನಕವನ್ನು ಪೂರೈಸಬೇಕು’ ಕೇಂದ್ರ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು. ಬೆಂಗಳೂರಿನ ಕಮಾಂಡೊ ಆಸ್ಪತ್ರೆ ಮತ್ತು ಇತರ ಆಸ್ಪತ್ರೆಗಳಲ್ಲಿ ಕೆಲ ಹಾಸಿಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಪಡೆದುಕೊಳ್ಳಲು ಸಂಬಂಧಪಟ್ಟವರೊಂದಿಗೆ ಮಾತುಕತೆ ನಡೆಸಿ’ ಎಂದು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಪೀಠ ಸೂಚಿಸಿತು. ಕೋವಿಡ್ ರೋಗಿಗಳಿಗೆ ಬೆಂಗಳೂರಿನ ಆಸ್ಪತ್ರೆಗಳಲ್ಲಿ ಲಭ್ಯ ಇರುವ ಹಾಸಿಗೆ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಕಂಡುಬಂದಿಲ್ಲ ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.

‘ಲಾಕ್‌ಡೌನ್: ಕಾರ್ಮಿಕರಿಗೆ ಬಸ್ ವ್ಯವಸ್ಥೆ ಕಲ್ಪಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾಕ್‌ಡೌನ್ ಅವಧಿಯಲ್ಲಿ ಕಾರ್ಮಿಕರು ಕೈಗಾರಿಕಾ ಪ್ರದೇಶಗಳಿಗೆ ಬರಲು ಅನುಕೂಲ ಆಗುವಂತೆ ಬೆಳಗ್ಗೆ, ಮಧ್ಯಾಹ್ನ ಮತ್ತು ಸಂಜೆ ಬಸ್ ವ್ಯವಸ್ಥೆ ಕಲ್ಪಿಸಬೇಕು ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ) ರಾಜ್ಯ ಸರ್ಕಾರಕ್ಕೆ ಮನವಿ ಮಾಡಿದೆ.

ಕೈಗಾರಿಕೆಗಳಲ್ಲಿ ಕೆಲಸ ಮಾಡುವ ಕಾರ್ಮಿಕರು ಸಾರ್ವಜನಿಕ ಸಾರಿಗೆಯನ್ನೇ ಹೆಚ್ಚಾಗಿ ಅವಲಂಬಿಸಿದ್ದಾರೆ. ಬಸ್ ವ್ಯವಸ್ಥೆ ಇಲ್ಲದಿದ್ದರೆ ಕೆಲಸಕ್ಕೆ ಹಾಜರಾಗಲು ಸಾಧ್ಯವಾಗುವುದಿಲ್ಲ. ಹೀಗಾದರೆ ಕೈಗಾರಿಕೆಗಳೂ ನಡೆಯುವುದಿಲ್ಲ ಎಂದು ಅದು ಹೇಳಿದೆ.

‘ಕೋವಿಡ್ ಎರಡನೇ ಅಲೆಯು ಜನರ ಸಮಸ್ಯೆಗಳನ್ನು ಹೆಚ್ಚಿಸಿದೆ. ಚೇತರಿಕೆಯ ಹಾದಿಗೆ ಮರಳುತ್ತಿದ್ದ ವ್ಯಾಪಾರ ಮತ್ತು ಕೈಗಾರಿಕೆಗಳಿಗೆ ಇನ್ನಷ್ಟು ಸಂಕಷ್ಟ ತಂದೊಡ್ಡಿದೆ. ರಾತ್ರಿ ಕರ್ಫ್ಯೂ ಮತ್ತು ಲಾಕ್‌ಡೌನ್‌ನಿಂದ ಆರ್ಥಿಕ ಚೇತರಿಕೆಗೆ ದೊಡ್ಡ ಹೊಡೆತ ಬೀಳಲಿದೆ’ ಎಂದು ಎಫ್‌ಕೆಸಿಸಿಐ ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಹೇಳಿದ್ದಾರೆ.

ಪೆರಿಕಲ್ ಎಂ. ಸುಂದರ್

ಸದ್ಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಎಲ್ಲಾ ವಿಧಗಳ ತೆರಿಗೆ ಪಾವತಿ, ರಿಟರ್ನ್ಸ್ ಸಲ್ಲಿಕೆ ಅವಧಿಯನ್ನು ಮುಂದೂಡುವಂತೆ ಕೇಂದ್ರ ಹಣಕಾಸು ಸಚಿವಾಲಯಕ್ಕೆ ಕೂಡ ಅವರು ಮನವಿ ಮಾಡಿದ್ದಾರೆ. ಬ್ಯಾಂಕ್ ಇಎಂಐ ಪಾವತಿ ಮತ್ತು ಇತರೆ ಪಾವತಿಗಳನ್ನು ಆರು ತಿಂಗಳ ಕಾಲ ಮುಂದೂಡಬೇಕು. ಕಳೆದ ವರ್ಷ ಘೋಷಿಸಿದಂತೆ ಈ ವರ್ಷವೂ ಆತ್ಮನಿರ್ಭರ ಪ್ಯಾಕೇಜ್ ಘೋಷಿಸಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದ್ದಾರೆ.

ಪೌಷ್ಟಿಕ ಆಹಾರ ಸೇವಿಸಿ



ಏನಿದು ಬ್ಲೂಟೂತ್ ಟ್ರ್ಯಾಕರ್?



ಕಿರಣ್ ಐ.ಜಿ.

ಕಳೆದ ವಾರ ಆ್ಯಪಲ್ ಈವೆಂಟ್‌ನಲ್ಲಿ ಆ್ಯಪಲ್ ಕಂಪನಿ, ಆಕರ್ಷಕವಾದ ಏರ್‌ಟ್ಯಾಗ್ ಎಂಬ ನೂತನ ಗ್ಯಾಜೆಟ್ ಪರಿಚಯಿಸಿತು. ಆ್ಯಪಲ್ ಏರ್‌ಟ್ಯಾಗ್ ಎನ್ನುವುದು ಬ್ಲೂಟೂತ್ ಟ್ರ್ಯಾಕರ್ ಆಗಿದ್ದು, ನಿಮ್ಮ ಐಫೋನ್ ಜತೆಗೆ ಅದನ್ನು ಜೋಡಿಸಿದರೆ, ಫೈಂಡ್ ಮೈ ಆಯ್ಕೆ ಮೂಲಕ ಏರ್‌ಟ್ಯಾಗ್ ಅಳವಡಿಸಿದ ವಸ್ತು ಎಲ್ಲಿದೆ ಎನ್ನುವುದನ್ನು ಸುಲಭದಲ್ಲಿ ಪತ್ತೆ ಮಾಡಬಹುದು.

ಆ್ಯಪಲ್ ಏರ್‌ಟ್ಯಾಗ್ ಪರಿಚಯಿಸುತ್ತಲೇ, ಈಗಾಗಲೇ ಮಾರುಕಟ್ಟೆಯಲ್ಲಿರುವ ಬ್ಲೂಟೂತ್ ಟ್ರ್ಯಾಕರ್‌ಗಳು ಕೂಡ ಸದ್ದು ಮಾಡುತ್ತಿವೆ. ಜನರು ಇಂದಿನ ಗಡಿಬಿಡಿ ಜೀವನದಲ್ಲಿ ಅಗತ್ಯ ವಸ್ತುಗಳನ್ನು ಎಲ್ಲಾದರೂ ಇರಿಸಿಕೊಂಡು ಮರೆತುಬಿಡುವುದೇ ಜಾಸ್ತಿ. ಅದರಲ್ಲೂ ವ್ಯಾಲೆಟ್, ಕೀ ಇತ್ಯಾದಿ ದಿನಬಳಕೆಯ ವಸ್ತುಗಳನ್ನು ಎಲ್ಲೆಂದರಲ್ಲಿ ಇರಿಸಿ, ಆಮೇಲೆ ಮರೆಯುವ ಅಭ್ಯಾಸ ಇರುವವರಿಗೆ ಈ ಬ್ಲೂಟೂತ್ ಟ್ರ್ಯಾಕರ್‌ಗಳು ಅತ್ಯಂತ ಹೆಚ್ಚು ಉಪಕಾರಿಯಾಗಿವೆ.

ಅದರಲ್ಲೂ ಕಾರಿನ ಕೀ, ಬೈಕ್ ಕೀ.. ಈಗಷ್ಟೇ ನನ್ನ ಕೈಯಲ್ಲಿ ಇತ್ತು, ಈಗ ಕಾಣಿಸುತ್ತಿಲ್ಲ, ಎಲ್ಲಿ ಇರಿಸಿದ್ದೇನೆ ಎಂದೇ ನೆನಪಾಗುತ್ತಿಲ್ಲ ಎಂದು ಹಲವರು ಅಲವತ್ತುಕೊಳ್ಳುತ್ತಾರೆ. ಇನ್ನು ಕೆಲವರು ಸದಾ ಕಾಲ ಯಾವುದಾದರೊಂದು ಕಾರ್ಯ ನಿಮಿತ್ತ, ಇಲ್ಲವೇ ಊರಿಗೆ ಪ್ರಯಾಣಿಸುತ್ತಲೇ ಇರುತ್ತಾರೆ. ಅಂತಹವರು ಎರಡು ಮೂರು ಬ್ಯಾಗ್ ಹೊಂದಿರುವುದು ಸಾಮಾನ್ಯ. ಅಂತಹ ಸಂದರ್ಭದಲ್ಲಿ ಕೆಲವೊಮ್ಮೆ ಬ್ಯಾಗ್ ಎಲ್ಲಾದರೂ ಇರಿಸಿದ್ದರೆ, ಇಲ್ಲವೆ ಬ್ಯಾಗ್ ಒಳಗೆ ಮತ್ತೇನಾದರೂ ಸರಕು ಇದ್ದರೆ, ಅದಕ್ಕೆ ನೀವು ಬ್ಲೂಟೂತ್ ಟ್ರ್ಯಾಕರ್ ಅಳವಡಿಸಿದ್ದರೆ, ಸುಲಭದಲ್ಲಿ ಪತ್ತೆಹಚ್ಚಬಹುದು.

ಬದಲಾಯಿಸಬಹುದಾದ ಬ್ಯಾಟರಿ

ಬ್ಲೂಟೂತ್ ಟ್ರ್ಯಾಕರ್ ಅಳವಡಿಸಿರುವ ಉಪಕರಣಗಳನ್ನು ಪಿಂಗ್ ಮಾಡುವ ಮೂಲಕ, ಲೊಕೇಶನ್ ಹುಡುಕುವ ಮೂಲಕ ಪತ್ತೆಹಚ್ಚಬಹುದು. ಇವುಗಳು ದೀರ್ಘ ಬಾಳಿಕೆಯ ಮತ್ತು ಬದಲಾಯಿಸಬಹುದಾದ ಬ್ಯಾಟರಿಯನ್ನು ಹೊಂದಿರುತ್ತವೆ. ಹಿಂಭಾಗದಲ್ಲಿ ಸುಲಭದಲ್ಲಿ ಲಿಥಿಯಂ ಅಯಾನ್ ಬ್ಯಾಟರಿಯನ್ನು ತೆಗೆದು ಬದಲಾಯಿಸಲು ಸಾಧ್ಯವಿದೆ. ಆ್ಯಪಲ್ ಏರ್‌ಟ್ಯಾಗ್ ಸರಿಸುಮಾರು ಒಂದು ವರ್ಷ ಬಾಳಿಕೆ ಬರುತ್ತದೆ ಎಂದು ಹೇಳಿದೆ.

ಉಪಯೋಗವೇನು?

ಮನೆಯಲ್ಲಿ ಮಕ್ಕಳು ಮತ್ತು ಹಿರಿಯರು ಇದ್ದರೆ, ಆಕಸ್ಮಿಕವಾಗಿ ಕೆಲವೊಂದು ಅಗತ್ಯ ವಸ್ತುಗಳನ್ನು ಅವರು ಮರೆತು ಎಲ್ಲೋ ಒಂದೆಡೆ ಇರಿಸಿರುತ್ತಾರೆ. ಅಂತಹ ಉಪಕರಣಗಳಿಗೆ ಬ್ಲೂಟೂತ್ ಟ್ರ್ಯಾಕರ್ ಅಳವಡಿಸಿದ್ದರೆ, ಸುಲಭದಲ್ಲಿ ಪತ್ತೆಹಚ್ಚಬಹುದು.

ಬಳಕೆ ಹೇಗೆ?

ಬ್ಲೂಟೂತ್ ಟ್ರ್ಯಾಕರ್ ಅಳವಡಿಸುವುದು ಮತ್ತು ಬಳಸುವುದು ತೀರಾ ಸುಲಭ. ನಿಮ್ಮ ಸ್ಮಾರ್ಟ್‌ಫೋನ್‌ನಲ್ಲಿಯೇ ಬ್ಲೂಟೂತ್ ಟ್ರ್ಯಾಕರ್ ಅನ್ನು ಪೇರ್ ಮಾಡಿಕೊಂಡರೆ ಸಾಕು. ಅದಕ್ಕೆ ಬೇಕಾದ ಹೆಸರನ್ನು ಕೂಡ ಕೊಡಬಹುದು. ಅಲ್ಲದೆ, ಫೋನ್ ಆ್ಯಪ್ ಜತೆಗೆ ಬ್ಲೂಟೂತ್ ಟ್ರ್ಯಾಕರ್ ಸಿಂಕ್ ಮಾಡಿಕೊಂಡಿದ್ದರೆ, ಅವುಗಳನ್ನು ರಿಂಗ್ ಮಾಡುವುದು, ಲೊಕೇಶನ್ ಟ್ರ್ಯಾಕ್ ಮಾಡುವುದು ಕೂಡ ಸುಲಭ.

ಏನೆಲ್ಲ ಅನುಕೂಲಗಳಿವೆ?

ಕೆಲವೊಂದು ಬ್ಲೂಟೂತ್ ಟ್ರ್ಯಾಕರ್‌ಗಳು ನಿಮ್ಮ ಫೋನ್ ಜತೆಗೆ ಜೋಡಿಸಿಕೊಂಡಿದ್ದು, ನಿಗದಿತ ಅಂತರದಿಂದ ದೂರ ಹೋಗುತ್ತಿದ್ದಂತೆ ತಕ್ಷಣ ಅಲರ್ಟ್ ಸಂದೇಶ ಬರುತ್ತದೆ. ಅಂದರೆ, ನಿಮ್ಮ ಬ್ಲೂಟೂತ್ ಟ್ರ್ಯಾಕರ್ ಅಳವಡಿಸಿದ ಬ್ಯಾಗ್, ಇಲ್ಲವೇ ಏನಾದರೂ ಉಪಕರಣವನ್ನು ನಿಮ್ಮ ಬಳಿಯಿಂದ ಯಾರಾದರೂ ಎಗರಿಸಲು ಯತ್ನಿಸಿದರೆ, ಅಥವಾ ಮನೆಯಲ್ಲೇ ಆಗಿರಬಹುದು ನಿಮ್ಮ ಬ್ಲೂಟೂತ್ ಸಂಪರ್ಕದಿಂದ ದೂರ ಇದ್ದರೆ ನಿಮಗೆ ಸಂದೇಶ ಕೂಡ ಬರುತ್ತದೆ. ಹೀಗಾಗಿ ನಿಮ್ಮ ಅಮೂಲ್ಯ ವಸ್ತು ಸದಾ ನಿಮ್ಮ ಬಳಿಯೇ ಇರುವಂತೆ ನೋಡಿಕೊಳ್ಳಬಹುದು. ಕಳೆದುಹೋಯಿತು ಅಥವಾ ಮರೆತು ಎಲ್ಲೋ ಇರಿಸಿಬಂದೆ ಎನ್ನುವ ಪ್ರಮೇಯವಿರುವುದಿಲ್ಲ..

ಟ್ರ್ಯಾಕಿಂಗ್ ಬಗ್ಗೆ ಚಿಂತಿಸಬೇಕಿಲ್ಲ..

ಬ್ಲೂಟೂತ್ ಟ್ರ್ಯಾಕರ್ ಕೆಲಸ ಮಾಡಲು ಬ್ಲೂಟೂತ್ ಸಂಪರ್ಕ ಅಗತ್ಯವಾಗಿ ಬೇಕಾಗುತ್ತದೆ. ಇಲ್ಲಿ ನೀವು ಪೇರ್ ಮಾಡಿದ ಬ್ಲೂಟೂತ್ ಟ್ರ್ಯಾಕರ್ ನಿಮ್ಮ ಫೋನ್ ಜತೆ ಮಾತ್ರ ಸಂಪರ್ಕದಲ್ಲಿರುವುದರಿಂದ, ಅದನ್ನು ಬೇರೆ ಇನ್ಯಾರೋ ಟ್ರ್ಯಾಕ್ ಮಾಡಿ ಬಳಸುತ್ತಾರೆ ಎನ್ನುವ ಭಯ ಬೇಕಾಗಿಲ್ಲ. ನಿಮ್ಮ ಬ್ಲೂಟೂತ್ ಟ್ರ್ಯಾಕರ್ ಅನ್ನು ಇನ್ನೊಬ್ಬರ ಜತೆ ನೀವು ಶೇರ್ ಮಾಡಿ, ಅನುಮತಿಸಿದರಷ್ಟೇ ಅವರು ಕೂಡ ನೋಡಲು ಸಾಧ್ಯವಾಗುತ್ತದೆ. ಹೀಗಾಗಿ ಟ್ರ್ಯಾಕಿಂಗ್ ಕುರಿತು ಚಿಂತಿಸಬೇಕಾಗಿಲ್ಲ ಎಂದು ಎಲ್ಲ ಕಂಪನಿಗಳು ಗ್ರಾಹಕರಿಗೆ ಹೇಳುತ್ತವೆ.

ಬೆಲೆ ಎಷ್ಟಿರುತ್ತದೆ?

ದೇಶದಲ್ಲಿ ಬ್ಲೂಟೂತ್ ಟ್ರ್ಯಾಕರ್‌ಗಳ ಬೆಲೆ ಅಂದಾಜು ₹2,500 ರಿಂದ ಆರಂಭವಾಗುತ್ತದೆ. ಆ್ಯಪಲ್ ಪರಿಚಯಿಸಿದ ಏರ್‌ಟ್ಯಾಗ್ ಒಂದಕ್ಕೆ ₹3,190 ಇದೆ. ಟೈಲ್ ಟ್ರ್ಯಾಕರ್ ಕೂಡ ಆರಂಭಿಕ ದರ ₹2,900 ಹೊಂದಿದೆ. ಮಾದರಿ ಮತ್ತು ವಿನ್ಯಾಸಕ್ಕೆ ಅನುಗುಣವಾಗಿ ದರ ವ್ಯತ್ಯಾಸವಾಗುತ್ತದೆ.

ಫೇಸ್‌ಬುಕ್‌ನಲ್ಲಿ ನೋಡಿದ ವಿಚಾರಗಳಷ್ಟೇ ಅಲ್ಲದೆ, ಬೇರೆ ಜಾಲತಾಣಗಳಲ್ಲಿ ನೋಡಿದ ವಿಷಯಗಳೂ ಅದಕ್ಕೆ ತಿಳಿಯುತ್ತದೆ. ಇದುವೇ 'ಆಫ್-ಫೇಸ್‌ಬುಕ್' ಮಾಹಿತಿ. ಇದರಿಂದ ತಪ್ಪಿಸಿಕೊಳ್ಳುವುದು ಹೇಗೆ?

ಶ್! ಫೇಸ್‌ಬುಕ್ ನಿಮ್ಮನ್ನು ಹಿಂಬಾಲಿಸುತ್ತಿದೆ...

ಅವಿನಾಶ್ ಬಿ.

ಫೇಸ್‌ಬುಕ್ ಎಂಬ ಸಾಮಾಜಿಕ ಜಾಲತಾಣದಿಂದ ಬಳಕೆದಾರರ ಖಾಸಗಿತನ ಸೋರಿಕೆ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚೆಯಾಗಿದೆ, ವಿವಾದವೂ ಆಗಿದೆ. ಆದರೂ ಜನರಿಗೆ ಅದರ ಮಹತ್ವದ ಅರಿವು ಇದ್ದಂತಿಲ್ಲ. ನಾವು ಎಲ್ಲಿ ಹೋದೆವು, ಏನು ಮಾಡಿದೆವು ಅಂತ ಸೆಲ್ಫೀ ತೆಗೆದು ಫೇಸ್‌ಬುಕ್‌ನಲ್ಲಿ ಹಾಕುವುದೊಂದು ಪರಂಪರೆಯಾಗಿಬಿಟ್ಟಿದೆ. ಫೇಸ್‌ಬುಕ್‌ಗೆ ನಮ್ಮ ಬಗ್ಗೆ ತಿಳಿದಿರುವಷ್ಟು ಮಾಹಿತಿ ನಮ್ಮ ಸ್ನೇಹಿತರಿಗೂ ಗೊತ್ತಿರಲಾರದು ಎಂಬಷ್ಟರ ಮಟ್ಟಿಗೆ ನಾವು ಅದನ್ನು ಬಳಸಿಕೊಳ್ಳುತ್ತಿದ್ದೇವೆ.

ಇಷ್ಟಾದರೆ ಸಮಸ್ಯೆಯಿರಲಿಲ್ಲ. ಆದರೆ ಫೇಸ್‌ಬುಕ್‌ನಲ್ಲಿ ನೋಡಿದ ವಿಚಾರಗಳಷ್ಟೇ ಅಲ್ಲದೆ, ಬೇರೆ ಜಾಲತಾಣಗಳಲ್ಲಿ ನೋಡಿದ ವಿಷಯಗಳೂ ಅದಕ್ಕೆ ತಿಳಿಯುತ್ತದೆ. ಇದುವೇ 'ಆಫ್-ಫೇಸ್‌ಬುಕ್' ಮಾಹಿತಿ. 'ನಾವು ಸ್ವತಃ ಇದರ ಜಾಡು ಹಿಡಿಯುವುದಿಲ್ಲ, ಈ ಮಾಹಿತಿಯನ್ನು ಬೇರೆ ಜಾಲತಾಣಗಳು ನಮ್ಮೊಂದಿಗೆ ಹಂಚಿಕೊಳ್ಳುತ್ತವೆ' ಅಂತ ಫೇಸ್‌ಬುಕ್ ತನ್ನ ಗೌಪ್ಯತಾ ನೀತಿಯಲ್ಲಿ ಹೇಳಿಕೊಂಡಿದೆ. ಬಳಕೆದಾರರ ವಿಶ್ವಾಸವನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಈ ವೈಶಿಷ್ಟ್ಯವನ್ನು ಆಫ್ ಮಾಡಿಕೊಂಡರೆ ನಿಮ್ಮ ಖಾಸಗಿತನ (ಪ್ರೈವೆಸಿ) ಸುರಕ್ಷಿತ ಅಂತನೂ ಉದಾರವಾಗಿ ಹೇಳಿಕೊಳ್ಳುತ್ತದೆ ಫೇಸ್‌ಬುಕ್.

ಗೊತ್ತಾಗುವುದು ಹೇಗೆ?

ನೀವು ಒಂದು ಬೈಕ್ ಖರೀದಿಸಬೇಕೆಂದಿದ್ದೀರಿ. ಆ ದ್ವಿಚಕ್ರ ವಾಹನದ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಕೊಳ್ಳಲು ಅದರ ಜಾಲತಾಣಕ್ಕೆ ಭೇಟಿ ನೀಡುತ್ತೀರಿ. ಆ ವೆಬ್‌ಸೈಟಿನಲ್ಲಿ ಮೊದಲೇ ಅಳವಡಿಕೆಯಾಗಿರುವ ಫೇಸ್‌ಬುಕ್ ಪಿಕ್ಸೆಲ್ ಇಲ್ಲವೇ ಫೇಸ್‌ಬುಕ್ ಎಸ್‌ಡಿಕೆ ಅಥವಾ ಫೇಸ್‌ಬುಕ್ ಮೂಲಕ ಲಾಗಿನ್ ಆಗುವ ಆಯ್ಕೆ - ಇವುಗಳಲ್ಲಿ ಯಾವುದಾದರೊಂದು ಬಿಸಿನೆಸ್ ಟೂಲ್ ಮೂಲಕ ಈ ಮಾಹಿತಿಯು ತಕ್ಷಣ ಫೇಸ್‌ಬುಕ್‌ಗೆ ರವಾನೆಯಾಗುತ್ತದೆ. ಮುಂದೆ ನೀವು ಫೇಸ್‌ಬುಕ್‌ಗೆ ಲಾಗಿನ್ ಆದಾಗ, ನಿಮ್ಮ ಟೈಮ್‌ಲೈನ್‌ನಲ್ಲಿ ಶೇ.5 ಡಿಸ್ಕೌಂಟ್‌ನಲ್ಲಿ ಅದೇ ದ್ವಿಚಕ್ರ ವಾಹನದ ಜಾಹೀರಾತೊಂದು ನಿಮಗೆ ಕಾಣಿಸುತ್ತದೆ. ಅಂದರೆ, ತನಗೆ ದೊರೆತ ಮಾಹಿತಿಯ ಆಧಾರದಲ್ಲಿ ಫೇಸ್‌ಬುಕ್, ಅದಕ್ಕೆ ಸಂಬಂಧಿತ ಜಾಹೀರಾತನ್ನು ನಿಮಗೆ ತೋರಿಸುತ್ತದೆ. ಇದರಿಂದ ಫೇಸ್‌ಬುಕ್‌ಗೆ ಜಾಹೀರಾತು ಸಂಬಂಧಿತ ಲಾಭ ಆಗುತ್ತದೆ.

ಆ ಜಾಲತಾಣದಲ್ಲಿ ನೀವು ಯಾವ ಪುಟ ತೆರೆದಿರಿ, ಏನನ್ನು ಓದಿದಿರಿ, ಏನನ್ನು ಹುಡುಕಾಡಿದಿರಿ, ಖರೀದಿ ಮಾಡಿದಿರಿ, ಶಾಪಿಂಗ್ ಕಾರ್ಟ್‌ಗೆ ಏನನ್ನು ಸೇರಿಸಿದಿರಿ, ಹಣ ಪಾವತಿಸಿದಿರೇ ಮುಂತಾದ ಎಲ್ಲ ಚಟುವಟಿಕೆಗಳ ಮಾಹಿತಿಯೂ ಫೇಸ್‌ಬುಕ್‌ಗೆ ತಿಳಿದುಬಿಡುತ್ತದೆ.

ತಪ್ಪಿಸುವುದು ಹೇಗೆ?

ನಾವು ಅಂತರ್ಜಾಲದಲ್ಲಿ ನೋಡಿದ ಪುಟಗಳ ಬಗ್ಗೆ ಫೇಸ್‌ಬುಕ್‌ಗೆ ತಿಳಿಯದಂತೆ ಮಾಡುವುದು ಹೇಗೆ? ಇದಕ್ಕಾಗಿ ಬಳಕೆದಾರರಿಗೆ ಫೇಸ್‌ಬುಕ್ ಆಯ್ಕೆ ನೀಡಿದೆ. ಅದೆಂದರೆ, ಸೆಟ್ಟಿಂಗ್ಸ್ ಮೆನುವಿಗೆ ಹೋಗಿ, ಅಲ್ಲಿ Your Facebook Information ಎಂಬ ವಿಭಾಗದಲ್ಲಿ Off-Facebook Activity ಎಂಬುದನ್ನು ಕ್ಲಿಕ್ ಮಾಡಿ ಅಥವಾ ಲಾಗಿನ್ ಆಗಿದ್ದರೆ ನೇರವಾಗಿ facebook.com/off_facebook_activity ಎಂಬಲ್ಲಿ ಹೋದರೂ ಸಾಕು. ನಂತರ ಅಲ್ಲೇ ಲಭ್ಯವಾಗುವ Clear History ಆಯ್ಕೆ ಮಾಡಿ. ಆಗ ಹಿಂದಿನ ಮಾಹಿತಿಯ ಜಾಡನ್ನು ಅಳಿಸಲಾಗುತ್ತದೆ. ಮುಂದೆಯೂ ಅದು ನಿಮ್ಮ ಜಾಡು ಹಿಡಿಯದಂತೆ ಮಾಡಬೇಕಿದ್ದರೆ ಅಲ್ಲೇ ಕೆಳಗೆ ಲಭ್ಯವಿರುವ Manage Future Activity ಎಂಬುದನ್ನು ಕ್ಲಿಕ್ ಮಾಡಿ ಮುಂದುವರಿಯಬಹುದು.

'ಹಿಸ್ಟರಿ ಕ್ಲಿಯರ್' ಮಾಡುವುದರಿಂದ ಅಥವಾ ಪೂರ್ಣವಾಗಿ ಚಟುವಟಿಕೆ ತಡೆಯುವುದರಿಂದ ಈಗಾಗಲೇ ಫೇಸ್‌ಬುಕ್ ಮೂಲಕ ಲಾಗಿನ್ ಆಗಿರುವ ಎಲ್ಲ ಆ್ಯಪ್ ಮತ್ತಿತರ ಖಾತೆಗಳಿಂದಲೂ ನೀವು ಸೈನ್-ಔಟ್ ಆಗುತ್ತೀರಿ ಎಂಬುದು ಗಮನದಲ್ಲಿರಲಿ ಮತ್ತು ಭವಿಷ್ಯದಲ್ಲಿ ಟ್ರ್ಯಾಕ್ ಮಾಡುವುದು ಬೇಡ ಅಂತ ಆಯ್ಕೆ ಮಾಡಿದರೆ, ಯಾವುದೇ ಜಾಲತಾಣ ಅಥವಾ ಆ್ಯಪ್‌ಗಳಿಗೆ ಫೇಸ್‌ಬುಕ್ ಖಾತೆಯ ಮೂಲಕ ಲಾಗಿನ್ ಆಗುವ ಆಯ್ಕೆ ನಿಮಗೆ ದೊರೆಯುವುದಿಲ್ಲ.

ಇಷ್ಟೆಲ್ಲ ಆದರೂ, ಎಲ್ಲ ರೀತಿಯ ಜಾಹೀರಾತುಗಳು ಕಾಣಿಸುವುದಿಲ್ಲ ಎಂಬುದು ಖಚಿತವಿಲ್ಲ. ಮುಂದೆಯೂ ಜಾಹೀರಾತು ಕಾಣಿಸುತ್ತದೆ, ಆದರೆ ಅದರ ಪ್ರಮಾಣ ಕಡಿಮೆ ಇರುತ್ತದೆ ಅಂತ ಫೇಸ್‌ಬುಕ್ ಸ್ವತಃ ಹೇಳಿದೆ. ಇದಕ್ಕಾಗಿ, ಫೇಸ್‌ಬುಕ್‌ನಿಂದ ಲಾಗೌಟ್ ಆದ ಮೇಲೆ ಬೇರೆ ಜಾಲತಾಣಗಳನ್ನು ನೋಡುವುದು ಅಥವಾ ಇನ್‌ಕಾಗ್ನಿಟೋ ವಿಂಡೋದ (ಗೂಗಲ್ ಕ್ರೋಮ್‌ನಲ್ಲಿ) ಮೂಲಕವೇ ಬೇರೆ ತಾಣಗಳನ್ನು ಜಾಲಾಡುವುದು ಸೂಕ್ತ.

ಸಮಯ ಉಳಿಸುವ ಸ್ಮಾರ್ಟ್ ಅಡುಗೆ ಪಾಟ್

ಅಮೃತ

ಅಡುಗೆ ವಿಷಯ ಬಂದಾಗ ಗೃಹಿಣಿಯರು ಮಾತ್ರವಲ್ಲ, ಪ್ರತಿಯೊಬ್ಬರೂ ಈಗ ಸ್ಮಾರ್ಟ್ ತಂತ್ರಜ್ಞಾನದ ಮೇಲೆ ಕಣ್ಣಿಟ್ಟಿರುತ್ತಾರೆ. ಅದರಲ್ಲೂ ಅಡುಗೆಮನೆಯಲ್ಲಿ ಬಳಕೆಯಾಗುವಂತಹ ಸಣ್ಣಪುಟ್ಟ ಸಲಕರಣೆಗಳು ಆ್ಯಪ್‌ಗೆ ಜೋಡಣೆಯಾದರೆ ಕೆಲಸ ಸಲೀಸಲ್ಲವೇ? ಈ ವಿಷಯದಲ್ಲಿ ಇನ್‌ಸ್ಟಂಟ್ ಪಾಟ್ ನಮ್ಮ ಕಣ್ಣೆದುರು ನಿಲ್ಲುತ್ತದೆ. ಇದು ಪ್ರೆಶರ್ ಕುಕರ್, ರೈಸ್ ಕುಕರ್, ಸ್ಟೀಮರ್, ಯೋಗರ್ಟ್ ಮೇಕರ್, ಕೇಕ್ ಮೇಕರ್, ವಾರ್ಮರ್ ಆಗಿ ಕೆಲಸ ಮಾಡುವುದು ಮಾತ್ರವಲ್ಲ, ಇದರಲ್ಲಿ ಹುರಿಯಬಹುದು ಕೂಡ. ವಿಶೇಷವೆಂದರೆ ಇದು ವೈಫೈ ಮೇಲೆ ಕೆಲಸ ಮಾಡುವುದಲ್ಲದೇ ಆ್ಯಪ್‌ಗೆ ಜೋಡಣೆಯಾಗಿದೆ. ಹಾಗೆಯೇ ಅಲೆಕ್ಸಾದ ಮೂಲಕ ಆರ್ಡರ್ ಕೊಟ್ಟು ಕೆಲಸ ಮಾಡಿಸಬಹುದು.

ವೈಶಿಷ್ಟ್ಯಗಳು: ಫಟಾಫಟ್ ಎಂದು ಬೇಯಿಸಿ ನಿಮ್ಮೆದುರು ಇಡುತ್ತದೆ. ಇದರಿಂದ ಸಮಯದ ಉಳಿತಾಯವಾಗುವುದಲ್ಲದೇ 8 ಇನ್ ಒನ್ ಸಲಕರಣೆ, ಒನ್ ಟಚ್‌ನ 13 ಬಗೆಯ ಪ್ರೋಗ್ರಾಮ್‌ಗಳಿದ್ದು, ಸೂಪ್, ಅನ್ನ, ಕೋಳಿ ಮಾಂಸ ಎಲ್ಲವನ್ನೂ ಬೇಯಿಸಿ ಹಾಕುತ್ತದೆ. ಡೆಸರ್ಟ್ ಕೂಡ ಮಾಡಬಹುದು.

ಇದು ಅಲೆಕ್ಸಾ ಮತ್ತು ವೈಫೈಗೆ ಜೋಡಣೆಯಾಗಿದೆ. ಹೀಗಾಗಿ ಕೈಯಲ್ಲಿರುವ ಸ್ಮಾರ್ಟ್ ಫೋನ್ ಮೂಲಕ ನಿಯಂತ್ರಿಸಬಹುದು. ಅಷ್ಟಕ್ಕೂ ಸೋಮಾರಿತನ ಕಾಡಿದರೆ ಅಲೆಕ್ಸಾ ಮೂಲಕ ಹೇಳಿಸಬಹುದು. ಒಂದು ಸಾವಿರಕ್ಕೂ ಅಧಿಕ ತಿನಿಸುಗಳನ್ನು ಮೊದಲೇ ಪ್ರೋಗ್ರಾಮ್ ಮಾಡಿಡಲಾಗಿದೆ. ಹಾಗೆಯೇ ಅಡುಗೆ ಆಗುತ್ತಿರುವ ಬಗ್ಗೆ ಅಪ್‌ಡೇಟ್ ಪಡೆಯಬಹುದು.

ಇದರ ಜೊತೆಗೆ ಸ್ಟೇನ್‌ಲೆಸ್ ಸ್ಟೀಲ್ ಸ್ಟೀಮ್ ರ್‍ಯಾಕ್, ಸೂಪ್ ಸ್ಪೂನ್, ಅಳತೆ ಕಪ್ ಮೊದಲಾದವುಗಳನ್ನು ನೀಡಲಾಗುವುದು. 120ವ್ಯಾಟ್– 60ಎಚ್‌ಝೆಡ್ ವಿದ್ಯುತ್ ಅಗತ್ಯವಿದೆ. ಸುರಕ್ಷತ ಮಾನದಂಡಗಳನ್ನು ಅನುಸರಿಸಿ ತಯಾರಿಸಲಾಗಿದೆ. ಸೇಫ್ಟಿ ಲಾಕ್ ಕೂಡ ಇದೆ.

ಐಒಎಸ್ ಮತ್ತು ಆ್ಯಂಡ್ರಾಯ್ಡ್ ಸಾಧನಗಳಲ್ಲಿ ಉಚಿತ ಪಾಟ್ ಆ್ಯಪ್ ಇದ್ದು ನೂರಾರು ತಿನಿಸುಗಳ ತಯಾರಿಯನ್ನು ಅಳವಡಿಸಲಾಗಿದೆ. ಆರು ಜನರಿಗೆ ಸಾಕಾಗುವಷ್ಟು ಅಡುಗೆ ಮಾಡಬಹುದು. ಒಂಟಿಯಾಗಿ ಪಿಜಿಯಲ್ಲಿರುವವರಿಗೆ ಹೇಳಿ ಮಾಡಿಸಿರುವಂತಹದ್ದು. ಪಾಟ್‌ನ ಒಳಗಿರುವ ಸ್ಟೇನ್‌ಲೆಸ್ ಸ್ಟೀಲ್‌ನ ಭಾಗ ಹಲವು ವರ್ಷಗಳ ಕಾಲ ಬಾಳಿಕೆ ಬರುವುದಲ್ಲದೇ ಆರೋಗ್ಯದ ದೃಷ್ಟಿಯಿಂದ ಸುರಕ್ಷಿತ ಕೂಡ.

ಆನ್‌ಲೈನ್‌ನಲ್ಲಿ ಖರೀದಿಸಬಹುದು.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

A Great Martyr Ever Cherished

Edited –Meha Mother and Tessy koshy

ಇಂಗ್ಲಿಷ್

ಎಸ್ಸೆಸ್ಸೆಲ್ಸಿ

Life of Haneef in his childhood

Life for Haneef in the beginning was never a smooth sail. When he was just eight year old, he lost his father. Haneef's mother was a vocal artist. She had to move from place to place for performance, and Haneef and his brothers were left into home.

Absence of Mother and Haneef's experience

Absence of mother from home, taught some lessons for Haneef and his brothers. They became responsible boys and independent. They would get up themselves and they would get ready themselves to go to school. They learnt an important lesson that one's duty is the most important thing in life.

Haneef's mission

Haneef wanted to join the army even though he came from the family of musicians, because he wanted to give something to the nation, and he knew that he would be able to serve the nation if he joined the army.

Haneef an introvert person

Haneef-Uddin was an introvert person. He was always wanted to be alone. He began to make friends only by the time, he was fourteen years of age. He would often go and help the poor because that makes him very happy.

Talents and Interests of Haneef

Haneef was a man with varied talents and interests. He was always 'ekdam bindas'. He dabbled in art, sketched very well, made beautiful cards out of waste materials, read lots of books and loved playing drums.

Honour given to Haneef and his family by the Government

For the immortal sacrifice of Haneef Uddin, the government honoured him by giving his name to the Tartuck Sector of Kargil. It was renamed as Sub-Sector Haneef, in memory of Haneef Uddin's bravery. And also a scholarship now exists in his name and his family started a school in Kullu under the Haneef foundation.

ಹ್ಯಾಲೋ ಆಲ್ಕೇನ್‌ಗಳು ಮತ್ತು ಹ್ಯಾಲೋ ಆರೀನ್‌ಗಳು

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ

ಆಲಿಫ್ಯಾಟಿಕ್ ಅಥವಾ ಆರೋಮ್ಯಾಟಿಕ್ ಹೈಡ್ರೋಕಾರ್ಬನ್‌ಗಳಲ್ಲಿರುವ ಹೈಡ್ರೋಜನ್ ಪರಮಾಣುಗಳನ್ನು ಹ್ಯಾಲೋಜನ್ ಪರಮಾಣುಗಳಿಂದ ಸ್ಥಾನಪಲ್ಲಟ ಮಾಡಿದಾಗ ದೊರೆಯುವ ಉತ್ಪನ್ನಗಳೇ ಆಲ್ಕೈಲ್ ಹಾಲೈಡ್ ಅಥವಾ ಹ್ಯಾಲೋ ಆಲ್ಕೇನ್ ಮತ್ತು ಆರೈಲ್ ಹ್ಯಾಲೈಡ್ ಅಥವಾ ಹ್ಯಾಲೋ ಆರೀನ್.

ಹ್ಯಾಲೋ ಆಲ್ಕೇನ್‌ನಲ್ಲಿ ಹ್ಯಾಲೋಜನ್ ಪರಮಾಣುವು ಆಲ್ಕೈಲ್ ಗುಂಪಿನ ಸಂಕರಣದ ಕಾರ್ಬನ್ ಪರಮಾಣುವಿನೊಂದಿಗೆ ಬಂಧಿಸಲ್ಪಟ್ಟಿದೆ. ಆದರೆ ಹ್ಯಾಲೋ ಆರೀನ್‌ನಲ್ಲಿರುವ ಹ್ಯಾಲೋಜನ್ ಪರಮಾಣುವು ಆಲ್ಕೈಲ್ ಗುಂಪಿನ sp^2 ಸಂಕರಣದ ಕಾರ್ಬನ್ ಪರಮಾಣುವಿನೊಂದಿಗೆ ಬಂಧಿಸಲ್ಪಟ್ಟಿದೆ.

ಹ್ಯಾಲೋಜನ್ ಸಂಯುಕ್ತಗಳ ಉಪಯೋಗಗಳು

- ಹ್ಯಾಲೋಜನ್ ಸಂಯುಕ್ತಗಳು ವ್ಯಾಪಕವಾಗಿ ಕೈಗಾರಿಕೆ ಮತ್ತು ನಿತ್ಯ ಜೀವನದಲ್ಲಿ ತುಂಬಾ ಉಪಯುಕ್ತವಾಗಿವೆ.
- ಇವುಗಳನ್ನು ದ್ರಾವಕವಾಗಿಯೂ ಮತ್ತು ಅನೇಕ ಸಾವಯವ ಸಂಯುಕ್ತಗಳ ಸಂಶ್ಲೇಷಣೆಯಲ್ಲಿ ಆರಂಭಿಕ ವಸ್ತುವಾಗಿಯೂ ಬಳಸುತ್ತಾರೆ.
- ಕ್ಲೋರಾಂಫಿನಿಕಾಲ್ ಎಂಬ ಜೀವ ನಿರೋಧಕ ವಿಷಮ ಶೀತಜ್ವರ ಚಿಕಿತ್ಸೆಗೆ ತುಂಬಾ ಪರಿಣಾಮಕಾರಿಯಾಗಿದೆ.
- ನಮ್ಮ ದೇಹವು ಅಯೋಡಿನ್‌ಯುಕ್ತ ಥೈರೋಕ್ಸಿನ್ ಎಂಬ ಹಾರ್ಮೋನ್ ಅನ್ನು ಉತ್ಪತ್ತಿ ಮಾಡುತ್ತದೆ. ಇದರ ಕೊರತೆಯು ಗಾಯಿಟರ್ ರೋಗವನ್ನು ಉಂಟುಮಾಡುತ್ತದೆ.
- ಕ್ಲೋರೊಕ್ವಿನ್ ಎಂಬ ಸಂಶ್ಲೇಷಿತ ಹ್ಯಾಲೋಜನ್ ಸಂಯುಕ್ತವನ್ನು ಮಲೇರಿಯಾದ ಚಿಕಿತ್ಸೆಯಲ್ಲಿ ಬಳಸಲಾಗುತ್ತದೆ.
- ಶಸ್ತ್ರಚಿಕಿತ್ಸೆಯಲ್ಲಿ ಹ್ಯಾಲೋಥೇನ್ ಅನ್ನು ಅರವಳಿಕೆಯಾಗಿ ಬಳಸುತ್ತಾರೆ.

ವರ್ಗೀಕರಣ

ಹ್ಯಾಲೋಜನ್ ಪರಮಾಣುಗಳ ಸಂಖ್ಯೆಯನ್ನು ಆಧರಿಸಿ

1 ಮೋನೊ ಹ್ಯಾಲೋ ಆಲ್ಕೇನ್
2) ಡೈ ಹ್ಯಾಲೋ ಆಲ್ಕೇನ್
3) ಪಾಲಿ ಹ್ಯಾಲೋ ಆಲ್ಕೇನ್ ವಿಂಗಡಿಸಬಹುದು.

a) C_2H_5X ಮೋನೋ ಹ್ಯಾಲೋ ಆಲ್ಕೇನ್- ಒಂದು ಹ್ಯಾಲೋಜನ್ ಪರಮಾಣುವಿದೆ.

b) CH_2X - **ಡೈಹ್ಯಾಲೋ ಆಲ್ಕೇನ್**
|
CH_2
ಎರಡು ಹ್ಯಾಲೋಜನ್ ಪರಮಾಣುವಿದೆ.

c) CH_2X
d) |
CH X - **ಟ್ರೈಹ್ಯಾಲೋ ಆಲ್ಕೇನ್**
|
CH_2X
ಮೂರು ಹ್ಯಾಲೋಜನ್ ಪರಮಾಣುಗಳಿವೆ.

ಇದೇ ರೀತಿಯಾಗಿ ಹ್ಯಾಲೋ ಅರೀನ್‌ಗಳನ್ನು ವಿಂಗಡಿಸಲಾಗಿದೆ.



ಮೋನೊಹ್ಯಾಲೋಆರೀನ್



ಡೈ ಹ್ಯಾಲೋಆರೀನ್



ಟ್ರೈಹ್ಯಾಲೋಆರೀನ್

ಹ್ಯಾಲೋಜನ್‌ನೊಂದಿಗೆ ಬಂಧಿಸಲ್ಪಟ್ಟ ಕಾರ್ಬನ್ ಪರಮಾಣುವಿನ ಸಂಕರಣವನ್ನು ಆಧರಿಸಿ: ಅಲ್ಕೈಲ್ ಹ್ಯಾಲೈಡ್‌ಗಳು (R-X) ಮೋನೋ ಹ್ಯಾಲೋ ಸಂಯುಕ್ತವನ್ನು ಈ ಕೆಳಗಿನಂತೆ ವಿಂಗಡಿಸಬಹುದು.

$sp^3C - X$ ಬಂಧವನ್ನು ಹೊಂದಿರುವ ಸಂಯುಕ್ತಗಳು

(ಇಲ್ಲಿ $X = F, Cl, Br, I$)

ಹ್ಯಾಲೋಜನ್‌ನೊಂದಿಗೆ ಬಂಧಿಸಿರುವ ಕಾರ್ಬನ್ ಪರಮಾಣುವಿನ ಸ್ವಭಾವವನ್ನು ಆಧರಿಸಿ



ಪ್ರಾಥಮಿಕ (1°)(Primary)



ದ್ವಿತೀಯಕ: (2°) (Secondary)



ತ್ರತೀಯಕ: (3°)(Tertiary)

ಬಿ) **ಅಲೈಲಿಕ್ ಹ್ಯಾಲೈಡ್‌ಗಳು:** ಈ ರೀತಿಯ ಸಂಯುಕ್ತಗಳು ದ್ವಿಬಂಧವಿರುವ ಕಾರ್ಬನ್ (C=C) ನಂತರ ಇರುವ sp^3 ಸಂಕರಣ ಕಾರ್ಬನ್‌ನೊಂದಿಗೆ ಹ್ಯಾಲೋಜನ್ ಪರಮಾಣು ಬಂಧಿಸಿರುತ್ತದೆ.



ಸಿ) **ಬೆಂಝೈಲಿಕ್ ಹ್ಯಾಲೈಡ್‌ಗಳು:** ಇಲ್ಲಿ ಹ್ಯಾಲೋಜನ್ ಪರಮಾಣವು ಆರೋಮ್ಯಾಟಿಕ್ ಉಂಗುರದ ನಂತರ ಇರುವ sp^3 ಸಂಕರಣ ಕಾರ್ಬನ್‌ನೊಂದಿಗೆ ಬಂಧಿಸಿರುತ್ತದೆ.



(1°)



$R' = CH_3$, $R'' = H$ (2°)
$R' = R'' = CH_3$ (3°)

ಬಂಧವನ್ನು ಹೊಂದಿರುವ ಸಂಯುಕ್ತಗಳು

a) **ವಿನೈಲಿಕ್ ಹಾಲೈಡ್‌ಗಳು:** ಈ ಬಗೆಯ ಸಂಯುಕ್ತಗಳಲ್ಲಿ ಕಾರ್ಬನ್-ಕಾರ್ಬನ್ ನಡುವೆ ದ್ವಿಬಂಧವಿರುವ ಸಂಕರಣ ಕಾರ್ಬನ್‌ನೊಂದಿಗೆ ಹ್ಯಾಲೋಜನ್ ಪರಮಾಣುವು ಬಂಧಿಸಿರುತ್ತದೆ.



b) **ಆರೈಲ್ ಹ್ಯಾಲೈಡ್‌ಗಳು:** ಇಂತಹ ಸಂಯುಕ್ತಗಳಲ್ಲಿ ಹ್ಯಾಲೋಜನ್ ಪರಮಾಣುವು ಆರೋಮ್ಯಾಟಿಕ್ ಉಂಗುರದ ಸಂಕರಣ ಕಾರ್ಬನ್‌ನೊಂದಿಗೆ ಬಂಧಿಸಿರುತ್ತದೆ.



ಪ್ರಜಾವಾಣಿ ನೋಡಿಯೊ

ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ವೇವ್ ಆಪ್ಟಿಕ್ಸ್ – ಇಂಟರ್‌ಫಿಯರೆನ್ಸ್ ಅಂಡ್ ವೈಡಿಎಸ್‌ಇ' ಪಾಠವನ್ನು ಇಂಗ್ಲಿಷ್‌ನಲ್ಲಿ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3exqaGJ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ದುರ್ಬಲ ವ್ಯಕ್ತಿಗಳು ತಾವಿರುವ ಸ್ಥಿತಿಗೆ ತಾವೇ ಹೊಣೆ ಎಂಬುದನ್ನು ಎಂದಿಗೂ ಒಪ್ಪಿಕೊಳ್ಳುವುದಿಲ್ಲ. ಅವರು ಯಾವಾಗಲೂ ಸಂದರ್ಭಗಳನ್ನು ಅಥವಾ ಇತರರನ್ನು ದೂಷಿಸುತ್ತಾರೆ.

–ಅಮಿಶ್ ತ್ರಿಪಾಠಿ

ಕಾಲಹರಣ ಮಾಡಿದ್ದು ಸಾಕು ಯುವವೈದ್ಯರ ಸೇವೆ ಬಳಸಿಕೊಳ್ಳಿ

ಕೋವಿಡ್‌ನ ಎರಡನೇ ಅಲೆಯ ಹೊಡೆತವನ್ನು ತಾಳಲಾಗದೆ ನಮ್ಮ ಆರೋಗ್ಯ ಮೂಲಸೌಕರ್ಯ ಕುಸಿದುಬಿದ್ದಿದೆ. ಸೋಂಕಿತರ ಆರೈಕೆಗೆ ವೈದ್ಯಕೀಯ ಸಿಬ್ಬಂದಿಯ ಕೊರತೆ ಕೂಡ ಈಗ ತೀವ್ರವಾಗಿದೆ. ಇಂತಹ ಸಂದಿಗ್ಧ ಸಮಯದಲ್ಲಿ, ರಾಜ್ಯದಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ವೈದ್ಯಕೀಯ ಪದವಿಯನ್ನು ಪೂರೈಸಿದ ಸುಮಾರು 7,000 ವಿದ್ಯಾರ್ಥಿಗಳ ಸೇವೆ ಪಡೆಯುವ ಪ್ರಕ್ರಿಯೆ ಸಂಕೀರ್ಣವಾಗಿ ಪರಿಣಮಿಸಿರುವುದು ದುರದೃಷ್ಟಕರ. ಒಂದೆಡೆ, ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳನ್ನು ಕೋವಿಡ್ ಆಸ್ಪತ್ರೆಗಳಲ್ಲಿ ಯಾವುದೇ ಹೆಚ್ಚುವರಿ ವೇತನ ನೀಡದೆ ದುಡಿಸಿಕೊಳ್ಳಲಾಗುತ್ತಿದೆ. ಇನ್ನೊಂದೆಡೆ, ವೈದ್ಯಕೀಯ ಪದವೀಧರ ವಿದ್ಯಾರ್ಥಿಗಳು ಸೇವೆ ಸಲ್ಲಿಸಲು ಇರುವ ಅವಕಾಶ ಕೂಡ ವ್ಯರ್ಥವಾಗಿ ಹೋಗುತ್ತಿದೆ. ‘ಕಡ್ಡಾಯ ಗ್ರಾಮೀಣ ಸೇವೆ’ ಕಾಯ್ದೆಯ ಅನುಷ್ಠಾನದಲ್ಲಿ ಆಗಿರುವ ಎಡವಟ್ಟಿನಿಂದ ಸಮಸ್ಯೆ ಇಷ್ಟೊಂದು ಕಗ್ಗಂಟಾಗಿದೆ. ಕಡ್ಡಾಯ ಗ್ರಾಮೀಣ ಸೇವೆಯನ್ನು ಪೂರೈಸದ ವಿದ್ಯಾರ್ಥಿಗಳ ವೈದ್ಯ ಪದವಿಯನ್ನು ನೋಂದಣಿ ಮಾಡುವಂತಿಲ್ಲ ಎನ್ನುತ್ತದೆ ನಿಯಮ. ಹೀಗಾಗಿ ಪದವಿ ಪೂರೈಸಿದರೂ ಕಡ್ಡಾಯ ಸೇವೆ ಪೂರ್ಣಗೊಳಿಸದಿದ್ದರೆ ಅಂಥವರು ವೈದ್ಯರಾಗಿ ಕರ್ತವ್ಯ ನಿರ್ವಹಿಸಲಾಗದು. ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸಲು ವೈದ್ಯ ವಿದ್ಯಾರ್ಥಿಗಳು ಹಿಂದೇಟು ಹಾಕುವುದು, ಸರ್ಕಾರ ಹೋಗಲೇಬೇಕೆಂದು ಬಿಗಿಪಟ್ಟು ಹಿಡಿಯುವುದು– ಈ ಹಗ್ಗಜಗ್ಗಾಟ ಹತ್ತು ವರ್ಷಗಳಿಂದಲೂ ನಡೆಯುತ್ತಿದೆ. ‘ವೈದ್ಯಕೀಯ ಕೋರ್ಸ್ ಪೂರೈಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಕಾಯ್ದೆ–2012’ ಅನ್ನು ಗ್ರಾಮೀಣ ಭಾಗಗಳಲ್ಲಿ ವೈದ್ಯಕೀಯ ಸೇವೆ ಹೆಚ್ಚಿಸುವ ಸದುದ್ದೇಶದಿಂದಲೇ ರೂಪಿಸಲಾಗಿದೆ. ಹಿಂದಿನ ವರ್ಷಗಳಲ್ಲಿ, ಹೈಕೋರ್ಟ್ ಆದೇಶಗಳೂ ಸೇರಿದಂತೆ ಬೇರೆ ಬೇರೆ ಕಾರಣಗಳಿಗಾಗಿ ಈ ಕಾಯ್ದೆಯನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರುವುದು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ಕಾಯ್ದೆಯನ್ನು ಈ ವರ್ಷ ಕಟ್ಟುನಿಟ್ಟಾಗಿ ಜಾರಿಗೆ ತರುವುದಾಗಿ ವೈದ್ಯಕೀಯ ಶಿಕ್ಷಣ ಇಲಾಖೆ ಪಟ್ಟು ಹಿಡಿದಿತ್ತು. ಆದರೆ, ಗ್ರಾಮೀಣ ಸೇವೆಗೆ ಸಿದ್ಧರಿದ್ದ ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ನೀಡಲು ಆರೋಗ್ಯ ಇಲಾಖೆ ಮೀನಮೇಷ ಎಣಿಸಿತು. ಈ ಮಧ್ಯೆ, ಪದವಿ ಪೂರೈಸಿದವರಿಗೆ ಅಂಕಪಟ್ಟಿ ನೀಡದಂತೆ ಕಾಲೇಜುಗಳಿಗೆ ನಿರ್ದೇಶನವೂ ಹೋಯಿತು. ಈ ಕಾರಣಗಳಿಂದ ಸಮಸ್ಯೆ ಬಿಗಡಾಯಿಸಿದೆ.

ವೈದ್ಯಕೀಯ ತುರ್ತು ಪರಿಸ್ಥಿತಿಯ ಈ ಸಂದರ್ಭದಲ್ಲಿ ಯುವವೈದ್ಯರು ಲಭ್ಯವಿದ್ದರೂ ಅವರ ಸೇವೆಯನ್ನು ಬಳಸಿಕೊಳ್ಳದೇ ಇರುವುದು ಅಕ್ಷಮ್ಯ

ವೈದ್ಯಕೀಯ ಸ್ನಾತಕೋತ್ತರ ಪದವಿಗೆ ಪ್ರವೇಶ ಬಯಸಿದ ವಿದ್ಯಾರ್ಥಿಗಳು ಗ್ರಾಮೀಣ ಸೇವೆಗೆ ಒಪ್ಪಿ ₹ 30 ಲಕ್ಷದಿಂದ ₹ 50 ಲಕ್ಷದವರೆಗೆ ಬಾಂಡ್ ನೀಡಬೇಕಾದ ಒತ್ತಡಕ್ಕೆ ಸಿಲುಕಿದ್ದಾರೆ. ಹಾಗೆಯೇ ಪದವಿಯನ್ನು ಮುಗಿಸಿದವರಿಗೆ, ಕಾಲೇಜಿನಿಂದ ಹೊರಬಿದ್ದು ಮೂರು ತಿಂಗಳಾದರೂ ಸ್ವತಂತ್ರವಾಗಿ ಕೆಲಸ ಮಾಡಲೂ ಅವಕಾಶ ನೀಡದೆ, ಗ್ರಾಮೀಣ ಸೇವೆಗೂ ಕಳುಹಿಸದೆ ಕಾಲಹರಣ ಮಾಡಲಾಗಿದೆ. ಸರ್ಕಾರ, ಸಕಾಲದಲ್ಲಿ ಆದೇಶ ಹೊರಡಿಸಿದ್ದರೆ ಈ ವೇಳೆಗಾಗಲೇ ವಿದ್ಯಾರ್ಥಿಗಳು ಮೂರು ತಿಂಗಳು ಗ್ರಾಮೀಣ ಸೇವೆಯನ್ನು ಪೂರೈಸಿರುತ್ತಿದ್ದರು. ಹೊಸದಾಗಿ ನೇಮಕಗೊಂಡವರಿಗೆ ವೇತನ ನೀಡಲು ಅನುದಾನದ ಕೊರತೆ, ಕಾನೂನು ಅಡೆತಡೆ, ಆರೋಗ್ಯ ಇಲಾಖೆಯ ಸಚಿವರು ಹಾಗೂ ಅಧಿಕಾರಿಗಳು ನಿರ್ಣಯ ಕೈಗೊಳ್ಳುವಲ್ಲಿ ಮಾಡಿದ ವಿಳಂಬವೇ ಇಂದಿನ ಬಿಕ್ಕಟ್ಟಿಗೆ ಕಾರಣ. ಈ ಮಧ್ಯೆ, ಸ್ನಾತಕೋತ್ತರ ಪದವಿ ಪ್ರವೇಶಾತಿಗೆ ನೀಟ್ ಪರೀಕ್ಷೆ ಎದುರಿಸಲು ದೇಶದಾದ್ಯಂತ ಒಂದೂಮುಕ್ಕಾಲು ಲಕ್ಷ ವೈದ್ಯ ಪದವೀಧರರು ತಯಾರಿ ನಡೆಸಿದ್ದರು. ಪರೀಕ್ಷೆ ಮುಗಿದಿದ್ದರೆ ಅಷ್ಟು ಜನ ಯುವವೈದ್ಯರು ರೋಗಿಗಳ ಸೇವೆಗೆ ಲಭ್ಯರಾಗುತ್ತಿದ್ದರು. ಪರೀಕ್ಷೆ ಮುಂದಕ್ಕೆ ಹೋಗಿದ್ದರಿಂದ ಆ ಅವಕಾಶವೂ ತಪ್ಪಿದೆ. ಸಾರ್ವಜನಿಕ ಆರೋಗ್ಯ ನಿರ್ಲಕ್ಷಿಸಿ ಚುನಾವಣೆ ಮೇಲೆ ಚುನಾವಣೆ ನಡೆಸಲಾಗುತ್ತಿದೆ. ವಿದ್ಯಾರ್ಥಿಗಳ ಪರೀಕ್ಷೆಗಳು ಮಾತ್ರ ಮುಂದಕ್ಕೆ ಹೋಗುತ್ತಲೇ ಇವೆ. ಇರಲಿ, ಗ್ರಾಮೀಣ ಸೇವೆಗೆ ಸಿದ್ಧರಿರುವ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರ ಒಂದಿನಿತೂ ವಿಳಂಬ ಮಾಡದೆ, ನಿಯಮಗಳ ನೆಪವನ್ನೂ ಹೇಳದೆ ನೇಮಕಾತಿ ಪತ್ರವನ್ನು ಕೊಡಬೇಕು. ವೈದ್ಯ ಪದವಿ ನೋಂದಣಿ ಪ್ರಕ್ರಿಯೆ ಆರಂಭಿಸುವುದಾಗಿ ಆರೋಗ್ಯ ಸಚಿವರು ಹೇಳಿದ್ದಾರೆ. ಇದು ಬರೀ ಮಾತಾಗಬಾರದು. ಈ ಪ್ರಕ್ರಿಯೆ ತ್ವರಿತವಾಗಿ ಪೂರ್ಣಗೊಳ್ಳಬೇಕು. ಇಡೀ ದೇಶ ವೈದ್ಯಕೀಯ ತುರ್ತು ಪರಿಸ್ಥಿತಿ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಯುವವೈದ್ಯರು ಲಭ್ಯವಿದ್ದರೂ ಅವರ ಸೇವೆಯನ್ನು ಪಡೆಯದೆ ಕಾಲಹರಣ ಮಾಡುತ್ತಿರುವುದು ಸರಿಯಲ್ಲ. ವೈದ್ಯಕೀಯ ವಿದ್ಯಾರ್ಥಿಗಳೂ ಅಷ್ಟೆ; ಪದವಿ ಅಧ್ಯಯನಕ್ಕೆ ಸೇರುವಾಗಲೇ ಗ್ರಾಮೀಣ ಸೇವೆಗೆ ಹೋಗುವ ನಿಯಮವನ್ನು ಒಪ್ಪಿ, ಆಮೇಲೆ ತಗಾದೆ ತೆಗೆಯುವುದು ಸರ್ವಥಾ ಸಮರ್ಥನೀಯ ನಡೆಯಲ್ಲ.

ವಿಶ್ವಗುರುವಾಗುವ ಹುಮ್ಮಸ್ಸಿನಲ್ಲಿದ್ದ ಭಾರತ ಈಗ ಔಷಧಿಗಾಗಿ ಇನ್ನೊಬ್ಬರ ಮುಂದೆ ಕೈಯೊಡ್ಡುತ್ತಿದೆ

ಗಡ್ಡಕ್ಕೆ ಬೆಂಕಿ ಬಿದ್ದಿದೆ, ಟೊಂಕ ಕಟ್ಟುವವರಿಲ್ಲ!

ಅನುಸಂಧಾನ

ರವೀಂದ್ರ ಭಟ್ಟ

‘**ಗಡ್ಡಕ್ಕೆ** ಬೆಂಕಿ ಬಿದ್ದಾಗ ಬಾವಿ ತೋಡಲು ತೊಡಗಿದಂತೆ’ ಎಂಬುದೊಂದು ಗಾದೆ. ಸದ್ಯ ನಮ್ಮ ದೇಶ ಮತ್ತು ರಾಜ್ಯದ ಪರಿಸ್ಥಿತಿ ನೋಡಿದರೆ ಯಾರಿಗಾದರೂ ಹಾಗೇ ಅನಿಸುತ್ತದೆ. ಇದು ಗಡ್ಡಕ್ಕೆ ಬೆಂಕಿ ಬಿದ್ದಿದ್ದಲ್ಲ. ನಾವೇ ಕೈಯಾರೆ ನಮ್ಮ ಗಡ್ಡಕ್ಕೆ ಬೆಂಕಿ ಹಚ್ಚಿಕೊಂಡು, ಈಗ ಬಾವಿ ತೋಡಲು ಸಲಕರಣೆಗಳು ಎಲ್ಲಿವೆ ಎಂದು ಹುಡುಕುತ್ತಿದ್ದೇವೆ. ಅವು ಕೈಗೆ ಸಿಗುತ್ತಿಲ್ಲ. ಬೆಂಕಿ ಆರುತ್ತಲೂ ಇಲ್ಲ.

ಇದೇನು ಗುಟ್ಟಲ್ಲ. ಬಹಿರಂಗ ಸತ್ಯ. ಬೆಂಕಿ ಆರಿಸಲು ಟೊಂಕ ಕಟ್ಟಿ ನಿಲ್ಲುವ ನಾಯಕರೂ ಕಾಣುತ್ತಿಲ್ಲ. ಇಡೀ ದೇಶ ಅರಾಜಕತೆಯ ಸುಳಿಯಲ್ಲಿ ಸಿಕ್ಕಿದೆ ಎಂದು ಯಾರಿಗಾದರೂ ಅನಿಸಿದರೆ ಅದು ಆಕಸ್ಮಿಕವೂ ಅಲ್ಲ.

ವಿಶ್ವಗುರುವಾಗುವ ಹುಮ್ಮಸ್ಸಿನಲ್ಲಿದ್ದ ಭಾರತ ಈಗ ಔಷಧಿ ಮತ್ತು ವೈದ್ಯಕೀಯ ಸಲಕರಣೆಗಾಗಿ ಇನ್ನೊಬ್ಬರ ಮುಂದೆ ಕೈಯೊಡ್ಡಿ ನಿಂತಿದೆ. ಈಗ ನಾಲ್ಕಾರು ತಿಂಗಳ ಕೆಳಗೆ ನಮ್ಮ ರಾಜಕಾರಣಿಗಳು ‘ನಾವು ವಿಶ್ವಕ್ಕೇ ವ್ಯಾಕ್ಸಿನ್ ಸರಬರಾಜು ಮಾಡುವ ಮಟ್ಟಕ್ಕೆ ಬೆಳೆದಿದ್ದೇವೆ’ ಎಂದು ಕೊಚ್ಚಿಕೊಂಡಿದ್ದರು. ಈಗ ನೋಡಿ ಏನಾಗಿದೆ ಎಂದು. ದೇಶಕ್ಕೆ ಮುನ್ನೋಟದ ಮುತ್ಸದ್ದಿಗಳು ಇಲ್ಲದಿದ್ದರೆ ಏನಾಗುತ್ತದೆ ಎಂಬ ಅನುಭವ ಈಗ ನಮ್ಮ ಮತದಾರರಿಗೆ ನಿಧಾನವಾಗಿ ಅರಿವಾಗುತ್ತಿದೆ. ಗಡ್ಡ ಬಿಟ್ಟವರಿಗೂ ಅದರ ಅನುಭವ ಆಗಿರಬೇಕು. ಆರಿಸಿ ಕಳಿಸಿದವರೇ ಈಗ ಜರೆಯತೊಡಗಿದ್ದಾರೆ. ಆದರೆ ಎಲ್ಲವೂ ಈಗ ರೈಲು ಹೋದ ಮೇಲೆ ಟಿಕೆಟ್ ತೆಗೆದುಕೊಂಡಂತೆ ಆಗಿದೆ.

ನಮ್ಮನ್ನು ಆಳುವ ಮಹಾನುಭಾವರು ಹೇಗಿದ್ದಾರೆ ನೋಡಿ. ಗಡ್ಡಕ್ಕೆ ಬೆಂಕಿ ಬೀಳುತ್ತದೆ ಎಂದು ಗೊತ್ತಿದ್ದರೂ ಹಲವಾರು ಮಂದಿ ಎಚ್ಚರಿಸಿದ್ದರೂ ಗಡ್ಡಕ್ಕೆ ಬೆಂಕಿ ಹಚ್ಚಿಕೊಳ್ಳುವ ಪ್ರಕ್ರಿಯೆಯಿಂದ ಹಿಂದೆ ಸರಿಯಲಿಲ್ಲ. ಆ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷಗಳ ಮುಖಂಡರೂ ಪೈಪೋಟಿಗೆ ಬಿದ್ದಂತೆ ಸಜ್ಜಾಗಿ ನಿಂತಿದ್ದರು. ಅದರಲ್ಲಿ ಯಾರೂ ಕಮ್ಮಿಯಲ್ಲ, ಯಾರೂ ಹೆಚ್ಚಲ್ಲ. ಏಪ್ರಿಲ್ 18ರಂದು ಪ್ರಮುಖ ನಾಯಕರೊಬ್ಬರು ಪಶ್ಚಿಮ ಬಂಗಾಳದ ಅಸನ್ ಸೋಲ್‌ನಲ್ಲಿ ಭಾರೀ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗಿಯಾಗಿ, ‘ಇಷ್ಟೊಂದು ಭಾರೀ ಸಂಖ್ಯೆಯಲ್ಲಿ ಜನ ಸೇರಿರುವುದನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ’ ಎಂದು ಖುಷಿಯಿಂದ ಹೇಳಿಕೊಂಡರು. ಆ ದಿನ ಭಾರತದಲ್ಲಿ ಕೊರೊನಾ ಸೋಂಕಿತರ ಸಂಖ್ಯೆ ಎರಡು ಲಕ್ಷಕ್ಕೂ ಹೆಚ್ಚಾಗಿತ್ತು. ನಂತರ ಅದು ಮೂರೂವರೆ ಲಕ್ಷದ ಗಡಿಯನ್ನೂ ದಾಟಿತು.

ನಿಜವಾಗಿ ಅಂತಹ ಪ್ರಚಾರ ಸಭೆಯನ್ನು ನಡೆಸಲು ಅವಕಾಶ ನೀಡಬಾರದಿತ್ತು. ಅಷ್ಟೊಂದು ಜನ ಯಾವುದೇ ಅಂತರವೂ ಇಲ್ಲದೆ ಪಾಲ್ಗೊಂಡಿದ್ದನ್ನು ನೋಡಿ ನಮ್ಮ ನಾಯಕರಾದರೂ ವಿಷಾದ ವ್ಯಕ್ತಪಡಿಸಬೇಕಿತ್ತು. ಆದರೆ ಅಲ್ಲಿ ಆಗಿದ್ದೇ ಬೇರೆ. ಇನ್ನು ಮುಂದೆ ಪ್ರಚಾರ ಸಭೆಯಲ್ಲಿ ಭಾಗಿಯಾಗುವುದಿಲ್ಲ ಎಂದು ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದ್ದಕ್ಕೆ ಬಿಜೆಪಿ ಲೇವಡಿ ಮಾಡಿತು. ಸೋಲಿನ ಭಯದಿಂದ ಹಿಂದಡಿ ಇಟ್ಟಿದ್ದಾರೆ ಎಂದು ಕೇಕೆ ಹಾಕಿತು. ಪಶ್ಚಿಮ ಬಂಗಾಳದಲ್ಲಿ ಇನ್ನು ಉಳಿದ ಎಲ್ಲ ಕ್ಷೇತ್ರಗಳಿಗೂ ಏಕಕಾಲದಲ್ಲಿ ಚುನಾವಣೆ ನಡೆಸಿ ಎಂಬ ಮಮತಾ ಬ್ಯಾನರ್ಜಿ ಅವರ ಕೋರಿಕೆಯನ್ನು ತಿರಸ್ಕರಿಸಲಾಯಿತು. ಉತ್ತರಾಖಂಡದಲ್ಲಿ ಕುಂಭಮೇಳಕ್ಕೂ ಅವಕಾಶ ನೀಡಲಾಯಿತು. ಇಲ್ಲಿ ನಮ್ಮ ಮುಖ್ಯಮಂತ್ರಿಗಳು ಜ್ವರ ಬಂದಿದ್ದರೂ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಗಿಯಾಗಿದ್ದರು. ನಂತರ ಅವರಿಗೆ ಕೋವಿಡ್ ದೃಢವಾಗಿ ಆಸ್ಪತ್ರೆ ಸೇರಿದರು.

ಅಭ್ಯರ್ಥಿಗಳೂ ಕೊರೊನಾ ಇದ್ದರೂ ಪ್ರಚಾರ ನಿಲ್ಲಿಸಲಿಲ್ಲ. ಇತರ ಸಚಿವರೂ ಶಾಸಕರೂ ಜನರನ್ನು ಸೇರಿಸಿಕೊಂಡು ಪ್ರಚಾರ ನಡೆಸಿದರು. ಸ್ಥಳೀಯ ಸಂಸ್ಥೆಗಳ ಚುನಾವಣೆಯ ನೆಪದಲ್ಲಿ ಮನೆ ಮನೆ ಪ್ರಚಾರವೂ ನಡೆಯಿತು. ಚುನಾವಣೆ ಮುಗಿದ ನಂತರ ಲಾಕ್‌ಡೌನ್ ಮಾಡುವುದಾಗಿ ಪ್ರಕಟ ಮಾಡಲಾಯಿತು. ಅಂತರ ಕಾಪಾಡಿಕೊಳ್ಳಿ, ಮಾಸ್ಕ್ ಧರಿಸಿ, ಸ್ಯಾನಿಟೈಸರ್ ಬಳಸಿ ಎಂದು ಸ್ಪರ್ಧೆಗೆ ಬಿದ್ದವರಂತೆ ನಮ್ಮ ಮುಖಂಡರು ಜನರಿಗೆ ಕರೆ ನೀಡತೊಡಗಿದರು. ಇವೆಲ್ಲಾ ಹೇಳೋದು ವೇದಾಂತ, ತಿನ್ನೋದು ಬದನೆಕಾಯಿ ಎಂಬಂತೆ ಆಗಿದೆ.

ಕೊರೊನಾ ಎರಡನೇ ಅಲೆ ಬರುತ್ತದೆ, ಅದು ಮೊದಲ ಅಲೆಗಿಂತ ಭೀಕರವಾಗಿರುತ್ತದೆ ಎಂದು ತಜ್ಞರ ಸಮಿತಿ ಕಳೆದ ನವೆಂಬರ್‌ನಲ್ಲಿಯೇ ಎಚ್ಚರಿಕೆ ಕೊಟ್ಟಿದ್ದರೂ ನಮ್ಮ ಯಾವ ರಾಜಕೀಯ ನಾಯಕರೂ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳಲೇ ಇಲ್ಲ. ಕೊರೊನಾ ಹೋಯ್ತು ಎಂದು ತಮ್ಮ ಹಳೆಯ ಆಟಗಳನ್ನು ಶುರು ಮಾಡಿಬಿಟ್ಟರು. ಜಾತ್ರೆ, ಮದುವೆ, ಕುಂಭಮೇಳ ಯಾವುದಕ್ಕೂ ಅಂಕೆಯೇ ಇರಲಿಲ್ಲ. ಜನರೂ ಅವರನ್ನೇ ಅನುಸರಿಸಿದರು. ವೈದ್ಯರು, ವಿಜ್ಞಾನಿಗಳ ಮಾತಿಗೆ ಕವಡೆ ಕಾಸಿನ ಕಿಮ್ಮತ್ತೂ ಇರಲಿಲ್ಲ. ಈಗ ಕೊರೊನಾ ಅರ್ಭಟ ಹೆಚ್ಚಾಗಿದೆ. ಎಲ್ಲರೂ ಬಾಯಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ.

ಹಾದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ತಂದಿಟ್ಟುಕೊಂಡಿದ್ದೇವೆ. ಈಗ ಅದು ಮಹಾಮಾರಿಯಾಗಿ ಬೆಳೆದಿದೆ. ನಮ್ಮ ಟೊಳ್ಳುಗಳೆಲ್ಲಾ ಬಯಲಾಗಿವೆ. ಆಕ್ಸಿಜನ್ ಇಲ್ಲದೆ ಜನರು ಸಾಯುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಹಾಸಿಗೆಗಳೂ ಸಿಗುತ್ತಿಲ್ಲ. ವೆಂಟಿಲೇಟರ್ ಇಲ್ಲ. ವ್ಯಾಕ್ಸಿನ್ ಕೊರತೆ ಕಾಡುತ್ತಿದೆ. ಆದರೂ ನಮಗೆ ಬುದ್ಧಿ ಬಂದಿಲ್ಲ. ಕೊರೊನಾ ವೈರಸ್ ಬಂದಾಗ, ಲಾಕ್‌ಡೌನ್ ಜಾರಿಯಾದಾಗ ನಮ್ಮ ಜೀವಿತದ ಅವಧಿಯಲ್ಲಿ ಇಂತಹ ಸ್ಥಿತಿ ಬರುತ್ತದೆ ಎಂದು ಯಾರೂ ಊಹಿಸಿರಲಿಲ್ಲ. ಆದರೆ ಈಗಿನ ಸ್ಥಿತಿ ನೋಡಿ, ಜನ ಆಮ್ಲಜನಕ ಇಲ್ಲದೆ ಸಾಯುತ್ತಿದ್ದಾರೆ. ಉಸಿರಾಡಲು ಗಾಳಿ ಇಲ್ಲದೆ ಸಾಯುವ ಸ್ಥಿತಿ ಬರುತ್ತದೆ ಎನ್ನುವುದನ್ನು ಕಲ್ಪನೆ ಮಾಡಿಕೊಳ್ಳಲೂ ಸಾಧ್ಯವಿರಲಿಲ್ಲ. ಆದರೆ ಅದೆಲ್ಲಾ ಈಗ ನಿಜವಾಗುತ್ತಿದೆ.

ಕೊರೊನಾ ಕಾಲದಲ್ಲಿ ಚುನಾವಣೆ ನಡೆಸುವ ಚುನಾವಣಾ ಆಯೋಗದ ಸಾಹಸವನ್ನು ಕಟುವಾಗಿ ಟೀಕಿಸಿರುವ ಮದ್ರಾಸ್ ಹೈಕೋರ್ಟ್, ಆಯೋಗದ ಅಧಿಕಾರಿಗಳ ವಿರುದ್ಧ ಕೊಲೆ ಪ್ರಕರಣವನ್ನು ದಾಖಲಿಸಬಹುದು ಎಂದೂ ಅಭಿಪ್ರಾಯಪಟ್ಟಿದೆ. ಇದೇ ರೀತಿಯ ಮಾತನ್ನು ಕೋಲ್ಕತ್ತ ಹೈಕೋರ್ಟ್ ಕೂಡ ಹೇಳಿತ್ತು. ಕರ್ನಾಟಕದ ಹೈಕೋರ್ಟ್ ಸಹ ‘ಅಂತರ ಪಾಲಿಸದ ಮತ್ತು ಕೊರೊನಾ ಮಾರ್ಗಸೂಚಿಯನ್ನು ಪಾಲಿಸದ ರಾಜಕಾರಣಿಗಳು ಹಾಗೂ ಮಠಾಧೀಶರ ವಿರುದ್ಧ ಎಫ್‌ಐಆರ್ ದಾಖಲಿಸಿ’ ಎಂದು ಸೂಚಿಸಿದೆ. ಆದರೆ ಇದ್ಯಾವುದರ ಬಗ್ಗೆಯೂ ಆಯೋಗ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಕೊರೊನಾ ಸೋಂಕು ಹೆಚ್ಚಾಗಿದ್ದರೂ ಯಾಕೆ ಲಾಕ್‌ಡೌನ್ ಮಾಡಿಲ್ಲ, ತಕ್ಷಣವೇ ಲಾಕ್‌ಡೌನ್ ಘೋಷಿಸಿ ಎಂದು ಅಲಹಾಬಾದ್ ಹೈಕೋರ್ಟ್ ಉತ್ತರ ಪ್ರದೇಶದ ಸರ್ಕಾರಕ್ಕೆ ಹೇಳಿದರೆ, ಆ ಆದೇಶಕ್ಕೆ ಸುಪ್ರೀಂ ಕೋರ್ಟ್‌ನಿಂದ ತಡೆಯಾಜ್ಞೆ ತರುತ್ತೇವೆಯೇ ವಿನಾ ಕೊರೊನಾ ಹರಡುವಿಕೆ ತಡೆಯಲು ಕ್ರಮ ಕೈಗೊಳ್ಳುವುದಕ್ಕೆ ಮುಂದಾಗುವುದಿಲ್ಲ. ನ್ಯಾಯಾಲಯದ ಬಗ್ಗೆ ನಮಗೆ ಸಿಟ್ಟು ಬರುತ್ತದೆಯೇ ವಿನಾ ನಮ್ಮ ತಪ್ಪಿನ ಅರಿವಾಗುವುದಿಲ್ಲ. ಇದೇ ಇಂದಿನ ಫಜೀತಿ.

ಹಾದಿಯಲ್ಲಿ ಹೋಗುವ ವಾಹನಗಳನ್ನು ವಶಪಡಿಸಿಕೊಳ್ಳುತ್ತಿರುವ ಪೊಲೀಸರು, ಮಾಸ್ಕ್ ಸರಿಯಾಗಿ ಹಾಕಿಕೊಂಡಿಲ್ಲ ಎಂದು ದಂಡ ವಿಧಿಸುವ ಮಾರ್ಷಲ್‌ಗಳು ಕಾಣುತ್ತಿದ್ದಾರೆ. ಆದರೆ ಮಾರ್ಗಸೂಚಿ ಉಲ್ಲಂಘಿಸಿದ ರಾಜಕಾರಣಿಗಳು ಮಾತ್ರ ರಾಜಾರೋಷವಾಗಿ ಓಡಾಡುತ್ತಾ ಇನ್ನಷ್ಟು ಉಲ್ಲಂಘನೆಗೆ ಅಣಿಯಾಗುತ್ತಿದ್ದಾರೆ. ಮಠಾಧೀಶರೂ ಕಡಿಮೆ ಏನಲ್ಲ. ಕೊರೊನಾ ಹೆಚ್ಚಾಗಲು ತಮ್ಮ ಕೈಲಾದ ಸಹಾಯವನ್ನು ಅವರೂ ಮಾಡಿದ್ದಾರೆ. ಅವರನ್ನು ಕೇಳುವವರೇ ಇಲ್ಲದಂತಾಗಿದೆ. ಇದು ಹೀಗೆಯೇ ಮುಂದುವರಿದರೆ ಈ ವ್ಯವಸ್ಥೆಯ ಬಗ್ಗೆಯೇ ನಂಬಿಕೆ ಹೊರಟು ಹೋಗುತ್ತದೆ.

ವಿಶ್ವಗುರುವಾಗಲು ಹೊರಟ ಭಾರತದ ಪಾಲಿಗೆ ಮತ್ತೊಂದು ವ್ಯಂಗ್ಯದ ಏಟಿದೆ. ಕೊರೊನಾ ವೈರಸ್ ತಡೆಯಲು ನಮ್ಮ ನಾಯಕರು ಹೆಣಗಾಡುತ್ತಿದ್ದರೆ ಪಕ್ಕದ ಪಾಕಿಸ್ತಾನ ‘ಭಾರತಕ್ಕೆ ನೆರವಾಗಲು ಸಿದ್ಧ’ ಎಂದು ಅಭಯ ಹಸ್ತ ಚಾಚುತ್ತಿದೆ. ರಾಮ ರಾಮ.

ಚುರುಮುರಿ

ಕೊರೊನಾ ಖಾತೆ

• ಮಣ್ಣೆರಾಜು

ಮಂತ್ರಿಗಳು ಮಾಸ್ಕ್ ಹಾಕ್ಕೊಂಡು ಮಂಕಾಗಿ ಕುಳಿತಿದ್ದರು. ‘ಏನು ನಿಮ್ಮ ಸಮಸ್ಯೆ?’ ಮುಖ್ಯಮಂತ್ರಿ ಕೇಳಿದರು.

‘ಕೊರೊನಾ ಶುರುವಾದಾಗಿನಿಂದ ಹೆಲ್ತು, ಪೊಲೀಸು ಮುಂತಾದ ಕೋವಿಡ್ ಸಂಬಂಧಿ ಇಲಾಖೆಗಳನ್ನು ಬಿಟ್ಟರೆ ಬೇರೆ ಇಲಾಖೆಗಳಲ್ಲಿ ಕೆಲಸ-ಕಾರ್ಯ ನಡೆಯುತ್ತಿಲ್ಲ’ ಮಂತ್ರಿಯೊಬ್ಬರು ಮಾಸ್ಕ್ ಬಿಚ್ಚಿದರು.

‘ಹೌದು. ದುಡ್ಡಿಲ್ಲ-ಕಾಸಿಲ್ಲ ಹೆಸರಿಗಷ್ಟೇ ಸರದಾರ ಅನ್ನುವಂತಾಗಿದೆ ನಮ್ಮ ಸ್ಥಿತಿ. ನಮ್ಮ ಖಾತೆಗಳಲ್ಲಿ ಅನುದಾನ, ಆದಾಯ, ಅಭಿವೃದ್ಧಿ ಯಾವುದೂ ಇಲ್ಲ...’ ಮತ್ತೊಬ್ಬ ಮಂತ್ರಿಯ ಸಂಕಟ.

‘ನಿಮ್ಮ ಖಾತೆಗಳ ಅನುದಾನವನ್ನು ಕೊರೊನಾ ನುಂಗುತ್ತಿದೆ...’ ಅಂದ್ರು ಸಿಎಂ.

‘ನಮ್ಮ ಖಾತೆಗಳನ್ನು ಕೊರೊನಾ ಸೋಂಕಿನಿಂದ ಮುಕ್ತಗೊಳಿಸಿ’ ಅಂದ್ರು ಇನ್ನೊಬ್ಬ ಮಂತ್ರಿ.

‘ಪ್ರತ್ಯೇಕ ಕೊರೊನಾ ಖಾತೆ ರಚನೆ ಮಾಡಿ, ಆರೋಗ್ಯವಂತ ಸಚಿವರನ್ನು ನೇಮಕ ಮಾಡಿ ಕೊರೊನಾ ನಿಭಾಯಿಸಲು ಜವಾಬ್ದಾರಿ ನೀಡಿ’ ಎಂದರು.

‘ನಮ್ಮ ಖಾತೆಗಳ ಸಂಪರ್ಕ, ಸಂಬಂಧಕ್ಕೆ ಬಾರದಂತೆ ಕೊರೊನಾ ಖಾತೆಯು ಅಂತರ ಕಾಪಾಡಿಕೊಳ್ಳಲಿ. ತನ್ನ ಹಣದಿಂದಲೇ ಕೊರೊನಾ ಖರ್ಚು-ವೆಚ್ಚ ನಿಭಾಯಿಸಲಿ’ ಅಂದ್ರು ಮತ್ತೊಬ್ಬ ಮಂತ್ರಿ.

‘ಕೊರೊನಾ ಖಾತೆಗೆ ಆದಾಯ ಮೂಲ ಇರೊಲ್ಲ, ಬರೀ ಖರ್ಚು...’ ಸಿಎಂ ಹೇಳಿದರು.

‘ಕೊರೊನಾ ಖಾತೆಯಡಿ ಯೋಜನೆಗಳನ್ನು ರೂಪಿಸಿ, ಮಾಸ್ಕ್, ಸ್ಯಾನಿಟೈಸರ್, ಪಿಪಿಇ ಕಿಟ್, ಹಾಸಿಗೆ, ಆಮ್ಲಜನಕ ಉತ್ಪಾದನಾ ಘಟಕಗಳನ್ನು ಸ್ಥಾಪಿಸಿದರೆ ನಿರುದ್ಯೋಗಿಗಳಿಗೆ ಉದ್ಯೋಗ ಕೊಡಬಹುದು, ಉತ್ಪನ್ನಗಳ ಮಾರಾಟದಿಂದ ಆದಾಯ ಬರುತ್ತದೆ. ಜೊತೆಗೆ, ಮಾಸ್ಕ್ ದಂಡ, ಹಾಸಿಗೆ ತೆರಿಗೆ, ಆಕ್ಸಿಜನ್ ವೆಚ್ಚ, ಆರೋಗ್ಯ ಸೇವಾ ಶುಲ್ಕ ಅಂತ ಹಣ ಸಂಗ್ರಹಿಸಿದರೆ ಕೊರೊನಾ ಖಾತೆ ಆರ್ಥಿಕ ಸ್ವಾವಲಂಬಿಯಾಗಿ ನಮ್ಮ ಖಾತೆ ಹಣಕ್ಕೆ ಕೈ ಹಾಕೋದು ತಪ್ಪುತ್ತದೆ’ ಎಂದರು ಮಂತ್ರಿಗಳು.

‘ಒಳ್ಳೆಯ ಐಡಿಯಾ, ಚರ್ಚೆ ಮಾಡೋಣ’ ಎಂದರು ಸಿಎಂ. ಮಂತ್ರಿಗಳು ಸಂತಸಗೊಂಡರು.

ದಿನದ ಟ್ವೀಟ್

ಅವರವರ ಇಷ್ಟಕ್ಕೆ ಬಿಡಿ

ಹೆಣ್ಣುಮಕ್ಕಳು ಮದ್ಯದಂಗಡಿಗೆ ಹೋಗುವುದು ಮತ್ತು ಮಾಂಸ ತಿನ್ನುವವರು ಮಾಂಸದಂಗಡಿಯ ಹೊರಗೆ ಸರದಿಯಲ್ಲಿ ನಿಲ್ಲುವುದನ್ನು ನಮ್ಮ ಬಹುತೇಕ ಮಾಧ್ಯಮಗಳಿಗೆ ತಡೆದುಕೊಳ್ಳಲು ಆಗುತ್ತಿಲ್ಲ. ಯಾಕ್ರಪ್ಪ, ನಿಮ್ಮ ಸರಿ-ತಪ್ಪುಗಳೇ ಎಲ್ಲರದ್ದೂ ಆಗಬೇಕು ಅನ್ನುವ ಹಟ ಯಾಕೆ?

ವಸಂತ್ ಶೆಟ್ಟಿ, ಬರಹಗಾರ

25 ವರ್ಷಗಳ ಹಿಂದೆ

ಭಾನುವಾರ, 28-4-1996

• **ದೇಶದಾದ್ಯಂತ ಶೇ 60 ಮತದಾನ: ಹಿಂಸೆಗೆ 8 ಬಲಿ**

ನವದೆಹಲಿ, ಏ. 27 (ಪಿಟಿಐ)– ಲೋಕಸಭೆಯ 150 ಸ್ಥಾನಗಳಿಗೆ ಹಾಗೂ ಐದು ವಿಧಾನಸಭೆಗಳ 532 ಕ್ಷೇತ್ರಗಳಿಗೆ ಇಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ ಶೇಕಡ 60ರಷ್ಟು ಮತದಾನವಾಗಿದೆ. ಆಂಧ್ರ, ಹರಿಯಾಣ, ತಮಿಳುನಾಡು, ಅಸ್ಸಾಂ, ಬಿಹಾರಗಳ ಹಲವೆಡೆ ಬಾಂಬ್ ಸ್ಫೋಟ, ಮತಪತ್ರ ಅಪಹರಣ, ಘರ್ಷಣೆಗಳಲ್ಲಿ 8 ಮಂದಿ ಸತ್ತಿದ್ದಾರೆ.

ಪ್ರಧಾನಿ ಪಿ.ವಿ.ನರಸಿಂಹ ರಾವ್ ಸ್ಪರ್ಧಿಸಿರುವ ಆಂಧ್ರದ ನಂದ್ಯಾಲ್‌ನಲ್ಲಿ ಬಾಂಬ್ ಸ್ಫೋಟ, ಮತಪತ್ರ ಅಪಹರಣ ಪ್ರಕರಣಗಳು ನಡೆದಿವೆ. ಆಂಧ್ರದ ಹಲವೆಡೆ ಘರ್ಷಣೆ, ಗಾಳಿಯಲ್ಲಿ ಗುಂಡು ಹಾರಾಟ ನಡೆದಿದೆ. ಚಿತ್ತೂರು ಮತ್ತು ತಿರುಪತಿ ಕ್ಷೇತ್ರಗಳಲ್ಲಿ ಹಿಂಸಾಚಾರಕ್ಕೆ ಇಬ್ಬರು ಬಲಿಯಾಗಿದ್ದಾರೆ. ಹರಿಯಾಣದ ಘರ್ಷಣೆಯಲ್ಲಿ ಒಬ್ಬ ಸತ್ತರೆ, ಬಿಹಾರದಲ್ಲಿ ಸ್ಫೋಟಕ್ಕೆ ಮೂರು ಜನ ಬಲಿಯಾಗಿದ್ದಾರೆ. ಅಸ್ಸಾಂನಲ್ಲಿ ಒಬ್ಬ ಚುನಾವಣಾ ಅಧಿಕಾರಿಯನ್ನು ಕೊಲ್ಲಲಾಗಿದೆ. ತಮಿಳುನಾಡಿನಲ್ಲಿ ಒಬ್ಬ ಎಂಡಿಎಂಕೆ ಕಾರ್ಯಕರ್ತ ಬಲಿಯಾಗಿದ್ದಾನೆ.

• **ರಾಜ್ಯದಲ್ಲಿ ಶೇ 56ರಷ್ಟು ಮತದಾನ, ಅಲ್ಲಲ್ಲಿ ಘರ್ಷಣೆ**

ಬೆಂಗಳೂರು, ಏ. 27– ರಾಜ್ಯದಲ್ಲಿ ಇಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ ಶೇಕಡ 55ರಿಂದ 56ರಷ್ಟು ಮತದಾನ ಆಗಿದೆ. ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ದಳ ಕಾರ್ಯಕರ್ತರ ನಡುವಿನ ಘರ್ಷಣೆಯಲ್ಲಿ ತಲೆಗೆ ಪೆಟ್ಟು ಬಿದ್ದಿರುವ ಒಬ್ಬಾತನ ಸ್ಥಿತಿ ಗಂಭೀರವಾಗಿದ್ದು, ಬೆಂಗಳೂರಿನ ನಿಮ್ಹಾನ್ಸ್‌ಗೆ ಸೇರಿಸಲಾಗಿದೆ.

50 ವರ್ಷಗಳ ಹಿಂದೆ

ಬುಧವಾರ, 28-4-1971

• **ಢಾಕಾದಲ್ಲಿ ಭಾರತದ ಡೆಪ್ಯುಟಿ ಹೈಕಮಿಷನರ್ ಸೇನ್ ಗುಪ್ತಾ ಗೃಹಬಂಧನ**

ನವದೆಹಲಿ, ಏ. 27– ಢಾಕಾದಲ್ಲಿ ಭಾರತದ ಡೆಪ್ಯುಟಿ ಹೈಕಮಿಷನರ್ ಕೆ.ಸಿ.ಸೇನ್ ಗುಪ್ತಾ ಸೇರಿ ಕಚೇರಿಯ ಅಧಿಕಾರಿಗಳು ಮತ್ತು ನೌಕರರನ್ನು ಪಾಕಿಸ್ತಾನಿ ಸರ್ಕಾರವು ಇಂದು ಗೃಹಬಂಧನಕ್ಕೊಳಪಡಿಸಿತೆಂದು ಅಧಿಕೃತವಾಗಿ ತಿಳಿದುಬಂದಿದೆ.

ಭಾರತದಲ್ಲಿರುವ ಪಾಕ್ ಅಧಿಕಾರಿಗಳಾರೂ ಸರ್ಕಾರದ ಅನುಮತಿ ಇಲ್ಲದೆ ಸ್ವದೇಶಕ್ಕೆ ತೆರಳುವುದನ್ನು ನಿಷೇಧಿಸಿರುವುದಕ್ಕೆ ಇದು ಪ್ರತೀಕಾರ ಕ್ರಮವಾಗಿರುವಂತೆ ಕಾಣಬರುತ್ತಿದೆ.

• **ಬೆನ್ನು ಬಿಡದ ಸಾವು**

ಬೆಂಗಳೂರು, ಏ. 27– ಮಳೆಯಿಂದ ತಪ್ಪಿಸಿಕೊಳ್ಳಲು ಷೆಡ್‌ವೊಂದರಲ್ಲಿ ಆಶ್ರಯ ಪಡೆದರು. ಆದರೆ ಅಲ್ಲಿ ಅವರಿಗಾಗಿ ಸಾವು ಕಾದಿತ್ತು.

ಇಂದು ಮಧ್ಯಾಹ್ನ ಗಾಳಿ ಸಮೇತದ ಮಳೆ ಬಿದ್ದಾಗ ಜಮೀನಿನಲ್ಲಿ ಕೆಲಸದಲ್ಲಿ ತೊಡಗಿದ್ದ 16 ಮಂದಿ ಓಡಿಬಂದು ಷೆಡ್‌ನಲ್ಲಿ ಆಶ್ರಯ ಪಡೆದರು. ಅವರೊಂದಿಗೆ ಎರಡು ಕುರಿ, ಒಂದು ಹಸು, ಒಂದು ನಾಯಿ ಸಹ ಓಡಿ ಬಂದವು. ಹದಿನೈದು ನಿಮಿಷದ ನಂತರ ಸಿಡಿಲು ಹೊಡೆದಾಗ, ಆಶ್ರಯ ಪಡೆದವರಲ್ಲಿ ನಾಲ್ಕು ಮಂದಿ, ಎರಡು ಕುರಿ ಸತ್ತಿದ್ದವು.

ಸಂಗತ

‘ತೇಲುವ ಚೆರ್ನೊಬಿಲ್’: ಪರಿಸರ ವಿರೋಧಿ?

ರಷ್ಯಾದ ತೇಲುವ ಪರಮಾಣು ರಿಯಾಕ್ಟರ್ ಬಗ್ಗೆ ಅನುಮಾನಗಳು ಮೂಡಿವೆ

• ಗುರುರಾಜ್ ಎಸ್. ದಾವಣಗೆರೆ

ಇಲ್ಲಿ ನಮ್ಮ ಕೈಗಾ ಅಣು ವಿದ್ಯುತ್ ಸ್ಥಾವರವು 941 ದಿನಗಳ ಕಾಲ ನಿರಂತರ ವಿದ್ಯುತ್ ಉತ್ಪಾದನೆ ಮಾಡಿ ವಿಶ್ವ ದಾಖಲೆ ಮಾಡಿದೆ. ಅತ್ತ ರಷ್ಯಾ ತಯಾರಿಸಿರುವ, ನೀರಿನ ಮೇಲೆ ತೇಲುವ ವಿಶ್ವದ ಮೊದಲ ಪರಮಾಣು ರಿಯಾಕ್ಟರ್ ‘ಅಕಡೆಮಿಕ್ ಲೊಮೊನೊಸೊವ್’ ಪರಿಸರವಾದಿಗಳ ಕೆಂಗಣ್ಣಿಗೆ ಗುರಿಯಾಗಿ ವಿವಾದಕ್ಕೀಡಾಗಿದೆ.

80 ಮೆಗಾವಾಟ್ ಶಕ್ತಿ ಉತ್ಪಾದನೆಯ ಸಾಮರ್ಥ್ಯದ ರಿಯಾಕ್ಟರ್, ನ್ಯೂಕ್ಲಿಯರ್ ಇಂಧನ ತುಂಬಿಕೊಂಡು ಈಗಾಗಲೇ ಆರ್ಕ್‌ಟಿಕ್ ಬಂದರು ಮುರಮಾನ್‌ಸ್ಕಿಯಿಂದ ಹೊರಟು ಐದು ಸಾವಿರ ಕಿ.ಮೀ ದೂರ ಕ್ರಮಿಸಿ ಈಶಾನ್ಯ ಸೈಬೀರಿಯ ತಲುಪಿದೆ. 472 ಅಡಿ ಉದ್ದ ಮತ್ತು 30 ಅಡಿ ಅಗಲದ ಹಡಗಿನ ರೂಪದ ರಿಯಾಕ್ಟರ್ (ಬಾರ್ಜ್) ತಾನು ಉತ್ಪಾದಿಸುವ ವಿದ್ಯುತ್ತಿನಿಂದ ಒಂದು ಲಕ್ಷ ಮನೆಗಳಿಗೆ ವರ್ಷಪೂರ್ತಿ ಬೆಳಕು ನೀಡುವ ಉದ್ದೇಶ ಹೊಂದಿದೆ. ಇದರ ಜೊತೆಗೆ ಚಿನ್ನದ ನಿಕ್ಷೇಪವಿರುವ ಚುಕ್ಕೋಟದಲ್ಲಿ ನಡೆಯುವ ಗಣಿಗಾರಿಕೆಗೆ ಶಕ್ತಿ ನೀಡುವ ಕೆಲಸಕ್ಕೆ ತಯಾರಿ ಮಾಡಿಕೊಂಡಿರುವ ತೇಲುವ ರಿಯಾಕ್ಟರ್, ಸಮುದ್ರದ ಉಪ್ಪು ನೀರನ್ನು ಸಿಹಿ ನೀರನ್ನಾಗಿ ಪರಿವರ್ತಿಸುವ ಘಟಕವನ್ನೂ ಹೊಂದಿದೆ.

ಗಂಟೆಗೆ 7ರಿಂದ 10 ಕಿ.ಮೀ ದೂರ ಚಲಿಸುವ ರಿಯಾಕ್ಟರ್ ಅನ್ನು ನಿರ್ಮಿಸಲು ಬರೋಬ್ಬರಿ ಹತ್ತು ವರ್ಷ ಕೆಲಸ ಮಾಡಿರುವ ರಷ್ಯಾದ ನ್ಯೂಕ್ಲಿಯರ್ ನಿಗಮ ರೊಸಟಮ್, ‘ನಮ್ಮ ಈ ರಿಯಾಕ್ಟರ್ ಈಗ ಅಸ್ತಿತ್ವದಲ್ಲಿರುವ ಕಲ್ಲಿದ್ದಲು ವಿದ್ಯುತ್ ಘಟಕ ಮತ್ತು ಮುದಿಯಾದ ಪರಮಾಣು ರಿಯಾಕ್ಟರ್‌ನ ಜಾಗ ತುಂಬಲಿದೆ’ ಎಂದಿದೆ. ತಂತ್ರಜ್ಞಾನದ ಹೆಮ್ಮೆ ಎಂದು ಬಿಂಬಿಸಿಕೊಂಡಿರುವ ಅಕಡೆಮಿಕ್ ರಿಯಾಕ್ಟರ್ ಅನ್ನು ‘ತೇಲುವ ಚೆರ್ನೊಬಿಲ್’ ಎಂದು ಕರೆದಿರುವ ಪರಿಸರ ಕಾರ್ಯಕರ್ತರು, ಈ ರಿಯಾಕ್ಟರ್‌ನಿಂದ ಆರ್ಕ್‌ಟಿಕ್ ಭಾಗದ ಜೀವಿ ವೈವಿಧ್ಯಕ್ಕೆ ಭಾರಿ ಅಪಾಯವಿದೆ ಮತ್ತು ಭೂಮಿಯ ಬಿಸಿ ಏರುತ್ತದೆ ಎಂದು ಹೇಳಿದ್ದಾರೆ.

ಬ್ರಿಟಿಷ್ ಕೊಲಂಬಿಯ ವಿಶ್ವವಿದ್ಯಾಲಯದ ಪ್ರೊಫೆಸರ್ ಮತ್ತು ಅಂತರರಾಷ್ಟ್ರೀಯ ನಿಶ್ಶಸ್ತ್ರೀಕರಣ ತಜ್ಞ ಎಂ.ವಿ.ರಮಣ, ಅಕಡೆಮಿಕ್ ಲೊಮೊನೊಸೊವ್‌ನಲ್ಲಿ ಬಳಕೆಯಾಗಿರುವ KLT- 40S ರಿಯಾಕ್ಟರ್‌ಗಳು ಯಾವಾಗ ಬೇಕಾದರೂ ಅಪಘಾತಕ್ಕೊಳಗಾಗುವ ಸಾಧ್ಯತೆ ಜಾಸ್ತಿ ಇರುವುದರಿಂದ ತೇಲುವ ರಿಯಾಕ್ಟರ್‌ನಿಂದ ಅನುಕೂಲಕ್ಕಿಂತ ಅಪಾಯವೇ ಹೆಚ್ಚು ಎಂದಿದ್ದಾರೆ. ಅಲ್ಲದೆ ಈ ರಿಯಾಕ್ಟರ್‌ಗಳನ್ನು ಅತ್ಯಂತ ನಿರ್ಜನ ಮತ್ತು ಅತಿಯಾದ ಶೀತದ ಪ್ರದೇಶಗಳಲ್ಲಿ ಸ್ಥಾಪಿಸಿರುವುದರಿಂದ, ಅಪಘಾತವಾದಾಗ ಸ್ಥಳೀಯರನ್ನು ಸುರಕ್ಷಿತ ಜಾಗಗಳಿಗೆ ಕಳುಹಿಸುವ ಮತ್ತು ಸೋರುವ ಪರಮಾಣು ವಿಕಿರಣವನ್ನು ತಡೆಯುವಷ್ಟರಲ್ಲಿ ಭಾರಿ ಪ್ರಮಾಣದ ಅನಾಹುತ ಸಂಭವಿಸಿರುತ್ತದೆ ಎನ್ನುತ್ತಾರೆ.

‘ತನ್ನ ಚಿನ್ನದ ಗಣಿಗೆ ವಿದ್ಯುತ್ ನೀಡಲು ಇದನ್ನು ಸ್ಥಾಪಿಸುತ್ತೇವೆ ಎಂದು ಹೇಳಿದ್ದರೂ, ಆರ್ಕ್‌ಟಿಕ್ ಭಾಗದ ತೈಲ ಮತ್ತು ನೈಸರ್ಗಿಕ ಅನಿಲದ ಮೇಲೆ ಕಣ್ಣಿಟ್ಟಿರುವ ರಷ್ಯಾ ಅದನ್ನು ತನ್ನದಾಗಿಸಿಕೊಳ್ಳುವ ಎಲ್ಲ ಕೆಲಸ ಮಾಡುತ್ತದೆ ಎಂಬ ಅನುಮಾನ ನಮ್ಮದು. ಆದ್ದರಿಂದ ಅದಕ್ಕೆ ಅವಕಾಶ ನೀಡಕೂಡದು’ ಎಂದು ವಿಶ್ವಸಂಸ್ಥೆಯನ್ನು ಒತ್ತಾಯಿಸಿದ್ದಾರೆ. ತೈಲ ಮತ್ತು ಅನಿಲ ಉತ್ಪಾದನೆಗೆ ಕೈ ಹಾಕಿದರೆ ಹೆಚ್ಚಿನ ಪ್ರಮಾಣದಲ್ಲಿ ಇಂಗಾಲದ ಡೈ ಆಕ್ಸೈಡ್ ಹೊಮ್ಮುತ್ತದೆ ಮತ್ತು ಆರ್ಕ್‌ಟಿಕ್ ಭಾಗ ಅನಿವಾರ್ಯ ಒತ್ತಡಕ್ಕೊಳಗಾಗುತ್ತದೆ ಎಂಬ ಅಭಿಪ್ರಾಯ ಸಾರ್ವತ್ರಿಕವಾಗಿದೆ.

ಈಗಾಗಲೇ ಬಳಕೆಯಲ್ಲಿರುವ ನ್ಯೂಕ್ಲಿಯರ್ ಸಬ್‌ಮರೀನ್‌ಗಳು ಹಲವು ಬಗೆಯ ಅಪಘಾತಗಳಿಗೆ ಸಿಲುಕಿ 670 ಜನರನ್ನು ಬಲಿ ತೆಗೆದುಕೊಂಡಿವೆ. ಸಂಭವಿಸಿರುವ 45 ಅಪಘಾತಗಳ ಪೈಕಿ 26 ರಷ್ಯಾಕ್ಕೆ ಸಂಬಂಧಿಸಿದ್ದು, 429 ಜನರ ಪ್ರಾಣಹರಣವಾಗಿದೆ. ಅಮೆರಿಕದ 12 ಪರಮಾಣು ಸಬ್‌ಮರೀನ್ ಅಪಘಾತಗಳಲ್ಲಿ 238 ಜನ ಅಸುನೀಗಿದ್ದು, ಈಗ ತೇಲುವ ಬೃಹತ್ ರಿಯಾಕ್ಟರ್‌ನಿಂದ ಹೆಚ್ಚಿನ ಪ್ರಾಣಹಾನಿ ಆಗಬಹುದೆಂಬ ಆತಂಕ ತಜ್ಞರಲ್ಲಿ ಮನೆ ಮಾಡಿದೆ.

ಆರ್ಕ್‌ಟಿಕ್‌ನ ಹಿಮ ಹಾಸುಗಳು ತ್ವರಿತವಾಗಿ ಕರಗಿ ಉತ್ತರ ಧ್ರುವದ ಬಳಿ ಸಾಗರ ಮಾರ್ಗ ಸೃಷ್ಟಿಯಾಗಿರುವುದರಿಂದ ಅದನ್ನು ಬಳಸಿಕೊಂಡು ವ್ಯಾಪಾರ ವೃದ್ಧಿಸಿಕೊಂಡು ಚೀನಾ, ಯುರೋಪ್ ತಲುಪುವ ಉದ್ದೇಶ ಅದರಲ್ಲಿದೆ ಎಂದು ಗ್ರೀನ್ ಪೀಸ್ ಸಂಸ್ಥೆ ಹೇಳಿದೆ.

ನೀರ್ಗಲ್ಲುಗಳು ಎದುರಾದಾಗ ಸಬ್‌ಮರೀನ್‌ಗಳು ಸಾಗರದ ತಳಕ್ಕಿಳಿದು ಡಿಕ್ಕಿ ಹೊಡೆಯುವುದನ್ನು ತಪ್ಪಿಸಿಕೊಳ್ಳುತ್ತವೆ ಮತ್ತು ತೇಲುವ ಹಿಮಗಡ್ಡೆಗಳಿಂದ ದೂರವಿರುತ್ತವೆ. ಆದರೆ ಇದು ತೇಲು ತೆಪ್ಪದಂತೆ ಇರುವುದರಿಂದ ಅದು ಸಾಧ್ಯವಾಗುವುದಿಲ್ಲ ಎಂದು ಆತಂಕ ವ್ಯಕ್ತಪಡಿಸಿರುವ ಗ್ರೀನ್ ಪೀಸ್‌ನ ಪರಮಾಣು ತಜ್ಞ ಜಾನ್ ಹಾವರ್‌ಕ್ಯಾಂಪ್, ರಷ್ಯಾ ಇಂಥ ರಿಯಾಕ್ಟರ್‌ಗಳನ್ನು ಬೇರೆ ದೇಶಗಳಿಗೆ ಮಾರುವ ಯೋಜನೆ ಹಾಕಿಕೊಂಡಿರುವುದು ದುರದೃಷ್ಟಕರ ಎಂದಿದ್ದಾರೆ.

ಇಂಡೊನೇಷ್ಯಾ ತನಗೂ ಒಂದು ರಿಯಾಕ್ಟರ್ ಬೇಕು ಎಂದು ರಷ್ಯಾದೊಂದಿಗೆ ಮೊದಲ ಹಂತದ ಮಾತುಕತೆ ಮುಗಿಸಿತ್ತು. ಆದರೆ ಕೊಳ್ಳುವ ಹಂತ ತಲುಪಿಲ್ಲ ಎನ್ನುವುದು ಸಮಾಧಾನದ ವಿಷಯ. ಈ ಮಧ್ಯೆ ಚೀನಾ ಕೂಡ ಇಂಥ ರಿಯಾಕ್ಟರ್‌ಗಳ ನಿರ್ಮಾಣಕ್ಕೆ ಮನಸ್ಸು ಮಾಡಿರುವುದು ಪರಿಸರ ತಜ್ಞರಲ್ಲಿ ಆತಂಕ ಹುಟ್ಟಿಸಿದೆ.

ವಾಚಕರ ವಾಣಿ

ಅಧಿಕಾರ ಕೊಟ್ಟವರ ಸಂಕಷ್ಟಕ್ಕೆ ಮಿಡಿಯಲಿ

‘ದೇಶದಲ್ಲಿ ಕೋವಿಡ್– 19 ಎರಡನೇ ಅಲೆ ಇಷ್ಟೊಂದು ವೇಗವಾಗಿ ಹಬ್ಬಲು ಚುನಾವಣಾ ಆಯೋಗವೇ ಕಾರಣ, ರ‍್ಯಾಲಿ ಮತ್ತು ಸಭೆಗಳನ್ನು ನಡೆಸಲು ರಾಜಕೀಯ ಪಕ್ಷಗಳಿಗೆ ಅನುಮತಿ ನೀಡುವ ಮೂಲಕ ಸೋಂಕು ಹರಡಲು ಆಯೋಗ ಕಾರಣವಾಯಿತು’ ಎಂದು ಮದ್ರಾಸ್ ಹೈಕೋರ್ಟ್ ಛೀಮಾರಿ ಹಾಕಿರುವುದು (ಪ್ರ.ವಾ., ಏ. 27) ಒಂದು ರೀತಿಯ ಸಮಾಧಾನ ತಂದಿದೆ. ಚುನಾವಣಾ ಪ್ರಚಾರಕ್ಕೆ ಯಾವ ಅಳುಕಿಲ್ಲದೆ ಅವಕಾಶ ಮಾಡಿಕೊಟ್ಟಿರುವ ಆಯೋಗವು ಆಳುವ ಪಕ್ಷಗಳ ಕೈಗೊಂಬೆಯಂತೆ ವರ್ತಿಸುತ್ತಿದೆ.

ಕರ್ನಾಟಕದಲ್ಲಿ ನಡೆದ ಉಪಚುನಾವಣೆಗಳಲ್ಲಿ ಕೋವಿಡ್ ತಡೆಗೆ ಸಂಬಂಧಿಸಿದ ಯಾವ ಮಾರ್ಗಸೂಚಿಯನ್ನೂ ಪಾಲಿಸದೆ ಎಲ್ಲ ಪಕ್ಷಗಳು ಪ್ರಚಾರ ನಡೆಸಿದವು. ಅತ್ಯಂತ ನಿರ್ಲಕ್ಷ್ಯದಿಂದ ನಡೆದುಕೊಂಡವು. ರಾಜಕಾರಣಿಗಳು ಮಾರ್ಗಸೂಚಿಯನ್ನು ಸರಿಯಾಗಿ ಪಾಲಿಸಿದ್ದಿದ್ದರೆ ಇಷ್ಟೊಂದು ಸಾವುಗಳು ಸಂಭವಿಸುತ್ತಿರಲಿಲ್ಲ. ನೊಂದವರ ನೋವು ಅನುಭವಿಸಿದವರಿಗೇ ಗೊತ್ತು. ಜನರ ಸಂಕಷ್ಟಕ್ಕೆ ಮಿಡಿಯದ ಜನಪ್ರತಿನಿಧಿಗಳು ಇದ್ದರೂ ಇಲ್ಲದಂತೆ. ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಹೋದ ಜೀವ ಮತ್ತೆ ಬರುವುದಿಲ್ಲ. ಜನರು ಕೊಟ್ಟ ಅಧಿಕಾರದ ಋಣಕ್ಕಾದರೂ ಅಧಿಕಾರಸ್ಥರು ಜನರಿಗಾಗಿ ಮಿಡಿಯಬೇಕಾಗಿದೆ.

ಡಾ. ಶಿವರಾಜ್ ಬ್ಯಾಡರಹಳ್ಳಿ, ಬೆಂಗಳೂರು

ಕರ್ತವ್ಯನಿಷ್ಠೆ ಜೊತೆಗೆ ಬೇಕು ಮಾನವೀಯತೆ

ರಾಜ್ಯದಾದ್ಯಂತ 14 ದಿನಗಳ ಅವಧಿಗೆ ಕರ್ಫ್ಯೂ ಜಾರಿ ಮಾಡಿರುವುದು ಸ್ವಾಗತಾರ್ಹ ಕ್ರಮ. ಆದರೆ ಕರ್ಫ್ಯೂ ಪರಿಪಾಲನೆಗೆ ಸಂಬಂಧಿಸಿದಂತೆ ನಿಗಾ ವಹಿಸುವ ಸಂದರ್ಭದಲ್ಲಿ ಪೊಲೀಸರು ಅಧಿಕಾರದ ದರ್ಪ ತೋರಿಸಬಾರದು. ಜನಸಾಮಾನ್ಯರನ್ನು ಸರಿಯಾಗಿ ವಿಚಾರಿಸುವ ಮೊದಲೇ ಅವರ ಮೇಲೆ ಬಲ ಪ್ರಯೋಗ ಮಾಡಲು ಮುಂದಾಗಬಾರದು. ಯಾವುದೇ ವ್ಯಕ್ತಿಯಾಗಲಿ ಪ್ರಾಣ ಭಯವನ್ನು ಬಿಟ್ಟು, ಕಾರಣವಿಲ್ಲದೆ ಹೊರ ಬರಲು ಬಯಸುವುದಿಲ್ಲ.

ಕಳೆದ ವರ್ಷ ಲಾಕ್‌ಡೌನ್ ಸಮಯದಲ್ಲಿ, ತಪ್ಪು ಮಾಡದ ವ್ಯಕ್ತಿಗಳು ಸಹ ಪೊಲೀಸರ ಲಾಠಿ ಏಟಿನ ರುಚಿ ನೋಡಿದ ಉದಾಹರಣೆಗಳು ಬಹಳಷ್ಟಿವೆ. ಪತ್ನಿಯ ಹೆರಿಗೆಯಾಗುತ್ತಿದೆ, ಆಸ್ಪತ್ರೆಗೆ ಹೋಗಲು ಅವಕಾಶ ಕೊಡಿ ಎಂದು ವ್ಯಕ್ತಿಯೊಬ್ಬರು ಅಂಗಲಾಚಿದರೂ ಅವಕಾಶ ನೀಡದ ಪ್ರಸಂಗವೊಂದು ವರದಿಯಾಗಿತ್ತು. ಅದನ್ನು ಓದಿ ಬಹಳ ಬೇಸರವಾಯಿತು. ಪೊಲೀಸರು ತಮ್ಮ ಕರ್ತವ್ಯ ನಿರ್ವಹಿಸಲಿ. ಆದರೆ, ಜನಸಾಮಾನ್ಯರ ಸ್ಥಾನದಲ್ಲಿ ನಿಂತು ಯೋಚಿಸುವುದು ಕೂಡ ಅಗತ್ಯ. ಕರ್ತವ್ಯನಿಷ್ಠೆಯ ಜೊತೆಗೆ ಮಾನವೀಯತೆಯನ್ನೂ ತೋರಬೇಕಾಗುತ್ತದೆ.

ಶ್ರೀಧರ ಎಸ್. ವಾಣಿ, ಕಲ್ಲತಾವರಗೇರಿ, ಕೊಪ್ಪಳ

ದಿನ

ವಿಶ್ವ ಭೂದಿನ, ವಿಶ್ವ ಪುಸ್ತಕ ದಿನ
ಇತ್ಯಾದಿ ಹಾಗಿರಲಿ;
ಸದ್ಯ ಪ್ರತಿದಿನವೂ
ಅಯತ್ನಪೂರ್ವಕ ಕೋವಿಡ್
ದಿನ!
ವಾಸ್ತವವಾಗಿ ಬೇಕಾದದ್ದು
ವಿಶ್ವ ‘ಮಂಗಳ’ ದಿನದ
ಆಚರಣೆ!
(ದೇವರಾಣೆ).

ಸಿ.ಪಿ.ಕೆ., ಮೈಸೂರು

ದುಡಿದು ತಿನ್ನುವವರ ಬದುಕಿನ ಮೇಲೆ ಬರೆ

ಕೊರೊನಾ ಸೋಂಕಿನ ತೀವ್ರತೆಯ ಇಂದಿನ ಸಂಕಷ್ಟದ ಪರಿಸ್ಥಿತಿಯಲ್ಲಿ, ಕರ್ಫ್ಯೂ ಹೊರತಾಗಿ ರಾಜ್ಯ ಸರ್ಕಾರಕ್ಕೆ ಬೇರೆ ಆಯ್ಕೆ ಇರಲಿಲ್ಲ ಎಂಬುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯವೇ. ಆದರೆ ಇಂತಹ ಪರಿಸ್ಥಿತಿ ನಿರ್ಮಾಣಕ್ಕೆ ಆಳುವವರ ನಿರ್ಲಕ್ಷ್ಯದ ನಡೆಗಳು ಪ್ರಧಾನ ಕಾರಣ ಎಂಬುದನ್ನು ಮರೆಮಾಚಲು ಸಾಧ್ಯವಿಲ್ಲ. ಜನರು ಕೂಡ ಮೈಮರೆತಿದ್ದರು. ಪರಿಣಾಮವಾಗಿ ಬದುಕಿಗಾಗಿ ಹೋರಾಡುವ ಸನ್ನಿವೇಶವನ್ನು ಮೈಮೇಲೆ ಎಳೆದುಕೊಂಡಿದ್ದೇವೆ.

ಬೀದಿ ಬದಿಯ ವ್ಯಾಪಾರಿಗಳು, ದಿನಗೂಲಿ ಮಾಡುವವರು, ಊರೂರು ತಿರುಗಿ ವಸ್ತುಗಳನ್ನು ಮಾರಾಟ ಮಾಡುವವರ ಬದುಕಿನ ಮೇಲೆ ಈ ಕಠಿಣ ನಿರ್ಬಂಧಗಳು ಬರೆ ಎಳೆಯುತ್ತವೆ. ಈ ಅವಧಿಗೆ ಪರಿಹಾರವಾಗಿ ₹400 ಕೋಟಿ ಮೀಸಲಿಟ್ಟಿರುವುದಾಗಿ ಸರ್ಕಾರ ಹೇಳಿಕೊಂಡಿದೆ. ಆದರೆ ಈ ಹಿಂದೆ ಹೇರಿದ್ದ ಲಾಕ್‌ಡೌನ್ ಸಮಯದಲ್ಲಿ ಪರಿಹಾರವಾಗಿ ಸೇರಿದ ಕಾಸು ಹತ್ತು ದಿನದ ತುತ್ತಿಗೂ ಸಾಲದಾಗಿತ್ತು. ಅಂಗಡಿ ಸಾಲದ ಕಂತು, ವಿದ್ಯುತ್ ಬಿಲ್, ಮನೆ ಬಾಡಿಗೆ ಪಾವತಿಯಂತಹವುಗಳಿಗೆ ಹಣ ಹೊಂದಿಸಲು ಜನ ಪರದಾಡಿದರು.

ಈ ಸಲ ಹಾಗಾಗದಂತೆ ಸರ್ಕಾರ ನೋಡಿಕೊಳ್ಳಬೇಕು. ಅರ್ಹ ಕುಟುಂಬಗಳಿಗೆ ಸೂಕ್ತ ಪರಿಹಾರ ನೀಡಬೇಕು. ಇಲ್ಲವಾದರೆ, ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ರೈತರ ಬದುಕು ಮೂರಾಬಟ್ಟೆಯಾಗುತ್ತದೆ.

ಕೆ.ಜೆ.ಕೊಟ್ರಗೌಡ, ತೂಲಹಳ್ಳಿ

ಸದ್ಬಳಕೆಯಾಗದ ಹಣಕ್ಕೆ ಅರ್ಥವಿಲ್ಲ

ಮಠ, ಮಸೀದಿ, ಚರ್ಚ್, ಮಂದಿರಗಳಲ್ಲಿ ಇರುವ ಹಣ ಕೋವಿಡ್ ನಿಯಂತ್ರಣ ಉಪಕ್ರಮಗಳಿಗೆ ಬಳಕೆಯಾಗಬೇಕು. ದಾನ, ಧರ್ಮದ ಪರಿಕಲ್ಪನೆಯ ಮೇಲೆ ಸಂಗ್ರಹವಾದ ಹಣ ಅರ್ಥಪೂರ್ಣವಾಗಿ ಸದ್ಬಳಕೆಯಾಗಲು ಇದು ಸುಸಂದರ್ಭ. ಮನುಕುಲದ ಉಳಿವಿಗಾಗಿ ಬಳಕೆಯಾಗದ ಹಣಕ್ಕೆ ಅರ್ಥ ಇರುವುದಿಲ್ಲ. ಈ ದಿಸೆಯಲ್ಲಿ ಎಲ್ಲ ಧಾರ್ಮಿಕ ಸಂಸ್ಥೆಗಳು ಮುಂದೆ ಬಂದು ಕೋವಿಡ್‌ನಿಂದ ಮತ್ತು ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಈಡಾಗುವವರಿಗೆ ಉದಾತ್ತವಾಗಿ ಕೊಡುಗೆ ನೀಡಬೇಕು.

ಸೋಮಲಿಂಗಪ್ಪ ಬೆಣ್ಣಿ ಗುಳದಳ್ಳಿ, ಕೊಪ್ಪಳ

ಶೋಷಣೆ ತಪ್ಪಿಸಲು ತುರ್ತಾಗಿ ಗಮನಹರಿಸಿ

ಕೊರೊನಾದಿಂದ ಸಾವಿಗೀಡಾದವರ ಮೃತದೇಹಗಳನ್ನು ಆಂಬುಲೆನ್ಸ್‌ನಲ್ಲಿ ಸಾಗಿಸಲು ಕೆಲವು ಆಸ್ಪತ್ರೆಗಳು ಐದು ಸಾವಿರದಿಂದ ಇಪ್ಪತ್ತು ಸಾವಿರ ರೂಪಾಯಿವರೆಗೆ ಜನರಿಂದ ಮನಸೋಇಚ್ಛೆ ವಸೂಲಿ ಮಾಡುತ್ತಿವೆ. ಆರ್ಥಿಕ ಸಂಕಷ್ಟದಿಂದ ನಲುಗಿರುವ ಜನಸಾಮಾನ್ಯರು ಇದರಿಂದ ಮತ್ತಷ್ಟು ಶೋಷಣೆಗೆ ಒಳಗಾಗುತ್ತಿದ್ದಾರೆ. ಈ ಶೋಷಣೆ ತಪ್ಪಿಸಲು ರಾಜ್ಯ ಸರ್ಕಾರ ತುರ್ತಾಗಿ ಗಮನಹರಿಸಬೇಕು. ಖಾಸಗಿ ವಾಹನಗಳನ್ನು ಬಾಡಿಗೆಗೆ ಪಡೆದು, ಮೃತದೇಹಗಳನ್ನು ಉಚಿತವಾಗಿ ಸಾಗಿಸಲು ವ್ಯವಸ್ಥೆ ಮಾಡಬೇಕು.

ಮುರುಗೇಶ ಡಿ., ದಾವಣಗೆರೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಎರಡನೇ ಅಲೆ ಎಡವಿದ ಹಲವು ನಡೆ

ಹರಿದ್ವಾರದಲ್ಲಿ ಏಪ್ರಿಲ್ 14ರಂದು ಕುಂಭಮೇಳದ ಅಂಗವಾಗಿ ನಡೆದ ಪವಿತ್ರ ಸ್ನಾನದಲ್ಲಿ ಸಾವಿರಾರು ಮಂದಿ ಭಾಗಿಯಾಗಿದ್ದರು – ಪಿಟಿಐ ಚಿತ್ರ

ಭಾರತದಲ್ಲಿ ಕೋವಿಡ್ ಮೊದಲನೇ ಅಲೆಯು ಜನವರಿ ಹೊತ್ತಿಗೆ ಬಹುತೇಕ ನಿಯಂತ್ರಣಕ್ಕೆ ಬಂದಿತ್ತು. ಆದರೆ, ಪ್ರಕರಣಗಳ ಸಂಖ್ಯೆಯು ಏಪ್ರಿಲ್‌ನಿಂದ ಮತ್ತೆ ಏರುಗತಿಯಲ್ಲಿದೆ. ಕೊರೊನಾ ವೈರಾಣು ಹರಡುವಿಕೆಯ ವೇಗ ಹೆಚ್ಚಲು ಸಿಯಾಸಿ ನಾಯಕರು, ಜನರ ನಿರ್ಲಕ್ಷ್ಯವೇ ಪ್ರಮುಖ ಕಾರಣ ಎಂದು ಪರಿಣತರು ಹೇಳುತ್ತಿದ್ದಾರೆ. ವಿವಿಧ ರಾಜ್ಯಗಳಲ್ಲಿ ವಿಧಾನಸಭೆಗೆ ನಡೆದ ಚುನಾವಣೆಯ ಪ್ರಚಾರ, ವಿವಿಧ ಹಬ್ಬಗಳ ಆಚರಣೆಯನ್ನು ಗಮನಿಸಿದರೆ, ಕೋವಿಡ್‌ನಂತಹ ಜಗತ್ತನ್ನೇ ತಲ್ಲಣಗೊಳಿಸಿದ ಪಿಡುಗು ಇಲ್ಲಿ ಇದೆ ಎಂದೇ ಅನಿಸದು. ಮಾಸ್ಕ್ ಕೂಡ ಧರಿಸದೆ ಜನರು ಒತ್ತೊತ್ತಾಗಿ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ನಾಯಕರು ಜನರಿಗೆ ತಿಳಿ ಹೇಳಬೇಕಿತ್ತು. ಆದರೆ, ಪ್ರಧಾನಿಯಿಂದ ಹಿಡಿದು ಅಧಿಕಾರ ಸ್ಥಾನದಲ್ಲಿದ್ದ ಹಲವರು ಚುನಾವಣಾ ಪ್ರಚಾರದ ಮುಂಚೂಣಿಯಲ್ಲಿದ್ದರು. ಚುನಾವಣಾ ಪ್ರಚಾರವೇ ಕೋವಿಡ್ ಎರಡನೇ ಅಲೆಯ ತೀವ್ರತೆಗೆ ಕಾರಣ ಎಂದು ಚುನಾವಣಾ ಆಯೋಗವನ್ನು ಮದ್ರಾಸ್ ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿದೆ. ಚುನಾವಣೆ ಮತ್ತು ಹೆಚ್ಚು ಜನರು ಜಮಾವಣೆಯಾದ ಕಾರ್ಯಕ್ರಮಗಳ ಬಳಿಕ ಕೋವಿಡ್‌ನ ಸ್ಥಿತಿಯ ವಿವರ ಇಲ್ಲಿದೆ:



ಪಂಜಾಬ್ ಮತ್ತು ಹರಿಯಾಣ

ಪಂಜಾಬ್ ಮತ್ತು ಹರಿಯಾಣದ ಹೆಚ್ಚಿನ ರೈತರು ದೆಹಲಿಯಲ್ಲಿ ನಡೆದ ಬೃಹತ್ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು. ಈ ರೈತರು ತಂಡ ತಂಡವಾಗಿ ಹಿಂದಿರುಗುತ್ತಿದ್ದರು ಮತ್ತು ಬೇರೆ ತಂಡಗಳು ಪ್ರತಿಭಟನೆ ಸ್ಥಳಕ್ಕೆ ಬಂದಿವೆ. ಇದರಿಂದಾಗಿ ಪಂಜಾಬ್, ಹರಿಯಾಣಗಳಲ್ಲಿ ಕೋವಿಡ್ ವ್ಯಾಪಿಸಿ ಆತಂಕ ಸೃಷ್ಟಿಸುತ್ತಿದೆ ಎಂಬ ಆರೋಪವಿದೆ. ಪಂಜಾಬ್‌ನಲ್ಲಿ ಇದೇ ಮಾರ್ಚ್ 1ರಂದು 1.80 ಲಕ್ಷ ಇದ್ದ ಪ್ರಕರಣಗಳು ಏಪ್ರಿಲ್ 26ರಂದು 3.45 ಲಕ್ಷಕ್ಕೆ ತಲುಪಿದೆ. ಆದರೆ ಪಂಜಾಬ್‌ನ ಕೋವಿಡ್-19 ನೋಡಲ್ ಅಧಿಕಾರಿ ಡಾ.ರಾಜೇಶ್ ಭಾಸ್ಕರ್ ಅವರು ಹೇಳುವುದು ಬೇರೆ. 'ಈ ವರ್ಷ ಇಲ್ಲಿಯವರೆಗೆ ವರದಿಯಾಗಿರುವ ಒಟ್ಟು ಪ್ರಕರಣಗಳಲ್ಲಿ ಶೇ 70ರಷ್ಟು ಪ್ರಕರಣಗಳು ನಗರ ಪ್ರದೇಶಗಳಿಂದ ವರದಿಯಾಗಿವೆ. ವ್ಯಾಪಾರ, ಉದ್ಯೋಗ ಸ್ಥಳ ಮತ್ತು ಸಮಾರಂಭಗಳಲ್ಲಿ ಕೋವಿಡ್ ನಿಯಮಾವಳಿಗಳನ್ನು ಅನುಸರಿಸದಿರುವುದು ಪ್ರಕರಣ ಹೆಚ್ಚಲು ಕಾರಣ. ಕೇವಲ ಶೇ 30ರಷ್ಟು ಪ್ರಕರಣಗಳು ಪ್ರತಿಭಟನೆನಿರತ ರೈತರು ನೆಲೆಸಿರುವ ಗ್ರಾಮೀಣ ಪ್ರದೇಶಗಳಿಂದ ವರದಿಯಾಗಿವೆ' ಎಂದಿದ್ದಾರೆ.

- ಪಂಜಾಬ್‌ನಲ್ಲಿ ಫೆಬ್ರುವರಿ ಆರಂಭದಲ್ಲಿ ಕೇವಲ 2 ಸಾವಿರ ಸಕ್ರಿಯ ಪ್ರಕರಣ ಇದ್ದವು. ಆದರೆ ಏಪ್ರಿಲ್ 26ರ ವೇಳೆಗೆ ಇವುಗಳ ಸಂಖ್ಯೆ 49 ಸಾವಿರಕ್ಕೆ ಏರಿಕೆ ಕಂಡಿದೆ
- ಹರಿಯಾಣದಲ್ಲಿ ಫೆಬ್ರುವರಿ 12ರಂದು ಕೇವಲ 887 ಸಕ್ರಿಯ ಪ್ರಕರಣ ಇದ್ದವು. ಅವುಗಳ ಸಂಖ್ಯೆ ಈಗ 79 ಸಾವಿರಕ್ಕೆ ಹೆಚ್ಚಳವಾಗಿದೆ

ದೆಹಲಿಗೆ ಹೋಳಿಯ ಕಂಟಕ

2021ರ ಮಾರ್ಚ್ ವೇಳೆಗೆ ದೆಹಲಿಯಲ್ಲಿ ಕೋವಿಡ್ ಸಂಪೂರ್ಣ ನಿಯಂತ್ರಣಕ್ಕೆ ಬಂದಿತ್ತು ಎಂದೇ ಹೇಳಬಹುದು. ಆಗ ದೆಹಲಿಯಲ್ಲಿ ಪ್ರತಿದಿನ ಪತ್ತೆಯಾಗುತ್ತಿದ್ದ ಹೊಸ ಪ್ರಕರಣಗಳ ಸಂಖ್ಯೆ 300ರ ಆಸುಪಾಸಿನಲ್ಲಿ ಇತ್ತು. ಫೆಬ್ರುವರಿಯಲ್ಲೂ ಈ ಸಂಖ್ಯೆ 200ರ ಆಸುಪಾಸಿನಲ್ಲಿ ಇತ್ತು. ಅಲ್ಲದೆ ಮಾರ್ಚ್ 1ರಂದು ರಾಜ್ಯದಲ್ಲಿ 1,404 ಸಕ್ರಿಯ ಪ್ರಕರಣಗಳಷ್ಟೇ ಇದ್ದವು. ಆದರೆ ಮಾರ್ಚ್ 18ರ ನಂತರ ದೆಹಲಿಯ ಬೀದಿಗಳಲ್ಲಿ ಜನರು ಸಾಮೂಹಿಕವಾಗಿ ಹೋಳಿ ಆಚರಿಸಿದರು. ವಿವಿಧ ಸಮುದಾಯಗಳು ತಿಂಗಳ ಅಂತ್ಯದವರೆಗೂ ಹೋಳಿ ಆಚರಿಸಿದವು. ಆದರೆ ಹೋಳಿ ಆಚರಣೆಯ ಕಾರಣ ಮಾರ್ಚ್ 23ರಂದು ಒಂದೇ ದಿನ 1,100 ಹೊಸ ಪ್ರಕರಣಗಳು ದೃಢಪಟ್ಟವು. ಆಗ ಸಾರ್ವಜನಿಕ ಸ್ಥಳಗಳಲ್ಲಿ ಹೋಳಿ ಆಚರಿಸುವುದನ್ನು ದೆಹಲಿ ಸರ್ಕಾರ ನಿಷೇಧಿಸಿತು. ಆದರೂ ಸಣ್ಣ-ಸಣ್ಣ ಗುಂಪುಗಳು ಹೋಳಿ ಆಚರಿಸಿದವು. ಇದರ ಪರಿಣಾಮವಾಗಿ ಕೋವಿಡ್ ಮತ್ತೆ ವ್ಯಾಪಕವಾಗಿ ಹರಡಿತು. ಈಗ ಪ್ರತಿದಿನ 20 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಪತ್ತೆಯಾಗುತ್ತಿವೆ.

ಮಾರ್ಚ್ 29ರಂದು ದೆಹಲಿಯಲ್ಲಿ ಹೋಳಿ ಆಚರಣೆ ಪಿಟಿಐ ಚಿತ್ರ

ಗುಜರಾತ್‌ಗೆ ಮಾರಕವಾದ ಕ್ರಿಕೆಟ್ ಪಂದ್ಯ

ಗುಜರಾತಿನ ಅಹಮದಾಬಾದ್‌ನಲ್ಲಿ ಮಾರ್ಚ್ ತಿಂಗಳಿನಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಿದವು. ಆಗ ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾರತ-ಇಂಗ್ಲೆಂಡ್ ನಡುವೆ ಟಿ-20 ಪಂದ್ಯಗಳು ನಡೆಯುತ್ತಿದ್ದವು. ಕ್ರೀಡಾಂಗಣದಲ್ಲೇ 66,000 ಜನರು ವೀಕ್ಷಿಸಿದ್ದರು. ಕೋವಿಡ್ ಪ್ರಕರಣಗಳ ಸಂಖ್ಯೆ ಏರಿಕೆಯಾದ ಕಾರಣ, ಉಳಿದ ಪಂದ್ಯಗಳನ್ನು ಪ್ರೇಕ್ಷಕರು ಇಲ್ಲದೇ ನಡೆಸಲು ನಿರ್ಧರಿಸಲಾಯಿತು. ಪಂದ್ಯಗಳು ನಡೆದ ಮಾರ್ಚ್‌ನಲ್ಲಿ ರಾಜ್ಯದ ಕೋವಿಡ್ ಪೀಡಿತರ ಸಂಖ್ಯೆ 3 ಲಕ್ಷದ ಆಸುಪಾಸಿನಲ್ಲಿತ್ತು. ಈಗ ಅದು ಐದು ಲಕ್ಷದ ಗಡಿ ದಾಟಿದೆ. ಪ್ರೇಕ್ಷಕರು ಇರುವ ಪಂದ್ಯಗಳನ್ನು ಮುಂದುವರಿಸಿದ್ದರೆ, ಈ ಸಂಖ್ಯೆ ಇನ್ನಷ್ಟು ಹೆಚ್ಚುತ್ತಿತ್ತು ಎನ್ನುತ್ತಾರೆ ತಜ್ಞರು.

2,429
ಮಾರ್ಚ್ 1ರಂದು ಗುಜರಾತಿನಲ್ಲಿ ಸಕ್ರಿಯ ಸೋಂಕಿತರು ಇದ್ದರು. ಇವರ ಸಂಖ್ಯೆ ಮಾರ್ಚ್ ಕೊನೆ ಹೊತ್ತಿಗೆ 12,610ಕ್ಕೆ ಏರಿದ

1.26 ಲಕ್ಷ
ಗುಜರಾತಿನಲ್ಲಿ ಏಪ್ರಿಲ್ 26ರಂದು ಸಕ್ರಿಯ ಸೋಂಕಿತರು ಚಿಕಿತ್ಸೆ ಪಡೆಯುತ್ತಿದ್ದಾರೆ

ಸಂಕಷ್ಟಕ್ಕೆ ಸಿಲುಕಿದ ಮಹಾರಾಷ್ಟ್ರ

ಮಹಾರಾಷ್ಟ್ರದಲ್ಲಿ 2021ರ ಫೆಬ್ರುವರಿ ಮಧ್ಯಂತರದ ವೇಳೆಗೆ ಕೋವಿಡ್ ಬಹುತೇಕ ನಿಯಂತ್ರಣಕ್ಕೆ ಬಂದಿತ್ತು. ಫೆಬ್ರುವರಿ ಮೊದಲ ಮೂರು ವಾರಗಳಲ್ಲಿ ಪ್ರತಿದಿನ ಪತ್ತೆಯಾಗುತ್ತಿದ್ದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ 5,500ರ ಆಸುಪಾಸಿನಲ್ಲಿ ಇತ್ತು. ಮಾರ್ಚ್‌ನಲ್ಲಿ ಈ ಸಂಖ್ಯೆ ಸ್ವಲ್ಪ ಏರಿಕೆಯಾಯಿತು. ಹೀಗಿದ್ದೂ ರಾಜ್ಯದಲ್ಲಿ, ಮಾರ್ಚ್ ಕೊನೆಯ ವಾರದಲ್ಲಿ ಮಹಾರಾಷ್ಟ್ರದಲ್ಲಿ ಹೋಳಿ ಆಚರಿಸಲಾಗಿತ್ತು. ಹೋಳಿ ಆಚರಣೆಗೆ ನಿರ್ಬಂಧಗಳು ಇದ್ದವಾದರೂ, ಸಾರ್ವಜನಿಕವಾಗಿ ಹೋಳಿ ಆಚರಿಸುವುದನ್ನು ನಿಷೇಧಿಸಿರಲಿಲ್ಲ. ಮಾರ್ಚ್ 27ರಿಂದ ಮಾರ್ಚ್ 29ರವರೆಗೆ ಹೋಳಿ ಆಚರಿಸಲಾಗಿತ್ತು. ಆನಂತರವೇ ರಾಜ್ಯದಲ್ಲಿ ಕೋವಿಡ್‌ನ ಎರಡನೇ ಅಲೆ ತೀವ್ರತೆ ಪಡೆಯಿತು. ಏಪ್ರಿಲ್ ಮೊದಲ ವಾರದಲ್ಲಿ ಪ್ರತಿದಿನ ಸರಾಸರಿ 43,000 ಹೊಸ ಪ್ರಕರಣಗಳು ಪತ್ತೆಯಾದವು. ಈಗ ರಾಜ್ಯದಲ್ಲಿ ಪ್ರತಿದಿನ 55,000 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ.

21.61 ಲಕ್ಷ
2020ರ ಫೆಬ್ರುವರಿಯಿಂದ 2021ರ ಮಾರ್ಚ್ 10ರವರೆಗೆ ರಾಜ್ಯದಲ್ಲಿ ಪತ್ತೆಯಾಗಿದ್ದ ಕೋವಿಡ್ ಪ್ರಕರಣಗಳ ಸಂಖ್ಯೆ (13 ತಿಂಗಳು)

22.24 ಲಕ್ಷ
2021ರ ಮಾರ್ಚ್ 2ರಿಂದ ಏಪ್ರಿಲ್ 26ರವರೆಗೆ ಪತ್ತೆಯಾದ ಕೋವಿಡ್‌ನ ಹೊಸ ಪ್ರಕರಣಗಳು

ಆಧಾರ: ಪಿಟಿಐ, ರಾಯಿಟರ್ಸ್, ಬಿಬಿಸಿ, ಕೋವಿಡ್19ಇಂಡಿಯಾ.ಒಆರ್‌ಜಿ

ಉತ್ತರಾಖಂಡ

ಉತ್ತರಾಖಂಡದಲ್ಲಿ 2020ರ ಮಾರ್ಚ್‌ನಿಂದ 2021ರ ಜನವರಿ 15ರವರೆಗೆ 94 ಸಾವಿರ ಕೋವಿಡ್ ಪ್ರಕರಣಗಳಷ್ಟೇ ಪತ್ತೆಯಾಗಿದ್ದವು. ಮೊದಲ ಅಲೆಯು ರಾಜ್ಯದಲ್ಲಿ ತೀವ್ರತೆ ಪಡೆದುಕೊಂಡಿರಲಿಲ್ಲ. ಆದರೆ ಹರಿದ್ವಾರದಲ್ಲಿ ಜನವರಿ 14ರಂದು ಕುಂಭ ಮೇಳ ಆರಂಭವಾದ ನಂತರ ಪ್ರಕರಣಗಳ ಸಂಖ್ಯೆ ಏರಿಕೆಯಾಗತೊಡಗಿತು. ಜನವರಿಯಿಂದ ಮಾರ್ಚ್ 15ರವರೆಗೆ ಕಡಿಮೆ ಸಂಖ್ಯೆಯಲ್ಲಷ್ಟೇ ಜನರು ಕುಂಭ ಮೇಳದಲ್ಲಿ ಭಾಗಿಯಾಗಿದ್ದರು. ಆದರೆ ಶಿವರಾತ್ರಿಯ ನಂತರ ಹೆಚ್ಚು ಜನರು ಪವಿತ್ರ ಸ್ನಾನಕ್ಕೆ ಭಾಗಿಯಾಗಲು ಆರಂಭಿಸಿದರು. ಆನಂತರ ಇಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ತೀವ್ರವಾಗಿ ಏರಿಕೆಯಾಗತೊಡಗಿತು. ಏಪ್ರಿಲ್ ಮೊದಲ ಎರಡು ವಾರಗಳಲ್ಲಿ ಪ್ರತಿದಿನ 25 ಲಕ್ಷಕ್ಕೂ ಹೆಚ್ಚು ಜನರು ಪವಿತ್ರ ಸ್ನಾನ ಮಾಡಿದ್ದಾರೆ. ರಾಜ್ಯದ ಮುಖ್ಯಮಂತ್ರಿ ತೀರತ್ ಸಿಂಗ್ ರಾವತ್ ಸಹ ಕುಂಭ ಮೇಳದಲ್ಲಿ ಜನರು ಭಾಗವಹಿಸುವುದರ ಪರವಾಗಿ ಮಾತನಾಡಿದರು. ತೀವ್ರ ವಿರೋಧ ವ್ಯಕ್ತವಾದ ಕಾರಣ ಏಪ್ರಿಲ್ 17ರಂದು ಕುಂಭ ಮೇಳ ನಿಲ್ಲಿಸಲು ಪ್ರಧಾನಿ ನರೇಂದ್ರ ಮೋದಿ ಮನವಿ ಮಾಡಿದರು. ಆದರೆ ಆ ವೇಳೆಗೆ 2,000ಕ್ಕೂ ಹೆಚ್ಚು ಸಂತರಿಗೆ ಕುಂಭಮೇಳದಲ್ಲಿಯೇ ಕೋವಿಡ್ ದೃಢಪಟ್ಟಿತ್ತು.

581
ಮಾರ್ಚ್ 11ರಂದು ಮಹಾಶಿವರಾತ್ರಿಯ ಅಂಗವಾಗಿ ಮಹಾಸ್ನಾನ ನಡೆದಾಗ ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳು

7,846
ಏಪ್ರಿಲ್ 12ರಂದು ನಡೆದ ಶಹಿಸ್ನಾನದ ದಿನ ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳ ಸಂಖ್ಯೆ

39,031
ಏಪ್ರಿಲ್ 26ರಂದು ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳು

ಉತ್ತರ ಪ್ರದೇಶ

ಉತ್ತರ ಪ್ರದೇಶವು ಬಹುಬೇಗನೇ ಕೋವಿಡ್ ಪಟ್ಟಿಯಲ್ಲಿ ಮೇಲೆ ಏರಲು ಅಲ್ಲಿ ನಡೆದ ಗ್ರಾಮ ಪಂಚಾಯಿತಿ ಚುನಾವಣೆ ಕಾರಣ ಎನ್ನುವ ಅಭಿಪ್ರಾಯವಿದೆ. ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದ ಶಿಕ್ಷಕ ಸಮುದಾಯದಲ್ಲಿ ಹಲವರಿಗೆ ಕೊರೊನಾ ದೃಢಪಟ್ಟಿತ್ತು. ಹೀಗಾಗಿ ಚುನಾವಣೆ ಮುಂದೂಡುವಂತೆ ಶಿಕ್ಷಕರ ಸಂಘವು ಚುನಾವಣಾ ಆಯೋಗಕ್ಕೆ ಮನವಿ ಮಾಡಿತ್ತು. ಚುನಾವಣೆಯು ವೈರಸ್ ಅನ್ನು ವೇಗವಾಗಿ ಹರಡುತ್ತದೆ ಎಂದು ಎಚ್ಚರಿಸಿತ್ತು. ಮಾರ್ಚ್‌ನಲ್ಲಿ 6 ಲಕ್ಷ ಇದ್ದ ರಾಜ್ಯದ ಕೋವಿಡ್ ಪ್ರಕರಣಗಳು ಏಪ್ರಿಲ್ ಕೊನೆ ಹೊತ್ತಿಗೆ 11 ಲಕ್ಷದ ಗಡಿ ದಾಟಿದೆ.

6,615
ಮಾರ್ಚ್ 27ರಂದು ಪಂಚಾಯಿತಿ ಚುನಾವಣೆ ಘೋಷಣೆಯಾದಾಗ ರಾಜ್ಯದಲ್ಲಿ ಇದ್ದಸಕ್ರಿಯ ಪ್ರಕರಣಗಳು

- ಈಗ ಮೂರು ಹಂತಗಳ ಮತದಾನ ಮುಗಿದಿದ್ದು, ಏಪ್ರಿಲ್ 26ರ ಹೊತ್ತಿಗೆ ಸಕ್ರಿಯ ಪ್ರಕರಣಗಳ ಸಂಖ್ಯೆ **3** ಲಕ್ಷ ದಾಟಿದೆ

ಪುದುಚೇರಿ

ಕೋವಿಡ್‌ನ 1ನೇ ಅಲೆ ತೀವ್ರತೆ ಕಳೆದುಕೊಂಡ ನಂತರ ಪುದುಚೇರಿಯಲ್ಲಿ ಹೆಚ್ಚು ಜನರು ಸೇರಿದ್ದು ಚುನಾವಣಾ ಪ್ರಚಾರ ಸಭೆಗಳಲ್ಲಿ ಮತ್ತು ಮತಗಟ್ಟೆಗಳಲ್ಲಿ. ಇಲ್ಲಿ ಬಿಜೆಪಿ ಹೆಚ್ಚು ಪ್ರಚಾರ ಸಭೆಗಳನ್ನು ನಡೆಸಿತ್ತು. ನಂತರದ ಸ್ಥಾನದಲ್ಲಿ ಕಾಂಗ್ರೆಸ್ ಇದೆ. ಚುನಾವಣಾ ಪ್ರಚಾರ ಆರಂಭವಾದ ನಂತರವೇ ಇಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಯಿತು.

194
ಫೆಬ್ರುವರಿ 26ರಂದು ಚುನಾವಣೆ ಘೋಷಣೆಯಾದಾಗ ಇದ್ದ ಸಕ್ರಿಯ ಪ್ರಕರಣಗಳು

1,773
ಏಪ್ರಿಲ್ 6ರಂದು ಮತದಾನ ನಡೆದಾಗ ಇದ್ದ ಸಕ್ರಿಯ ಪ್ರಕರಣಗಳು

7,750
ಏಪ್ರಿಲ್ 26ರಂದು ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳು

ಪಶ್ಚಿಮ ಬಂಗಾಳ: ರ್‍ಯಾಲಿಗಳಿಂದ ಆಪತ್ತು

ಫೆಬ್ರುವರಿ ಅಂತ್ಯದ ವೇಳೆಗೆ ಪಶ್ಚಿಮ ಬಂಗಾಳದಲ್ಲಿ ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ ಇಳಿಕೆಯಾಗಿತ್ತು. ಆಗ ಪ್ರತಿದಿನ ಪತ್ತೆಯಾಗುತ್ತಿದ್ದ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ ಸಹ 180ರಷ್ಟಿತ್ತು. ಚುನಾವಣಾ ಪ್ರಚಾರ ಸಭೆಗಳು ಆರಂಭವಾದ ನಂತರ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಯಿತು. ಬಿಜೆಪಿಯ ಪರವಾಗಿ ಪ್ರಧಾನಿ ನರೇಂದ್ರ ಮೋದಿ, ಅಮಿತ್ ಶಾ, ಯೋಗಿ ಆದಿತ್ಯನಾಥ, ಜೆ.ಪಿ. ನಡ್ಡಾ, ರಾಜನಾಥ್ ಸಿಂಗ್ ಮತ್ತು ಪಕ್ಷದ ಸ್ಥಳೀಯ ನಾಯಕರು 300ಕ್ಕೂ ಹೆಚ್ಚು ಸಭೆಗಳನ್ನು ನಡೆಸಿದ್ದಾರೆ. ಟಿಎಂಸಿ ಸಹ 180ಕ್ಕೂ ಹೆಚ್ಚು ಪ್ರಚಾರ ಸಭೆಗಳನ್ನು ನಡೆಸಿದೆ. ನಂತರವೇ ರಾಜ್ಯದಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಏರಿಕೆಯಾಯಿತು. ಮಾರ್ಚ್ ಮೊದಲ ವಾರದಲ್ಲಿ ಹೊಸ ಪ್ರಕರಣಗಳ ಸರಾಸರಿ ಸಂಖ್ಯೆ 220, ಎರಡನೇ ವಾರದಲ್ಲಿ 260, ಮೂರನೇ ವಾರದಲ್ಲಿ 320ಕ್ಕೆ ಏರಿಕೆಯಾಯಿತು. ನಾಲ್ಕನೇ ವಾರದ ವೇಳೆಗೆ ಈ ಸರಾಸರಿ ಸಂಖ್ಯೆ 940 ಮುಟ್ಟಿತ್ತು. ಈಗ ರಾಜ್ಯದಲ್ಲಿ ಪ್ರತಿದಿನ ಪತ್ತೆಯಾಗುತ್ತಿರುವ ಹೊಸ ಪ್ರಕರಣಗಳ ಸಂಖ್ಯೆ 15,000ಕ್ಕೂ ಹೆಚ್ಚು.

3,343
ಫೆಬ್ರುವರಿ 26ರಂದು ಚುನಾವಣೆ ಘೋಷಣೆಯಾದಾಗ ಇದ್ದ ಸಕ್ರಿಯ ಪ್ರಕರಣಗಳು

3,310
ಮಾರ್ಚ್ 11ರಂದು ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳು

17,775
ಏಪ್ರಿಲ್ 6ರಂದು ಮತದಾನ ನಡೆದಾಗ ಇದ್ದ ಸಕ್ರಿಯ ಪ್ರಕರಣಗಳು

94,949
ಏಪ್ರಿಲ್ 26ರಂದು ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳು

ಕೇರಳ: ಮುಳುವಾದ ಪ್ರಚಾರ

ಕೇರಳ ವಿಧಾನಸಭೆಗೆ ಫೆಬ್ರುವರಿಯಲ್ಲಿ ಚುನಾವಣೆ ಘೋಷಣೆಯಾದಾಗ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆಯಾಗುತ್ತಿತ್ತು. ಮಾರ್ಚ್ ತಿಂಗಳಲ್ಲಿ ಹೊಸ ಪ್ರಕಣಗಳ ಸಂಖ್ಯೆ ಮತ್ತಷ್ಟು ಇಳಿಯಿತು. ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆಯೂ ಇಳಿಕೆಯಾಗಿತ್ತು. ಮಾರ್ಚ್‌ನಲ್ಲಿ ಎಲ್ಲಾ ರಾಜಕೀಯ ಪಕ್ಷಗಳೂ ದೊಡ್ಡ ದೊಡ್ಡ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸಿದವು. ಮಾರ್ಚ್ 23ರಂದು ರಾಜ್ಯದಲ್ಲಿ ಕೇವಲ 23,600 ಸಕ್ರಿಯ ಪ್ರಕರಣಗಳು ಇದ್ದವು. ಆದರೆ ಚುನಾವಣೆ ಪ್ರಚಾರ ಬಿರುಸು ಪಡೆದ ನಂತರ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಏರಿಕೆಯಾಯಿತು. ಮಾರ್ಚ್‌ನಲ್ಲಿ ಪ್ರತಿದಿನ ಸರಾಸರಿ 1,600 ಹೊಸ ಪ್ರಕರಣಗಳು ಪತ್ತೆಯಾಗುತ್ತಿದ್ದವು. ಏಪ್ರಿಲ್ 6ರ ಮತದಾನದ ನಂತರ ಪ್ರತಿದಿನ ಪತ್ತೆಯಾಗುವ ಹೊಸ ಪ್ರಕರಣಗಳ ಸಂಖ್ಯೆ 5,000 ದಾಟಿದೆ. ಈಗ ಪ್ರತಿದಿನ ಸರಾಸರಿ 22,000 ಹೊಸ ಪ್ರಕರಣಗಳು ಪತ್ತೆಯಾಗುತ್ತಿವೆ.

51,368
ಫೆಬ್ರುವರಿ 26ರಂದು ಚುನಾವಣೆ ಘೋಷಣೆಯಾದಾಗ ಇದ್ದ ಸಕ್ರಿಯ ಪ್ರಕರಣಗಳು

29,948
ಏಪ್ರಿಲ್ 6ರಂದು ಮತದಾನ ನಡೆದಾಗ ಇದ್ದ ಸಕ್ರಿಯ ಪ್ರಕರಣಗಳು

2.32 ಲಕ್ಷ
ಏಪ್ರಿಲ್ 26ರಂದು ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳು

ತಮಿಳುನಾಡು

ತಮಿಳುನಾಡಿನಲ್ಲಿ ಚುನಾವಣಾ ಪ್ರಚಾರ ಸಭೆಗಳು ನಡೆದ ನಂತರವೇ ಕೋವಿಡ್‌ನ ಹೊಸ ಪ್ರಕರಣಗಳ ಸಂಖ್ಯೆಯಲ್ಲಿ ಭಾರಿ ಏರಿಕೆ ಆಯಿತು. ಇಲ್ಲಿ ಎಐಎಡಿಎಂಕೆ, ಡಿಎಂಕೆ, ಕಾಂಗ್ರೆಸ್, ಕಮಲ್ ಹಾಸನ್ ಅವರ ಪಕ್ಷಗಳು ಭಾರಿ ಚುನಾವಣಾ ಪ್ರಚಾರ ಸಭೆಗಳನ್ನು ನಡೆಸಿದವು. ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಕಾಂಗ್ರೆಸ್‌ನ ರಾಹುಲ್ ಗಾಂಧಿ ಅವರು ಸಾವಿರಾರು ಜನರು ಸೇರಿರುವ ಬೃಹತ್ ಪ್ರಚಾರ ಸಭೆಗಳನ್ನು ನಡೆಸಿದರು. ಮತದಾನದ ದಿನದ ನಂತರ ರಾಜ್ಯದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ.

4,046
ಫೆಬ್ರುವರಿ 26ರಂದು ಚುನಾವಣೆ ಘೋಷಣೆಯಾದಾಗ ಇದ್ದ ಸಕ್ರಿಯ ಪ್ರಕರಣಗಳು

25,598
ಏಪ್ರಿಲ್ 6ರಂದು ಮತದಾನ ನಡೆದಾಗ ಇದ್ದ ಸಕ್ರಿಯ ಪ್ರಕರಣಗಳು

1.07 ಲಕ್ಷ
ಏಪ್ರಿಲ್ 26ರಂದು ರಾಜ್ಯದಲ್ಲಿ ಇದ್ದ ಸಕ್ರಿಯ ಪ್ರಕರಣಗಳು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'18 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಕೋವಿಡ್-19 ಲಸಿಕೆ ನೀಡುವ ಕಾರ್ಯಕ್ರಮ ಮೇ 1ರಿಂದ ಆರಂಭವಾಗಲಿದೆ. ಆದರೆ ಯುವತಿಯರು ಕೋವಿಡ್ ಲಸಿಕೆ ಪಡೆದುಕೊಳ್ಳುವ ಮೊದಲು ಎಚ್ಚರ ವಹಿಸಬೇಕು. ಋತುಸ್ರಾವಕ್ಕೆ ಐದು ದಿನ ಮೊದಲು ಮತ್ತು ನಂತರದ ಐದು ದಿನದವರೆಗೂ ಲಸಿಕೆ ಹಾಕಿಸಿಕೊಳ್ಳಬಾರದು. ಈ ಅವಧಿಯಲ್ಲಿ ಲಸಿಕೆ ಪಡೆದುಕೊಂಡರೆ, ರಕ್ತಸ್ರಾವವಾಗುವ ಕಾರಣ ಲಸಿಕೆಯಿಂದ ಕೋವಿಡ್ ಪ್ರತಿರೋಧಕ ಶಕ್ತಿ ಅಭಿವೃದ್ಧಿಯಾಗುವುದಿಲ್ಲ' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿವೆ. ಕನ್ನಡ ಭಾಷೆಯಲ್ಲಿಯೂ ಇಂತಹ ಪೋಸ್ಟರ್‌ಗಳು ಇವೆ.

ಇದು ಸುಳ್ಳು ಮಾಹಿತಿ ಎಂದು ಹಲವು ಫ್ಯಾಕ್ಟ್‌ಚೆಕ್ ವೇದಿಕೆಗಳು ಹೇಳಿವೆ. ಲಸಿಕೆ ಪಡೆದುಕೊಳ್ಳುವುದರ ಬಗ್ಗೆ ಆರೋಗ್ಯ ಸಚಿವಾಲಯವು ಹೊರಡಿಸಿರುವ ಮಾರ್ಗಸೂಚಿಗಳಲ್ಲಿ ಈ ಬಗ್ಗೆ ಯಾವುದೇ ಮಾಹಿತಿ ಇಲ್ಲ. 'ವದಂತಿಗಳಿಗೆ ಕಿವಿಕೊಡಬೇಡಿ. ಋತುಸ್ರಾವದ ಅವಧಿಯಲ್ಲಿ, ಆ ಅವಧಿಯ ಹಿಂದೆ ಅಥವಾ ಮುಂದೆ ಲಸಿಕೆ ಹಾಕಿಸಿಕೊಳ್ಳಬಾರದು ಎಂದು ಎಲ್ಲಿಯೂ ಹೇಳಿಲ್ಲ. 18 ವರ್ಷ ಮೇಲ್ಪಟ್ಟ ಎಲ್ಲರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳಬಹುದು. ಹೀಗಾಗಿ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಿ' ಎಂದು ಪಿಐಬಿ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ದಿನ ಭವಿಷ್ಯ

ಬುಧವಾರ 28 ಏಪ್ರಿಲ್ 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಭರಣಿ ಪ್ರತಿಪದೆ ಗಂ. 2-52 (ಬೆ. 7-16) ಉಪರಿ ದ್ವಿತೀಯ ಗಂ. 53-52 (ರಾ. 4-49) ಬುಧವಾರ ನಿತ್ಯ ನಕ್ಷತ್ರ ವಿಶಾಖ ಗಂ. 34-34 (ರಾ. 7-56) ವ್ಯತಿಪಾತ ನಾಮ ಯೋಗ ಗಂ 30-53 ಕೌಲವ ಕರಣ ಗಂ. 2-52 ಉಪರಿ ತೈತಲ ಕರಣ ಗಂ. 26-56 ವಿಷ ಗಂ. 43-52 ಅಮೃತ ಗಂ. 14-2: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 6-04 ಸೂರ್ಯಾಸ್ತ: 6-30 ಅದೃಷ್ಟ ಸಂಖ್ಯೆ 1,4

ಮೇಷ: ಆದಾಯ ಮತ್ತು ಖರ್ಚು ಹೆಚ್ಚಾಗುವ ಸಾಧ್ಯತೆ. ನ್ಯಾಯಾಲಯದ ಕೆಲಸ–ಕಾರ್ಯಗಳಲ್ಲಿ ಪ್ರಗತಿ. ಹೊಸ ಆದಾಯದ ಮೂಲಗಳು ಗೋಚರವಾಗಲಿವೆ. ಸರಿ, ತಪ್ಪುಗಳನ್ನು ಅರಿತು ಮುಂದುವರೆಯುವುದು ಉತ್ತಮ.

ವೃಷಭ: ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸಿ. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಶ್ರಮ ವಹಿಸಿ. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ. ಅವಕಾಶ ಸದುಪಯೋಗ ಪಡಿಸಿಕೊಳ್ಳಿ.

ಮಿಥುನ: ಪ್ರಯಾಣ ಕಾಲದಲ್ಲಿ ಎಚ್ಚರಿಕೆ ಅಗತ್ಯ. ಧೈರ್ಯದಿಂದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬಹುದು. ಕೆಲಸ–ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಉತ್ತಮ. ಸಾಂಸಾರಿಕವಾಗಿ ತೃಪ್ತಿಕರ ಜೀವನ.

ಕರ್ಕಾಟಕ: ನಿಮ್ಮ ಅನಿರೀಕ್ಷಿತ ನಡವಳಿಕೆಯಿಂದಾಗಿ ಕುಟುಂಬದ ಸದಸ್ಯರಲ್ಲಿ ಅಸಹನೆ. ನಿರ್ಧಾರಗಳನ್ನು ಪದೇ ಪದೇ ಬದಲಿಸದಿರಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಬಿಡುವಿಲ್ಲದ ಶ್ರಮ. ಸ್ನೇಹಿತರಿಂದ ಸಹಾಯ ದೊರೆಯಲಿದೆ.

ಸಿಂಹ: ಯಾವುದೇ ವಿಚಾರದಲ್ಲಿ ಆತುರದ ತೀರ್ಮಾನ ಬೇಡ. ಬಿಡುವಿಲ್ಲದ ಕೆಲಸ–ಕಾರ್ಯಗಳಿಂದಾಗಿ ಒತ್ತಡ ಹೆಚ್ಚಾಗಿ ಮಾನಸಿಕ ಚಂಚಲತೆ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯದಿಂದಾಗಿ ಪ್ರತಿಕೂಲ ಪರಿಣಾಮ ಉಂಟಾಗಬಹುದು.

ಕನ್ಯಾ: ವಿವಿಧ ಮೂಲಗಳಿಂದ ಧನಾಗಮನದಿಂದಾಗಿ ಕಾರ್ಯಾನುಕೂಲವಾಗಲಿದೆ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ದೊರಕುವ ಸಾಧ್ಯತೆ. ಅಸಹನೆಯ ಮನೋವೃತ್ತಿ ಅನಾವಶ್ಯಕ ತಪ್ಪು ಅಭಿಪ್ರಾಯಕ್ಕೆ ಹೇತುವಾದೀತು.

ತುಲಾ: ಕೆಲಸ–ಕಾರ್ಯಗಳಿಗೆ ವಿಘ್ನಗಳುಂಟಾದರೂ ಎದೆಗುಂದದೇ ಮುಂದುವರಿದು ಯಶಸ್ಸನ್ನು ಸಾಧಿಸಲಿದ್ದೀರಿ. ಸಹೋದ್ಯೋಗಿಗಳ ಸಹಕಾರದಿಂದಾಗಿ ನೆಮ್ಮದಿ ದೊರಕಲಿದೆ. ಹಿರಿಯರ ಸಲಹೆಗಳನ್ನು ಗೌರವಿಸಿ.

ವೃಶ್ಚಿಕ: ಕುಟುಂಬ ಸದಸ್ಯರಲ್ಲಿ ಅಸಹನೆ ಕಂಡುಬರಬಹುದು. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆ ಕಡಿಮೆಯಾದರೂ ಗುರಿ ಸಾಧನೆಗೆ ತೊಡಕಾಗದು. ಸಣ್ಣಪುಟ್ಟ ವ್ಯಾಪಾರಿ ವರ್ಗದವರಲ್ಲಿ ನಿರೀಕ್ಷಿತ ಲಾಭ ಸಂಪಾದನೆ.

ಧನು: ನಿಮ್ಮ ಇಚ್ಛೆಗಳು ಸುಗಮವಾಗಿ ಈಡೇರುವವು. ಯೋಗ್ಯ ವಯಸ್ಕರಿಗೆ ಉತ್ತಮ ಅವಕಾಶಗಳಿಂದಾಗಿ ವೈವಾಹಿಕ ಭಾಗ್ಯ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ ಕಂಡುಬರಲಿದೆ. ಇತರರೊಂದಿಗೆ ಉತ್ತಮ ಸಂಬಂಧ.

ಮಕರ: ನೌಕರ ವರ್ಗದವರಿಗೆ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಉದ್ಯೋಗದಲ್ಲಿ ಬದಲಾವಣೆಯನ್ನು ಕಾಣುವ ಸಾಧ್ಯತೆ. ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆ ಇದ್ದು ಸಮಾಧಾನ ಚಿತ್ತರಾಗಿ ವ್ಯವಹರಿಸಿ.

ಕುಂಭ: ಆರೋಗ್ಯದಲ್ಲಿ ಕೊಂಚ ಏರುಪೇರಾಗುವ ಸಾಧ್ಯತೆ. ಆರ್ಥಿಕ ಸಬಲತೆ. ಪ್ರಮುಖ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದು ದಿನದ ಮಟ್ಟಿಗೆ ಬೇಡ. ಉತ್ತಮ ಸಂಗಾತಿ ದೊರಕುವ ಸಾಧ್ಯತೆ ಇದ್ದು ನೆಮ್ಮದಿ ಉಂಟಾಗಲಿದೆ.

ಮೀನ: ಉತ್ತಮ ಫಲ ನೀಡುವ ದಿನವಾಗಿದ್ದು, ಸಣ್ಣಪುಟ್ಟ ಪ್ರಯಾಣ ಯೋಗ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಮರ್ಥ್ಯವನ್ನರಿತು ಕೆಲಸ ನಿರ್ವಹಿಸಿ. ಮಿತ್ರವೃಂದದಿಂದ ಉಪಯುಕ್ತ ಸಲಹೆ ದೊರೆತು ವೃತ್ತಿಯಲ್ಲಿ ಯಶಸ್ಸು.

ನಿಮ್ಮ ಜನ್ಮದಿನ 28-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ಬದುಕಿನಲ್ಲಿ ಹೊಸ ತಿರುವು ತೆಗೆದುಕೊಳ್ಳಲಿದೆ. ಹೊಸ ಉದ್ಯೋಗವೊಂದರ ಹುಡುಕಾಟದಲ್ಲಿ ಯಶಸ್ಸು. ಉದ್ಯಮಗಳು ಕೈಗೂಡುವುದರ ಜೊತೆಗೆ ಆರ್ಥಿಕವಾಗಿ ಬಲಗೊಳ್ಳಲಿದ್ದೀರಿ. ವಿನಾಕಾರಣ ತಾಳ್ಮೆ ಕಳೆದುಕೊಳ್ಳದೆ ಮುಂದುವರಿಯುವುದರಿಂದ ಕಾರ್ಯ ಸಾಧನೆ ಮಾಡಲಿದ್ದೀರಿ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಸ್ಥಿರವಾದ ಪೌರುಷತ್ವ

ತೆರಪನರಿಯದೆ ಪರಿವ ಕಾಲಪ್ರವಾಹದಲಿ |
ಪುರುಷರಚಿತಗಳೆನಿತೊ ತೇಲಿಹೋಗಿಹವು ||
ಪುರ ರಾಷ್ಟ್ರ ದುರ್ಗಗಳು, ಮತನೀತಿ ಯುಕ್ತಿಗಳು |
ಪುರುಷತನ ನಿಂತಿಹುದು – ಮಂಕುತಿಮ್ಮ || 411 ||

ಪದ-ಅರ್ಥ: ತೆರಪನರಿಯದೆ = ಬಿಡುಗಡೆಯಿಲ್ಲದೆ, ಪರಿವ = ಹರಿಯುವ, ಪುರುಷರಚಿತಗಳೆನಿತೊ = - ಪುರುಷರಚಿತಗಳು (ಮಾನವ ನಿರ್ಮಿತ) + ಎನಿತೊ(ಎಷ್ಟೋ).

ವಾಚ್ಯಾರ್ಥ: ಬಿಡುವಿಲ್ಲದೆ ಹರಿಯುತ್ತಿರುವ ಕಾಲದ ಪ್ರವಾಹದಲ್ಲಿ ಮಾನವ ನಿರ್ಮಿತವಾದ ನಗರಗಳು, ರಾಷ್ಟ್ರಗಳು, ಕೋಟೆಗಳು, ಮತಗಳು, ನೀತಿಗಳು, ಯುಕ್ತಿಗಳೆಲ್ಲ ತೇಲಿ ಹೋಗಿವೆ. ಆದರೆ ಪುರುಷತನ ಮಾತ್ರ ನಿಂತಿದೆ.

ವಿವರಣೆ: ಈ ಕಗ್ಗ ಹಿಂದಿನ ಕಗ್ಗದ ಮುಂದುವರೆದ ಚಿಂತನೆ. ಕಾಲಪ್ರವಾಹ ಎಡೆಬಿಡದೆ ಹರಿಯುತ್ತಿದೆ. ಇಂಥ ಪ್ರವಾಹದಲ್ಲಿ ಮನುಷ್ಯ ನಿರ್ಮಿತವಾದ ಅನೇಕ ಸೃಷ್ಟಿಗಳು ಕೊಚ್ಚಿಕೊಂಡು ಹೋಗಿವೆ.

ನಾನು ನಾಲ್ಕಾರು ವರ್ಷಗಳ ಹಿಂದೆ ಬಿಹಾರದ ವೈಶಾಲಿ ಪ್ರದೇಶಕ್ಕೆ ಹೋಗಿದ್ದೆ. ಅಲ್ಲಿ ಪುರಾತತ್ವ ಇಲಾಖೆಯವರು ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಉತ್ಖನನ ಮಾಡಿದ ಪ್ರದೇಶದಲ್ಲಿ ನಾನು ಸುತ್ತಾಡಿದಾಗ ರೋಮಾಂಚನವಾಗಿತ್ತು. ಅದು ಸುಮಾರು ಅರವತ್ತು-ಎಪ್ಪತ್ತು ಎಕರೆಗಳಷ್ಟು ವಿಸ್ತಾರವಾದ ಜಾಗ. 2600 ವರ್ಷಗಳ ಹಿಂದೆ ಅಷ್ಟು ದೊಡ್ಡ ಬೌದ್ಧವಿಹಾರವನ್ನು ನಿರ್ಮಿಸಿದ್ದರಲ್ಲ, ಇದೇ ನೆಲದಲ್ಲಿ ಬುದ್ಧ ಓಡಾಡಿದ್ದನಲ್ಲ, ಇದೇ ಜಾಗೆಯಲ್ಲಿ ಅಪರೂಪದ ಸುಂದರಿಯಾದ ಆಮ್ರಪಾಲಿ ಬುದ್ಧನ ಶಿಷ್ಯೆಯಾದಳಲ್ಲ ಎಂದು ನೆನೆದಾಗ ಅದ್ಭುತವೆನ್ನಿಸಿತ್ತು. ಆದರೆ ಅಂದು ಅಷ್ಟು ಸುರಮ್ಯವಾಗಿದ್ದ, ಅಧ್ಯಾತ್ಮಿಕ ಶಕ್ತಿಯ ಕೇಂದ್ರವಾಗಿದ್ದ ಸ್ಥಳ ಇಂದು ಪಳೆಯುಳಿಕೆ ಮಾತ್ರ. ಅಭೇದ್ಯ, ಅಜಿಂಕ್ಯವೆನ್ನಿಸಿದ ರೋಮ್ ಸಾಮ್ರಾಜ್ಯ, ಈಜಿಪ್ಟ್‌ನ ಮಹಾನ್ ನಗರಗಳು, ಚೀನಾ ದೇಶದ ಚಕ್ರವರ್ತಿ ಪರಂಪರೆಗಳು ಇಂದು ಮಾಯವಾಗಿವೆ. ಭಾರತ ದೇಶದಲ್ಲಿ ಮಹಾಭಾರತದ ಹಸ್ತಿನಾಪುರ ಈಗಿಲ್ಲ. ಇಂದ್ರಪ್ರಸ್ಥ, ದೇಶದ ರಾಜಧಾನಿಯ ಒಂದು ಬಡಾವಣೆಯಾಗಿದೆ. ರಾಮನ ಅಯೋಧ್ಯೆ, ರಾವಣನ ಲಂಕೆ, ಚಾಣಕ್ಯ ಕಟ್ಟಿದ ಪ್ರಬಲ ಮಗಧದೇಶ, ಚಕ್ರವರ್ತಿ ಅಶೋಕನ ಸಾಮ್ರಾಜ್ಯಗಳೆಲ್ಲ ಇಂದು ಕಾಣದಾಗಿವೆ. ರಸ್ತೆಯ ಬದಿಯಲ್ಲಿ ರತ್ನ-ಮಾಣಿಕ್ಯಗಳನ್ನಿಟ್ಟು ಮಾರುತ್ತಿದ್ದ ವಿಜಯನಗರ ಸಾಮ್ರಾಜ್ಯ, ತನ್ನ ಕೋಟೆ ಕೊತ್ತಲಗಳನ್ನು ಕಳೆದುಕೊಂಡು, ಹಳೆಯದನ್ನು ನೆನಪಿಸುವ ಪ್ರವಾಸಿ ಕ್ಷೇತ್ರವಾಗಿದೆ. ಆಗ್ರಾದ ಕೋಟೆಗಳು ಕುಸಿಯುತ್ತಿವೆ, ಬಿಜಾಪುರದ ಮುಲ್ಕ ಮೈದಾನ ತೋಪು ಸದ್ದಿಲ್ಲದೆ ಮಲಗಿದೆ.

ಅಂದರೆ, ಹಿಂದೆ, ಒಂದು ಕಾಲದಲ್ಲಿ ಶ್ರೇಷ್ಠತೆಯ ಕುರುಹುಗಳಾಗಿದ್ದ, ಮನುಷ್ಯ ನಿರ್ಮಿತವಾದ ನಗರಗಳು, ದೇಶಗಳು, ಕೋಟೆ ಕೊತ್ತಲುಗಳು, ಆಗ ಇದ್ದ ಮತಗಳು, ನೀತಿ ಮೌಲ್ಯಗಳು, ಎಲ್ಲವೂ ಕಾಲದ ಪ್ರವಾಹದಲ್ಲಿ ನಿಲ್ಲದೆ ಹೋಗಿವೆ. ಆದರೆ ಹೊಸ ಹೊಸ ನಗರಗಳು, ಹೊಸ ವಾಹನ ಸೌಕರ್ಯಗಳು, ವಿಜ್ಞಾನದ ಅವಿಷ್ಕಾರಗಳು ಪ್ರಪಂಚವನ್ನು ನವನವೀನವನ್ನಾಗಿ ಮಾಡಿವೆ. ಹಳೆಯದು ಕಳೆದು ಹೋದರೂ, ಹೊಸದನ್ನು ಪುನರ್ನಿಮಿಸುವ ಪೌರುಷ ಶಕ್ತಿ ಅಚಲವಾಗಿದೆ. ಅದೇ ಭವಿಷ್ಯದಲ್ಲಿ ಆಸೆಯನ್ನು ಕೊನರಿಸುತ್ತದೆ. ❖

ಪದಬಂಧ 4580 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ರೊಡ್ಡ ಇಲ್ಲಿದ್ದಾನೆ (3)
3.ಲೋಪದೋಷಗಳನ್ನು ಸರಿಪಡಿಸುವವನು (4)
5.ಘಟಾನುಘಟಿ ಹಿಡಿದಿರುವ ಮಡಕೆ (2)
6.ಮೊದಲು ಬೆಲೆಯಿದ್ದರೂ ಈತನಿಗೆ ಯಾರೂ ದಿಕ್ಕಿಲ್ಲ! (4)
7.ನಿಷೇಧಿಸಿರುವ ಪ್ರದೇಶಕ್ಕೆ ಪ್ರವೇಶ ಮಾಡುವುದು (7)
10.ಇದು ಹೂವಿನ ಶರ (4)
11.ಶುನಕದ ಬಳಿಯಿರುವ ಗಿಳಿ (2)
13.ಲಕ್ಷಿಸಲು ಯೋಗ್ಯವಾದುದು (4)
14.ದಡಿಯ ಹಿಡಿದಿರುವ ವಿಶೇಷ ವಾದ್ಯ (3)

ಮೇಲಿಂದ ಕೆಳಕ್ಕೆ

1.ಕಣ್ಣಿನ ರೆಪ್ಪೆ (2)
2.ಚಟದಲ್ಲಿ ನಿಸ್ಸಾರ ಕಾಣುತ್ತಿದೆ (3)
4.ಉಪಾಧ್ಯಾಯನಿಲ್ಲಿ ತಿರುಗಿದ್ದಾನಲ್ಲಾ? (3)
5.ಉಲ್ಟಾ ನಿಂತಿರುವವ ಪಾಪರಹಿತ ವ್ಯಕ್ತಿ (3)
6.ತಿರುವುಮುರುವಾಗಿರುವ ತಪ್ಪು (3)
8.ಮೇಣವಿಟ್ಟುಕೊಂಡು ಹಂತ ಹಂತವಾಗಿ ಎಂದೆನ್ನಿ! (3)
9.ನೂರರ ಮೊತ್ತ (3)
10.ಒಳ್ಳೆಯ ಅದೃಷ್ಟ (3)
11.ಒಳ್ಳೆ ಫಲವನ್ನು ಕೊಡುವುದು (3)
12.ಗಡಿಬಿಡಿಯಿಂದಲೇ ಪ್ರವೇಶಿಸಿರುವ ಎಲ್ಲೆ (2)



4579ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹತ್ಯಾಕಾಂಡ 3.ಕಾಡತೂಸು 5.ಜಟಕ 7.ಕುರು 9.ರಥ 11.ಅಂಕ 12.ವನ 14.ಆನನ 16.ತಳಹದಿ 17.ದಿಗಂಬರ

ಮೇಲಿಂದ ಕೆಳಕ್ಕೆ: 1.ಹಲಾಕು 2.ಡಜ 3.ಕಾಕ 4.ಸುಪಥ 6.ಟಕ್ಕಿಸು 8.ರುದ್ರನಾಟಕ 9.ರಜತೋತ್ಸವ 10.ವಸನ 11.ಅಂಕಿತ 13.ನಶ್ವರ 14.ಆದಿ 15.ನದಿ

ಸುಡೊಕು 4966

	2			6	7	4		
								2
	7			4	8		6	
	4						8	
8		9		7				
	5		8		4		9	
				9			3	
4		3		5	2			8
	1		4			5		

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4965 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	14,485
ಇಂದಿನ ಅಂತ್ಯ	14,653
▲	168
ದಿನದ ಗರಿಷ್ಠ	14,667

ವಿನಿಮಯ ದರ

$ ಡಾಲರ್	74.66
£ ಪೌಂಡ್	103.66
€ ಯುರೊ	90.06
¥ ಯೆನ್ (100ಕ್ಕೆ)	69

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹415
12 ಮೊಟ್ಟೆಗೆ	₹58
ಮೈಸೂರು	
100 ಮೊಟ್ಟೆಗೆ	₹416

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1415 (1390)
ಸೂರ್ಯಕಾಂತಿ (ರಿಫೈನ್ಡ್)	₹1720 (1710)
ಪಾಮೋಲಿನ್	₹1300 (1285)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹25000-30000
2ನೇ ದರ್ಜೆ	₹16000-25000

ಕೊಬ್ಬರಿ ಧಾರಣೆ

ಪುತ್ತೂರು	₹5000-13500
ತಿಪಟೂರು	——
ತುರುವೇಕೆರೆ	₹16000-16000

ಬೆಂಗಳೂರು ಈರುಳ್ಳಿ ಧಾರಣೆ

ಕ್ವಿಂಟಲ್‌ಗೆ

ದೊಡ್ಡ	₹1000-1200
ಮಧ್ಯಮ	₹800-1000
ಸಣ್ಣ	₹500-800

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪೌಷ್ಟಿಕ ಆಹಾರ ಸೇವಿಸಿ

ಸೆನ್ಸೆಕ್ಸ್ 557 ಅಂಶ ಏರಿಕೆ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳು, ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಷೇರುಗಳ ಖರೀದಿಯು ಷೇರು ಮಾರುಕಟ್ಟೆಯಲ್ಲಿ ಮಂಗಳವಾರ ಜೋರಾಗಿ ನಡೆದ ಕಾರಣ ಷೇರುಪೇಟೆ ಸೂಚ್ಯಂಕಗಳು ಸತತ ಎರಡನೆಯ ದಿನವೂ ಏರಿಕೆ ದಾಖಲಿಸಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 558 ಅಂಶ ಏರಿಕೆ ಕಂಡಿತು.

ರಾಷ್ಟ್ರೀಯ ಷೇರುಪೇಟೆ ಸಂವೇದಿ ಸೂಚ್ಯಂಕ ನಿಫ್ಟಿ 168 ಅಂಶ ಏರಿಕೆ ದಾಖಲಿಸಿತು.

ವೈಕುಂಠ ಸಮಾರಾಧನೆ

ಶ್ರೀಮತಿ ಪ್ರೇಮಕುಮಾರಿ ಆರ್.
(ನಿವೃತ್ತ ಐಆರ್‌ಎಸ್ ಅಧಿಕಾರಿ)
ಜನನ: 04.05.1956 – ಮರಣ: 18.04.2021
ಶ್ರೀಮತಿ ಪ್ರೇಮಕುಮಾರಿ ಆರ್. ರವರು ದಿನಾಂಕ: 18.04.2021 ರಂದು ಹೃದಯಾಘಾತದಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ಅವರ ವೈಕುಂಠ ಸಮಾರಾಧನೆಯನ್ನು ದಿನಾಂಕ: 28.04.2021ರ ಬುಧವಾರ ರಂದು ಅವರ ಸ್ವಗೃಹ ಹೆಚ್.ಎಂ.ಟಿ ಲೇಔಟ್, ಯಶವಂತಪುರ, ಬೆಂಗಳೂರು ಇಲ್ಲಿ ನೆರವೇರಿಸಲಾಗುವುದು
ಇತಿ ದುಃಖತಪ್ತರು:
ಪತಿ ಶ್ರೀ ಎನ್. ಗೋವಿಂದಪ್ಪ ಮಗಳು ಶ್ರೀಮತಿ ಸಹನಾ ನಾಯಕ ಹಾಗೂ ಕುಟುಂಬ ವರ್ಗದವರು

ನಿಧನ

ಹೆಚ್. ಶ್ರೀನಿವಾಸನ್
ಜನನ: 16-09-1937 | ನಿಧನ: 18-04-2021
ದುಃಖತಪ್ತರು:
ವಿಜಯಲಕ್ಷ್ಮೀ ಶ್ರೀನಿವಾಸನ್ ಮತ್ತು ಕುಟುಂಬ ಸದಸ್ಯರು

BOOK OBITUARY / REMEMBRANCE
ADVERTISEMENT IN
DECCAN HERALD & PRAJAVANI
Call / Email / WhatsApp for more details
DH DECCAN HERALD ಪ್ರಜಾವಾಣಿ
9880856233 | 9731810277
9901641752 | 9845114560 | 9886213331
E-mail: dhclassifieds@deccanherald.co.in

ಮಾರುತಿ ಲಾಭ ಇಳಿಕೆ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು 2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ₹ 1,241 ಕೋಟಿ ನಿವ್ವಳ ಲಾಭ ಗಳಿಸಿದೆ.

2019–20ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯು ₹ 1,322 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಲಾಭದಲ್ಲಿ ಈ ಬಾರಿ ಶೇಕಡ 6.14ರಷ್ಟು ಇಳಿಕೆ ಆಗಿದೆ.

ಮಾರಾಟದಿಂದ ಬಂದಿರುವ ವರಮಾನವು ₹ 17,187 ಕೋಟಿಗಳಿಂದ ₹ 22,959 ಕೋಟಿಗಳಿಗೆ, ಅಂದರೆ ಶೇ 33.58ರಷ್ಟು ಏರಿಕೆ ಕಂಡಿದೆ.

ಕಂಪನಿಯು ನಾಲ್ಕನೇ ತ್ರೈಮಾಸಿಕದಲ್ಲಿ ಒಟ್ಟಾರೆ 4.92 ಲಕ್ಷ ವಾಹನಗಳನ್ನು ಮಾರಾಟ ಮಾಡಿದೆ. ಹಿಂದಿನ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 27.8ರಷ್ಟು ಹೆಚ್ಚು ಮಾರಾಟ ಆಗಿದೆ. ದೇಶಿ ಮಾರುಕಟ್ಟೆಯಲ್ಲಿ ಆಗಿರುವ ಮಾರಾಟದ ಪ್ರಮಾಣ ಶೇ 26.7ರಷ್ಟು ಹೆಚ್ಚಾಗಿದೆ.

2020–21ನೇ ಹಣಕಾಸು ವರ್ಷಕ್ಕೆ ಕಂಪನಿಯು ₹ 4,389 ಕೋಟಿ ನಿವ್ವಳ ಲಾಭ ಗಳಿಸಿದ್ದು, ಅದಕ್ಕೂ ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ನಿವ್ವಳ ಲಾಭದಲ್ಲಿ ಶೇ 22.69ರಷ್ಟು ಇಳಿಕೆಯಾಗಿದೆ. ಮಾರಾಟದಿಂದ ಬಂದಿರುವ ವರಮಾನವು ₹ 71,704 ಕೋಟಿಗಳಿಂದ ₹ 66,571 ಕೋಟಿಗಳಿಗೆ ಇಳಿಕೆಯಾಗಿದೆ.

ಲಾಭಾಂಶ: ವರ್ಷದ ಹಣಕಾಸು ಸಾಧನೆಗೆ ಅನುಗುಣವಾಗಿ ಹಾಗೂ ಅನಿಶ್ಚಿತ ವಹಿವಾಟಿನ ಪರಿಸ್ಥಿತಿಯನ್ನು ಗಮನದಲ್ಲಿ ಇಟ್ಟುಕೊಂಡು 2020–21ನೇ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹ 45 ಲಾಭಾಂಶವನ್ನು ನೀಡಲು ಆಡಳಿತ ಮಂಡಳಿ ಶಿಫಾರಸು ಮಾಡಿದೆ ಎಂದು ಕಂಪನಿ ತಿಳಿಸಿದೆ.

ಪ್ರಶ್ನೋತ್ತರ

ಯು.ಪಿ.ಪುರಾಣಿಕ್
ಬ್ಯಾಂಕಿಂಗ್–ಹಣಕಾಸು ತಜ್ಞ
uppuranik@gmail.com
ಮೊ: 9448015300

ಸಿದ್ದಯ್ಯ, ಜಾಮೂನು ನಗರ, ಬೆಂಗಳೂರು

● **ಪ್ರಶ್ನೆ: ನಾನು ದಿ. ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ₹ 1 ಲಕ್ಷ ಷೇರು ಬಂಡವಾಳದಲ್ಲಿ ಹಣ ವಿನಿಯೋಗಿಸಿದ್ದೇನೆ. 2020ರ ಮಾರ್ಚ್ 31ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಿ ನನಗೆ ಡಿವಿಡೆಂಡ್ ಸಿಗಲಿಲ್ಲ. ಈ ಮಾರ್ಚ್ 31ಕ್ಕೆ ಅಂತ್ಯವಾದ ಆರ್ಥಿಕ ವರ್ಷದಲ್ಲಾದರೂ ಡಿವಿಡೆಂಡ್ ಸಿಗುವ ಸಾಧ್ಯತೆ ಇದೆಯೇ ಹಾಗೂ ಕಳೆದ ವರ್ಷದ ಡಿವಿಡೆಂಡ್ ಸೇರಿಸಿ ಕೊಡಬಹುದೇ ತಿಳಿಸಿ?**

ಉತ್ತರ: ಭಾರತೀಯ ರಿಸರ್ವ್ ಬ್ಯಾಂಕ್ ಸುತ್ತೋಲೆ ಸಂಖ್ಯೆ RBI/2021/23 ಹಾಗೂ ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾ ಮಂಡಳಿಯವರ ಸುತ್ತೋಲೆ KSCUBF dated 23/4/2021ರ ಪ್ರಕಾರ ಸಹಕಾರಿ ಬ್ಯಾಂಕುಗಳು 2021ರ ಮಾರ್ಚ್ 31ಕ್ಕೆ ನಿವ್ವಳ ಲಾಭ ಗಳಿಸಿದ್ದಲ್ಲಿ ಹಾಗೂ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿ (ಎನ್‌ಪಿಎ) ಶೇಕಡ 5ರೊಳಗಿದ್ದಲ್ಲಿ ಬ್ಯಾಂಕಿನ ಸದಸ್ಯರಿಗೆ ಡಿವಿಡೆಂಡ್ ಕೊಡಲು ಪರವಾನಗಿ ಇದೆ.

ಇದರಿಂದಾಗಿ ಕರ್ನಾಟಕದಲ್ಲಿರುವ ಸಹಕಾರಿ ಬ್ಯಾಂಕುಗಳು ನಿವ್ವಳ ಲಾಭ ಗಳಿಸಿ, ಅನುತ್ಪಾದಕ ಆಸ್ತಿ ಶೇ 5ರೊಳಗಿದ್ದಲ್ಲಿ ಮಾರ್ಚ್ 31ಕ್ಕೆ ಅಂತ್ಯವಾದ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ತಮ್ಮ ಸದಸ್ಯರಿಗೆ ಡಿವಿಡೆಂಡ್ ಹಂಚಬಹುದಾಗಿದೆ. ಆದರೆ ಆರ್‌ಬಿಐ ಆದೇಶದ ಮೇರೆಗೆ 2020ರ ಮಾರ್ಚ್ 31ಕ್ಕೆ ಅಂತ್ಯವಾದ ಆರ್ಥಿಕ ವರ್ಷಕ್ಕೆ ಡಿವಿಡೆಂಡ್ ಹಂಚಬಾರದಿತ್ತು. ಬೆಂಗಳೂರು ಸಿಟಿ ಕೋ–ಆಪರೇಟಿವ್ ಬ್ಯಾಂಕು ಈ ವರ್ಷ ಸುಮಾರು ₹ 26 ಕೋಟಿ ನಿವ್ವಳ ಲಾಭ ಗಳಿಸಿದೆ ಹಾಗೂ ಬ್ಯಾಂಕಿನ ಅನುತ್ಪಾದಕ ಆಸ್ತಿ ಶೇ 3ರಷ್ಟಿದೆ. ಈ ವರ್ಷ ನಿಮಗೆ ಡಿವಿಡೆಂಡ್ ಸಿಕ್ಕೇ ಸಿಗುತ್ತದೆ. ನಿಮ್ಮ ಪ್ರಶ್ನೆಯಿಂದಾಗಿ ಕರ್ನಾಟಕದಾದ್ಯಂತ ಇರುವ, ಪಟ್ಟಣ ಸಹಕಾರಿ ಬ್ಯಾಂಕುಗಳಲ್ಲಿ ಷೇರಿನ ರೂಪದಲ್ಲಿ ಹೂಡಿಕೆ ಮಾಡಿದ ಲಕ್ಷಾಂತರ ಜನರಿಗೆ ಉತ್ತರ ದೊರೆತಂತಾಗಿದೆ.

ವಸುಂಧರಾ, ಸಹಕಾರ ನಗರ, ಬೆಂಗಳೂರು

● **ಪ್ರಶ್ನೆ: ನಾನು ಗೃಹಿಣಿ. ನನ್ನೊಡನೆ ₹ 1 ಲಕ್ಷ ಉಳಿತಾಯ ಖಾತೆಯಲ್ಲಿದೆ. ನಾನು ಮನೆಯಲ್ಲಿ ಕುಳಿತು ಷೇರು ವ್ಯವಹಾರ ಮಾಡಲು ಮಾಹಿತಿ ನೀಡಿ.**

ಉತ್ತರ: ಷೇರು ಮಾರುಕಟ್ಟೆಯಲ್ಲಿ ವ್ಯವಹರಿಸಲು ಮೊದಲಿಗೆ ಒಂದು ಡಿಮ್ಯಾಟ್ ಖಾತೆ ಹೊಂದಬೇಕು. ಈ ವ್ಯವಹಾರವನ್ನು ಷೇರು ದಲ್ಲಾಳಿಗಳ ಮುಖಾಂತರ ಮಾಡಬೇಕಾಗುತ್ತದೆ. ಅವರೇ ಡಿಮ್ಯಾಟ್ ಖಾತೆ ತೆರೆಯಲು ಸಹಾಯ ಮಾಡುತ್ತಾರೆ. ಪ್ರೈಮರಿ ಮತ್ತು ಸೆಕೆಂಡರಿ ಹೀಗೆ ಎರಡು ವಿಧಗಳ ಷೇರು ಮಾರುಕಟ್ಟೆಗಳಿವೆ. ಕೆಲವು ಕಂಪನಿಗಳ ಆರಂಭಿಕ ಕೊಡುಗೆ (ಐಪಿಒ) ಬರುತ್ತವೆ. ಇಲ್ಲಿ ಕೂಡಾ ಅರ್ಜಿ ಸಲ್ಲಿಸಿ ಹಣ ತುಂಬಿ ಷೇರು ಖರೀದಿಸಬಹುದು. ಆದರೆ ಶೇಕಡ 95ರಷ್ಟು ಜನ ಸೆಕೆಂಡರಿ ಮಾರುಕಟ್ಟೆಯಲ್ಲಿಯೇ ವ್ಯವಹರಿಸುತ್ತಾರೆ. ಇಲ್ಲಿ ನೀವು ಕೇವಲ ಒಂದು ಷೇರು ಕೂಡ ಕೊಳ್ಳಬಹುದು ಮತ್ತು ಮಾರಾಟ ಮಾಡಬಹುದು. ನಿಮ್ಮ ದೈನಂದಿನ ಷೇರು ವ್ಯವಹಾರಕ್ಕೆ ಸೆಕೆಂಡರಿ ಮಾರುಕಟ್ಟೆಯೇ ಲೇಸು. ಇದೇ ವೇಳೆ ಷೇರು ಮಾರುಕಟ್ಟೆಯಲ್ಲಿ ವಾಯಿದೆ ಪೇಟೆ (Derivative Market) ಕೂಡಾ ಇದೆ. ಇಲ್ಲಿ ಕಂಪನಿ ನಿಗದಿಪಡಿಸಿದ ಕನಿಷ್ಠ ಒಂದು ಲಾಟ್ ಖರೀದಿಸಬೇಕು. (ಉದಾ: ರಿಲಯನ್ಸ್–250, ಇನ್ಫೋಸಿಸ್–600, ಎಸ್‌ಬಿಐ–3,000) ಹಾಗೂ ವಾಯಿದೆ ಮುಗಿಯುವುದರೊಳಗೆ ಮಾರಾಟ ಮಾಡಬೇಕು. ಈ ವ್ಯವಹಾರಕ್ಕೆ ಹೆಚ್ಚಿನ ಅನುಭವ ಹಾಗೂ ದೊಡ್ಡ ಮೊತ್ತ ಬೇಕಾಗುತ್ತದೆ. ನೀವು ಸೆಕೆಂಡರಿ ಮಾರುಕಟ್ಟೆಯಲ್ಲಿ ಉತ್ತಮ ಕಂಪನಿಗಳ ಅಲ್ಪ ಸ್ವಲ್ಪ ಷೇರುಗಳನ್ನು ಸಂವೇದಿ ಸೂಚ್ಯಂಕವು (Sensex) ಬಹಳ ಕುಸಿದಾಗ ಖರೀದಿಸಿ, ಸೂಚ್ಯಂಕ ಮೇಲಕ್ಕೆ ಹೋದಾಗ ಮಾರಾಟ ಮಾಡಿ ಲಾಭ ಗಳಿಸಬಹುದು. ಹೀಗೆ ಕೊಂಡ ಷೇರುಗಳನ್ನು ನೀವು ಎಷ್ಟು ದಿನಗಳವರೆಗೂ ಇಟ್ಟುಕೊಳ್ಳಬಹುದು ಹಾಗೂ ಅವುಗಳು ಡಿಮ್ಯಾಟ್ ಖಾತೆಯಲ್ಲಿ ಜಮಾ ಇರುತ್ತವೆ. ನಿಮ್ಮ ಉದ್ದೇಶ ಈಡೇರಲಿ ಎಂದು ಆಶಿಸುತ್ತೇನೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001. ಇ–ಮೇಲ್: businessdesk@prajavani.co.in

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಪುತ್ತೂರು		ಬಿಳಿಗೋಟು	25099-31033
ಬಂಟ್ವಾಳ		ಕೋಕ	9500-24000	ಕೋಕ	18899-26899
ಕೋಕ	10000-22500	ಹೊಸತು	28500-41000	ಚಾಲಿ	31810-36051
ಹೊಸತು	23500-41000	ಸಿದ್ದಾಪುರ		ಕೆಂಪುಗೋಟು	27168-31681
ಹಳತು	42500-50500	ಬಿಳಿಗೋಟು	22399-30012	ರಾಶಿ	39989-44700
ಭೀಮಸಮುದ್ರ		ಕೋಕ	18699-29199	ತಟ್ಟಿಬೆಟ್ಟೆ	33974-38169
ಆಪಿ	40719-41129	ಚಾಲಿ	33899-35509	ಶಿವಮೊಗ್ಗ	
ಬೆಟ್ಟೆ	33210-33689	ಕೆಂಪುಗೋಟು	21699-29889	ಬೆಟ್ಟೆ	40119-42869
ಕೆಂಪುಗೋಟು	28600-29000	ರಾಶಿ	37679-40799	ಗೊರಬಲು	16869-31000
ರಾಶಿ	40239-40469	ತಟ್ಟಿಬೆಟ್ಟೆ	33899-38099	ರಾಶಿ	36209-40519
		ಯಲ್ಲಾಪುರ		ಸರಕು	47699-73596

ಕೆಲವೇ ವಾರಗಳಲ್ಲಿ 20 ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳ ಪೂರೈಕೆ

ಭಾರತದ ನೆರವಿಗೆ ಒಂದಾದ ಅಮೆರಿಕದ ಸಿಇಒಗಳು

ವಾಷಿಂಗ್ಟನ್ (ಪಿಟಿಐ): ಕೋವಿಡ್–19 ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ನೆರವಾಗುವ ಉದ್ದೇಶದಿಂದ ಸಂಪನ್ಮೂಲ ಒಗ್ಗೂಡಿಸಲು ಅಮೆರಿಕದ ಮುಂಚೂಣಿ 40 ಕಂಪನಿಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು (ಸಿಇಒ) ಜೊತೆಗೂಡಿದ್ದಾರೆ. ಒಂದು ದೇಶಕ್ಕೆ ನೆರವಾಗಲು ಸಿಇಒಗಳು ಈ ರೀತಿ ಒಟ್ಟಾಗುತ್ತಿರುವುದು ಇದೇ ಮೊದಲು.

ಸೋಮವಾರ ನಡೆದ ಸಭೆಯಲ್ಲಿ ಭಾರತಕ್ಕೆ ಮುಂದಿನ ಕೆಲವು ವಾರಗಳಲ್ಲಿ ಒಟ್ಟು 20 ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಪೂರೈಕೆ ಮಾಡಲು ತೀರ್ಮಾನಿಸಲಾಗಿದೆ ಎಂದು ಡೆಲಾಯ್ಟ್ ಕಂಪನಿಯ ಸಿಇಒ ಪುನೀತ್ ರಂಜನ್ ತಿಳಿಸಿದ್ದಾರೆ.

ಭಾರತಕ್ಕೆ ಅಗತ್ಯವಿರುವ ವೈದ್ಯಕೀಯ ನೆರವು ಒದಗಿಸಲು ಕಟ್ಟಿಕೊಂಡಿರುವ ಅಮೆರಿಕದ ಈ ಸರ್ಕಾರಿ–ಖಾಸಗಿ ಪಾಲುದಾರಿಕೆಯ ಒಕ್ಕೂಟಕ್ಕೆ 'ಸಾಂಕ್ರಾಮಿಕಕ್ಕೆ ಪ್ರತಿಯಾಗಿ ಜಾಗತಿಕ ಕಾರ್ಯಪಡೆ' ಎಂಬ ಹೆಸರು ನೀಡಲಾಗಿದೆ. ಇನ್ನೊಂದು ದೇಶದಲ್ಲಿನ ಆರೋಗ್ಯ ಬಿಕ್ಕಟ್ಟನ್ನು ಎದುರಿಸಲು ಅಮೆರಿಕದಲ್ಲಿ ರೂಪುಗೊಂಡಿರುವ ಈ ಕಾರ್ಯಪಡೆಯನ್ನು ಉದ್ದೇಶಿಸಿ ಅಮೆರಿಕದ ವಿದೇಶಾಂಗ ಸಚಿವ ಟೋನಿ ಬ್ಲಿಂಕನ್ ಅವರು ಮಾತನಾಡಿದ್ದಾರೆ.

'ಅಮೆರಿಕದ ಹಲವು ಕಂಪನಿಗಳು ಮುಂದೆ ಬಂದಿವೆ. ನಮ್ಮಿಂದ ಸಾಧ್ಯ ಆಗುವುದನ್ನು ಯಾವುದೇ ರೀತಿಯಲ್ಲಿ ನೆರವಾಗಲು ನಾವು ಗಮನ ಹರಿಸಿದ್ದೇವೆ. ಪ್ರಧಾನ ಮಂತ್ರಿಯವರು ಹೇಳಿರುವಂತೆ, ಮೊದಲ ಅಲೆಯ ಯಶಸ್ವಿಯಾಗಿ ನಿಭಾಯಿಸಿದ ನಂತರ ನಾವು ಬಹಳ ವಿಶ್ವಾಸದಿಂದ ಇದ್ದೆವು. ಆದರೆ, ಈಗಿನ ಪ್ರವಾಹವು ದೇಶವನ್ನು ಅಲುಗಾಡಿಸಿದೆ' ಎಂದು ರಂಜನ್ ಅವರು ಪ್ರಶ್ನೋತ್ತರದಲ್ಲಿ ತಿಳಿಸಿದ್ದಾರೆ.

ಮೊದಲ ಸುತ್ತಿನಲ್ಲಿ ಒಂದು ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳು ಈ ವಾರದ ಮಧ್ಯಭಾಗದಲ್ಲಿ ಬರಲಿವೆ. ಮೇ 5ರೊಳಗೆ 11 ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳು ಬರಲಿವೆ ಎಂದು ರಂಜನ್ ತಿಳಿಸಿದ್ದಾರೆ. 25 ಸಾವಿರ ಆಮ್ಲಜನಕ ಕಾನ್ಸನ್‌ಟ್ರೇಟರ್‌ಗಳನ್ನು ಒಗ್ಗೂಡಿಸುವ ಗುರಿ ಹೊಂದಿರುವುದಾಗಿ ಅವರು ಹೇಳಿದ್ದಾರೆ.

10 ಲೀಟರ್ ಮತ್ತು 45 ಲೀಟರ್ ಸಾಮರ್ಥ್ಯದ ಆಮ್ಲಜನಕ ಸಿಲಿಂಡರ್ ಹಾಗೂ ಇತರ ಕೆಲವು ಅಗತ್ಯ ವೈದ್ಯಕೀಯ ಉಪಕರಣಗಳನ್ನು ಪೂರೈಸುವ ಬಗ್ಗೆಯೂ ಗಮನ ನೀಡಲಾಗಿದೆ.

ಫೇಸ್‌ಬುಕ್, ಆ್ಯಪಲ್ ಸಹಾಯ

ನವದೆಹಲಿ: ಫೇಸ್‌ಬುಕ್, ಆ್ಯಪಲ್, ಅಮೆಜಾನ್, ಒಪ್ಪೊ ಮತ್ತು ವಿವೊ ಕಂಪನಿಗಳು ಕೋವಿಡ್ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ನೆರವಾಗುವುದಾಗಿ ಹೇಳಿವೆ. ಆಮ್ಲಜನಕ ಉತ್ಪಾದನಾ ಯಂತ್ರ, ವೆಂಟಿಲೇಟರ್‌ಗಳನ್ನು ನೀಡುವುದಾಗಿ ಪ್ರಕಟಿಸಿವೆ.

'ನಾವು ಯುನಿಸೆಫ್ ಜೊತೆಗೂಡಿ ಕೆಲಸ ಮಾಡುತ್ತಿದ್ದೇವೆ. ತುರ್ತು ಅಗತ್ಯಗಳಿಗಾಗಿ ಒಟ್ಟು ₹ 745 ಕೋಟಿ ನೀಡಲಾಗುತ್ತಿದೆ' ಎಂದು ಫೇಸ್‌ಬುಕ್ ಪ್ರಕಟಿಸಿದೆ.

'ಪರಿಹಾರ ಕಾರ್ಯಗಳಿಗೆ ಆ್ಯಪಲ್ ಕಂಪನಿಯು ನೆರವು ನೀಡಲಿದೆ' ಎಂದು ಕಂಪನಿಯ ಸಿಇಒ ಟಿಮ್ ಕುಕ್ ಹೇಳಿದ್ದಾರೆ.

ಭಾರತಕ್ಕೆ ಎಡಿಬಿ ನೆರವು

ನವದೆಹಲಿ (ಪಿಟಿಐ): ಕೋವಿಡ್–19 ಸಾಂಕ್ರಾಮಿಕ ನಿಭಾಯಿಸಲು ಭಾರತಕ್ಕೆ ಒಟ್ಟು 1.5 ಬಿಲಿಯನ್ ಡಾಲರ್ (₹ 11.19 ಸಾವಿರ ಕೋಟಿ) ನೆರವು ನೀಡಲಾಗಿದೆ ಎಂದು ಏಷ್ಯಾ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಹೇಳಿದೆ. ಸಾಂಕ್ರಾಮಿಕದ ಪರಿಸ್ಥಿತಿ ನಿಭಾಯಿಸಲು 26 ದೇಶಗಳಿಗೆ ನೆರವು ಒದಗಿಸಲು ಬ್ಯಾಂಕ್ 2020ರ ಏಪ್ರಿಲ್‌ನಲ್ಲಿ ಪ್ಯಾಕೇಜ್ ಘೋಷಿಸಿತ್ತು.

'ಜಾಗತಿಕ ಬಿಕ್ಕಟ್ಟಿಗೆ ಜಾಗತಿಕ ಮಟ್ಟದಲ್ಲಿ ಪ್ರತಿಕ್ರಿಯೆ ಬರಬೇಕಾಗುತ್ತದೆ. ಅಮೆರಿಕದ ವಾಣಿಜ್ಯ ಸಮುದಾಯವು ಆ ನೆರವು ನೀಡುವ ಶಕ್ತಿ ಹೊಂದಿದೆ' ಎಂದು ಅಮೆರಿಕದ ವಾಣಿಜ್ಯ ಮಹಾಸಂಘದ ಅಧ್ಯಕ್ಷ ಸುಜೇನ್ ಕ್ಲಾರ್ಕ್ ಹೇಳಿದ್ದಾರೆ. ಕಾರ್ಯಪಡೆಯಲ್ಲಿ ಇರುವ ಅಮೆರಿಕದ ಕಂಪನಿಗಳು ಅಮೆರಿಕದಲ್ಲಿ ಇರುವ ಭಾರತದ ರಾಯಭಾರಿ ತರನ್‌ಜಿತ್ ಸಿಂಗ್ ಸಂಧು ಜೊತೆ ಮಾತುಕತೆ ನಡೆಸುತ್ತಿವೆ.

ಆಮ್ಲಜನಕ ಘಟಕ ಆರಂಭ: ವೇದಾಂತ ಕಂಪನಿಗೆ 'ಸುಪ್ರೀಂ' ಅನುಮತಿ



ನವದೆಹಲಿ (ಪಿಟಿಐ): ದೇಶಕ್ಕೆ ತುರ್ತಾಗಿ ವೈದ್ಯಕೀಯ ಆಮ್ಲಜನಕದ ಅಗತ್ಯವಿರುವ ಹಿನ್ನೆಲೆಯಲ್ಲಿ ತಮಿಳುನಾಡಿನ ತೂತುಕುಡಿಯಲ್ಲಿ ಸ್ಥಗಿತಗೊಂಡಿರುವ ತನ್ನ ಆಮ್ಲಜನಕ ಉತ್ಪಾದನಾ ಘಟಕವನ್ನು ಆರಂಭಿಸಲು ಸುಪ್ರೀಂ ಕೋರ್ಟ್ ಮಂಗಳವಾರ ವೇದಾಂತ ಕಂಪನಿಗೆ ಅನುಮತಿ ನೀಡಿದೆ.

ನ್ಯಾಯಮೂರ್ತಿಗಳಾದ ಡಿ.ವೈ. ಚಂದ್ರಚೂಡ್, ಎಲ್. ನಾಗೇಶ್ವರ ರಾವ್ ಮತ್ತು ಎಸ್. ರವೀಂದ್ರ ಭಟ್ ಅವರನ್ನೊಳಗೊಂಡ ನ್ಯಾಯಪೀಠ, 'ಈಗಾಗಲೇ ಸ್ಥಗಿತಗೊಳಿಸಿರುವ ತಾಮ್ರ ಘಟಕವನ್ನು ಆರಂಭಿಸಲು ಮತ್ತು ನಿರ್ವಹಿಸಲು ಅನುಮತಿ ನೀಡುವುದಿಲ್ಲ' ಎಂದು ಹೇಳಿದೆ.

ಆರೋಗ್ಯದ ವಿಷಯದಲ್ಲಿ ರಾಷ್ಟ್ರೀಯ ಬಿಕ್ಕಟ್ಟು ಎದುರಾಗಿರುವ ಸಂದರ್ಭದಲ್ಲಿ ವೇದಾಂತ ಕಂಪನಿ ಆಮ್ಲಜನಕ ಉತ್ಪಾದಿಸುವ ಬಗ್ಗೆ ಯಾವುದೇ ರೀತಿಯ ರಾಜಕೀಯ, ಗಲಾಟೆ ಮಾಡಬಾರದು ಎಂದು ನ್ಯಾಯಾಲಯ ತಿಳಿಸಿದೆ.

ಆಮ್ಲಜನಕ ಉತ್ಪಾದನೆಯ ಮೇಲ್ವಿಚಾರಣೆಗಾಗಿ ತೂತುಕುಡಿ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರನ್ನು ಒಳಗೊಂಡ ಸಮಿತಿ ರಚಿಸುವಂತೆ ನ್ಯಾಯಪೀಠ ತಮಿಳುನಾಡು ಸರ್ಕಾರಕ್ಕೆ ತಿಳಿಸಿದೆ.

'ಆಮ್ಲಜನಕದ ಕೊರತೆಯಿಂದ ಜನರು ಸಾಯುತ್ತಿದ್ದಾರೆ. ಕೊರೊನಾ ರೋಗಿಗಳಿಗೆ ಆಮ್ಲಜನಕ ಪೂರೈಸಲು, ತಮಿಳುನಾಡು ಸರ್ಕಾರ ತೂತುಕುಡಿಯಲ್ಲಿರುವ ವೇದಾಂತ ಸ್ಟರ್ಲೈಟ್ ತಾಮ್ರ ಘಟಕವನ್ನು ವಶಕ್ಕೆ ತೆಗೆದುಕೊಂಡು ಆಮ್ಲಜನಕ ಉತ್ಪಾದಿಸಲು ಏಕೆ ಬಳಸಬಾರದು' ಎಂದು ಏಪ್ರಿಲ್ 23 ರಂದು ಸುಪ್ರೀಂ ಕೋರ್ಟ್ ತಮಿಳುನಾಡು ಸರ್ಕಾರವನ್ನು ಕೇಳಿತ್ತು.

ಮಾಲಿನ್ಯ ವಿಚಾರಕ್ಕೆ ಸಂಬಂಧಿಸಿದಂತೆ ಮೇ 2018ರಿಂದ ಈ ಘಟಕದ ಕಾರ್ಯವನ್ನು ಕಂಪನಿ ಸ್ಥಗಿತಗೊಳಿಸಿತ್ತು.

ಗಾರ್ಮೆಂಟ್ಸ್ ಉದ್ಯಮದಿಂದ ಸಿ.ಎಂ.ಗೆ ಮನವಿ

'ಕೆಲಸ ಮಾಡಲು ಅವಕಾಶ ಕೊಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಕೃಷಿ ನಂತರ ಅತಿಹೆಚ್ಚು ಸಂಖ್ಯೆಯ ಜನರಿಗೆ ಉದ್ಯೋಗ ಕಲ್ಪಿಸಿರುವ ಗಾರ್ಮೆಂಟ್ ವಲಯಕ್ಕೆ ಕೋವಿಡ್ ಕರ್ಫ್ಯೂ ಅವಧಿಯಲ್ಲಿ ಶೇಕಡ 50ರಷ್ಟು ಮಾನವ ಸಂಪನ್ಮೂಲ ಬಳಸಿಕೊಂಡು ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಬೇಕು' ಎಂದು ರಾಜ್ಯ ಸರ್ಕಾರಕ್ಕೆ 'ಕರ್ನಾಟಕ ಉದ್ಯೋಗದಾತರ ಒಕ್ಕೂಟ' ಮನವಿ ಮಾಡಿದೆ.

ಬೆಂಗಳೂರಿನಲ್ಲಿಯೇ ಎಂಟು ಲಕ್ಷಕ್ಕಿಂತ ಹೆಚ್ಚು ಜನ ಗಾರ್ಮೆಂಟ್ ವಲಯದಲ್ಲಿ ಕೆಲಸ ಮಾಡುತ್ತಿದ್ದಾರೆ. ಯುರೋಪಿನಲ್ಲಿ ಮಾರುಕಟ್ಟೆ ಈಗಷ್ಟೇ ತೆರೆದುಕೊಂಡಿದೆ. ಅಲ್ಲಿಂದ ದೊಡ್ಡ ಸಂಖ್ಯೆಯಲ್ಲಿ ವಸ್ತ್ರ ಉದ್ಯಮ ಸಿದ್ಧಪಡಿಸುವಂತೆ ಕೋರಿಕೆ ಬಂದಿದೆ. ಈ ಸಂದರ್ಭದಲ್ಲಿ ಕಾಲಮಿತಿಯಲ್ಲಿ ಸಿದ್ಧಪಡಿಸಿ ಕೊಡದಿದ್ದಲ್ಲಿ ಗಾರ್ಮೆಂಟ್ ಉದ್ಯಮವು ಭಾರಿ ದಂಡ ತೆರಬೇಕಾಗುತ್ತದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಬರೆದಿರುವ ಪತ್ರದಲ್ಲಿ ಒಕ್ಕೂಟದ ಅಧ್ಯಕ್ಷ ಬಿ.ಸಿ. ಪ್ರಭಾಕರ್ ಮನವಿ ಮಾಡಿದ್ದಾರೆ.

ಗಾರ್ಮೆಂಟ್ ಉದ್ಯಮವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದರಿಂದ ಹತ್ತು ಲಕ್ಷ ಬೆಳೆಗಾರರಿಗೂ ನಷ್ಟ ಆಗುತ್ತದೆ. ಬೇರೆ ಬೇರೆ ಕಡೆಗಳಿಂದ ತರಿಸಿಕೊಳ್ಳಬೇಕಾದ ಕಚ್ಚಾ ವಸ್ತುಗಳನ್ನು ಇಳಿಸಿಕೊಳ್ಳಲೂ ಆಗುವುದಿಲ್ಲ ಎಂದು ಪತ್ರದಲ್ಲಿ ವಿವರಿಸಲಾಗಿದೆ.

ಗಾರ್ಮೆಂಟ್ ಉದ್ಯಮವು ಮಾಸ್ಕ್, ಪಿಪಿಇ ಕಿಟ್ ತಯಾರಿಕೆಯಲ್ಲಿ ಕೂಡ ತೊಡಗಿದೆ. ಹಾಗಾಗಿ ಈ ಉದ್ಯಮವು ಕಾರ್ಯ ನಿರ್ವಹಿಸಲು ಅವಕಾಶ ಕಲ್ಪಿಸಬೇಕು ಎಂದು ಸಿದ್ದಗಂಗಾ ಪಾಲಿಮರ್ಸ್ ರಪ್ಪು ಉತ್ಪಾದನಾ ಮಂಡಳಿಯ ಅಧ್ಯಕ್ಷ ಡಾ.ಎ. ಶಕ್ತಿವೇಲು ಅವರು ಯಡಿಯೂರಪ್ಪ ಅವರನ್ನು ಒತ್ತಾಯಿಸಿದ್ದಾರೆ.

ಭಾರತಕ್ಕೆ ಕ್ಯಾಲಿಫೋರ್ನಿಯಾದ 'ಆಮ್ಲಜನಕ'ದ ನೆರವು

ವಾಷಿಂಗ್ಟನ್ (ಪಿಟಿಐ): ಹೆಚ್ಚಿನ ಪ್ರಮಾಣದಲ್ಲಿ ಭಾರತೀಯ ಅಮೆರಿಕನ್ನರನ್ನು ಹೊಂದಿರುವ ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯವು, ಕೋವಿಡ್ ವಿರುದ್ಧ ಹೋರಾಡಲು ಭಾರತಕ್ಕೆ ಆಮ್ಲಜನಕವನ್ನು ಕಳುಹಿಸಲಿದೆ.

ಗ್ಯಾವಿನ್ ನ್ಯೂಸಮ್

ಸೋಮವಾರ ಕ್ಯಾಲಿಫೋರ್ನಿಯಾದ ಗವರ್ನರ್ ಗ್ಯಾವಿನ್ ನ್ಯೂಸಮ್ ಅವರು ಭಾರತಕ್ಕೆ ಕಳುಹಿಸಲು ಗುರುತಿಸಿರುವ ಮೊದಲ ವೈದ್ಯಕೀಯ ನೆರವಿನ ಕುರಿತು ಮಾಹಿತಿ ಬಿಡುಗಡೆ ಮಾಡಿದರು.

'ಎಲ್ಲರೂ ಉತ್ತಮ ವೈದ್ಯಕೀಯ ಚಿಕಿತ್ಸೆ ಪಡೆಯುವ ಹಕ್ಕಿದೆ. ಕ್ಯಾಲಿಫೋರ್ನಿಯಾವು ಭಾರತದ ಜನರ ಜೊತೆಗಿದ್ದು, ಕೋವಿಡ್ ವಿರುದ್ಧ ಹೋರಾಡಲು ಸಹಾಯ ಮಾಡಲಿದೆ' ಎಂದರು.

ಕ್ಯಾಲಿಫೋರ್ನಿಯಾವು 275 ಆಮ್ಲಜನಕ ಪೂರೈಕೆ ಪರಿಕರಗಳು, 440 ಆಮ್ಲಜನಕ ಸಿಲಿಂಡರ್‌ಗಳು, 240 ಆಮ್ಲಜನಕ ನಿಯಂತ್ರಕಗಳು, 210 ಪಲ್ಸ್ ಆಕ್ಸಿಮೀಟರ್‌ಗಳು ಮತ್ತು ನಿಮಿಷಕ್ಕೆ 120 ಲೀಟರ್ ಆಕ್ಸಿಜನ್ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿರುವ ಒಂದು, ಪೋರ್ಟಬಲ್ ಆಕ್ಸಿಜನ್ ಕಾನ್ಸಂಟ್ರೇಟರ್ ಸಿಸ್ಟಂ (ಪಿಎಸ್‌ಎ) ಅನ್ನು ಕಳುಹಿಸಲಿದೆ.

ಭಾರತಕ್ಕೆ ರೆಮ್‌ಡಿಸಿವಿರ್‌ನ 4.5 ಲಕ್ಷ ಡೋಸ್ ದೇಣಿಗೆ: ಗಿಲೀಡ್

ನವದೆಹಲಿ/ಕ್ಯಾಲಿಫೋರ್ನಿಯಾ (ಪಿಟಿಐ): ವೈರಾಣು ನಿರೋಧಕ ರೆಮ್‌ಡಿಸಿವಿರ್ ಔಷಧ ಉತ್ಪಾದನೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವ ಜತೆಗೆ, ತಕ್ಷಣದಲ್ಲಿ ರೆಮ್‌ಡಿಸಿವಿರ್‌ನ 4.5 ಲಕ್ಷ ಡೋಸ್‌ಗಳನ್ನು ಭಾರತಕ್ಕೆ ದೇಣಿಗೆಯಾಗಿ ನೀಡುವುದಾಗಿ ಈ ಔಷಧ ತಯಾರಿಕಾ ಸಂಸ್ಥೆ ಗಿಲೀಡ್ ಸೈನ್ಸಸ್ ತಿಳಿಸಿದೆ.

ಭಾರತದಲ್ಲಿ, ಕೋವಿಡ್ ಸೋಂಕಿಗೆ ಒಳಗಾಗಿರುವ ವಯಸ್ಕರು ಮತ್ತು ತೀವ್ರ ಕಾಯಿಲೆಯಿಂದ ಆಸ್ಪತ್ರೆಗೆ ದಾಖಲಾಗುವ ಮಕ್ಕಳ ಚಿಕಿತ್ಸೆಗಾಗಿ ರೆಮ್‌ಡಿಸಿವಿರ್ ಔಷಧವನ್ನು ತುರ್ತು ಬಳಕೆಗಾಗಿ ಅನುಮತಿ ನೀಡಲಾಗಿದೆ.

ಮದುವೆ ಮನೆ: ಅತಿಥಿಗಳಿಗೆ ಕಷಾಯ ನೀಡಿ ಸ್ವಾಗತ!

ಪ್ರಜಾವಾಣಿ ವಾರ್ತೆ



ಲಖನೌ: ವಾರಾಣಸಿಯಲ್ಲಿ ಈಗ ಮದುವೆ ಸಮಾರಂಭಗಳಲ್ಲಿ ಅತಿಥಿಗಳನ್ನು ಸ್ವಾಗತಿಸಲು ಹೂವು, ತಂಪು ಪಾನೀಯದ ಬದಲಾಗಿ ವಿಭಿನ್ನವಾದ ಪೇಯ 'ಕದಾ' ಕಷಾಯವನ್ನು ನೀಡಲಾಗುತ್ತಿದೆ. ಇದು, ಆಯುರ್ವೇದ ಅಂಶಗಳನ್ನು ಬಳಸಿ, ರೋಗ ನಿರೋಧಕ ಶಕ್ತಿ ವೃದ್ಧಿಸಲು ಮಾಡಿದ ಪೇಯವಾಗಿದೆ.

ಆಯುರ್ವೇದ ವೈದ್ಯರ ಪ್ರಕಾರ, ಕದಾ ಪೇಯದಲ್ಲಿ ಆಯುರ್ವೇದದ ಔಷಧ ಮೂಲವಾದ ತುಳಸಿ, ಮೆಣಸು, ಜೀರಿಗೆ, ಚಕ್ಕೆ ಬಳಸಲಾಗಿದೆ. ಇದು, ಕೋವಿಡ್ ಎದುರಿಸಲು ದೇಹದಲ್ಲಿ ನಿರೋಧಕ ಶಕ್ತಿಯನ್ನು ವೃದ್ಧಿಸಲಿದೆ.

ವರದಿಗಳ ಪ್ರಕಾರ, ಮದುವೆಗೆ ಬರುವ ಅತಿಥಿಗಳಿಗೆ ಕಡ್ಡಾಯವಾಗಿ ಮಾಸ್ಕ್ ಧರಿಸಲು ಮನವಿ ಮಾಡಲಾಗುತ್ತಿದೆ. ಅತಿಥಿಗಳು ಅತಿಥಿಗಳಿಗೆ ರುಚಿಯಿಂದ ಸ್ವಲ್ಪ ಹುಳಿ ಎನಿಸುವ 'ಕದಾ' ಪೇಯವನ್ನು ನೀಡಿ ಸ್ವಾಗತಿಸುತ್ತಿದ್ದಾರೆ.

ಕ್ರಮಿಸಿ, ಅದರ ಇದು ಅನಿವಾರ್ಯ. ದಯವಿಟ್ಟು ಪೇಯ ಕುಡಿಯಿರಿ, ಮಾಸ್ಕ್ ಧರಿಸಿ. ಇದು ನಿಮ್ಮನ್ನು ಸುರಕ್ಷಿತವಾಗಿ ಇರಲಿಸಲಿದೆ ಎಂದು ಮದುವೆ ಆಯೋಜಿಸಿದ್ದ ಶರತ್ ಲಾಲ್ ಚೌರಾಸಿಯಾ ಅವರು ಅಭಿಪ್ರಾಯಪಡುತ್ತಾರೆ.

ಅತಿಥಿಗಳಿಂದಲೂ ಈ ಕ್ರಮಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಪ್ರತಿಯೊಬ್ಬರೂ ಇಂದು ತಮ್ಮ ಸುರಕ್ಷತೆ ಕುರಿತು ಹೆಚ್ಚು ಗಮನ ಕೊಡುವಂತಾಗಿದೆ. ವಾರಾಣಸಿಯಲ್ಲಿ ಹೆಚ್ಚಿನ ಪ್ರಕರಣಗಳು ವರದಿ ಆಗುತ್ತಿದ್ದು, ಪ್ರತಿಯೊಬ್ಬರೂ ಮುನ್ನೆಚ್ಚರಿಕೆ ವಹಿಸಬೇಕಾಗಿದೆ ಎಂದು ಅವರು ಹೇಳಿದರು.

ಮದುವೆ ಸಮಾರಂಭಗಳಲ್ಲಿ ಹಿಂದಿನಂತೆ ಅತಿಥಿಗಳ ನೃತ್ಯ ಮಾಡಬಹುದು. ಆದರೆ, ಅಂತರ ಕಾಯ್ದುಕೊಳ್ಳುವುದು ಅಗತ್ಯ ಎಂದು ಅವರು ಅಭಿಪ್ರಾಯಪಟ್ಟರು.

ತೇಜ್‌ಪಾಲ್ ಪ್ರಕರಣದ ತೀರ್ಪು ಮೇ 12ಕ್ಕೆ

ಪಣಜಿ (ಪಿಟಿಐ): ತೆಹಲ್ಕಾ ನಿಯತಕಾಲಿಕೆಯ ಮಾಜಿ ಪ್ರಧಾನ ಸಂಪಾದಕ ತರುಣ್ ತೇಜ್‌ಪಾಲ್ ವಿರುದ್ಧದ ಅತ್ಯಾಚಾರ ಪ್ರಕರಣದ ತೀರ್ಪನ್ನು ಮೇ 12ರಂದು ಪ್ರಕಟಿಸುವುದಾಗಿ ಉತ್ತರ ಗೋವಾದ ಮಾಪುಸಾದ ಸೆಷನ್ಸ್ ನ್ಯಾಯಾಲಯ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

27-4-2021

ಜಾವಾ 70/80(ಹೊಸ)	10200-10300
ಜಾವಾ 80/90(ಹೊಸ)	9450-9550
ದಪ್ಪ ಮಧ್ಯಪ್ರದೇಶ(ಹೊಸ)	9950-10050
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1425 (1395)
ಪಾಮ್ ವಾರದ ಡೆಲಿವರಿ	1298 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1650)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,100 (47,300)
ಬೆಳ್ಳಿ ಕೆ.ಜಿ 68,800 (68,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಂಕ್ಷಿಪ್ತ ಸುದ್ದಿ

ಕೋವಿಡ್ ರೋಗಿಗಳಿಗೆ ಟೆಲಿಮೆಡಿಸಿನ್ ಸಹಾಯವಾಣಿ

ವಾಷಿಂಗ್ಟನ್ (ಪಿಟಿಐ): ಕೊರೊನಾ ಸೋಂಕಿತರಿಗೆ ಮನೆಯಲ್ಲೇ ಉಚಿತ ಚಿಕಿತ್ಸೆ ನೀಡುವುದಕ್ಕಾಗಿ ಇಲ್ಲಿನ ಬಿಹಾರ ಮತ್ತು ಜಾರ್ಖಂಡ್ ಮೂಲದ ಭಾರತೀಯ – ಅಮೆರಿಕನ್ ವೈದ್ಯರ ಸಂಘಟನೆಯೊಂದು ಉಚಿತ ಟೆಲಿಮೆಡಿಸಿನ್ ಸಹಾಯವಾಣಿಯನ್ನು ಪ್ರಾರಂಭಿಸಿದೆ.

ಬಿಹಾರ ಮತ್ತು ಜಾರ್ಖಂಡ್ ಅಸೋಸಿಯೇಷನ್ ಆಫ್ ನಾರ್ತ್ ಅಮೆರಿಕ (ಬಿಜೆಎಎನ್‌ಎ) ಸಂಘಟನೆ ಈ ಉಚಿತ ವೈದ್ಯಕೀಯ ಸೇವೆಗೆ ಮುಂದಾಗಿದೆ.

ಬಿಜೆಎಎನ್‌ಎ ಸಂಘಟನೆಯ ಅಧ್ಯಕ್ಷ ಡಾ.ಅವಿನಾಶ್ ಗುಪ್ತಾ ಮತ್ತು ಹಲವು ಭಾರತೀಯ-ಅಮೆರಿಕನ್ ವೈದ್ಯರ ನೇತೃತ್ವದಲ್ಲಿ ಅಂತರ್ಜಾಲ ಮತ್ತು ಮೊಬೈಲ್ ಅಪ್ಲಿಕೇಷನ್‌ಗಳನ್ನು ಬಳಸಿಕೊಂಡು ರೋಗಿಗಳಿಗೆ ಟೆಲಿಮೆಡಿಸಿನ್ ಮೂಲಕ ಚಿಕಿತ್ಸೆ ನೀಡಲು ಮುಂದಾಗಿದ್ದಾರೆ.

ಸಂಸದೆ ಪ್ರಜ್ಞಾಸಿಂಗ್ ಹುಡುಕಿಕೊಟ್ಟರೆ ಬಹುಮಾನ: ಕಾಂಗ್ರೆಸ್

ಭೋಪಾಲ್: 'ಮಧ್ಯಪ್ರದೇಶದ ಭೋಪಾಲ್ ಕ್ಷೇತ್ರದ ಬಿಜೆಪಿ ಸಂಸದೆ ಪ್ರಜ್ಞಾಸಿಂಗ್ ಠಾಕೂರ್ 'ನಾಪತ್ತೆ'ಯಾಗಿದ್ದಾರೆ. ಅವರನ್ನು ಹುಡುಕಿಕೊಟ್ಟವರಿಗೆ ₹10,000 ಬಹುಮಾನ ನೀಡಲಾಗುವುದು' ಎಂದು ರಾಜ್ಯದ ಕಾಂಗ್ರೆಸ್ ಮುಖಂಡರೊಬ್ಬರು ಹೇಳಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ರಾಜ್ಯ ಕಾಂಗ್ರೆಸ್ ಘಟಕದ ಪ್ರಧಾನ ಕಾರ್ಯದರ್ಶಿ ವಕ್ತಾರ ರವಿ ಸಕ್ಸೇನಾ, 'ಭೋಪಾಲ್ ಕ್ಷೇತ್ರದಲ್ಲಿ ಅತ್ಯಧಿಕ ಕೋವಿಡ್ ಪ್ರಕರಣಗಳು ದಾಖಲಾಗಿವೆ. ರೋಗಿಗಳು ಸೌಲಭ್ಯ, ಚಿಕಿತ್ಸೆಗಾಗಿ ಆಸ್ಪತ್ರೆಯಿಂದ ಆಸ್ಪತ್ರೆಗೆ ಎಡತಾಕುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸಂಸದೆ ನಾಪತ್ತೆಯಾಗಿದ್ದಾರೆ. ಅವರನ್ನು ಪತ್ತೆ ಮಾಡಿಕೊಟ್ಟವರಿಗೆ ಬಹುಮಾನ ನೀಡಲಾಗುವುದು ಎಂದಿದ್ದಾರೆ.

'ಅವರನ್ನು ಅನಾರೋಗ್ಯದಿಂದಾಗಿ ಮುಂಬೈಗೆ ಕರೆದೊಯ್ದಿರುವುದು ಗೊತ್ತಿರುವ ಸಂಗತಿ. ಕಾಂಗ್ರೆಸ್ ಮುಖಂಡರ ಹೇಳಿಕೆ ಈ ಪಕ್ಷ ಸೂಕ್ಷ್ಮತೆ ಕಳೆದುಕೊಂಡಿರುವುದನ್ನು ತೋರಿಸುತ್ತದೆ' ಎಂದು ರಾಜ್ಯ ಬಿಜೆಪಿ ಕಾರ್ಯದರ್ಶಿ ರಜನೀಶ್ ಅಗರ್‌ವಾಲ್ ತಿರುಗೇಟು ನೀಡಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಿಂದಲೇ ಕಂಪ್ಯೂಟರ್ ಆಫ್‌ಲೈನ್ ಡೇಟಾ ಎಂಟ್ರಿ ಕೆಲಸ ಮಾಡಿ ಗಳಿಸಿ ವಾರಕ್ಕೆ 3000/- ವಯಸ್ಸಿನ ಮಿತಿಯಿಲ್ಲ 9902603707, 9686115054

ಕನ್ನಡ ಮತ್ತು ಇಂಗ್ಲಿಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲಿಯೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆ ಮಹಿಳೆಯರು ಹೋಂನರ್ಸ್‌ಗಳು, ಹುಡುಗಿಯರು ಬೇಕಾಗಿದ್ದಾರೆ. ಊಟ ವಸತಿಯಿದೆ. 10,000-15,000. 8951315839, 9880545002

Hospital & Medical Jobs

REQUIRED NURSES
Urgently:Male and Female For COVID DUTY in Bangalore, Hyderabad, Pune and Mumbai, Salary-30,000 to 50,000 Experience:0 to10 years (Gap accepted) for more details: careers@majhealthcare.in, Contact: 9606221218, 9606347575, 6364557575, 7022399993

Wanted

ಭಾರತದ ಪ್ರತಿಷ್ಠಿತ ಕಂಪನಿಗೆ ನಿವೃತ್ತರು, ಮಹಿಳೆಯರು, ಪದವೀಧರರು, 10ನೇ ತರಗತಿ ಪಾಸಾದ, 2ನೇಯ ಆದಾಯ ಬಯಸುವವರು ಅರ್ಜಿ 9066001122/83100633 66

ವ್ಯಾಪಾರ

Business to Business

Hotel & Restaurant

BUSINESS PARTNER
Required, 4 Lakhs Investment, Daily Attractive Income (Nonveg Hotel). Contact: 8892501007/9606701007

ಭವಿಷ್ಯ

Astrology

★||ಕೊಳ್ಳೇಗಾಲದ ಪ್ರಖ್ಯಾತ ಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೇಣ ಸಿದ್ಧಾಂತ ತಪ್ಪಿದ್ದು ಸ್ತ್ರೀ ಮೋಡಿ, ಪುರುಷ ಮೋಡಿಗಾರರು, ಮೇಣ ಕೃಷ್ಣಪ್ಪ. 9880877747

★ವಶೀಕರಣ ಸ್ಪೆಶಲಿಸ್ಟ್★ ಗಂಡ ಹೆಂಡತಿ ಸಮಸ್ಯೆ, ಸ್ತ್ರೀಪುರುಷ ವಶೀಕರಣ, 200ವರ್ಷಗಳ ಇತಿಹಾಸ, 25ಸಾವಿರ ಜನರಿಗೆ ಸಮಾಧಾನ,ಯಾವುದೇ ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ.7829724990

★ವಶೀಕರಣ ಸ್ಪೆಶಲಿಸ್ಟ್★ ಜನವಶೀಕರಣ, ಧನವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ನಾವುದೇ ಕಠಿಣ ಸಮಸ್ಯೆಗಳಿಗೆ ಫೋನಿನಲ್ಲೇ ಪರಿಹಾರ. ಮಂಜುನಾಥ ಗುರೂಜಿ 9886999747

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೇ ಎಂಬುದನ್ನು ಓದುಗರು ಪರಿಶೀಲಿಸಿಕೊಳ್ಳಬೇಕು. ಜಾಹೀರಾತುಗಳಲ್ಲಿನ ಮಾಹಿತಿಗೆ ಪತ್ರಿಕೆ ಜವಾಬ್ದಾರಿಯಲ್ಲ. ಜಾಹೀರಾತು ವ್ಯವಹಾರಕ್ಕೆ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ಹೊಣೆಯಲ್ಲ.

Classifieds
DH ಪ್ರಜಾವಾಣಿ Classifieds
Book Your Classifieds Ads
Online Log in to dhclassifieds.com
For More Details Call
9880856233 • 9886213331
Email: Santhoshkumar@deccanherald.co.in

ಸಂಕ್ಷಿಪ್ತ ಸುದ್ದಿ

ಒಂದೇ ಆಂಬುಲೆನ್ಸ್‌ನಲ್ಲಿ 22 ಶವ ಸಾಗಾಟ !



ಔರಂಗಬಾದ್ (ಪಿಟಿಐ): ಮಹಾರಾಷ್ಟ್ರದ ಬೀಡ್ ನಗರದಲ್ಲಿ ಭಾನುವಾರ ಕೋವಿಡ್‌ನಿಂದ ಮೃತಪಟ್ಟ 22 ಮಂದಿಯ ಮೃತ ದೇಹಗಳನ್ನು ಒಂದೇ ಆಂಬುಲೆನ್ಸ್‌ನಲ್ಲಿ ಚಿತಾಗಾರಕ್ಕೆ ಸಾಗಿಸಿರುವುದು ಚರ್ಚೆಗೆ ಕಾರಣವಾಗಿದೆ.

ಈ ಘಟನೆಗೆ ಪ್ರತಿಕ್ರಿಯಿಸಿರುವ ಜಿಲ್ಲಾಡಳಿತ 'ವೈದ್ಯಕೀಯ ಸಾರಿಗೆ ವಾಹನಗಳ ಕೊರತೆಯೇ ಇದಕ್ಕೆ ಕಾರಣ' ಎಂದು ಹೇಳಿದೆ.

ಬೀಡ್ ನಗರದ ಅಂಬಾಜೋಗಾಯಿಯಲ್ಲಿರುವ ಸ್ವಾಮಿ ರಮಾನಂದ ತೀರ್ಥ ಗ್ರಾಮೀಣ ಸರ್ಕಾರಿ ವೈದ್ಯಕೀಯ ಕಾಲೇಜಿನ ಶವಾಗಾರದಲ್ಲಿ ಇಡಲಾಗಿದ್ದ ಕೋವಿಡ್‌ನಿಂದ ಮೃತಪಟ್ಟವರ ದೇಹಗಳನ್ನು ಭಾನುವಾರ ಅಂತ್ಯಕ್ರಿಯೆಗಾಗಿ ಚಿತಾಗಾರಕ್ಕೆ ಸಾಗಿಸುವ ವೇಳೆ ಈ ಘಟನೆ ನಡೆದಿದೆ.

ಜಮ್ಮು: ಕರ್ನಾಟಕದ ಯೋಧ ಆತ್ಮಹತ್ಯೆ

ಬನಿಹಾಲ್/ಜಮ್ಮು: 'ಜಮ್ಮು ಮತ್ತು ಕಾಶ್ಮೀರದ ರಾಮಬನ್ ಜಿಲ್ಲೆಯ ಸೇನಾ ಶಿಬಿರದಲ್ಲಿ ಕರ್ನಾಟಕ ಮೂಲದ ಯೋಧರೊಬ್ಬರು ತನ್ನ ಸರ್ವೀಸ್ ರೈಫಲ್‌ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮಂಗಳವಾರ ನಸುಕಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತ ಯೋಧನನ್ನು ಕರ್ನಾಟಕದ ಅಸಂಗೆಪ್ಪ ಮಾದರ (28) ಎಂದು ಗುರುತಿಸಲಾಗಿದೆ. ಅವರನ್ನು ಬನಿಹಾಲ್‌ನ ಆರ್‌–ಸೆಂಟರ್ ಕ್ಯಾಂಪ್‌ನಲ್ಲಿ ನಿಯೋಜಿಸಲಾಗಿತ್ತು' ಎಂದು ಹೇಳಿದರು.

ಕೋವಿಡ್‌ನಿಂದ ನರೇಂದ್ರ ಮೋದಿ ಚಿಕ್ಕಮ್ಮ ಸಾವು

ಅಹಮದಾಬಾದ್: ಕೋವಿಡ್–19ಗೆ ತುತ್ತಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರ ಚಿಕ್ಕಮ್ಮ ನರ್ಮದಾ ಬೆನ್ ಮೋದಿ (80) ಮಂಗಳವಾರ ಮೃತಪಟ್ಟಿದ್ದಾರೆ.

'ಕೊರೊನಾ ಸೋಂಕಿನಿಂದಾಗಿ ಚಿಕ್ಕಮ್ಮ ನರ್ಮದಾ ಬೆನ್ ಅವರ ಆರೋಗ್ಯ ಸ್ಥಿತಿ ಹದಗೆಟ್ಟಿದ್ದರಿಂದ ಅವರನ್ನು ಹತ್ತು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಕೊನೆಯುಸಿರೆಳೆದಿದ್ದಾರೆ' ಎಂದು ಪ್ರಧಾನ ಮಂತ್ರಿಯ ಕಿರಿಯ ಸಹೋದರ ಪ್ರಹ್ಲಾದ್ ಮೋದಿ ಹೇಳಿದ್ದಾರೆ.

ಕೋವಿಡ್ 19: ರಾಷ್ಟ್ರ ರಾಜಧಾನಿಯಲ್ಲಿ ಸಾವಿನ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಳ

ಅಂತ್ಯಸಂಸ್ಕಾರಕ್ಕಾಗಿ 20 ತಾಸು ಸರದಿ!

• ಅನ್ನಪೂರ್ಣಾ ಸಿಂಗ್

ನವದೆಹಲಿ: ರಾಷ್ಟ್ರದ ರಾಜಧಾನಿ ನವದೆಹಲಿಯಲ್ಲಿ ಕೋವಿಡ್–19 ನಿಂದಾಗಿ ಸಾವಿಗೀಡಾಗುತ್ತಿರುವವ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಮೃತರ ಅಂತ್ಯಕ್ರಿಯೆಗಾಗಿ ಸಂಬಂಧಿಕರು 20 ತಾಸುಗಳ ಕಾಲ ಸರದಿಯಲ್ಲಿ ನಿಲ್ಲುವ ಸ್ಥಿತಿ ಎದುರಾಗಿದೆ.

ಕೋವಿಡ್–19 ದೆಹಲಿಯ ಚೈತನ್ಯ ಮತ್ತು ಆತ್ಮವನ್ನೇ ಅಲುಗಾಡಿಸಿದೆ. ಇಲ್ಲಿನ ಸ್ಮಶಾನಗಳಲ್ಲಿ ಪ್ರವಾಹದೋಪಾದಿಯಲ್ಲಿ ಮೃತ ಶರೀರಗಳು ಬರುತ್ತಿದ್ದು, ಅವುಗಳ ಅಂತ್ಯಸಂಸ್ಕಾರವನ್ನು ನಡೆಸುವುದೇ ದೊಡ್ಡ ಸವಾಲಾಗಿದೆ.

'ನನ್ನ ಜೀವನದಲ್ಲಿ ಹಿಂದೆಂದೂ ಇಂತಹ ಕೆಟ್ಟ ಪರಿಸ್ಥಿತಿಯನ್ನು ನಾನು ನೋಡಿಲ್ಲ. ಜನರು ತಮ್ಮ ಪ್ರೀತಿ ಪಾತ್ರರ ಮೃತದೇಹಗಳೊಂದಿಗೆ ಅಲೆದಾಡಿ, ಸರದಿ ಸಾಲಿನಲ್ಲಿ ನಿಲ್ಲುವ ಸ್ಥಿತಿ ಎದುರಾಗಿದೆ. ದೆಹಲಿಯ ಬಹುತೇಕ ಎಲ್ಲಾ ಶವಾಗಾರಗಳು ಮೃತದೇಹಗಳಿಂದ ತುಂಬಿಹೋಗಿವೆ' ಎಂದು ಮ್ಯಾಕ್ಸ್ ಫರ್ನಲ್ಸ್‌ನ ಮಾಲೀಕರಾದ ವಿನೀತಾ ಮ್ಯಾಕ್ಸಿ ವಿಷಾದ ವ್ಯಕ್ತಪಡಿಸುತ್ತಾರೆ.

ಅಧಿಕೃತ ಮಾಹಿತಿಗಳ ಪ್ರಕಾರ ದೆಹಲಿಯಲ್ಲಿ ಏಪ್ರಿಲ್‌ನಲ್ಲಿ 3,601 ಮಂದಿ ಸಾವನ್ನಪ್ಪಿದ್ದಾರೆ. ಈ ಪೈಕಿ ಕಳೆದ ಏಳು ದಿನಗಳಲ್ಲೇ 2,267 ಮಂದಿ ಕೋವಿಡ್–19ನಿಂದಾಗಿ ಸಾವನ್ನಪ್ಪಿದ್ದಾರೆ. ಫೆಬ್ರುವರಿಯಲ್ಲಿ 57, ಮಾರ್ಚ್ 117 ಮಂದಿ ಸಾವನ್ನಪ್ಪಿದ್ದರು.

ದೆಹಲಿಯ ಸುಭಾಷ್‌ನಗರ ಸ್ಮಶಾನದ ಮುಂದೆ ಅಂತ್ಯಸಂಸ್ಕಾರಕ್ಕಾಗಿ ಶವಗಳನ್ನು ಸಾಲಾಗಿ ಮಂಗಳವಾರ ಇರಿಸಲಾಗಿತ್ತು – ಪಿಟಿಐ ಚಿತ್ರ

'ಮೃತದೇಹಗಳ ವೈಜ್ಞಾನಿಕ ವಿಲೇವಾರಿಗೆ ಸಿಬ್ಬಂದಿ ಒದಗಿಸಲಾಗದ ಸ್ಥಿತಿ'

ನಿಯಮಗಳ ಪ್ರಕಾರ, 'ಆಸ್ಪತ್ರೆಯಲ್ಲಿ ಕೋವಿಡ್–19ನಿಂದ ಯಾರಾದರೂ ಸತ್ತರೆ ಜಿಲ್ಲಾಡಳಿತವು ಶವದ ಅಂತ್ಯಸಂಸ್ಕಾರಕ್ಕಾಗಿ ವ್ಯಾನ್ ವ್ಯವಸ್ಥೆ ಮಾಡಬೇಕು. ಮೃತದೇಹವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲು ಆಸ್ಪತ್ರೆಯ ಸಿಬ್ಬಂದಿ ನಿಯೋಜಿಸಬೇಕು. ಆದರೆ, ಈಗಿನ ಸ್ಥಿತಿಯಲ್ಲಿ ಆಸ್ಪತ್ರೆಗಳಿಗೆ ಈ ರೀತಿ ಸಿಬ್ಬಂದಿ ಒದಗಿಸುವುದು ಅಸಾಧ್ಯ ಹಾಗಾಗಿ, ಸಂಬಂಧಿಕರು ತಮ್ಮ ವಾಹನಗಳಲ್ಲೇ ಶವವನ್ನು ತೆಗೆದುಕೊಂಡು ಹೋಗಿ ಅಂತ್ಯ ಸಂಸ್ಕಾರ ಮಾಡುತ್ತಿದ್ದಾರೆ'ಎಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡುತ್ತಾರೆ.

'ಸ್ಮಶಾನದ ಹೊರಗೆ ಆಂಬುಲೆನ್ಸ್‌ಗಳು, ಕಾರುಗಳು ಪಾರ್ಕಿಂಗ್ ಸ್ಥಳಕ್ಕಾಗಿ ಪರದಾಡಿದರೆ, ಸ್ಮಶಾನದೊಳಗೆ ಹೆಣ ಸುಡಲು ಸರದಿಗಾಗಿ ಕಾಯುವ ಸ್ಥಿತಿ. ಚಿತೆಯಲ್ಲಿನ ಕಟ್ಟಿಗೆ ತುಂಡುಗಳು ಸೀಳಿ ಶಬ್ದ ಹೊರಡಿಸುತ್ತಿರುವ ನಡುವೆಯೇ ಸ್ಮಶಾನದ ಸಿಬ್ಬಂದಿ ಸರದಿಯಲ್ಲಿ ನಿಂತಿರುವವರಿಗೆ ನಿಮ್ಮ ಹೆಣಗಳನ್ನು ಸಿದ್ಧಪಡಿಸಿಕೊಳ್ಳಿ' ಎಂದು ಸೂಚನೆ ನೀಡುತ್ತಾರೆ.

ಕೋವಿಡ್ ಸೋಂಕಿಲ್ಲದೆ ಮರಣ ಹೊಂದಿದವರ ಸಂಬಂಧಿಕರ ರೋದನವೂ ಕಡಿಮೆಯೇನಿಲ್ಲ. ಒಂದೆಡೆ ಸಾಂಕ್ರಾಮಿಕ ರೋಗದಿಂದ ಜನರು ಸಾವನ್ನಪ್ಪುತ್ತಿದ್ದರೆ, ಮತ್ತೊಂದೆಡೆ ಸಹಜವಾಗಿಯೋ ಅಥವಾ ಇತರ ಕಾಯಿಲೆಗಳಿಂದಲೋ ಮರಣಕ್ಕೀಡಾಗುತ್ತಿರುವವರ ಅಂತ್ಯಸಂಸ್ಕಾರಕ್ಕೂ ಪಡಿಪಾಟಲು ಪಡುವ ಸ್ಥಿತಿ ದೆಹಲಿಯ ಜನರಿಗೆ ಎದುರಾಗಿದೆ.

ಪಶ್ಚಿಮ ದೆಹಲಿಯ ಅಶೋಕ ನಗರದ ಯುವ ಉದ್ಯಮಿ ಅಮನ್ ಅರೋರಾ ಅವರ ತಂದೆ ಎಂ.ಎಲ್. ಅರೋರಾ ಅವರಿಗೆ ಸೋಮವಾರ ಮಧ್ಯಾಹ್ನ ಹೃದಯಾಘಾತವಾಗಿತ್ತು. ತಕ್ಷಣವೇ ಖಾಸಗಿ ಆಸ್ಪತ್ರೆಗೆ ಅವರನ್ನು ಕರೆದೊಯ್ದು ಚಿಕಿತ್ಸೆ ಕೊಡಿಸಲು ಪ್ರಯತ್ನಿಸಿದಾಗ ಆಸ್ಪತ್ರೆಯವರು ಕೋವಿಡ್ ನೆಗೆಟಿವ್ ವರದಿ ತರಲು ಸೂಚಿಸಿದರು.

'ತಕ್ಷಣವೇ ಚಿಕಿತ್ಸೆ ಸಿಗದೇ ನನ್ನ ತಂದೆಯನ್ನು ಕಳೆದುಕೊಳ್ಳಬೇಕಾಯಿತು. ತಂದೆಯ ಅಂತ್ಯಸಂಸ್ಕಾರ ಮಾಡಲು ಸುಭಾಷ್ ನಗರದ ಸ್ಮಶಾನಕ್ಕೆ ತೆರಳಿದರೆ ಅಲ್ಲಿ ಮಂಗಳವಾರ ಬೆಳಿಗ್ಗೆಯ ತನಕ ಕಾಯಬೇಕು ಎಂದು ಅಲ್ಲಿನ ಸಿಬ್ಬಂದಿ ತಿಳಿಸಿದರು' ಎಂದು ಅಮನ್ ಅರೋರಾ ಬೇಸರಿಸಿದರು.

ಅಲ್ಲಿನ ಸಿಬ್ಬಂದಿಗೆ ಮನವಿ ಮಾಡುವ ಬದಲು ಸರದಿಯಲ್ಲಿ ಕಾಯುವುದು ಅನಿವಾರ್ಯ ಎಂದು ಮನಗಂಡ ಬಳಿಕ ಅಮನ್, ತಂದೆಯ ಮೃತಶರೀರ ಕೆಡದಂತೆ ಇಡಲು ರೆಫ್ರಿಜರೇಟರ್ ಹೊಂದಿಸಿದರು.

'ಸ್ಥಳಾವಕಾಶವಿಲ್ಲದಿದ್ದಾಗ ನಾನು ಏನು ಮಾಡಬಹುದಿತ್ತು? ನಾವು ಮೃತ ದೇಹವನ್ನು ಬಾಡಿಗೆ ಫ್ರಿಜರ್‌ನಲ್ಲಿಟ್ಟುಕೊಂಡು ಮಂಗಳವಾರ ಮುಂಜಾನೆ ಇಲ್ಲಿಗೆ ಬಂದಿದ್ದೇವೆ' ಎಂದು ಅಮನ್ ತಿಳಿಸಿದರು.

'ಆಸ್ಪತ್ರೆಗಳಲ್ಲಿ ನಿಮಗೆ ರೋಗಿಗಳಿಗೆ ಆಮ್ಲಜನಕ ಒದಗಿಸಲು ಸಾಧ್ಯವಾಗದಿದ್ದರೆ, ಕನಿಷ್ಠ ಶವಾಗಾರದಲ್ಲಾದರೂ ಸ್ವಲ್ಪ ಜಾಗ ಒದಗಿಸಿ. ಮೃತರು ಈ ಜಗತ್ತಿನಿಂದ ಆರಾಮವಾಗಿ ನಿರ್ಗಮಿಸಲು ಅನುಕೂಲ ಮಾಡಿ' ಎಂದು ಅಂತ್ಯಸಂಸ್ಕಾರಕ್ಕೆ ಬಂದಿದ್ದ ದೆಹಲಿಯ ಮನ್ಮೀತ್ ಹೇಳಿದರು.

ಹೆಚ್ಚು ಮಾರಕ ಎಂಬುದಕ್ಕೆ ಇಲ್ಲ ಪುರಾವೆ: ತಜ್ಞರ ಅಭಿಮತ

ವೈರಸ್‌ನ ಭಾರತದ ತಳಿಗೆ ವೇಗ ಹೆಚ್ಚು

ನವದೆಹಲಿ (ಪಿಟಿಐ): ಕೊರೊನಾ ವೈರಸ್‌ನ ಭಾರತದ ರೂಪಾಂತರ ತಳಿಯು ಬ್ರಿಟನ್‌ನ ರೂಪಾಂತರ ತಳಿಯಷ್ಟೇ ವೇಗದ ಪ್ರಸರಣ ಗುಣ ಹೊಂದಿದೆ. ಆದರೆ, ಇದು ಮೂಲ ವೈರಸ್‌ಗಿಂತ ಹೆಚ್ಚು ಮಾರಕ ಎಂಬುದಕ್ಕೆ ಪುರಾವೆಗಳಿಲ್ಲ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಬಿ.1.617 ಅಥವಾ ಡಬಲ್ ಮ್ಯೂಟಂಟ್ ಅಥವಾ ಭಾರತ ರೂಪಾಂತರ ತಳಿ ಎಂದು ಕರೆಸಿಕೊಳ್ಳುವ ವೈರಸ್, ಮಹಾರಾಷ್ಟ್ರ ಹಾಗೂ ದೆಹಲಿಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ವ್ಯಾಪಿಸಿದೆ. ಈ ರಾಜ್ಯಗಳು ಕೋವಿಡ್ ಎರಡನೇ ಅಲೆಯ ಹೊಡೆತಕ್ಕೆ ನಲುಗಿವೆ.

ಮಹಾರಾಷ್ಟ್ರದ ಶೇ 50ಕ್ಕೂ ಹೆಚ್ಚು ತಪಾಸಣಾ ಮಾದರಿಗಳಲ್ಲಿ ಬಿ.1.617 ತಳಿ ಪತ್ತೆಯಾಗಿದೆ. ಆದರೆ ಬ್ರಿಟನ್ ರೂಪಾಂತರ ತಳಿಯ ಇರುವಿಕೆ ಪ್ರಮಾಣ ಶೇ 28ರಷ್ಟಿದೆ ಎಂದು ರೋಗ ನಿಯಂತ್ರಣ ರಾಷ್ಟ್ರೀಯ ಕೇಂದ್ರದ ನಿರ್ದೇಶಕ ಸುಜೀತ್ ಸಿಂಗ್ ಅವರು 'ಜೆನೋಮ್ ಸೀಕ್ವೆನ್ಸಿಂಗ್' ಕುರಿತು ಇತ್ತೀಚೆಗೆ ನಡೆದ ವೆಬಿನಾರ್‌ನಲ್ಲಿ ಅಭಿಪ್ರಾಯಪಟ್ಟಿದ್ದರು.

> **ಬಿ.1.617 ಮಾರಕ ಎಂಬುದಕ್ಕೆ ಪುರಾವೆಗಳಿಲ್ಲ. ಈ ರೂಪಾಂತರಗಳು ಲಸಿಕೆ ಅಸ್ತ್ರದಿಂದ ತಪ್ಪಿಸಿಕೊಳ್ಳುವುದಿಲ್ಲ. ಲಭ್ಯವಿರುವ ಲಸಿಕೆಗಳು ಪರಿಣಾಮಕಾರಿ**
> **ಸೌಮಿತ್ರಾ ದಾಸ್,** ಎನ್‌ಸಿಬಿಎಸ್ ನಿರ್ದೇಶಕ

ಕಳೆದ ಕೆಲವು ವಾರಗಳಿಂದ ದೆಹಲಿ ಮತ್ತು ಮಹಾರಾಷ್ಟ್ರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಸ್ಫೋಟಗೊಂಡಿದ್ದು, ಆರೋಗ್ಯ ಕ್ಷೇತ್ರವನ್ನು ದುರ್ಬಲಗೊಳಿಸಿದೆ. ದೆಹಲಿಯ ಹಲವಾರು ಆಸ್ಪತ್ರೆಗಳು ವೈದ್ಯಕೀಯ ಆಮ್ಲಜನಕದ ತೀವ್ರ ಕೊರತೆ ಎದುರಿಸಿವೆ. ರೋಗಿಗಳ ಜೀವ ಉಳಿಸಲು ಸರ್ಕಾರ ಪರದಾಡುತ್ತಿದೆ.

'ನಮಗೆ ತಿಳಿದಂತೆ, ಬ್ರಿಟನ್ ರೂಪಾಂತರ ತಳಿ ಅಥವಾ ಬಿ.1.617 ತಳಿಗಳು ತೀವ್ರ ಅನಾರೋಗ್ಯ ಅಥವಾ ಸಾವಿನ ತೀವ್ರತೆಗೆ ತಳ್ಳುವುದಿಲ್ಲ. ಬ್ರಿಟನ್ ತಳಿಯು ಹೆಚ್ಚಿನ ಪ್ರಸರಣ ಸಾಮರ್ಥ್ಯವನ್ನು ಹೊಂದಿದೆ ಎಂದು ಸಾಬೀತಾಗಿದೆ. ಬಿ.1.617 ತಳಿಯ ಪ್ರಸರಣ ಗುಣವೂ ಹೆಚ್ಚಿರಬಹುದು' ಎಂದು ಇನ್‌ಸ್ಟಿಟ್ಯೂಟ್ ಆಫ್ ಜೆನೋಮಿಕ್ಸ್ ಅಂಡ್ ಇಂಟಿಗ್ರೇಟಿವ್ ಬಯಾಲಜಿ (ಐಜಿಐಬಿ) ನಿರ್ದೇಶಕ ಅನುರಾಗ್ ಅಗರ್‌ವಾಲ್ ಅಭಿಪ್ರಾಯಪಟ್ಟಿದ್ದಾರೆ.

ಬಿ.1.617 ರೂಪಾಂತರವು ಹೆಚ್ಚು ಪ್ರಸರಣ ಸಾಮರ್ಥ್ಯವನ್ನು ಹೊಂದಿದೆ ಎಂದು ನಿಖರವಾಗಿ ಸಾಬೀತುಪಡಿಸುವ ಅಧ್ಯಯನಗಳು ಪೂರ್ಣಗೊಂಡಿಲ್ಲ ಎಂದು ಅವರು ಹೇಳಿದ್ದಾರೆ.

ಕಳೆದ ವರ್ಷದಲ್ಲಿ ಕಾಣಿಸಿಕೊಂಡ ಮೊದಲ ಅಲೆಗೆ ಹೋಲಿಸಿದರೆ ರಾಜ್ಯದಲ್ಲಿ ಹೆಚ್ಚಿದ ಸಾವು ಉಂಟಾಗಿವೆ ಎಂಬ ಕುರಿತು ಮಾತನಾಡಿದ ಅವರು, 'ಈ ರೂಪಾಂತರ ತಳಿಯು ಯಾವ ಪ್ರಮಾಣದಲ್ಲಿ ಹರಡುತ್ತದೆ ಎಂಬುದಕ್ಕೂ ಸಾವಿನ ಪ್ರಮಾಣಕ್ಕೂ ನೇರ ಸಂಬಂಧವಿದೆ. ಜನರು ಎಷ್ಟು ಹೆಚ್ಚು ಸೋಂಕಿಗೆ ಒಳಗಾಗುತ್ತಾರೋ, ಅಷ್ಟೇ ಹೆಚ್ಚು ಸಾವು ಸಂಭವಿಸುತ್ತವೆ' ಎಂದು ಹೇಳಿದ್ದಾರೆ.

ಬಿ.1.617 ರೂಪಾಂತರ ತಳಿ ತಡೆಯುವಲ್ಲಿ ಕೋವಿಶೀಲ್ಡ್ ಲಸಿಕೆ ಪರಿಣಾಮಕಾರಿ ಎಂದು ಸೆಂಟರ್ ಫಾರ್ ಸೆಲ್ಯುಲರ್ ಅಂಡ್ ಮಾಲಿಕ್ಯುಲರ್ ಬಯೊಲಜಿ ತಿಳಿಸಿದೆ.

ಕೋವಿಡ್‌ನಿಂದ ಪತಿ ಸಾವು: ಗಂಗೆಗೆ ಹಾರಿದ ಪತ್ನಿ

ಪ್ರಜಾವಾಣಿ ವಾರ್ತೆ

ಪಟ್ನಾ: ಕೋವಿಡ್–19ನಿಂದ ನಿಧನರಾದ ಪತಿಯ ಅಗಲುವಿಕೆಯನ್ನು ಸಹಿಸಲಾಗದೆ ಪತ್ನಿ ಗಂಗಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮೆಡಿಕಲ್ ಶಾಪ್‌ನಲ್ಲಿ ಕೆಲಸ ಮಾಡುತ್ತಿದ್ದ ಅಜಿತ್ ಕುಮಾರ್ ರಾಯ್ ಅವರು ಕೋವಿಡ್‌ನಿಂದಾಗಿ ಭಾನುವಾರ ರಾತ್ರಿ ನಿಧನ ಹೊಂದಿದ್ದರು. ಅಜಿತ್ ಅವರ ಪತ್ನಿ ಅಂಜುದೇವಿಗೆ ಪತಿಯ ಅಗಲಿಕೆ ತಡೆಯಲಾಗಲಿಲ್ಲ. ಪತಿಯ ಅಂತ್ಯಸಂಸ್ಕಾರ ಮುಗಿದ ಒಂದು ದಿನದ ಬಳಿಕ ಅಂಜುದೇವಿ ಗಂಗಾ ನದಿಗೆ ಹಾರಿ ಸಾವನ್ನಪ್ಪಿದ್ದಾರೆ. ಸೋಮವಾರ ಸಂಜೆ ಅವರ ಶವ ಪತ್ತೆಯಾಗಿದೆ.

ಕೋವಿಡ್‌ನಿಂದಾಗಿ ದಂಪತಿ ಸಾವನ್ನಪ್ಪಿದ ಎರಡನೇ ಪ್ರಕರಣ ಇದಾಗಿದೆ.

ಕೊರೊನಾ ಸಾಂತ್ವನ

'ಧೂಮಪಾನ ಬಿಡಿ, ಪ್ರಾಣಾಯಾಮ ಮಾಡಿ'

ಕೋವಿಡ್ ಹೆಚ್ಚಾಗುತ್ತಿರುವ ಈ ಹೊತ್ತಿನಲ್ಲಿ ಶ್ವಾಸಕೋಶವನ್ನು ಆರೋಗ್ಯಯುತವಾಗಿ ಇಟ್ಟುಕೊಳ್ಳುವುದು ಬಹಳ ಮುಖ್ಯ. ಧೂಮಪಾನದ ಚಟವಿದ್ದವರು ತಕ್ಷಣ ತ್ಯಜಿಸಬೇಕು. ಇಲ್ಲವಾದರೆ, ಶ್ವಾಸಕೋಶ ಸೋಂಕಿಗೆ ತುತ್ತಾಗುವ ಅಪಾಯ ಹೆಚ್ಚಾಗಿರುತ್ತದೆ.

ವಾಕಿಂಗ್ ಅಭ್ಯಾಸ ಇಲ್ಲದವರು ರೂಢಿಸಿಕೊಳ್ಳಿ. ಉಸಿರಾಡಲು ಕಷ್ಟವಾಗದಂತಹ ಮಾಸ್ಕ್ ಧರಿಸಿ, ಗಿಡಮರಗಳು ಹೆಚ್ಚಾಗಿರುವ ಕಡೆ ವಾಕ್ ಮಾಡಿ. ದೀರ್ಘ ಉಸಿರು ಎಳೆದುಕೊಂಡು ಮನಸ್ಸಿನಲ್ಲಿ 1ರಿಂದ 10 ಸಂಖ್ಯೆಯನ್ನು ಎಣಿಸಿದ ಬಳಿಕ ಉಸಿರು ಹೊರಗೆ ಬಿಡುವ ಅಭ್ಯಾಸ ಪಾಲಿಸಿ. ಪ್ರಾಣಾಯಾಮ ಕೂಡ ಶ್ವಾಸಕೋಶ ಬಲಗೊಳ್ಳಲು ಸಹಕಾರಿ. ಒಂದೇ ಭಂಗಿಯಲ್ಲಿ ಹೆಚ್ಚು ಹೊತ್ತು ಮಲಗುವ ಅಭ್ಯಾಸ ಬಿಟ್ಟು, ಆಗಾಗ ಭಂಗಿ ಬದಲಿಸಿ. ಸೋಂಕಿತರು ಹೊಟ್ಟೆ ಕೆಳಗಾಗಿ ಮಲಗಿದರೆ ಒಳಿತು.

ಹೆಚ್ಚು ಮಾಲಿನ್ಯವಿರುವ ಪ್ರದೇಶಗಳಿಗೆ ಹೋಗುವುದು ಬೇಡ. ಕಟ್ಟಿಗೆ ಒಲೆ ಉಪಯೋಗ ಕಡಿಮೆ ಮಾಡಿ. ಜಂಕ್ ಫುಡ್‌ಗಳ ಸೇವನೆ ಬೇಡ. ಹೆಚ್ಚು ಕಫಕ್ಕೆ ಕಾರಣವಾಗುವ ಆಹಾರಗಳಿಂದ ದೂರವಿರಿ. ನಿತ್ಯ ಬಿಸಿನೀರಿನ ಸೇವನೆ ಇರಲಿ, ಅಡುಗೆಯಲ್ಲಿ ಅರಿಶಿನ, ಕರಿಮೆಣಸು ಬಳಕೆ ಇರಲಿ. ದಿನಕ್ಕೆ ಎರಡು ಬಾರಿ ಸ್ಟೀಮ್ ತೆಗೆದುಕೊಳ್ಳಬಹುದು.

ಸೋಂಕಿತರು ಮನೆಯಲ್ಲಿ ಪಲ್ಸ್ ಆಕ್ಸಿಮೀಟರ್ ಇಟ್ಟುಕೊಂಡು, ದಿನಕ್ಕೆ ಮೂರ್ನಾಲ್ಕು ಸಲ ಆಮ್ಲಜನಕ ಪ್ರಮಾಣ ಪರೀಕ್ಷಿಸಿಕೊಳ್ಳಿ. ಮೇಲಿನ ಕ್ರಮಗಳನ್ನು ಪಾಲಿಸಿದರೆ ಶ್ವಾಸಕೋಶವನ್ನು ಆರೋಗ್ಯವಾಗಿ ಇಟ್ಟುಕೊಳ್ಳಬಹುದು. ಆದರೆ, ಕೋವಿಡ್ ಬಾರದಂತೆ ಎಚ್ಚರಿಕೆ ವಹಿಸಬೇಕಾದರೆ, ಮಾಸ್ಕ್ ಧರಿಸಬೇಕು, ಆಗಾಗ ಕೈತೊಳೆಯಬೇಕು, ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು.

ಡಾ.ಶಶಿಕಿರಣ್ ಉಮಾಕಾಂತ್
ಡಾ.ಟಿಎಂಎ ಪೈ ಆಸ್ಪತ್ರೆಯ ಅಧೀಕ್ಷಕ, ಉಡುಪಿ



ದೆಹಲಿ ಸರ್ಕಾರಕ್ಕೆ ಹೈಕೋರ್ಟ್ ಚಾಟಿ

ಕೋವಿಡ್ ನಿರ್ವಹಣೆ ವಿಫಲ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿಯ ಆಮ್ ಆದ್ಮಿ ಪಕ್ಷ (ಎಎಪಿ) ನೇತೃತ್ವದ ಸರ್ಕಾರದ ವಿರುದ್ಧ ಮಂಗಳವಾರ ಚಾಟಿ ಬೀಸಿರುವ ಹೈಕೋರ್ಟ್, 'ನಿಮ್ಮ ಆಡಳಿತ ವ್ಯವಸ್ಥೆ ಸಂಪೂರ್ಣ ವಿಫಲವಾಗಿದೆ. ಆಕ್ಸಿಜನ್ ಸಿಲಿಂಡರ್‌ಗಳು, ಔಷಧಗಳು ರಾಜಧಾನಿಯಲ್ಲಿ ಕಾಳಸಂತೆಯಲ್ಲಿ ಮಾರಾಟವಾಗುತ್ತಿದೆ. ಅದನ್ನು ತಡೆಯಲೂ ಆಗುತ್ತಿಲ್ಲ' ಎಂದು ಹರಿಹಾಯ್ದಿದೆ.

ನ್ಯಾಯಮೂರ್ತಿಗಳಾದ ವಿಪಿನ್ ಸಾಂಘಿ ಮತ್ತು ರೇಖಾ ಪಳ್ಳಿ ಅವರಿದ್ದ ಪೀಠವು, 'ವೈದ್ಯಕೀಯ ಆಕ್ಸಿಜನ್ ಪೂರೈಕೆಗೆ ಸಂಬಂಧಿಸಿದಂತೆ ದೆಹಲಿ ಸರ್ಕಾರದ ಆದೇಶವನ್ನು ಯಾವುದೇ ಪೂರೈಕೆದಾರ ಗಂಭೀರವಾಗಿ ಪರಿಗಣಿಸಿಲ್ಲ ಎಂಬುದು ನಮಗೆ ಸಖೇದಾಶ್ಚರ್ಯ ಮೂಡಿಸಿದೆ' ಎಂದು ಹೇಳಿತು.

ರಾಜಧಾನಿಯಲ್ಲಿ ವಿವಿಧ ಆಸ್ಪತ್ರೆಗಳು ಆಕ್ಸಿಜನ್ ಕೊರತೆ ಎದುರಿಸುತ್ತಿವೆ ಎಂದ ಪೀಠ, ಒಂದು ಹಂತದಲ್ಲಿ, 'ದೆಹಲಿ ಸರ್ಕಾರ ತನ್ನ ಹೊಣೆಗಾರಿಕೆಯನ್ನು ನಿಭಾಯಿಸದಿದ್ದರೆ ಆಡಳಿತವನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವಂತೆ ಕೇಂದ್ರಕ್ಕೆ ಸೂಚಿಸಬೇಕಾಗಬಹುದು' ಎಂದೂ ಹೇಳಿತು.

ಆಕ್ಸಿಜನ್ ಕೊರತೆಯಿಂದ ದೆಹಲಿಯ ಎಲ್ಲ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳಲ್ಲಿ ಆದ ಸಾವುಗಳ ಕುರಿತು ವರದಿ ಸಲ್ಲಿಸಲು ಸರ್ಕಾರಕ್ಕೆ ಪೀಠ ನಿರ್ದೇಶಿಸಿತು. ದೆಹಲಿ ಸರ್ಕಾರ ಪ್ರತಿನಿಧಿಸಿದ್ದ ಹಿರಿಯ ವಕೀಲ ರಾಹುಲ್ ಮೆಹ್ರಾ, 'ಆಕ್ಸಿಜನ್ ಸಿಲಿಂಡರ್‌ಗಳ ವಿತರಕರು ಭಾಗಿಯಾಗಿರುವ ಕಾರಣ ಹೊಸ ವ್ಯವಸ್ಥೆ ರೂಪಿಸಲಾಗುವುದು' ಎಂದು ತಿಳಿಸಿದರು.

ಆಗ, 'ನಮಗೆ ಹೊಸ ವ್ಯವಸ್ಥೆ ಅಗತ್ಯವಿಲ್ಲ. ಆದರೆ, ನಿಮ್ಮ ಆಡಳಿತ ವ್ಯವಸ್ಥೆ ವಿಫಲವಾಗಿದೆ' ಎಂದು ಪೀಠ ಕಟುವಾಗಿ ಹೇಳಿತು. 'ಮೆಹ್ರಾ ಅವರೇ ಮೊದಲು ನಿಮ್ಮ ವ್ಯವಸ್ಥೆ ಸರಿಪಡಿಸಿ. ಆಗದಿದ್ದರೆ ದಯವಿಟ್ಟು ತಿಳಿಸಿ. ತಮ್ಮ ಸುಪರ್ದಿಗೆ ಆಡಳಿತ ತೆಗೆದುಕೊಳ್ಳುವಂತೆ ನಾವು ಕೇಂದ್ರ ಸರ್ಕಾರದ ಅಧಿಕಾರಿಗಳಿಗೆ ತಿಳಿಸುತ್ತೇವೆ' ಎಂದು ಸ್ಪಷ್ಟಪಡಿಸಿತು.

'ಆಕ್ಸಿಜನ್ ಕೊರತೆಯ ಗೊಂದಲ ಬಗೆಹರಿಸಲು ನಿಮಗೆ ಆಗಿಲ್ಲ. ನೀವು ಪರಿಸ್ಥಿತಿ ನಿಭಾಯಿಸುತ್ತಿರುವ ಪರಿ ನಮ್ಮ ಆತ್ಮವಿಶ್ವಾಸವನ್ನೇ ಕದಲಿಸಿದೆ. ನೀವು ಆಡಳಿತದಲ್ಲಿದ್ದೀರಿ. ಹೇಗೆ ಅಧಿಕಾರ ನಡೆಸಬೇಕು ಎಂಬುದು ನಿಮಗೆ ಗೊತ್ತಿರಬೇಕು. ಇಂದಿನ ಸಂದರ್ಭದಲ್ಲಿ ಯಾರೊಬ್ಬರೂ ಜನರ ಮೇಲೆ ಸವಾರಿ ಮಾಡುವಂತಿರಬಾರದು' ಎಂದು ಸೂಚಿಸಿತು.

ಸರ್ಕಾರ ಹೊಸ ವ್ಯವಸ್ಥೆ ರೂಪಿಸುತ್ತಿದೆ. ಆಕ್ಸಿಜನ್ ಪೂರೈಕೆ ಪರಿಸ್ಥಿತಿ ಕುರಿತಂತೆ ಆಸ್ಪತ್ರೆಗಳಿಗೆ 72 ಗಂಟೆ ಮೊದಲೇ ಮಾಹಿತಿ ತಿಳಿಯಲಿದೆ ಎಂದು ಈ ಸಂದರ್ಭದಲ್ಲಿ ಮೆಹ್ರಾ ತಿಳಿಸಿದರು.

ಒಂದು ಹಂತದಲ್ಲಿ ರಿಫಿಲ್ಲರ್ ಕಂಪನಿಗಳ ಕಾರ್ಯವೈಖರಿ ವಿರುದ್ಧವು ಹರಿಹಾಯ್ದ ನ್ಯಾಯಪೀಠ, 'ಈ ಎಲ್ಲ ಘಟಕಗಳನ್ನು ನಿಮ್ಮ ಸುಪರ್ದಿಗೆ ತೆಗೆದುಕೊಳ್ಳಿ. ಇಂದಿನ ಪರಿಸ್ಥಿತಿಯಲ್ಲಿ ಯಾರೊಬ್ಬರೂ ಹದ್ದುಗಳಂತೆ ವರ್ತಿಸುವುದು ನಮಗೆ ಇಷ್ಟವಿಲ್ಲ' ಎಂದು ತಾಕೀತು ಮಾಡಿತು.

ಸರ್ಕಾರ ಕಟ್ಟುನಿಟ್ಟಿನ ಕ್ರಮಜರುಗಿಸಬೇಕು. ಆಕ್ಸಿಜನ್ ಪೂರೈಕೆ ಅಷ್ಟೇ ಅಲ್ಲ. ಟನ್‌ಗಟ್ಟಲೆ ಆಕ್ಸಿಜನ್ ಪೂರೈಕೆ ಆದರೂ ಅದರ ಲೆಕ್ಕ ಇಟ್ಟಿಲ್ಲ. ಈ ವ್ಯವಸ್ಥೆಯೇ ಕೃತಕ ಅಭಾವನ್ನು ಸೃಷ್ಟಿಸಿದೆ. ಕಾಳಸಂತೆ ಮಾರಾಟಕ್ಕೂ ಆಸ್ಪದವಾಗಿದೆ. ಲೋಪ ಎಸಗುತ್ತಿರುವ ಆಕ್ಸಿಜನ್ ರೀಫಿಲ್ಲರ್ ಘಟಕಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮಜರುಗಿಸಬೇಕು ಎಂದು ನಿರ್ದೇಶಿಸಿತು.

'ಕರುಳಿನ ಉರಿಯೂತದ ಔಷಧ ಪಡೆದರೆ ಲಸಿಕೆ ಪರಿಣಾಮ ಅಲ್ಪ'

ನವದೆಹಲಿ (ಪಿಟಿಐ): 'ಕರುಳಿನ ಉರಿಯೂತಕ್ಕೆ ವೈದ್ಯರು ಸಾಮಾನ್ಯವಾಗಿ ನೀಡುವ ಔಷಧಗಳು, ಕೋವಿಡ್‌-19 ಲಸಿಕೆಯ ಮೊದಲನೇ ಡೋಸ್‌ನ ಪರಿಣಾಮವನ್ನು ಕುಗ್ಗಿಸುತ್ತದೆ' ಎಂದು ಅಧ್ಯಯನ ವರದಿ ಹೇಳಿದೆ.



ಆಸ್ಟ್ರಾಜೆನೆಕಾ ಕಂಪನಿಯ ಕೋವಿಶೀಲ್ಡ್ ಮತ್ತು ಫೈಝರ್ ಕಂಪನಿಯ ಕೋವಿಡ್ ಲಸಿಕೆಯನ್ನು ಪಡೆದುಕೊಂಡಿದ್ದ 865 ಜನರ ಮೇಲೆ ಬ್ರಿಟನ್‌ನ ಎಕ್ಸ್‌ಟರ್ ವಿಶ್ವವಿದ್ಯಾಲಯವು ಅಧ್ಯಯನ ನಡೆಸಿದೆ. ಕರುಳಿನ ಉರಿಯೂತಕ್ಕೆ ಸಾಮಾನ್ಯವಾಗಿ ನೀಡುವ 'ಇನ್ಫ್ಲಿಕ್ಸಿಮ್ಯಾಬ್' ಔಷಧ ತೆಗೆದುಕೊಳ್ಳುತ್ತಿರುವವರನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು.

'ಇನ್ಫ್ಲಿಕ್ಸಿಮ್ಯಾಬ್ ಔಷಧ ತೆಗದುಕೊಳ್ಳುತ್ತಿದ್ದು, ಈ ಎರಡರಲ್ಲಿ ಯಾವುದಾದರೂ ಒಂದು ಲಸಿಕೆಯ ಮೊದಲ ಡೋಸ್ ಹಾಕಿಸಿಕೊಂಡವರಲ್ಲಿ ಕೋವಿಡ್ ಪ್ರತಿರೋಧಕ ಶಕ್ತಿ ಕಡಿಮೆ ಪ್ರಮಾಣದಲ್ಲಿ ಇತ್ತು. ಈ ಔಷಧ ಸೇವಿಸುತ್ತಿರುವವರು ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದುಕೊಂಡರೂ, ಗಣನೀಯ ಪ್ರಮಾಣದಲ್ಲಿ ಪ್ರತಿರೋಧಕ ಶಕ್ತಿ ಉಂಟಾಗಿಲ್ಲ ಎಂಬುದು ಪತ್ತೆಯಾಯಿತು' ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

'ಈ ಔಷಧವನ್ನು ಸ್ವಲ್ಪ ಕಾಲದಿಂದ ತೆಗೆದುಕೊಳ್ಳುತ್ತಿರುವ 328 ಜನರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರಲ್ಲಿ ಎಲ್ಲರಿಗೂ ಕೋವಿಡ್ ಲಸಿಕೆಯ ಮೊದಲ ಡೋಸ್ ನೀಡಿದ್ದರೂ, 103 ಜನರಲ್ಲಿ ಮಾತ್ರ ಕೋವಿಡ್ ಪ್ರತಿಕಾಯ ಸ್ವಲ್ಪ ಪ್ರಮಾಣದಲ್ಲಿ ಅಭಿವೃದ್ಧಿಯಾಗಿತ್ತು. ಇದೇ ಔಷಧವನ್ನು ದೀರ್ಘಕಾಲದಿಂದ ಸೇವಿಸುತ್ತಿದ್ದ 537 ಜನರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದುಕೊಂಡರೂ, ಇವರಲ್ಲಿ ಕೇವಲ 127 ಜನರಲ್ಲಿ ಕೋವಿಡ್ ಪ್ರತಿಕಾಯ ಅಭಿವೃದ್ಧಿಯಾಗಿತ್ತು' ಎಂದು ಅಧ್ಯಯನ ವರದಿಯಲ್ಲಿ ವಿವರಿಸಲಾಗಿದೆ.

'ಈಗಾಗಲೇ ಕೋವಿಡ್ ತಗುಲಿದ್ದ, ಲಸಿಕೆಯ ಎರಡೂ ಡೋಸ್ ಪಡೆದುಕೊಂಡಿರುವವರನ್ನೂ ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಇವರು ಇನ್ಫ್ಲಿಕ್ಸಿಮ್ಯಾಬ್ ಔಷಧ ಪಡೆದುಕೊಂಡಿದ್ದರೂ ಕೋವಿಡ್ ಪ್ರತಿಕಾಯ ಗಣನೀಯವಾಗಿ ಏರಿಕೆಯಾಗಿರುವುದು ಪತ್ತೆಯಾಗಿತ್ತು. ಹೀಗಾಗಿ ಇನ್ಫ್ಲಿಕ್ಸಿಮ್ಯಾಬ್ ಔಷಧ ತೆಗೆದುಕೊಂಡವರು ಕೋವಿಡ್ ಲಸಿಕೆಯ ಮೊದಲ ಡೋಸ್ ಪಡೆದುಕೊಂಡಿದ್ದರೂ, ಕೋವಿಡ್ ತಗಲುವ ಅಪಾಯ ಇದ್ದೇ ಇರುತ್ತದೆ. ಹೀಗಾಗಿ ಲಸಿಕೆಯ ಎರಡನೇ ಡೋಸ್ ಹಾಕಿಸಿಕೊಳ್ಳಲು ಆದ್ಯತೆ ನೀಡಬೇಕು' ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ಕೊರೊನಾ: ಬಳಕೆ ಆಗದ ರೈಲ್ವೆ ಐಸೋಲೇಷನ್ ಕೋಚ್‌ಗಳು

₹ 39 ಕೋಟಿ ವೆಚ್ಚ: ಆಕ್ಸಿಜನ್ ಕೊರತೆ ಪ್ರಮುಖ ಕಾರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಒಂದು ವರ್ಷದ ಹಿಂದೆ, ಕೋವಿಡ್ ಚಿಕಿತ್ಸೆಗೆ ಪೂರಕವಾಗಿ 5,601 ರೈಲು ಬೋಗಿಗಳನ್ನು ಒಟ್ಟು ₹ 39 ಕೋಟಿ ವೆಚ್ಚದಲ್ಲಿ ಐಸೋಲೇಷನ್ ಕೋಚ್ ಆಗಿ ಪರಿವರ್ತಿಸಿತ್ತು. ಆದರೆ, ಇವುಗಳ ಬಳಕೆಗೆ ಈಗ ರಾಜ್ಯಗಳು ಆಸಕ್ತಿ ತೋರುತ್ತಿಲ್ಲ

ಆರ್‌ಟಿಐ ಮೂಲಕ ಪ್ರಜಾವಾಣಿ ಪಡೆದ ಮಾಹಿತಿಯಂತೆ, ಒಟ್ಟು ₹ 38.33 ಕೋಟಿ ಅನ್ನು ಕೋಚ್ ಪರಿವರ್ತನೆಗೆ ವ್ಯಯಿಸಲಾಗಿದೆ. ಹೀಗೇ ಪರಿವರ್ತಿಸಿದ ಒಟ್ಟು 813 ಕೋಚ್‌ಗಳನ್ನು ಮನವಿ ಆಧರಿಸಿ ದೆಹಲಿಗೆ 503, ಉತ್ತರ ಪ್ರದೇಶಕ್ಕೆ 270 ಮತ್ತು ಬಿಹಾರಕ್ಕೆ 40 ಬೋಗಿಗಳನ್ನು ಒದಗಿಸಲಾಗಿತ್ತು.

ಕೋವಿಡ್ ಪ್ರಕರಣಗಳು ತೀವ್ರಗತಿಯಲ್ಲಿ ಏರುತ್ತಿದ್ದರೂ ರಾಜ್ಯಗಳು, ಪರಿವರ್ತಿಸಲಾದ ಐಸೋಲೇಷನ್ ಕೋಚ್‌ಗಳನ್ನು ಬಳಸಲು ಉತ್ಸಾಹ ತೋರುತ್ತಿಲ್ಲ. ಬೇಸಿಗೆ ತೀವ್ರತರವಾಗಿದ್ದು, ಕೋಚ್‌ಗಳು ಹವಾನಿಯಂತ್ರಿತವಲ್ಲ ಎಂಬುದೇ ಇದಕ್ಕೆ ಕಾರಣ. ಅಲ್ಲದೆ, ಆರೋಗ್ಯ ಕ್ಷೇತ್ರದ ಪರಿಣತರು ಇವುಗಳ ಬಳಕೆಗೆ ಒಲವು ತೋರುತ್ತಿಲ್ಲ.

ಜನವರಿ 12ರಂದು ದೆಹಲಿ ಸರ್ಕಾರ ಮತ್ತೊಂದು ಆರ್‌ಟಿಐ ಅರ್ಜಿಗೆ ಪ್ರತಿಕ್ರಿಯಿಸಿ, ಕೋವಿಡ್–19 ಕೋಚ್‌ಗಳಲ್ಲಿ 856 ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂದಿತ್ತು. ಎಷ್ಟು ಬೋಗಿ ಬಳಕೆಯಾಗಿವೆ, ಎಷ್ಟು ರೋಗಿಗಳಿಗೆ ಚಿಕಿತ್ಸೆ ನೀಡಲಾಗಿದೆ ಎಂಬುದರ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದಲ್ಲಿ ಯಾವುದೇ ಮಾಹಿತಿ ಇಲ್ಲ.

ಕೋವಿಡ್ ಆರೈಕೆಗಾಗಿ ಪರಿವರ್ತಿಸಲಾದ ರೈಲ್ವೆ ಕೋಚ್ (ಸಂಗ್ರಹ ಚಿತ್ರ)

ಇನ್ನೊಂದೆಡೆ ಬೋಗಿಗಳನ್ನು ಪರಿವರ್ತಿಸಲು ಮಾಡಿರುವ ವೆಚ್ಚವು ಏಕರೂಪವಾಗಿಲ್ಲ. ಪ್ರತಿ ಬೋಗಿಯ ಪರಿವರ್ತನೆಗೆ ನಾಗಪುರದ ಮೆಕಾನಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಕಡಿಮೆ ಅಂದರೆ ಸುಮಾರು ₹ 6,752 ರೂಪಾಯಿ ವೆಚ್ಚವಾಗಿದ್ದರೆ, ಪೂರ್ವವಲಯದ ರೈಲ್ವೆಯಲ್ಲಿ ₹ 1.22 ಲಕ್ಷ ವೆಚ್ಚವಾಗಿದೆ.

ಕೋವಿಡ್ ಸೋಂಕಿತರಿಗೆ ಕ್ವಾರಂಟೈನ್ ಮತ್ತು ಐಸೋಲೇಷನ್ ಚಿಕಿತ್ಸೆಗೆ ನೆರವಾಗುವುದು ಬೋಗಿಯನ್ನು ಪರಿವರ್ತನೆ ಮಾಡುವುದರ ಮುಖ್ಯ ಉದ್ದೇಶವಾಗಿತ್ತು. ಜೊತೆಗೆ, ಆಸ್ಪತ್ರೆಗಳಲ್ಲಿ ಹಾಸಿಗೆಗಳ ಕೊರತೆ ಉಂಟಾಗಬಹುದು ಎಂಬ ಆತಂಕವೂ ಇತ್ತು.

ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರ ಪ್ರಕಾರ, ಪ್ರಸ್ತುತ ದೇಶದ ವಿವಿಧ ರೈಲ್ವೆ ನಿಲ್ದಾಣಗಳಲ್ಲಿ 4,000 ಕೋವಿಡ್ ಆರೈಕೆ ಕೋಚ್‌ಗಳನ್ನು ನಿಲ್ಲಿಸಲಾಗಿದೆ. ಇವುಗಳ ಒಟ್ಟು ಹಾಸಿಗೆ ಸಾಮರ್ಥ್ಯ 64,000. ಆದರೆ, ಪ್ರಕರಣಗಳು ಏರುತ್ತಿದ್ದರೂ ರಾಜ್ಯಗಳು ಏಕೆ ಇವುಗಳನ್ನು ಬಳಕೆ ಮಾಡುತ್ತಿಲ್ಲ ಎಂಬುದಕ್ಕೆ ಅವರ ಬಳಿ ಉತ್ತರವಿಲ್ಲ.

'ಆಮ್ಲಜನಕದ ಮಿತಿ ಇಲ್ಲದ ಲಭ್ಯತೆ ಎಲ್ಲೂ ಇಲ್ಲ'

ನವದೆಹಲಿ (ಪಿಟಿಐ): ವೈದ್ಯಕೀಯ ಆಮ್ಲಜನಕವು ಯಾವುದೇ ದೇಶದಲ್ಲಿಯೂ ಮಿತಿ ಇಲ್ಲದಷ್ಟು ಲಭ್ಯ ಇರುವುದು ಸಾಧ್ಯವಿಲ್ಲ. ಕೋವಿಡ್ ರೋಗಿಗಳಿಗೆ ಒದಗಿಸುವುದಕ್ಕಾಗಿ ಆಮ್ಲಜನಕ ಲಭ್ಯತೆ ಹೆಚ್ಚಿಸುವುದರ ಮೇಲೆ ಪ್ರಧಾನಿಯವರೇ ನಿಗಾ ಇರಿಸಿದ್ದಾರೆ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ದೇಶದಲ್ಲಿ ಯಾವುದೇ ಸಂದರ್ಭದಲ್ಲಿ ಲಭ್ಯ ಇರುವ ಆಮ್ಲಜನಕವನ್ನು ಎಲ್ಲ ರಾಜ್ಯಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಹಂಚಲಾಗುವುದು. ಕೋವಿಡ್ ಸಕ್ರಿಯ ಪ್ರಕರಣಗಳು ಹೆಚ್ಚು ಇರುವ ರಾಜ್ಯಗಳಿಗೆ ಆದ್ಯತೆ ನೀಡಲಾಗುವುದು ಎಂದೂ ಕೇಂದ್ರವು ತಿಳಿಸಿದೆ.

ಹಿಂದೆಂದೂ ಕಂಡರಿಯದ ರೀತಿಯಲ್ಲಿ ಕೋವಿಡ್ ಪ್ರಕರಣಗಳ ಏರಿಕೆಯು ಲಭ್ಯ ಸಂಪನ್ಮೂಲದ ಮೇಲೆ ಹಲವು ಮಿತಿಗಳನ್ನು ಹೇರಿದೆ. ಇಂತಹ ಸಂಪನ್ಮೂಲಗಳನ್ನು ವೃತ್ತಿಪರವಾಗಿ ಹೆಚ್ಚಿಸಬೇಕು ಮತ್ತು ಬಳಸಿಕೊಳ್ಳಬೇಕು. ಆಮ್ಲಜನಕ ಲಭ್ಯತೆಯನ್ನು ಹೆಚ್ಚಿಸುವುದಕ್ಕಾಗಿ ದೇಶದಾದ್ಯಂತ ತ್ವರಿತವಾಗಿ 162 ಪಿಎಸ್‌ಎ (ಪ್ರಷರ್ ಸ್ವಿಂಗ್ ಅಡ್ಸಾರ್ಪ್ಶನ್ ತಂತ್ರಜ್ಞಾನ) ಆಮ್ಲಜನಕ ತಯಾರಿಕಾ ಘಟಕಗಳನ್ನು ಕೇಂದ್ರ ಆರೋಗ್ಯ ಸಚಿವಾಲಯವು ಸ್ಥಾಪಿಸಲಿದೆ ಎಂದು ಕೇಂದ್ರ ಗೃಹ ಸಚಿವಾಲಯವು ಕೋರ್ಟ್‌ಗೆ ಹೇಳಿದೆ.

38 ಪಿಎಸ್‌ಎ ಆಮ್ಲಜನಕ ಘಟಕಗಳು ಈಗಾಗಲೇ ಕಾರ್ಯಾರಂಭ ಮಾಡಿವೆ. 21 ಘಟಕಗಳಿಗೆ ಇದೇ 30ರೊಳಗೆ ಚಾಲನೆ ನೀಡಲಾಗುವುದು. ಉಳಿದ 105 ಘಟಕಗಳು ಮೇ 31ರೊಳಗೆ ಸಿದ್ಧವಾಗಲಿವೆ ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

ಸುಪ್ರೀಂ ಕೋರ್ಟ್ ಸ್ವಯಂಪ್ರೇರಣೆಯಿಂದ ಕೈಗೆತ್ತಿಕೊಂಡ ಪ್ರಕರಣದ ವಿಚಾರಣೆಯನ್ನು ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ನಡೆಸಿತು. ಪ್ರಕರಣಕ್ಕೆ ಸಂಬಂಧಿಸಿ ಗೃಹ ಸಚಿವಾಲಯವು 200 ಪುಟಗಳ ಪ್ರಮಾಣಪತ್ರವನ್ನು ಸಲ್ಲಿಸಿದೆ.

ಎಣಿಕೆ ಕೇಂದ್ರದ ಸಭಾಂಗಣದಲ್ಲಿನ ಆಸನ ಸಾಮರ್ಥ್ಯದ ಶೇ 50ರಷ್ಟು ಜನರಿಗೆ ಮಾತ್ರ ಅವಕಾಶ

ವಿಜಯೋತ್ಸವಕ್ಕೆ ಚುನಾವಣಾ ಆಯೋಗದ ನಿಷೇಧ

ನವದೆಹಲಿ (ಪಿಟಿಐ): ವಿಧಾನಸಭೆ ಚುನಾವಣೆಯ ಮತ ಎಣಿಕೆ ನಡೆದ ಬಳಿಕ ವಿಜಯೋತ್ಸವ ಆಚರಿಸುವುದನ್ನು ನಿಷೇಧಿಸಿ ಚುನಾವಣಾ ಆಯೋಗವು ಮಂಗಳವಾರ ಆದೇಶ ಹೊರಡಿಸಿದೆ. ಕೋವಿಡ್ ಹರಡುವಿಕೆಯನ್ನು ತಡೆಯುವುದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ.

ತಮಿಳುನಾಡು, ಕೇರಳ, ಪುದುಚೇರಿ, ಪಶ್ಚಿಮ ಬಂಗಾಳ ಮತ್ತು ಅಸ್ಸಾಂ ವಿಧಾನಸಭೆ ಚುನಾವಣೆಯ ಮತ ಎಣಿಕೆ ಮೇ 2ರಂದು ನಡೆಯಲಿದೆ.

ಪಶ್ಚಿಮ ಬಂಗಾಳದ ಎಂಟನೆಯ ಮತ್ತು ಕೊನೆಯ ಹಂತದ ಮತದಾನ ಗುರುವಾರ (ಏ.29) ನಡೆಯಲಿದೆ. ಉಳಿದೆಡೆಗಳಲ್ಲಿ ಮತದಾನ ಪೂರ್ಣಗೊಂಡಿದೆ.

ಗೆದ್ದ ಅಭ್ಯರ್ಥಿಯು ಚುನಾವಣಾಧಿಕಾರಿಯಿಂದ ಪ್ರಮಾಣಪತ್ರ ಪಡೆದುಕೊಳ್ಳಲು ಹೋಗುವಾಗ, ಅಭ್ಯರ್ಥಿಯ ಜತೆಗೆ ಇಬ್ಬರಿಗೆ ಮಾತ್ರ ಅವಕಾಶ ಇದೆ ಎಂದೂ ಆಯೋಗದ ಆದೇಶದಲ್ಲಿ ಹೇಳಲಾಗಿದೆ.

ಎಣಿಕೆ ಕೇಂದ್ರದ ಸಭಾಂಗಣದಲ್ಲಿನ ಟೇಬಲ್ ಸಂಖ್ಯೆಯನ್ನು ಕಡಿಮೆ ಮಾಡಲಾಗಿದೆ. ಬಿಹಾರ ವಿಧಾನಸಭೆ ಚುನಾವಣೆಯ ಮತ ಎಣಿಕೆ ಸಂದರ್ಭದಲ್ಲಿ ಇಂತಹ ವ್ಯವಸ್ಥೆ ಜಾರಿಗೆ ತರಲಾಗಿತ್ತು. ಸಭಾಂಗಣದಲ್ಲಿನ ಆಸನ ಸಾಮರ್ಥ್ಯದ ಶೇ 50ರಷ್ಟು ಜನರಿಗೆ ಮಾತ್ರ ಅವಕಾಶ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

> **ಈ ನಿರ್ಧಾರವನ್ನು ಸ್ವಾಗತಿಸುತ್ತೇನೆ. ಈ ನಿರ್ಧಾರವನ್ನು ಕಟ್ಟುನಿಟ್ಟಾಗಿ ಅನುಸರಿಸುವಂತೆ ಬಿಜೆಪಿಯ ಎಲ್ಲ ರಾಜ್ಯ ಘಟಕಗಳಿಗೆ ಸೂಚನೆ ನೀಡಿದ್ದೇನೆ**
> **ಜೆ.ಪಿ. ನಡ್ಡಾ,** ಬಿಜೆಪಿ ಅಧ್ಯಕ್ಷ

ಜನತಂತ್ರದ ಹಬ್ಬ 2021

ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಕೋವಿಡ್ ತಡೆ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಲ್ಲಿ ಆಯೋಗವು ವಿಫಲವಾಗಿದೆ ಎಂದು ಮದ್ರಾಸ್ ಹೈಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡಿತ್ತು. ಕೋವಿಡ್ ಹರಡಲು ಆಯೋಗ ಏಕೈಕ ಕಾರಣ. ಚುನಾವಣಾ ಆಯೋಗವು ಇತ್ತೀಚಿನ ದಿನಗಳಲ್ಲಿ ಅತ್ಯಂತ ಬೇಜವಾಬ್ದಾರಿ ಸಂಸ್ಥೆಯಾಗಿದೆ ಎಂದು ತೀಕ್ಷ್ಣವಾಗಿ ಹೇಳಿತ್ತು. ಮತ ಎಣಿಕೆಯ ಸಂದರ್ಭದಲ್ಲಿ ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲನೆ ಆಗುವಂತೆ ಯೋಜನೆ ರೂಪಿಸಿ ಸಲ್ಲಿಸಲು ಆಯೋಗಕ್ಕೆ ಹೈಕೋರ್ಟ್ ಸೂಚಿಸಿತ್ತು.

ಟಿಎಂಸಿ ಮುಖಂಡನ ಮೇಲೆ ತೀವ್ರ ನಿಗಾ

ಕೋಲ್ಕತ್ತ (ಪಿಟಿಐ): ಟಿಎಂಸಿಯ ಬಿರ್‌ಭೂಮ್ ಘಟಕದ ಅಧ್ಯಕ್ಷ ಅನುವ್ರತ ಮಂಡಲ್ ಅವರ ಮೇಲೆ ಮಂಗಳವಾರ ಸಂಜೆ 5ರಿಂದ ಶುಕ್ರವಾರ ಸಂಜೆ 7ರವರೆಗೆ ಕಟ್ಟುನಿಟ್ಟಿನ ನಿಗಾ ಇರಿಸುವಂತೆ ಚುನಾವಣಾ ಆಯೋಗವು ಆದೇಶಿಸಿದೆ. ಅವರ ವಿರುದ್ಧ ಹಲವಾರು ದೂರುಗಳು ಬಂದ ಕಾರಣಕ್ಕೆ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಜಿಲ್ಲಾ ಚುನಾವಣಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮತ್ತು ವಿವಿಧ ಮೂಲಗಳಿಂದ ಮಾಹಿತಿ ಪಡೆಯಲಾಗಿದೆ. ಜಿಲ್ಲಾಧಿಕಾರಿ ಮತ್ತು ಸಿಎಪಿಎಫ್‌ನ ಕಟ್ಟುನಿಟ್ಟು ನಿಗಾದಲ್ಲಿ ಮಂಡಲ್ ಅವರನ್ನು ಇರಿಸಲಾಗುವುದು. ಮುಕ್ತ ಮತ್ತು ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಇದು ಅಗತ್ಯ' ಎಂದು ಅಧಿಕಾರಿ ಹೇಳಿದ್ದಾರೆ.

2019ರ ಲೋಕಸಭಾ ಚುನಾವಣೆ ಮತ್ತು 2016ರ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿಯೂ ಮಂಡಲ್ ಅವರನ್ನು ಇದೇ ರೀತಿಯ ನಿಗಾದಲ್ಲಿ ಇರಿಸಲಾಗಿತ್ತು. ಬಿರ್‌ಭೂಮ್‌ನಲ್ಲಿ ಗುರುವಾರ ಮತದಾನ ನಡೆಯಲಿದೆ.

ತಾರಾ ಪ್ರಚಾರಕರಿಗೆ ದಂಡ: ಹೈಕೋರ್ಟ್‌ಗೆ ಅರ್ಜಿ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಚಾರ ಸಂದರ್ಭದಲ್ಲಿ ಕೋವಿಡ್ ತಡೆ ಮಾರ್ಗಸೂಚಿ ಪಾಲಿಸದ ವಿವಿಧ ಪಕ್ಷಗಳ ತಾರಾ ಪ್ರಚಾರಕರು ಮತ್ತು ನಾಯಕರಿಗೆ ದಂಡ ವಿಧಿಸಿ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲು ಚುನಾವಣಾ ಆಯೋಗಕ್ಕೆ ಸೂಚಿಸಬೇಕು ಎಂದು ಕೋರಿ ದೆಹಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಪಶ್ಚಿಮ ಬಂಗಾಳದಲ್ಲಿ ಕಳೆದ ಒಂದು ವಾರದಲ್ಲಿ ಪ್ರಚಾರ ನಡೆಸಿದ ನಾಯಕರನ್ನು ಕಡ್ಡಾಯ ಪ್ರತ್ಯೇಕವಾಸಕ್ಕೆ ಒಳಪಡಿಸಬೇಕು ಎಂದೂ ಕೋರಲಾಗಿದೆ. ಉತ್ತರ ಪ್ರದೇಶದ ಮಾಜಿ ಡಿಜಿಪಿ ವಿಕ್ರಮ್ ಸಿಂಗ್ ಈ ಅರ್ಜಿ ಸಲ್ಲಿಸಿದ್ದಾರೆ.

ಸೌರಫಲಕ ಹಗರಣ: ಸರಿತಾ ನಾಯರ್‌ಗೆ 6 ವರ್ಷ ಕಠಿಣ ಸಜೆ

ಕೋಯಿಕ್ಕೋಡ್(-ಕೇರಳ): ಸೌರಫಲಕ ಹಗರಣದ ಸಂಬಂಧ, ಸರಿತಾ ನಾಯರ್ ಅವರಿಗೆ ಕೋಯಿಕ್ಕೋಡ್‌ನ ಕೋರ್ಟ್ ಆರು ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿದೆ.

ಈ ಪ್ರಕರಣದಲ್ಲಿ ಸರಿತಾ ನಾಯರ್ ಎರಡನೇ ಆರೋಪಿಯಾಗಿದ್ದಾರೆ.

ನ್ಯಾಯಾಧೀಶ ಕೆ. ನಿಮ್ಮಿ ಪ್ರಕರಣದ ವಿಚಾರಣೆ ನಡೆಸಿದರು. ಮೂರನೇ ಆರೋಪಿ ಬಿ. ಮಣಿಮೋನ್ ಅವರನ್ನು ಖುಲಾಸೆಗೊಳಿಸಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ಬಿಜು ರಾಧಾಕೃಷ್ಣ ಅವರಿಗೆ ಸಂಬಂಧಿಸಿ ತೀರ್ಪನ್ನು ತಡೆಹಿಡಿಯಲಾಗಿದೆ.

ಸರಿತಾ ನಾಯರ್, ಬಿಜು ರಾಧಾಕೃಷ್ಣನ್ ಅವರು, ಟೀಮ್ ಸೋಲಾರ್ ರಿನ್ಯೂಯೇಬಲ್ ಎನರ್ಜಿ ಸೊಲ್ಯೂಷನ್ಸ್ ಕಂಪನಿ ಸ್ಥಾಪಿಸಿದ್ದರು. ಈ ಕಂಪನಿಯಲ್ಲಿ ಉದ್ಯೋಗ ಕೊಡಿಸುವುದಾಗಿ ಹೇಳಿ ಹಲವರಿಂದ ಹಣ ಪಡೆದು ವಂಚಿಸಿದ ಆರೋಪವಿದೆ.

ಆರ್‌ಸಿಬಿಗೆ ರೋಚಕ ಜಯ: ಕೊನೆಯ ಓವರ್‌ನಲ್ಲಿ ಸಿರಾಜ್ ಮಿಂಚು; ಪಂತ್, ಶಿಮ್ರಾನ್ ಹೋರಾಟ ವ್ಯರ್ಥ

ಎಬಿಡಿ ಪರಾಕ್ರಮಕ್ಕೆ ಒಲಿದ ಗೆಲುವು

ಅಹಮದಾಬಾದ್ (ಪಿಟಿಐ): ಮಂಗಳವಾರ ರಾತ್ರಿ ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ಹಣಾಹಣಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಒಂದು ರನ್‌ನಿಂದ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಿಸಿತು.

ಮೊಟೇರಾದ ನರೇಂದ್ರ ಮೋದಿ ಕ್ರಿಕೆಟ್ ಮೈದಾನದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಆರ್‌ಸಿಬಿ ಎಬಿ ಡಿವಿಲಿಯರ್ಸ್ ಅಬ್ಬರದ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 171 ರನ್ ಗಳಿಸಿತ್ತು. ಶಿಮ್ರೊನ್ ಹೆಟ್ಮೆಯರ್ (ಔಟಾಗದೆ 53; 25ಎ) ಅವರ ಮಿಂಚಿನ ಬ್ಯಾಟಿಂಗ್‌ನಿಂದಾಗಿ ಡೆಲ್ಲಿ ತಂಡಕ್ಕೆ ಜಯಿಸುವ ಅವಕಾಶವಿತ್ತು. ಕೊನೆಯ ಓವರ್‌ನಲ್ಲಿ ಗೆಲುವಿಗೆ 14 ರನ್‌ಗಳನ್ನು ಹೊಡೆಯಬೇಕಿತ್ತು. ಈ ಓವರ್ ಬೌಲಿಂಗ್ ಮಾಡಿದ ಮೊಹಮ್ಮದ್ ಸಿರಾಜ್ ತಮ್ಮ ನಾಯಕ ವಿರಾಟ್ ಕೊಹ್ಲಿಯ ವಿಶ್ವಾಸ ಉಳಿಸಿಕೊಂಡರು. ಮೊದಲ ನಾಲ್ಕು ಎಸೆತಗಳಲ್ಲಿ ಸಿರಾಜ್ ನಾಲ್ಕು ರನ್‌ಗಳನ್ನು ಮಾತ್ರ ಕೊಟ್ಟರು. ಆದರೆ ಐದನೇ ಎಸೆತವನ್ನು ರಿಷಭ್ ಬೌಂಡರಿಗಟ್ಟಿದರು. ಇದರಿಂದಾಗಿ ಕೊನೆಯ ಎಸೆತದಲ್ಲಿ ಸಿಕ್ಸರ್ ಹೊಡೆಯುವ ರಿಷಭ್ ಪ್ರಯತ್ನ ಫಲಿಸಲಿಲ್ಲ. ಬೌಂಡರಿ ಮಾತ್ರ ಸಾಧ್ಯವಾಯಿತು. ವಿರಾಟ್ ಬಳಗದಲ್ಲಿ ಸಂತಸ ಪುಟಿದೆದ್ದಿತು. ಡೆಲ್ಲಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 170 ರನ್ ಗಳಿಸಿ ಸೋತಿತು.

ಗುರಿ ಬೆನ್ನಟ್ಟಿದ ಡೆಲ್ಲಿ ತಂಡವು 47 ರನ್‌ಗಳಿಗೆ ಮೂರು ವಿಕೆಟ್‌ಗಳನ್ನು ಕಳೆದುಕೊಂಡು ಸಂಕಷ್ಟದಲ್ಲಿತ್ತು. ರಿಷಭ್ ಜೊತೆಗೆ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ ಮಾರ್ಕಸ್ ಸ್ಟೊಯಿನಿಸ್ 45 ರನ್ ಸೇರಿಸಿದ್ದರು. 13ನೇ ಓವರ್‌ನಲ್ಲಿ ಹರ್ಷಲ್ ಪಟೇಲ್ ಎಸೆತದಲ್ಲಿ ಮಾರ್ಕಸ್ ಔಟಾದಾಗ, ಜೊತೆಯಾಟ ಮುರಿಯಿತು. ಆದರೆ ಕ್ರೀಸ್‌ಗೆ ಬಂದ ಹೆಟ್ಮೆಯರ್ ಪ್ರಹಾರ ಆರಂಭಿಸಿದರು. ಇದರಿಂದಾಗಿ ಡೆಲ್ಲಿಗೆ ಜಯದ ಕನಸು ಗರಿಗೆದರಿತು.

ಎಬಿ ಡಿವಿಲಿಯರ್ಸ್ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ಎಬಿಡಿ ಪರಾಕ್ರಮ: ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಬೆಂಗಳೂರು ತಂಡವು 10 ಓವರ್‌ಗಳಾಗುವಷ್ಟರಲ್ಲಿ ಮೂರು ಪ್ರಮುಖ ವಿಕೆಟ್‌ಗಳನ್ನು ಕಳೆದುಕೊಂಡಿತ್ತು. ಈ ಹಂತದಲ್ಲಿ ಎಬಿಡಿ (ಅಜೇಯ 75; 42ಎ, 3ಬೌಂಡರಿ, 5ಸಿಕ್ಸರ್) ಆಪದ್ಬಾಂಧವರಾದರು.

ಒಂಬತ್ತನೇ ಓವರ್‌ನಲ್ಲಿ ಎಬಿ ಡಿವಿಲಿಯರ್ಸ್ ಕ್ರೀಸ್‌ಗೆ ಬರುವ ಮುನ್ನ ವಿರಾಟ್ ಕೊಹ್ಲಿ, ದೇವದತ್ತ ಪಡಿಕ್ಕಲ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಔಟಾಗಿದ್ದರು. ಇದರಿಂದಾಗಿ ಆರ್‌ಸಿಬಿ ತಂಡವನ್ನು ಕಡಿಮೆ ಮೊತ್ತಕ್ಕೆ ಕಟ್ಟಿಹಾಕುವ ಯೋಚನೆಯಲ್ಲಿದ್ದರು. ಆದರೆ ಎಬಿಡಿಯನ್ನು ನಿಯಂತ್ರಿಸಲು ಡೆಲ್ಲಿ ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. ಇನಿಂಗ್ಸ್‌ನ ಕೊನೆಯ ಓವರ್ ಹಾಕಲು ಮಾರ್ಕಸ್ ಸ್ಟೋಯಿನಿಸ್ ಅವರಿಗೆ ಚೆಂಡು ಕೊಟ್ಟ ಪಂತ್, ನಂತರ ಕೈಕೈ ಹಿಸುಕಿಕೊಂಡರು. ಮಾರ್ಕಸ್ ಈ ಪಂದ್ಯದಲ್ಲಿ ಹಾಕಿದ ಈ ಏಕೈಕ ಓವರ್‌ನಲ್ಲಿ ಎಬಿಡಿ ಮೂರು ಸಿಕ್ಸರ್ ಸಿಡಿಸಿದರು. ಒಟ್ಟು 23 ರನ್‌ಗಳು ಹರಿದುಬಂದವು. 35 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು.

ಶಿಮ್ರಾನ್ ಹೆಟ್ಮೆಯರ್

ಯುವ ಆಟಗಾರ ರಜತ್ ಪಾಟೀದಾರ್ ಮತ್ತು ಎಬಿಡಿ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಅಕ್ಷರ್ ಪಟೇಲ್ ಎಸೆತದಲ್ಲಿ ರಜತ್ ಔಟಾದ ನಂತರ ಎಬಿಡಿ ಆಟ ರಂಗೇರಿತು.

ಟೂರ್ನಿಯ ಆರಂಭದ ನಾಲ್ಕು ಪಂದ್ಯಗಳಲ್ಲಿ ಸತತ ಜಯ ಸಾಧಿಸಿದ್ದ ವಿರಾಟ್ ಬಳಗವು ಐದನೇ ಪಂದ್ಯದಲ್ಲಿ ಚೆನ್ನೈ ಎದುರು ಸೋತಿತ್ತು. ಇಲ್ಲಿ ಮತ್ತೆ ಜಯದ ಹಳಿಗೆ ಮರಳಿತು.

ಡೆಲ್ಲಿ ಇನಿಂಗ್ಸ್ ವಿಳಂಬ: ಮೊಟೇರಾ ಕ್ರೀಡಾಂಗಣದಲ್ಲಿ ಮಂಗಳವಾರ ರಾತ್ರಿ ಮರಳುಮಿಶ್ರಿತ ಬಿರುಗಾಳಿ ಬೀಸಿತು.

ಇದರಿಂದಾಗಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಇನಿಂಗ್ಸ್ 15 ನಿಮಿಷ ವಿಳಂಬವಾಗಿ ಆರಂಭವಾಯಿತು.

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 5ಕ್ಕೆ 171 (20 ಓವರ್‌ಗಳಲ್ಲಿ)
ಕೊಹ್ಲಿ ಬಿ ಆವೇಶ್ 12 (11ಎ, 4X2)
ದೇವದತ್ತ ಬಿ ಶರ್ಮಾ 17 (14ಎ, 4X3)
ರಜತ್ ಸಿ ಸ್ಮಿತ್ ಬಿ ಅಕ್ಷರ್ 31 (22ಎ, 6X2)
ಮ್ಯಾಕ್ಸ್‌ವೆಲ್ ಸಿ ಸ್ಮಿತ್ ಬಿ ಮಿಶ್ರಾ 25 (20ಎ, 4X1, 6X2)
ಡಿವಿಲಿಯರ್ಸ್ ಔಟಾಗದೆ 75 (42ಎ, 4X3, 6X5)
ವಾಷಿಂಗ್ಟನ್ ಸಿ ಮತ್ತು ಬಿ ರಬಾಡ 6 (9ಎ)
ಡೇನಿಯಲ್ ಔಟಾಗದೆ 3 (2ಎ))
ಇತರೆ (ವೈಡ್ 2) 2
ವಿಕೆಟ್ ಪತನ: 1–30 (ವಿರಾಟ್ ಕೊಹ್ಲಿ, 3.6), 2–30 (ದೇವದತ್ತ ಪಡಿಕ್ಕಲ್, 4.1), 3–60 (ಗ್ಲೆನ್ ಮ್ಯಾಕ್ಸ್‌ವೆಲ್, 8.3), 4–114 (ರಜತ್ ಪಾಟೀದಾರ್, 14.5), 5–139 (ವಾಷಿಂಗ್ಟನ್ ಸುಂದರ್, 17.6)
ಬೌಲಿಂಗ್: ಇಶಾಂತ್ ಶರ್ಮಾ 4–1–26–1, ಕಗಿಸೊ ರಬಾಡ 4–0–38–1, ಆವೇಶ್ ಖಾನ್ 4–0–24–1, ಅಮಿತ್ ಮಿಶ್ರಾ 3–0–27–1, ಅಕ್ಷರ್ ಪಟೇಲ್ 4–0–33–1, ಮಾರ್ಕಸ್ ಸ್ಟೊಯಿನಿಸ್ 1–0–23–0

ಡೆಲ್ಲಿ ಕ್ಯಾಪಿಟಲ್ಸ್ 4ಕ್ಕೆ 170 (20 ಓವರ್‌ಗಳಲ್ಲಿ)
ಪೃಥ್ವಿ ಸಿ ಡಿವಿಲಿಯರ್ಸ್ ಬಿ ಹರ್ಷಲ್ 21 (18ಎ, 4X3)
ಶಿಖರ್ ಸಿ ಚಾಹಲ್ ಬಿ ಜೆಮೀಸನ್ 6 (7ಎ, 4X1)
ಸ್ಮಿತ್ ಸಿ ಡಿವಿಲಿಯರ್ಸ್ ಬಿ ಸಿರಾಜ್ 4 (5ಎ, 4X1)
ರಿಷಭ್ ಔಟಾಗದೆ 58 (48ಎ, 4X6)
ಸ್ಟೊಯಿನಿಸ್ ಸಿ ಡಿವಿಲಿಯರ್ಸ್ ಬಿ ಹರ್ಷಲ್ 22 (17ಎ, 4X3)
ಹೆಟ್ಮೆಯರ್ ಔಟಾಗದೆ 53 (25ಎ, 4X2, 6X4)
ಇತರೆ (ಲೆಗ್‌ಬೈ 4, ವೈಡ್ 2) 6
ವಿಕೆಟ್ ಪತನ: 1–23 (ಶಿಖರ್ ಧವನ್, 2.3), 2–28 (ಸ್ಟೀವನ್ ಸ್ಮಿತ್, 3.3), 3–47 (ಪೃಥ್ವಿ ಶಾ, 7.2), 4–92 (ಮಾರ್ಕಸ್ ಸ್ಟೊಯಿನಿಸ್, 12.4)
ಬೌಲಿಂಗ್: ಡೇನಿಯಲ್ ಸ್ಯಾಮ್ಸ್ 2-0-15-0, ಮೊಹಮ್ಮದ್ ಸಿರಾಜ್ 4–0–44–1, ಕೈಲ್ ಜೆಮೀಸನ್ 4-0-32-1, ವಾಷಿಂಗ್ಟನ್ ಸುಂದರ್ 4–0–28–0, ಹರ್ಷಲ್ ಪಟೇಲ್ 4-0-37-2, ಯಜುವೇಂದ್ರ ಚಾಹಲ್ 2-0-10-0

ಫಲಿತಾಂಶ: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಒಂದು ರನ್ ಗೆಲುವು

ವಿದೇಶಿ ಆಟಗಾರರಿಗೆ ಬಿಸಿಸಿಐ ಅಭಯ

ಐಪಿಎಲ್ ನಂತರ ತವರಿಗೆ ಪ್ರಯಾಣದ ವ್ಯವಸ್ಥೆಯ ಭರವಸೆ

ನವದೆಹಲಿ/ಮೆಲ್ಬರ್ನ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡುತ್ತಿರುವ ವಿದೇಶಿ ಆಟಗಾರರಿಗೆ ಟೂರ್ನಿ ಮುಗಿದ ಬಳಿಕ ಸುರಕ್ಷಿತವಾಗಿ ಸ್ವದೇಶಕ್ಕೆ ಮರಳಲು ವ್ಯವಸ್ಥೆ ಮಾಡುವುದಾಗಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭರವಸೆ ನೀಡಿದೆ.

ಕೋವಿಡ್–19 ಪ್ರಕರಣಗಳು ಏರುಗತಿಯಲ್ಲಿ ಸಾಗುತ್ತಿರುವುದರಿಂದ ಭಾರತದಿಂದ ತೆರಳುವ ಎಲ್ಲ ಪ್ರಯಾಣಿಕ ವಿಮಾನಗಳಿಗೆ ಆಸ್ಟ್ರೇಲಿಯಾ ಸರ್ಕಾರ ಮೇ 15ರವರೆಗೆ ನಿರ್ಬಂಧ ಹಾಕಿದೆ. ಅಲ್ಲದೆ ಭಾರತದಲ್ಲಿರುವ ಆಟಗಾರರು ತಾವೇ ಪ್ರಯಾಣ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಹೇಳಿದೆ. ಹೀಗಾಗಿ ಬಿಸಿಸಿಐ ಈ ಅಭಯ ನೀಡಿದೆ.

ತವರುನಾಡಿನಿಂದ ದೂರ 'ಲಾಕ್' ಆದಂತೆ ಭಾಸವಾಗುತ್ತಿದೆ ಎಂದು ಹೇಳಿ ಆಸ್ಟ್ರೇಲಿಯಾದ ಆ್ಯಂಡ್ರ್ಯೂ ಟೈ (ರಾಜಸ್ಥಾನ ರಾಯಲ್ಸ್) ಭಾನುವಾರ ತಂಡದ ಶಿಬಿರ ತೊರೆದಿದ್ದರೆ, ಆ್ಯಡಂ ಜಂಪಾ ಹಾಗೂ ಕೇನ್ ರಿಚರ್ಡ್ಸನ್ ಅವರು 'ವೈಯಕ್ತಿಕ ಕಾರಣ' ನೀಡಿ ಸೋಮವಾರ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬಯೋ ಬಬಲ್ ತೊರೆದಿದ್ದರು.

ಪ್ಯಾಟ್ ಕಮಿನ್ಸ್

ಮೇ 30ರಂದು ಐಪಿಎಲ್ ಕೊನೆಗೊಂಡ ಬಳಿಕ ಆಟಗಾರರನ್ನು ಸುರಕ್ಷಿತವಾಗಿ ಅವರ ದೇಶಕ್ಕೆ ಕಳುಹಿಸುವುದು ತನ್ನ ಜವಾಬ್ದಾರಿ ಎಂದಿರುವ ಬಿಸಿಸಿಐ ಈ ಕುರಿತು ಪತ್ರ ಬರೆದಿದೆ.

'ಟೂರ್ನಿ ಮುಗಿದ ನಂತರ ಮನೆಗೆ ಹೇಗೆ ಮರಳುವುದು ಎಂಬ ಬಗ್ಗೆ ನಿಮ್ಮಲ್ಲಿ ಹಲವರು ಆತಂಕಗೊಂಡಿರುವುದು ನಮ್ಮ ಗಮನಕ್ಕೆ ಬಂದಿದೆ. ಆ ಕುರಿತು ಚಿಂತಿಸಬೇಕಾಗಿಲ್ಲ. ನೀವು ನಿಮ್ಮ ದೇಶಕ್ಕೆ ಮರಳಲು ಬಿಸಿಸಿಐ ಎಲ್ಲ ವ್ಯವಸ್ಥೆ ಮಾಡಿಕೊಡಲಿದೆ. ನಾವು ಪರಿಸ್ಥಿತಿಯ ಮೇಲೆ ನಿಗಾ ಇರಿಸಿದ್ದು, ಸರ್ಕಾರಿ ಅಧಿಕಾರಿಗಳೊಂದಿಗೆ ಮಾತುಕತೆ ನಡೆಸುತ್ತಿದ್ದೇವೆ. ನೀವು ಸುರಕ್ಷಿತವಾಗಿ ತವರು ದೇಶಕ್ಕೆ ತೆರಳುವವರೆಗೆ ಟೂರ್ನಿ ಮುಗಿಯುವುದಿಲ್ಲ' ಎಂದು ಬಿಸಿಸಿಐ ಮುಖ್ಯ ಕಾರ್ಯಚಟುವಿಕೆ ಅಧಿಕಾರಿ (ಸಿಒಒ) ಹೇಮಂಗ್ ಅಮಿನ್ ಆಟಗಾರರನ್ನು ಉದ್ದೇಶಿಸಿ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

'ಟೂರ್ನಿಯಲ್ಲಿ ಪಾಲ್ಗೊಂಡಿರುವ ನಮಗೆ ಕ್ರಿಕೆಟ್ ಆಸ್ಟ್ರೇಲಿಯಾ ವಿಶೇಷ ವಿಮಾನದ ವ್ಯವಸ್ಥೆ ಮಾಡಲಿದೆ' ಎಂದು ಮುಂಬೈ ಇಂಡಿಯನ್ಸ್ ತಂಡದಲ್ಲಿರುವ ಆಸ್ಟ್ರೇಲಿಯಾ ಬ್ಯಾಟ್ಸ್‌ಮನ್ ಕ್ರಿಸ್ ಲಿನ್ ವಿಶ್ವಾಸ ವ್ಯಕ್ತಪಡಿಸಿದ್ದರು.

ಆದರೆ ಈ ಕುರಿತು ಸರ್ಕಾರ ನೆರವಿಗೆ ಬರಲಿದೆ ಎಂಬುದನ್ನು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ತಳ್ಳಿಹಾಕಿದ್ದಾರೆ. ಐಪಿಎಲ್‌ನಲ್ಲಿ ಪಾಲ್ಗೊಂಡವರು ತಮ್ಮ ಪ್ರಯಾಣ ವ್ಯವಸ್ಥೆಯನ್ನು ತಾವೇ ಮಾಡಿಕೊಳ್ಳಬೇಕೆಂದು ಹೇಳಿದ್ದಾರೆ.

ಆಸ್ಟ್ರೇಲಿಯಾದ 14 ಮಂದಿ ಇನ್ನೂ ಐಪಿಎಲ್‌ನಲ್ಲಿ ಉಳಿದಿದ್ದಾರೆ. ಸ್ಟೀವ್ ಸ್ಮಿತ್, ಡೇವಿಡ್ ವಾರ್ನರ್, ಪ್ಯಾಟ್ ಕಮಿನ್ಸ್ ಇವರಲ್ಲಿ ಪ್ರಮುಖರು. ಕೋಚ್‌ಗಳಾದ ರಿಕಿ ಪಾಂಟಿಂಗ್ (ಡೆಲ್ಲಿ) ಮತ್ತು ಸೈಮನ್ ಕ್ಯಾಟಿಚ್ (ಬೆಂಗಳೂರು) ಅವರೂ ಇದ್ದು ವೀಕ್ಷಕ ವಿವರಣೆಕಾರರ ತಂಡದಲ್ಲಿ ಮ್ಯಾಥ್ಯೂ ಹೇಡನ್, ಬ್ರೆಟ್ ಲೀ, ಮೈಕೆಲ್ ಸ್ಲೇಟರ್ ಮತ್ತು ಲಿಸಾ ಸ್ಥಳೇಕರ್ ಇದ್ದಾರೆ.

ಸಂಕ್ಷಿಪ್ತ ಸುದ್ದಿ

ಕೋವಿಡ್: ಬ್ರೆಟ್ ಲೀಯಿಂದ ಬಿಟ್ ಕಾಯಿನ್ ದೇಣಿಗೆ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಮಾಜಿ ವೇಗಿ ಬ್ರೆಟ್ ಲೀ ಅವರು ಕೋವಿಡ್ ವಿರುದ್ಧದ ಹೋರಾಟಕ್ಕೆ ಒಂದು ಬಿಟ್ ಕಾಯಿನ್ (ಅಂದಾಜು ₹ 40 ಲಕ್ಷ) ದೇಣಿಗೆ ನೀಡಲು ನಿರ್ಧರಿಸಿದ್ದಾರೆ.

ಭಾರತದ ಆಸ್ಪತ್ರೆಗಳಿಗೆ ಆಮ್ಲಜನಕ ಪೂರೈಕೆಗಾಗಿ ಇದನ್ನು ನೀಡುವುದಾಗಿ ಬ್ರೆಟ್ ಲೀ ಟ್ವಿಟರ್‌ನಲ್ಲಿ ಘೋಷಿಸಿದ್ದಾರೆ

ಭಾರತದಲ್ಲಿ ಬಿಟ್‌ಕಾಯಿನ್ ವ್ಯವಹಾರ ಕಾನೂನುಬದ್ಧವಲ್ಲ. ಆದರೂ ಬ್ರೆಟ್ ಲೀ ಈ ನಿರ್ಧಾರ ಪ್ರಕಟಿಸಿದ್ದಾರೆ.

'ಶೂಟರ್ ದಾದಿ'ಗೆ ಕೋವಿಡ್

ನವದೆಹಲಿ (ಪಿಟಿಐ): 'ಶೂಟರ್ ದಾದಿ' ಎಂದೇ ಹೆಸರಾದ ಹಿರಿಯ ಶೂಟರ್ ಚಂದ್ರೊ ತೋಮರ್ ಅವರಿಗೆ ಕೋವಿಡ್–19 ಇರುವುದು ಖಚಿತವಾಗಿದೆ. ಉಸಿರಾಟದ ಸಮಸ್ಯೆಯಿಂದ ಬಳಲಿರುವ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಂದ್ರೊ ತೋಮರ್

ಉತ್ತರಪ್ರದೇಶದ ಭಾಗ್‌ಪತ್‌ನ 89 ವರ್ಷದ ಚಂದ್ರೊ ಅವರ ಟ್ವಿಟರ್ ಖಾತೆಯಲ್ಲಿ ಈ ವಿಷಯ ಪ್ರಕಟಿಸಲಾಗಿದೆ. ಚಂದ್ರೊ ಮೊದಲ ಬಾರಿ ಗನ್ ಹಿಡಿದಾಗ ಅವರಿಗೆ 60ರ ವರ್ಷ ದಾಟಿತ್ತು. ಆದರೆ ಹಲವು ರಾಷ್ಟ್ರೀಯ ಸ್ಪರ್ಧೆಗಳಲ್ಲಿ ವಿಜೇತರಾಗಿರುವ ಅವರು, ಬಾಲಿವುಡ್ ಚಿತ್ರವೊಂದಕ್ಕೂ ಸ್ಫೂರ್ತಿಯಾಗಿದ್ದರು.

ಹಾಕಿ: ವೀರೇಂದ್ರ ಸಿಂಗ್ ನಿಧನ

ನವದೆಹಲಿ (ಪಿಟಿಐ: ಕೋವಿಡ್–19ರಿಂದ ಬಳಲುತ್ತಿದ್ದ, ಭಾರತ ಹಾಕಿ ಅಂಪೈರ್‌ಗಳ ವ್ಯವಸ್ಥಾಪಕ ವೀರೇಂದ್ರ ಸಿಂಗ್ (47) ಅವರು ಸೋಮವಾರ ಮೀರತ್‌ನಲ್ಲಿ ನಿಧನರಾದರು.

ಚೆನ್ನೈಗೆ ಹೈದರಾಬಾದ್ ಸವಾಲು

ನವದೆಹಲಿ (ಪಿಟಿಐ): ಆಲ್‌ರೌಂಡರ್ ರವೀಂದ್ರ ಜಡೇಜ ಅಬ್ಬರದ ಆಟ ಮತ್ತು ಮಹೇಂದ್ರಸಿಂಗ್ ಧೋನಿ ತಂತ್ರಗಾರಿಕೆಯ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಐಪಿಎಲ್ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದು ತುಂಬು ಆತ್ಮವಿಶ್ವಾಸದಲ್ಲಿದೆ.

ಧೋನಿ ಬಳಗವು ಬುಧವಾರ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಡೇವಿಡ್ ವಾರ್ನರ್ ನಾಯಕತ್ವದ ಸನ್ ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಮೂರು ದಿನಗಳ ಹಿಂದಷ್ಟೇ ಜಡೇಜ ಆಟದ ಮುಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಅಜೇಯ ಓಟಕ್ಕೆ ತಡೆ ಬಿದ್ದಿತ್ತು. ಹರ್ಷಲ್ ಪಟೇಲ್ ಅವರ ಒಂದೇ ಓವರ್‌ನಲ್ಲಿ ಐದು ಸಿಕ್ಸರ್ ಮತ್ತು ಒಂದು ಬೌಂಡರಿ ಹೊಡೆದಿದ್ದ ಎಡಗೈ ಆಲ್‌ರೌಂಡರ್ ಜಡೇಜ ಬೌಲಿಂಗ್‌ನಲ್ಲಿಯೂ ಮಿಂಚಿದ್ದರು.

ತಂಡದ ಆರಂಭಿಕ ಜೋಡಿ ಋತುರಾಜ್ ಗಾಯಕವಾಡ್ ಮತ್ತು ಫಫ್ ಡುಪ್ಲೆಸಿ ಉತ್ತಮ ಲಯದಲ್ಲಿದ್ದಾರೆ. ಅವರು ಹಾಕುವ ಅಡಿಪಾಯದ ಮೇಲೆ ರನ್‌ಸೌಧ ಕಟ್ಟಲು ಸುರೇಶ್ ರೈನಾ, ಅಂಬಟಿ ರಾಯುಡು, ಧೋನಿ ಮತ್ತು ಆಲ್‌ರೌಂಡರ್ ಸ್ಯಾಮ್ ಕರನ್ ಇದ್ದಾರೆ. ದೀಪಕ್ ಚಾಹರ್, ಇಮ್ರಾನ್ ತಾಹೀರ್ ಕೂಡ ಚೆನ್ನೈ ತಂಡದ ಗೆಲುವಿನ ಓಟಕ್ಕೆ ಬಲ ತುಂಬುವ ಸಮರ್ಥರಾಗಿದ್ದಾರೆ.

ಆದರೆ, ಮೇಲ್ನೋಟಕ್ಕೆ ಸಮತೋಲನವಾದ ತಂಡವೆಂದು ಕಾಣುವ ಸನ್‌ರೈಸರ್ಸ್ ಹೈದರಾಬಾದ್ ಆಟದಲ್ಲಿ ಸ್ಥಿರತೆ ಕಾಣುತ್ತಿಲ್ಲ. ಅದಕ್ಕೆ ಕಾರಣ ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಮಿಂಚುತ್ತಿಲ್ಲ. ಅಲ್ಲದೇ ಟಿ. ನಟರಾಜನ್ ಗಾಯಗೊಂಡು ಟೂರ್ನಿಯಿಂದ ಹೊರಬಿದ್ದಿರುವುದರಿಂದ ತಂಡವು ರಶೀದ್ ಖಾನ್ ಮೇಲೆ ಹೆಚ್ಚು ಅವಲಂಬಿತವಾಗಿದೆ. ಡೆಲ್ಲಿ ಎದುರಿಗಿನ ಸೂಪರ್ ಓವರ್ ಪಂದ್ಯದಲ್ಲಿ ಸನ್‌ರೈಸರ್ಸ್ ಸೋತಿತ್ತು.

ವಿಲಿಯಮ್ಸನ್ ಬ್ಯಾಟಿಂಗ್ ಸಾಮರ್ಥ್ಯದ ಮೇಲೆಯೇ ತಂಡಕ್ಕೆ ಹೆಚ್ಚು ನಿರೀಕ್ಷೆ ಇದೆ. ಮನೀಷ್ ಪಾಂಡೆಗೆ ಸ್ಥಾನ ಸಿಗುವುದು ಕೂಡ ನಿಶ್ಚಿತವಿಲ್ಲ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್.

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	17
ಆವೇಶ್ ಖಾನ್	ಡೆಲ್ಲಿ	12
ರಾಹುಲ್ ಚಾಹರ್	ಮುಂಬೈ	9

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	265
ಕೆ.ಎಲ್.ರಾಹುಲ್	ಪಂಜಾಬ್	240
ಮ್ಯಾಕ್ಸ್‌ವೆಲ್	ಬೆಂಗಳೂರು	223

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಬೆಂಗಳೂರು	6	5	1	-	-	10
ಚೆನ್ನೈ ಸೂಪರ್ ಕಿಂಗ್ಸ್	5	4	1	-	-	8
ಡೆಲ್ಲಿ ಕ್ಯಾಪಿಟಲ್ಸ್	6	4	2	-	-	8
ಮುಂಬೈ ಇಂಡಿಯನ್ಸ್	5	2	3	-	-	4
ಕೋಲ್ಕತ್ತ	6	2	4	-	-	4
ಪಂಜಾಬ್	6	2	4	-	-	4
ರಾಜಸ್ಥಾನ	5	2	3	-	-	4
ಹೈದರಾಬಾದ್	5	1	4	-	-	2

* ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket